ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
ಸಂಕ್ರಾಂತಿಯ ಆಚರಣೆಯಲ್ಲಿ ಮನುಷ್ಯ–ಪ್ರಾಣಿ–ಪ್ರಕೃತಿಯ ಕೊಂಡಿಯೊಂದಿದೆ.



ಅಮೆರಿಕದ ವೀಸಾ ವಿಳಂಬ: ಭಾರತ ಕಳವಳ 9
ಬ್ರಿಟನ್ ಹೈಕಮಿಷನರ್‌ಗೆ ಆಕ್ಷೇಪ ತಿಳಿಸಿದ ವಿದೇಶಾಂಗ ಕಾರ್ಯದರ್ಶಿ
ಹಿಂದೂಸ್ತಾನಿ ಗಾಯಕಿ ಪ್ರಭಾ ಅತ್ರೆ ನಿಧನ 7
ಪಿಒಕೆಗೆ ಬ್ರಿಟನ್ ರಾಯಭಾರಿ: ಭಾರತ ಕಿಡಿ 10

1 'ಇಂಡಿಯಾ' ಮೈತ್ರಿಕೂಟದ ಸಂಚಾಲಕರಾಗಿ ನಿತೀಶ್ ಕುಮಾರ್?

2 ಉನ್ನತ ನಾಯಕರ ವರ್ಚುವಲ್ ಸಭೆಯಲ್ಲಿ ನಿರ್ಧಾರ

3 ಮಮತಾ ಬ್ಯಾನರ್ಜಿ, ಅಖಿಲೇಶ್, ಉದ್ಧವ್ ಠಾಕ್ರೆ ಗೈರು

4 ಸಂಚಾಲಕ ಸ್ಥಾನಕ್ಕೆ ಲಾಲು ಹೆಸರು ಸೂಚಿಸಿದ ನಿತೀಶ್

ಖರ್ಗೆ ಅಧ್ಯಕ್ಷ; ಮೂಡಿದ ಒಮ್ಮತ

ಪ್ರಜಾವಾಣಿ ವಾರ್ತೆ

ನವದೆಹಲಿ/ ಇಂಫಾಲ್: ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ವಿರೋಧ ಪಕ್ಷಗಳ ಮೈತ್ರಿಕೂಟ 'ಇಂಡಿಯಾ'ದ ಅಧ್ಯಕ್ಷರಾಗಿ ನೇಮಕ ಮಾಡಲು ಶನಿವಾರ ಒಮ್ಮತ ಮೂಡಿದೆ. ಆದರೆ, 'ಇಂಡಿಯಾ' ಬಣ ಈ ಕುರಿತು ಇನ್ನೂ ಅಧಿಕೃತ ಘೋಷಣೆ ಮಾಡಿಲ್ಲ.

ಬಿಹಾರ ಮುಖ್ಯಮಂತ್ರಿ ಹಾಗೂ ಜೆಡಿಯು ಅಧ್ಯಕ್ಷ ನಿತೀಶ್ ಕುಮಾರ್ ಅವರನ್ನು ಮೈತ್ರಿಕೂಟದ ಸಂಚಾಲಕರಾಗಿ ನೇಮಕ ಮಾಡುವ ಪ್ರಸ್ತಾವಕ್ಕೆ ತೃಣಮೂಲ ಕಾಂಗ್ರೆಸ್ (ಟಿಎಂಸಿ) ನಾಯಕಿ ಮಮತಾ ಬ್ಯಾನರ್ಜಿ ಅವರಿಂದ ಯಾವುದೇ ಪ್ರತಿಕ್ರಿಯೆ ದೊರೆಯದೇ ಇರುವುದು ಅಧಿಕೃತ ಘೋಷಣೆ ವಿಳಂಬವಾಗಲು ಕಾರಣ ಎನ್ನಲಾಗಿದೆ.

ಮುಂಬರುವ ಲೋಕಸಭಾ ಚುನಾವಣೆಗೆ ಸೀಟು ಹಂಚಿಕೆ ಸೇರಿದಂತೆ ಇತರ ವಿಷಯಗಳ ಬಗ್ಗೆ ಚರ್ಚಿಸಲು 'ಇಂಡಿಯಾ' ಮೈತ್ರಿ-ಕೂಟದಲ್ಲಿರುವ ಸುಮಾರು ಹತ್ತು ಪಕ್ಷಗಳ ಉನ್ನತ ನಾಯಕರು ನಡೆಸಿದ ವರ್ಚುವಲ್ ಸಭೆಯಲ್ಲಿ ಖರ್ಗೆ ಅವರನ್ನು ಸಂಚಾಲಕ ಅಥವಾ ನೇಮಕಕ್ಕೆ ಒಮ್ಮತ ಮೂಡಿದೆ. ಮಮತಾ ಬ್ಯಾನರ್ಜಿ, ಉದ್ಧವ್ ಠಾಕ್ರೆ ಮತ್ತು ಅಖಿಲೇಶ್ ಯಾದವ್ ಅವರು ಸಭೆಗೆ ಗೈರಾಗಿದ್ದರು.

ಖರ್ಗೆ ಮತ್ತು ನಿತೀಶ್ ಅವರ ಹೆಸರನ್ನು ಉದ್ಧವ್ ಹಾಗೂ ಅಖಿಲೇಶ್ ವಿರೋಧಿಸಿಲ್ಲ. ಆದರೆ, ನಿತೀಶ್ ಅವರನ್ನು ಸಂಚಾಲಕ ಅಥವಾ 'ಇಂಡಿಯಾ' ಕೂಟದ ಪ್ರಧಾನಿ ಹುದ್ದೆಯ ಅಭ್ಯರ್ಥಿಯನ್ನಾಗಿ ಹೆಸರಿಸು-ವುದಕ್ಕೆ ಮಮತಾ ತಮ್ಮ ವಿರೋಧವನ್ನು ಈ ಮೊದಲೇ ತಿಳಿಸಿದ್ದರು ಎನ್ನಲಾಗಿದೆ.

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಮಣಿಪುರದಿಂದ ತಮ್ಮ 'ಭಾರತ್ ಜೋಡೊ ನ್ಯಾಯ ಯಾತ್ರೆ'ಯನ್ನು ಆರಂಭಿಸುವುದಕ್ಕೆ ಮುನ್ನಾದಿನ ಈ ಸಭೆ ನಡೆದಿದೆ. ಖರ್ಗೆ ಅವರ ನೇಮಕಕ್ಕೆ ಸಂಬಂಧಿಸಿದ ಪ್ರಶ್ನೆಗೆ ಪ್ರತಿಕ್ರಿಯಿಸಲು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ನಿರಾಕರಿಸಿದರು.

ಮಮತಾ ಹಾಗೂ ಸಭೆಗೆ ಗೈರಾದ ಇತರ ಪಕ್ಷಗಳ ನಾಯಕರ ಜತೆ ಚರ್ಚಿಸದೆ ಅಧಿಕೃತ ಘೋಷಣೆ ಮಾಡುವುದು ಬೇಡ ಎಂಬ ತೀರ್ಮಾನವನ್ನು ಖರ್ಗೆ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ತೆಗೆದು-ಕೊಳ್ಳಲಾಯಿತು ಎಂದು ಮೂಲಗಳು ಹೇಳಿವೆ. ಅಧ್ಯಕ್ಷರ ಹೆಸರು ಮಾತ್ರ ಘೋಷಿಸುವುದನ್ನು ಕಾಂಗ್ರೆಸ್ ಕೂಡಾ ವಿರೋಧಿಸಿದ್ದು, ಎರಡೂ ಸ್ಥಾನಗಳಿಗೆ (ಅಧ್ಯಕ್ಷ ಹಾಗೂ ಸಂಚಾಲಕ) ಹೆಸರು ಅಂತಿಮಗೊಂಡ ಬಳಿಕವೇ ಅಧಿಕೃತ ಘೋಷಣೆ ಮಾಡಬೇಕು ಎಂದು ಒತ್ತಾಯಿಸಿದೆ.

9ನೇ ಪುಟ ನೋಡಿ



'ಇಂಡಿಯಾ' ನಾಯಕರು ಮೈತ್ರಿಗೆ ಸಂಬಂಧಿಸಿದ ಹಲವು ವಿಷಯ ಚರ್ಚಿಸಿದರು. ಸೀಟು ಹಂಚಿಕೆಯ ಮಾತುಕತೆ ಸಕಾರಾತ್ಮಕವಾಗಿ ಮುಂದುವರಿಯುತ್ತಿದೆ

ಮಲ್ಲಿಕಾರ್ಜುನ ಖರ್ಗೆ, ಎಐಸಿಸಿ ಅಧ್ಯಕ್ಷ

ಮಮತಾ ಅಭಿಪ್ರಾಯ ಬೇಕೆಂದ ರಾಹುಲ್

ಮಲ್ಲಿಕಾರ್ಜುನ ಖರ್ಗೆ ಮತ್ತು ನಿತೀಶ್ ಕುಮಾರ್ ಅವರ ಹೆಸರುಗಳನ್ನು ಸಭೆಯ ಬಳಿಕ ಅಧಿಕೃತವಾಗಿ ಘೋಷಿಸಬೇಕು ಎಂದು ಹೆಚ್ಚಿನ ನಾಯಕರು ಬಯಸಿದ್ದರು. ಆದರೆ ಮಮತಾ ಬ್ಯಾನರ್ಜಿ ಅಭಿಪ್ರಾಯ ಪಡೆಯದೆ ಅಂತಿಮ ನಿರ್ಧಾರ ತೆಗೆದುಕೊಳ್ಳುವುದು ಬೇಡ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಸಭೆಯಲ್ಲಿ ಹೇಳಿದ್ದಾಗಿ ಮೂಲಗಳು ತಿಳಿಸಿವೆ. ಮೈತ್ರಿಕೂಟದ ನಾಯಕತ್ವಕ್ಕೆ ಸಂಬಂಧಿಸಿದಂತೆ ಮಮತಾ ಇದುವರೆಗೂ ಯಾವುದೇ ಸ್ಪಷ್ಟ ಅಭಿಪ್ರಾಯ ತಿಳಿಸಿಲ್ಲ ಎಂಬುದನ್ನೂ ಅವರು ಸಭೆಯ ಗಮನಕ್ಕೆ ತಂದರು ಎನ್ನಲಾಗಿದೆ.

ಚಿನಕುರಳಿ

ಪ್ರಕಾಶ್ ಶೆಟ್ಟಿ



ಇಂದಿನಿಂದ 'ಭಾರತ್ ಜೋಡೊ ನ್ಯಾಯ' ಯಾತ್ರೆ

ಮಣಿಪುರದ ಥೌಬಲ್‌ನಲ್ಲಿ ಚಾಲನೆ, ಮಾ.20ರಂದು ಮುಂಬೈನಲ್ಲಿ ಮುಕ್ತಾಯ

ಪ್ರಜಾವಾಣಿ ವಾರ್ತೆ

ನವದೆಹಲಿ: ಒಂದೆಡೆ ರಾಮಮಂದಿರ ಉದ್ಘಾಟನೆಯ ಅಬ್ಬರ, ಮತ್ತೊಂದೆಡೆ ಲೋಕಸಭಾ ಚುನಾವಣೆ ತಯಾರಿಯ ಭರಾಟೆ ಮಧ್ಯೆ, ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಭಾನುವಾರ ಮಣಿಪುರದಿಂದ ಮುಂಬೈವರೆಗೆ 6,713 ಕಿ.ಮೀ ದೂರದ 'ಭಾರತ್ ಜೋಡೊ ನ್ಯಾಯ ಯಾತ್ರೆ' (ಬಿಜೆಎನ್‌ವೈ) ಆರಂಭಿಸಲಿದ್ದಾರೆ.

ಕನ್ಯಾಕುಮಾರಿಯಿಂದ ಶ್ರೀನಗರದ ವರೆಗಿನ 4,000 ಕಿ.ಮೀ ಪಾದಯಾತ್ರೆಯನ್ನು ಪೂರ್ಣಗೊಳಿಸಿದ ಬಹುತೇಕ ಒಂದು ವರ್ಷದ ಬಳಿಕ ರಾಹುಲ್ ಈ ಯಾತ್ರೆ ಕೈಗೊಂಡಿದ್ದಾರೆ. ಮಣಿಪುರದ ಥೌಬಲ್ ಜಿಲ್ಲೆಯಲ್ಲಿ ಬ್ರಿಟಿಷರ ವಿರುದ್ಧ ಮಣಿಪುರಿಗಳು ಹೋರಾಡಿದ ಸ್ಥಳ, ಕೋಂಗ್‌ಜೋಮ್ ಯುದ್ಧ ಸ್ಮಾರಕದ ಬಳಿಯಿಂದ ಯಾತ್ರೆ ಶುರುವಾಗಲಿದೆ.

ಭಾರತ್ ಜೋಡೊ ಯಾತ್ರೆಯು ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವದಂತಹ ಅಂಶಗಳ ಬಗ್ಗೆ ಗಮನಹರಿಸಿದ್ದರೆ ಈ ಯಾತ್ರೆಯು 'ನ್ಯಾಯ' ಅಥವಾ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ರಂಗಗಳ ನ್ಯಾಯದ ಬಗ್ಗೆ ಗಮನ ಹರಿಸಲಿದೆ

ಜೈರಾಮ್ ರಮೇಶ್
ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ)

ರಾಹುಲ್ ಅವರ 'ಯಾತ್ರೆ 2.0', ಪಾದಯಾತ್ರೆಯ ಜತೆ ಜತೆಗೆ ಬಸ್ ಯಾನವನ್ನೂ ಒಳಗೊಂಡಿದ್ದು, ಇದು ಚುನಾವಣಾ ಯಾತ್ರೆಯಲ್ಲ ಎಂದು ಕಾಂಗ್ರೆಸ್ ಹೇಳಿದೆ. ಆದರೆ, ಈ ಯಾತ್ರೆಯು ಲೋಕಸಭೆ ಚುನಾವಣೆಯ ಸಿದ್ಧತೆಯಲ್ಲಿ ಪಕ್ಷಕ್ಕೆ ನೆರವಾಗಲಿದೆ ಎಂಬ ನಿರೀಕ್ಷೆಯನ್ನು ಪಕ್ಷದ ನಾಯಕರು ಹೊಂದಿದ್ದಾರೆ. ಯಾತ್ರೆಯ ಕಾಲಕ್ಕೆ, ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ನ್ಯಾಯ ರಂಗದಲ್ಲಿ ಪಕ್ಷದ ಗ್ಯಾರಂಟಿಗಳ ಬಗ್ಗೆ ರಾಹುಲ್ ವಿವರಿಸುವ ಸಾಧ್ಯತೆಯೂ ಇದೆ.

'ಪ್ರಧಾನಿ ಅವರು ಸುಳ್ಳಿನ ಕನಸುಗಳನ್ನು ಮಾರಾಟ ಮಾಡುತ್ತಿದ್ದಾರೆ ಮತ್ತು 'ಅಮೃತ ಕಾಲ'ದ ಬಗ್ಗೆ ಮಾತ-ನಾಡುತ್ತಿದ್ದಾರೆ. ಆದರೆ, ಹತ್ತು ವರ್ಷಗಳಲ್ಲಿ ದೇಶದಲ್ಲಿ 'ಅನ್ಯಾಯದ ಕಾಲ' ನಡೆಯುತ್ತಿದೆ. ರಾಹುಲ್ ಅವರ ಸಂದೇಶವು ಜನರಿಗೆ ತಲುಪುತ್ತದೆ ಎಂಬ ವಿಶ್ವಾಸ ನಮ್ಮದು' ಎಂದು ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

10 ನೇ ಪುಟ ನೋಡಿ


HAPPY Makar Sankranti
neev MATTRESS
Foundation of great sleep
MANUFACTURING THE FINEST COLLECTION OF MATTRESSES
EXCLUSIVE
Makar Sankranti Gift to
PRAJAVANI READERS
GIFT VOUCHER
₹5000.
VALID TILL 15-JAN-2024
COUPON CODE PVSANKRANTI
1. This Gift Voucher is exclusive for readers of Prajavani Newspaper.
2. It can be utilized when buying any of above Neev Mattress in Queen or King Size.
3. The voucher remains valid until January 15, 2024.
4. Redeem on neevmattress.com | Neev Brand Stores | Call our mattress experts.
BRING A CUTOUT OF THE GIFT VOUCHER TO BOOK YOUR MATTRESS & GET ADDITIONAL ₹5000 OFF ON THE BELOW LISTED PRICES
neev VerveRest
orthopedic.
not too soft. not too hard.
ANTI SAG HR BASE MATTRESS
Super Soft Foam Mattress
Value for Money | Comfortable
Queen Size: ₹12900
King Size: ₹16900
Cool Memory Gel Mattress
Cool Gel infused Memory Layer
Queen Size: ₹16900
King Size: ₹19900
Natural Latex Mattress
100% Natural Pincore Latex
Queen Size: ₹18900
King Size: ₹21900
7 Inches | Dual Side Use | 350 GSM Belgian Knitted Fabric (Colours: White | Grey | Brown)
Available in 7 Inches | 10 Inches
Air Flow Carbon Steel Spring Base Mattress
Cool Memory Gel Mattress
2 Inches Cool Gel infused Memory Plush Eurotop Design
Queen Size: ₹23500
King Size: ₹28500
Natural Latex Mattress
100% Natural 7 Zone Latex Plush Eurotop Design
Queen Size: ₹26900
King Size: ₹30500
Zero Disturbance
Posture Correction
Adapts to your Body Shape
No Spring Design
9 Inches | Choice of Bamboo or Aloevera Fiber Infused Fabric
Breathe. SERIES
AIR FLOW TECHNOLOGY
UNPARALLED SPINE CARE
made by nature, crafted by neev.
100% NATURAL ORGANIC
7 zone imported Latex
Wrapped in organic cotton
6 Inches | Queen Size: ₹39500 | King Size: ₹44500
neev naturals.
SLEEP IN THE LAP OF NATURE
no spring | no foam
just pure latex..
Fabric keeps the mattress cooler by upto 4 degree
Available in 8 Inches & 10 Inches
It's all season cool.
It's posture correct.
It's for deep indulgent sleep.
It's orthopedic
Indulge
MATTRESS CRAFTED TO PERFECTION
Queen Size: ₹32500 | King Size: ₹37500
7 Zone Latex
7-Zone Organic Latex offers precise support and comfort for every part of your body.
Cool Crystals
Temperature Regulation with cool crystal gel infused memory layer
Japanese Yarn
Revolutionary Japanese Yarn provides a cooling effect, ensuring a refreshing sensation.
Carbon Steel
Carbon steel Spring base promotes 0 partner disturbance while cradling your body.
DEEP SENSE.
Coolness of Memory Gel.
Softness of 7 Zone Latex.
Create a perfect Harmony.
TECHNOLOGY
Body Contouring Cool Gel Memory Layer
NATURE
100% Natural 7 Zone Organic Latex
8 Inches
Queen Size: ₹24500
King Size: ₹28500
Call the experts 73380 21446 | 9686681034 | www.neevmattress.com
Brand Stores: Rajajinagar: Off Dr Rajkumar Road, Near IOC Petrol Station | Basavangudi : Next to KFC, Vani Vilas Road

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಜೂನಿಯರ್ ಮಿಸ್ ಇಂಡಿಯಾ ಸ್ಪರ್ಧೆ

ಮುಂಬೈನಲ್ಲಿ ನಡೆದ ಜೂನಿಯರ್ ಮಿಸ್ ಇಂಡಿಯಾ–2024ರ ಗ್ರ್ಯಾಂಡ್ ಫಿನಾಲೆಯಲ್ಲಿ ಹೆಜ್ಜೆ ಹಾಕಿದ ಬಾಲಕಿ



ಕನ್ನಡ ಸಾಹಿತ್ಯ ಪರಿಷತ್ ಕಡೆಗಣಿಸಿದ ಸಿ.ಎಂ: ಮಹೇಶ ಜೋಶಿ 4
ಅತ್ಯಾಚಾರ ಪ್ರಕರಣ: ಆರೋಪಿಗಳ ಕಡೆಯವರ ಮೇಲೆ ಸಂತ್ರಸ್ತೆ ಆರೋಪ
‘ಎಚ್‌ಡಿಕೆ ಕೇಂದ್ರ ಮಂತ್ರಿ: ಮೋದಿಗಷ್ಟೇ ಗೊತ್ತು’ 7
ದೂರು ಹಿಂಪಡೆಯಲು ಹಣದ ಆಮಿಷ 4

ಹಳ್ಳಿವಾಸಿಗಳಿಗೆ ಹೆಣ್ಣು ಕೊಡುವವರಿಲ್ಲ: ಸಾಮಾಜಿಕ ಸಮಸ್ಯೆಯಾಗಿ ಮಾರ್ಪಟ್ಟ ವಧುಗಳ ಕೊರತೆ

ಯುವ ರೈತರಿಗೆ ಬೇಕು ಸಂಗಾತಿ

• ಸೂರ್ಯನಾರಾಯಣ ವಿ.

ಒಳನೋಟ

ಚಾಮರಾಜನಗರ: ಚಾಮರಾಜನಗರ ಜಿಲ್ಲೆಯ ಸಂತೇಮರಹಳ್ಳಿಯ ಯುವಕ ನಾಗೇಂದ್ರಗೆ ಈಗ 30ರ ಹರೆಯ. ಕೃಷಿಯೇ ಉದ್ಯೋಗ. ಉತ್ತಮ ಆದಾಯವೂ ಇದೆ.

ಬಂಟ್ವಾಳ ತಾಲ್ಲೂಕಿನ ಯುವಕರೊಬ್ಬರಿಗೆ ಈಗ 33 ವರ್ಷ. ವೃತ್ತಿಯಲ್ಲಿ ಸಾಫ್ಟ್‌ವೇರ್ ಎಂಜಿನಿಯರ್. ಕೈತುಂಬಾ ಸಂಬಳ. ಊರಲ್ಲಿ ಬಿಡುವಿನಲ್ಲಿ ಕೃಷಿಯನ್ನೂ ಮಾಡುತ್ತಿದ್ದಾರೆ.

ಮಂಡ್ಯ ಜಿಲ್ಲೆಯ ಹೊಳಲು ಗ್ರಾಮದ ಯುವ ರೈತನಿಗೆ 30 ವರ್ಷ ದಾಟಿದೆ. ಕಬ್ಬಿನ ಗದ್ದೆಯಲ್ಲೇ ದಿನವಿಡೀ ಕೆಲಸ. ಸ್ಫುರದ್ರೂಪಿ. ಕೃಷಿ ಬಿಟ್ಟು ಬೇರೆ ಕೆಲಸವಿಲ್ಲ.

ಈ ಮೂವರ ಸಮಸ್ಯೆ ಒಂದೇ; ಹಲವು ವರ್ಷಗಳಿಂದ ಮದುವೆಗಾಗಿ ಹೆಣ್ಣು ಹುಡುಕುತ್ತಿದ್ದಾರೆ. ಆದರೆ, ಸಿಗುತ್ತಿಲ್ಲ. ಕೃಷಿಕ ಎಂಬುದು ಒಂದು ಕಾರಣ. ‘ಟೆಕ್ಕಿಯಾಗಿದ್ದರೂ ಊರಲ್ಲಿದ್ದಾರೆ’ ಎಂಬುದು ಇನ್ನೊಂದು ಕಾರಣ. ‘ಕೃಷಿ ಮಾಡುತ್ತಿದ್ದಾರೆ, ಮನೆ ಚಿಕ್ಕದು’ ಎಂಬುದು ಮತ್ತೊಂದು ಕಾರಣ.

ಇದು ಮೂವರ ಕಥೆಯಲ್ಲ; ರಾಜ್ಯದ ಬಹುತೇಕ ಹಳ್ಳಿಗಳಲ್ಲಿ ಮದುವೆಯ ಅವಕಾಶಕ್ಕಾಗಿ ಕಾಯುತ್ತಲೇ ಇರುವ ಯುವ ಕೃಷಿಕರು, ನಿರುದ್ಯೋಗಿಗಳು ಮತ್ತುಕೆಲವುಉದ್ಯೋಗಿಗಳಕಥೆ–ವ್ಯಥೆ.

ನಗರಗಳಲ್ಲಿ ವಾಸವಿರುವ ಚಿಕ್ಕ ಕೆಲಸ, ಕಡಿಮೆ ಸಂಬಳದ ಹುಡುಗರಿಗೆ ಸುಲಭವಾಗಿ ಹೆಣ್ಣು ಸಿಗುತ್ತಿವೆ. ಆದರೆ, ಹಳ್ಳಿಗಳಲ್ಲಿ ಮೂರ್ನಾಲ್ಕು ಎಕರೆ ಜಮೀನು, ಉತ್ತಮ ಸಂಪಾದನೆ ಇದ್ದರೂ ವಧು ಸಿಗುತ್ತಿಲ್ಲ. ಕೃಷಿ ಕಾರ್ಮಿಕರು, ಸ್ಥಳೀಯವಾಗಿ ಸಣ್ಣಪುಟ್ಟ ಕೆಲಸ ಮಾಡುವವರು, ಅಡುಗೆ, ವೈದಿಕ ವೃತ್ತಿಯವರಿಗೆ ಹೆಣ್ಣು ಕೊಡುವ ಮಾತೇ ಇಲ್ಲ.

ಇದು ಈಗ ಸಾಮಾಜಿಕ ಸಮಸ್ಯೆಯಾಗಿ ಬದಲಾಗಿದೆ. 2022ರ ನವೆಂಬರ್‌ನಲ್ಲಿ ಮಂಡ್ಯ ಜಿಲ್ಲೆ ನಾಗಮಂಗಲದ ಆದಿಚುಂಚನಗಿರಿ ಮಠದಲ್ಲಿ ನಡೆದಿದ್ದ ವಧು ವರರ ಸಮಾವೇಶವು ಈ ಗಂಭೀರ ಸಮಸ್ಯೆಯನ್ನು ತೆರೆದಿಟ್ಟಿತ್ತು. ಅಲ್ಲಿ 250 ವಧುಗಳು ನೋಂದಾಯಿಸಿದ್ದರೆ, ವರರು ಮತ್ತು ಅವರ ಸಂಬಂಧಿಕರು ಸೇರಿ 25 ಸಾವಿರಕ್ಕೂ ಹೆಚ್ಚು ಜನ ಸೇರಿದ್ದರು!

8ನೇ ಪುಟ ನೋಡಿ


ಮಂಡ್ಯ ಜಿಲ್ಲೆಯ ನಾಗಮಂಗಲದಲ್ಲಿರುವ ಆದಿಚುಂಚನಗಿರಿ ಸಂಸ್ಥಾನದಲ್ಲಿ 2022ರ ನವೆಂಬರ್‌ನಲ್ಲಿ ನಡೆದ ಒಕ್ಕಲಿಗ ವಧು–ವರರ ಸಮಾವೇಶದಲ್ಲಿ ಪಾಲ್ಗೊಂಡವರು


ಮದುವೆಯಲ್ಲೂ ವಂಚನೆಯ ಜಾಲ

ಹೊರ ರಾಜ್ಯಗಳಿಂದ ವಧುಗಳನ್ನು ಕರೆತಂದು ಮದುವೆ ಮಾಡಿಸುವುದಕ್ಕೆ ಸಾವಿರಾರು ರೂಪಾಯಿ, ಕೆಲವೊಂದು ಬಾರಿ ಲಕ್ಷಾಂತರ ರೂಪಾಯಿ ಖರ್ಚಾಗುತ್ತದೆ. ಹೊರ ರಾಜ್ಯಗಳಿಗೆ ಹೋಗಿ ಬರುವುದಾದರೆ ಇನ್ನೂ ಹೆಚ್ಚು ಖರ್ಚಾಗುತ್ತದೆ.

ಗ್ರಾಮೀಣ ಕುಟುಂಬಗಳ ಅನಿವಾರ್ಯತೆಯನ್ನು ಬಂಡವಾಳವಾಗಿಸುವ ಕೆಲವರು, ಹೊರರಾಜ್ಯ ಹೊರ ಜಿಲ್ಲೆಗಳಿಂದ ಹೆಣ್ಣು ತಂದು ಮದುವೆ ಮಾಡಿಸುವುದಾಗಿ ನಂಬಿಸಿ ವಂಚಿಸುತ್ತಿದ್ದಾರೆ. ಇಂತಹ ಏಜೆಂಟರು ಅಲ್ಲಲ್ಲಿ ಸಿಗುತ್ತಾರೆ. ದೂರದ ಊರಿನಿಂದ ಹೆಣ್ಣುಮಕ್ಕಳನ್ನು ಕರೆತಂದು, ಹೋಟೆಲ್ ಅಥವಾ ಸಭಾಭವನದಲ್ಲಿ ವಧು– ವರರ ಸಮಾವೇಶ ನಡೆಸುತ್ತಾರೆ. ಸಂಬಂಧ ಕುದುರಿದರೆ, ಹುಡುಗನ ಕಡೆಯವರಿಂದ ಲಕ್ಷಾಂತರ ರೂಪಾಯಿ ಮುಂಗಡ ಹಣ ಪಡೆದು ನಾಪತ್ತೆಯಾಗುತ್ತಾರೆ.

8ನೇ ಪುಟ ನೋಡಿ

‘ಕೃಷಿಯನ್ನೂ ಘನತೆಯಿಂದ ಕಾಣಬೇಕಿದೆ’



ಹೆಣ್ಣು ಸಿಗದಿರುವುದಕ್ಕೆ ಲಿಂಗಾನುಪಾತದ ಕುಸಿತದ ಜತೆಗೆ, ಕೃಷಿ ಕೆಲಸಕ್ಕೆ ಘನತೆ ಇಲ್ಲದಿರುವುದು, ಜಾತಿ ಪದ್ಧತಿ ಹಾಗೂ ವರ್ಗ ಭೇದವೂ ಕಾರಣ. ಅಂತರ್ಜಾತಿ ವಿವಾಹಕ್ಕೆ ಸಮುದಾಯಗಳು ತೆರೆದುಕೊಂಡಿಲ್ಲ. ಜಾತಿಗಳಲ್ಲಿರುವ ಉಪ ಪಂಗಡದ ವ್ಯತ್ಯಾಸವನ್ನೂ ಸಮಾಜ ಒಪ್ಪಿಕೊಳ್ಳುತ್ತಿಲ್ಲ. ಕೃಷಿ ಮಾಡುವ ಹೆಣ್ಣು –ಗಂಡನ್ನು ಘನತೆಯಿಂದ ನೋಡದಿರುವುದು ಸಮಸ್ಯೆಯ ಮೂಲ ಎನ್ನುತ್ತಾರೆ ಬೆಂಗಳೂರಿನ ವಿಎಚ್‌ಸಿ ಸೆಂಟ್ರಲ್ ಇನ್‌ಸ್ಟಿಟ್ಯೂಟ್ ಆಫ್ ಹೋಂ ಸೈನ್ಸ್‌ನ ಸಮಾಜ ಶಾಸ್ತ್ರ ಪ್ರಾಧ್ಯಾಪಕ ಡಾ.ಸಿ.ಜಿ.ಲಕ್ಷ್ಮೀಪತಿ.


ಹಬ್ಬದ ಖರೀದಿ ಬೆಂಗಳೂರಿನ ಗಾಂಧಿ ಬಜಾರ್‌ನಲ್ಲಿ ಶನಿವಾರ ಸಂಕ್ರಾಂತಿ ಹಬ್ಬಕ್ಕಾಗಿ ಕಬ್ಬು ಖರೀದಿಯ ಭರಾಟೆ ಜೋರಾಗಿತ್ತು -ಪ್ರಜಾವಾಣಿ ಚಿತ್ರ: ರಂಜು ಪಿ.

ಮೈಸೂರು ಸ್ಯಾಂಡಲ್ ನಕಲಿ ಸೋಪುಗಳ ತಯಾರಿಕೆ ಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರಿ ಸ್ವಾಮ್ಯದ ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತದ (ಕೆಎಸ್‌ಡಿಎಲ್) ‘ಮೈಸೂರು ಸ್ಯಾಂಡಲ್’ ಬ್ರ್ಯಾಂಡ್ ಹೆಸರಿನಲ್ಲಿ ನಕಲಿ ಸೋಪು ಹಾಗೂ ಇತರ ಉತ್ಪನ್ನಗಳನ್ನು ತಯಾರಿಸಿ, ಮಾರಾಟ ಮಾಡುತ್ತಿದ್ದ ಘಟಕವೊಂದು ಹೈದರಾಬಾದ್‌ನಲ್ಲಿ ಪತ್ತೆಯಾಗಿದೆ.

ಹೈದರಾಬಾದ್‌ನ ಮಾಲಕಪೇಟೆ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿದ್ದ ನಕಲಿ ಸೋಪು ತಯಾರಿಕಾ ಘಟಕವನ್ನು ಪತ್ತೆಹಚ್ಚಿದ್ದು, ಕೆಎಸ್‌ಡಿಎಲ್ ಅಧಿಕಾರಿಗಳ ದೂರನ್ನು ಆಧರಿಸಿ ರಾಕೇಶ್ ಜೈನ್ ಮತ್ತು ಮಹಾವೀರ್ ಜೈನ್ ಎಂಬುವರನ್ನು ಬಂಧಿಸಲಾಗಿದೆ. ₹ 2 ಕೋಟಿ ಮೌಲ್ಯದ ಸೋಪುಗಳನ್ನು ವಶಪಡಿಸಿಕೊಳ್ಳಲಾಗಿದೆ.

ಹೈದರಾಬಾದ್ ಮಾರುಕಟ್ಟೆಯಲ್ಲಿ ಮೈಸೂರು ಸ್ಯಾಂಡಲ್ ಬ್ರ್ಯಾಂಡ್ ಹೆಸರಿನಲ್ಲಿ ನಕಲಿ ಸೋಪುಗಳನ್ನು ಮಾರಾಟ ಮಾಡುತ್ತಿರುವ ಕುರಿತು ಅನಾಮಧೇಯರೊಬ್ಬರು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಅವರಿಗೆ ದೂರವಾಣಿ ಕರೆ ಮಾಡಿ ಮಾಹಿತಿ ನೀಡಿದ್ದರು. ಈ ಮಾಹಿತಿಯನ್ನು ಕೆಎಸ್‌ಡಿಎಲ್ ವ್ಯವಸ್ಥಾಪಕ ನಿರ್ದೇಶಕ ಪ್ರಶಾಂತ್ ಅವರಿಗೆ ನೀಡಿದ್ದ ಸಚಿವರು, ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚಿಸಿದ್ದರು.


ಮೈಸೂರು ಸ್ಯಾಂಡಲ್ ಬ್ರ್ಯಾಂಡ್‌ನ ನಕಲಿ ಸೋಪು, ಇತರ ಉತ್ಪನ್ನಗಳು


‘ಹೈದರಾಬಾದ್‌ನ ಕೆಲವು ಪ್ರದೇಶಗಳಲ್ಲಿ ಮೈಸೂರು ಸ್ಯಾಂಡಲ್ ಬ್ರ್ಯಾಂಡ್ ಹೆಸರಿನಲ್ಲಿ ನಕಲಿ ಸೋಪು ಪೂರೈಕೆಯಾಗುತ್ತಿರುವುದು ಕಂಡುಬಂದಿತ್ತು. ಆದರೆ, ಪೂರೈಕೆದಾರರ ಖಚಿತ ಮಾಹಿತಿ ಸಿಕ್ಕಿರಲಿಲ್ಲ. ಇದಕ್ಕಾಗಿ ₹ 1 ಲಕ್ಷ ಮೌಲ್ಯದ ಸೋಪುಗಳನ್ನು ಖರೀದಿಸಿ, ಮೂಲ ಪತ್ತೆಗೆ ನಿರ್ಧರಿಸಲಾಗಿತ್ತು’ ಎಂದು ಪ್ರಶಾಂತ್ ತಿಳಿಸಿದ್ದಾರೆ.

ಸಂಕ್ರಾಂತಿ ಹಬ್ಬದ ಸಂದರ್ಭದಲ್ಲಿ ಹೆಚ್ಚಿನ ಬೇಡಿಕೆ ಇದೆ ಎಂಬ ಕಾರಣ ನೀಡಿ ₹ 25 ಲಕ್ಷ ಮೌಲ್ಯದ ಸೋಪುಗಳನ್ನು ಪೂರೈಸುವಂತೆ ಬೇಡಿಕೆ ಸಲ್ಲಿಸಲಾಗಿತ್ತು. ಸ್ವಂತ ವಾಹನದಲ್ಲಿ ಕೊಂಡೊಯ್ಯುವ ನೆಪದಲ್ಲಿ ಉತ್ಪಾದನಾ ಘಟಕವನ್ನು ಪತ್ತೆ ಹಚ್ಚಲಾಯಿತು. ನಂತರ ಪೊಲೀಸರಿಗೆ ದೂರು ನೀಡಿ, ಪ್ರಕರಣ ದಾಖಲಿಸಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

ತಲಾ 150 ಗ್ರಾಂ. ತೂಕದ 1,800 ಮತ್ತು 75 ಗ್ರಾಂ. ತೂಕದ 9,400 ಸೋಪುಗಳು ಹಾಗೂ ಅವುಗಳನ್ನು ತುಂಬುವ 800 ಖಾಲಿ ಪೆಟ್ಟಿಗೆಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ತಿಳಿಸಿದ್ದಾರೆ.

ಹವಾಮಾನ ಮುನ್ಸೂಚನೆಗೆ ‘ಎಐ’ ತಂತ್ರಜ್ಞಾನ

ನವದೆಹಲಿ (ಪಿಟಿಐ): ಭಾರತೀಯ ಹವಾಮಾನ ಇಲಾಖೆಯು (ಐಎಂಡಿ) ಇದೀಗ ತನ್ನ 150ನೇ ವರ್ಷವನ್ನು ಆಚರಿಸುತ್ತಿದೆ. ಹವಾಮಾನ ಮುನ್ಸೂಚನೆಯನ್ನು ಇನ್ನಷ್ಟು ನಿಖರವಾಗಿ ನೀಡಲು ಹೊಸ ತಂತ್ರಜ್ಞಾನಗಳ ಮೊರೆಹೋಗುವ ಬಗ್ಗೆ ಅದು ಚಿಂತನೆ ನಡೆಸಿದೆ.



‘ಹವಾಮಾನ ಮುನ್ಸೂಚನೆ ವ್ಯವಸ್ಥೆಯಲ್ಲಿ ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನ, ಮಷಿನ್ ಲರ್ನಿಂಗ್ (ಎಂಎಲ್) ಮತ್ತು ಕ್ಷಿಪ್ರವಾಗಿ ಕಾರ್ಯನಿರ್ವಹಿಸುವ ಸೂಪರ್ ಕಂಪ್ಯೂಟರ್‌ಗಳನ್ನು ಬಳಸಲು ಯೋಜನೆ ರೂಪಿಸಲಾಗಿದೆ’ ಎಂದು ಐಎಂಡಿ ಮಹಾ ನಿರ್ದೇಶಕ ಮೃತ್ಯುಂಜಯ್ ಮಹಾಪಾತ್ರ ಅವರು ಪಿಟಿಐ ಸುದ್ದಿಸಂಸ್ಥೆಗೆ ನೀಡಿದ ಸಂದರ್ಶನದಲ್ಲಿ ತಿಳಿಸಿದ್ದಾರೆ.

> **ಕಳೆದ ಐದು ವರ್ಷಗಳಲ್ಲಿ ಹವಾಮಾನ ಮುನ್ಸೂಚನೆಯಲ್ಲಿನ ನಿಖರತೆಯು ಅದಕ್ಕೂ ಹಿಂದಿನ ಐದು ವರ್ಷಗಳಿಗೆ ಹೋಲಿಸಿದರೆ ಶೇ 40-50 ರಷ್ಟು ಹೆಚ್ಚಾಗಿದೆ**
> **ಮೃತ್ಯುಂಜಯ್ ಮಹಾಪಾತ್ರ,** ಐಎಂಡಿ ಮಹಾನಿರ್ದೇಶಕ

ಚಂಡಮಾರುತಗಳ ರೂಪುಗೊಳ್ಳುವಿಕೆ ಮತ್ತು ಭಾರಿ ಮಳೆಗೆ ಕಾರಣವಾಗುವ ಅಂಶಗಳನ್ನು ಅರ್ಥಮಾಡಿಕೊಳ್ಳಲು ಒಡಿಶಾ ಮತ್ತು ಮಧ್ಯಪ್ರದೇಶದಲ್ಲಿ ಅತ್ಯಾಧುನಿಕ ವ್ಯವಸ್ಥೆಯನ್ನು ಸ್ಥಾಪಿಸಲಾಗುವುದು ಎಂದು ಮಾಹಿತಿ ನೀಡಿದರು.

ಡಿಸೆಂಬರ್‌ನಲ್ಲಿ ದಕ್ಷಿಣ ತಮಿಳುನಾಡಿನಲ್ಲಿ ಭಾರಿ ಮಳೆಯ ಮುನ್ಸೂಚನೆ ನೀಡಲು ವಿಫಲವಾದುದಕ್ಕೆ ಟೀಕೆ ಎದುರಿಸಿದ್ದರ ಬಗ್ಗೆ ಪ್ರತಿಕ್ರಿಯಿಸಿದ ಅವರು, ‘ನಾವು ಪಾಠಗಳನ್ನು ಕಲಿಯಲು ಮತ್ತು ಹವಾಮಾನ ಮುನ್ಸೂಚನೆ ವ್ಯವಸ್ಥೆಯಲ್ಲಿ ಸುಧಾರಣೆ ತರಲು ಇಂತಹ ಟೀಕೆಗಳು ಇರಬೇಕು’ ಎಂದು ಹೇಳಿದರು.

‘ಸಣ್ಣ ಮಟ್ಟದಲ್ಲಿ ಆಗುವ ಹವಾಮಾನದ ವಿಪರೀತ ಏರಿಳಿತದ ವಿದ್ಯಮಾನಗಳ ಮುನ್ಸೂಚನೆ ನೀಡುವುದು ದೊಡ್ಡ ಸವಾಲಾಗಿದೆ. ಈಗ ನಮ್ಮಲ್ಲಿರುವ ವ್ಯವಸ್ಥೆಯು ಮೇಘಸ್ಫೋಟ ಹಾಗೂ ಅಲ್ಪ ಅವಧಿಯಲ್ಲಿ 60 ಸೆಂ.ಮೀ. ನಿಂದ 90 ಸೆಂ.ಮೀ. ನಷ್ಟು ಮಳೆಯಾಗುವ ಮುನ್ಸೂಚನೆ ನೀಡಲು ಸಮರ್ಥವಾಗಿಲ್ಲ’ ಎಂದರು.

8ನೇ ಪುಟ ನೋಡಿ

ಸಂಪ್‌ಗೆ ಬಿದ್ದು ಬಾಲಕ ಸಾವು

ಅಪರಾಧ ಸುದ್ದಿ

ಬೆಂಗಳೂರು: ಆಟವಾಡುತ್ತಿದ್ದ ಬಾಲಕನೊಬ್ಬ ಅಬ್ಬಿಗೆರೆಯಲ್ಲಿ ಆಯತಪ್ಪಿ ತೆರೆದ ನೀರಿನ ಸಂಪ್‌ಗೆ ಬಿದ್ದು ಮೃತಪಟ್ಟಿದ್ದಾನೆ. ಶಬ್ಬೀರ್ (7) ಮೃತ ಬಾಲಕ.

ಗಂಗಮ್ಮನಗುಡಿಯ ಅಬ್ಬಿಗೆರೆಯ ಕಾರ್ಮಿಕರ ಶೆಡ್ ಬಳಿ ಘಟನೆ ನಡೆದಿದೆ.

ಯಾದಗಿರಿ ಮೂಲದ ಷಂಶುದ್ದೀನ್ ಕುಟುಂಬ ಅಬ್ಬಿಗೆರೆಯ ಕಾರ್ಮಿಕರ ಶೆಡ್‌ನಲ್ಲಿ ವಾಸವಿತ್ತು. ಕಾರ್ಮಿಕರ ಬಳಕೆಗೆ ಶೆಡ್ ಸಮೀಪದಲ್ಲೇ ತೆರೆದ ನೀರಿನ ಸಂಪ್ ನಿರ್ಮಿಸಲಾಗಿದೆ. ಶುಕ್ರವಾರ ಸಂಜೆ ಆಯ ತಪ್ಪಿ ಸಂಪ್‌ಗೆ ಬಿದ್ದಿದ್ದು, ಉಸಿರುಗಟ್ಟಿ ಮೃತಪಟ್ಟಿದ್ದಾನೆ ಎಂದು ಪೊಲೀಸರು ಹೇಳಿದರು.

ಎಚ್‌ಎಸ್‌ಆರ್ ಲೇಔಟ್‌ನ ಎರಡನೇ ಸೆಕ್ಟರ್‌ನಲ್ಲಿ ನಡೆದಿದ್ದ ಕೊಲೆ ಪ್ರಕರಣ

ಪತ್ನಿ, ಪ್ರಿಯಕರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಿಯಕರನ ಜತೆಗೆ ಸೇರಿ ಪತಿಯನ್ನು ಕೊಲೆ ಮಾಡಿದ್ದ ಪ್ರಕರಣದ ಸಂಬಂಧ ಇಬ್ಬರು ಆರೋಪಿಗಳನ್ನು ಎಚ್.ಎಸ್.ಆರ್ ಲೇಔಟ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಎಚ್‌ಎಸ್‌ಆರ್ ಲೇಔಟ್ 2ನೇ ಸೆಕ್ಟರ್‌ನ ನಂದಿನಿ ಬಾಯಿ (22), ಆಕೆಯ ಪ್ರಿಯಕರ ನಿತೀಶ್ ಕುಮಾರ್ (22) ಬಂಧಿತರು. ಇವರು ಜ.9ರಂದು ರಾತ್ರಿ ವೆಂಕಟರಮಣ ನಾಯಕ್ (30) ಅವರನ್ನು ರುಬ್ಬುವ ಕಲ್ಲು ಎತ್ತಿ ಹಾಕಿ ಕೊಲೆ ಮಾಡಿದ್ದರು.

‘ಆಂಧ್ರಪ್ರದೇಶದ ಅನಂತಪುರದ ವೆಂಕಟರಮಣ ಅವರು 4 ವರ್ಷದ ಹಿಂದೆ ಸಂಬಂಧಿ ನಂದಿನಿ ಬಾಯಿ ಅವರನ್ನು ಮದುವೆಯಾಗಿದ್ದು, ನಗರದಲ್ಲಿ ಸೇಲ್ಸ್ ಮ್ಯಾನ್ ಆಗಿ ಕೆಲಸ ಮಾಡುತ್ತಿದ್ದರು. ದಂಪತಿ ಎಚ್‌ಎಸ್‌ಆರ್ ಲೇಔಟ್‌ನ 2ನೇ ಸೆಕ್ಟರ್‌ನಲ್ಲಿ ವಾಸವಿದ್ದರು.

ರಾತ್ರಿ ವೇಳೆ ತಾನು ವಾಸವಿರುವ ಬನಶಂಕರಿ ಕಟ್ಟಡದಲ್ಲೇ ವಾಚ್‌ಮನ್ ಆಗಿದ್ದರು. ಈ ನಡುವೆ ದಂಪತಿ ನಡುವೆ ಜಗಳವಾಗಿತ್ತು. ಆಕೆ ತವರಿಗೆ ತೆರಳಿದ್ದರು. ಮತ್ತೆ ಮಾತುಕತೆ ನಡೆದು ಪತಿ ಮನೆಗೆ ವಾಪಸ್ ಬಂದಿದ್ದರು’ ಎಂದು ಪೊಲೀಸರು ಹೇಳಿದರು.

‘ನಡುವೆ ನಂದಿನಿ ಅವರಿಗೆ ನಿತೀಶ್ ಕುಮಾರ್‌ನ ಪರಿಚಯವಾಗಿತ್ತು. ಪ್ರಿಯಕರನ ಜೊತೆಗೆ ಮೊಬೈಲ್‌ನಲ್ಲಿ ಹೆಚ್ಚು ಸಮಯ ಮಾತನಾಡುತ್ತಿದ್ದರು. ಇದರಿಂದ ಕೋಪಗೊಂಡಿದ್ದ ಪತಿಯು ಪತ್ನಿ ಜೊತೆಗೆ ಜಗಳವಾಡಿದ್ದರು’

‘ಜ.9ರ ರಾತ್ರಿ 8ರ ಸುಮಾರಿಗೆ ಪ್ರಿಯಕರನನ್ನು ಮನೆಗೆ ಕರೆಸಿಕೊಂಡಿದ್ದು, ಆಗ ಮನೆಗೆ ಪತಿ ಬಂದಿದ್ದರು. ಆಗ ಜಗಳವಾಗಿತ್ತು. ಹಲ್ಲೆ ನಡೆಸಿ ಕೊಲೆ ಮಾಡಲಾಗಿತ್ತು. ನಂತರ ಆರೋಪಿ ಆಂಧ್ರಪ್ರದೇಶಕ್ಕೆ ಪರಾರಿಯಾಗಿದ್ದ’ ಎಂದು ಪೊಲೀಸರು ಹೇಳಿದರು.

‘ನಶೆಯಲ್ಲಿ ಶೌಚಾಲಯಕ್ಕೆ ತೆರಳುವಾಗ ಪತಿ ಸತ್ತಿದ್ದಾರೆ’ ಎಂದು ಪತ್ನಿ ದೂರು ನೀಡಿ ದ್ದರು. ಮೃತನ ತಂದೆ ನೀಡಿದ್ದ ದೂರು ಆಧರಿಸಿ ತನಿಖೆ ನಡೆಸಿದಾಗ ಕಾರಣ ಗೊತ್ತಾಯಿತು ಎಂದು ಪೊಲೀಸರು ತಿಳಿಸಿದರು.

‘ಡೆಲಿವರಿ ಬಾಯ್ಸ್’ ಸಾವು

ಬೆಂಗಳೂರು: ಯಶವಂತಪುರ ಹಾಗೂ ಎಚ್.ಎ.ಎಲ್ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಶನಿವಾರ ನಡೆದ ಪ್ರತ್ಯೇಕ ಅಪಘಾತಗಳಲ್ಲಿ ಸ್ವಿಗ್ಗಿ ಹಾಗೂ ಜೊಮ್ಯಾಟೊ ಸಂಸ್ಥೆಗಳಲ್ಲಿ ಡೆಲಿವರಿ ಬಾಯ್ ಆಗಿ ಕೆಲಸ ಮಾಡುತ್ತಿದ್ದ ಇಬ್ಬರು ಮೃತಪಟ್ಟಿದ್ದಾರೆ.

ಮತ್ತಿಕೆರೆಯ ಜೆ.ಪಿ. ಉದ್ಯಾನದ ಟ್ಯಾಂಕ್ ಬಂಡ್ ರಸ್ತೆಯಲ್ಲಿ ಡಿವೈಡರ್‌ಗೆ ಬೈಕ್ ಡಿಕ್ಕಿಯಾಗಿ ಸ್ವಿಗ್ಗಿ ಡೆಲಿವರಿ ಬಾಯ್, ಮತ್ತಿಕೆರೆ ಎಚ್‌ಎಂಆರ್ ಬಡಾವಣೆಯ ನಿವಾಸಿ ಎಲ್.ಎಂ.ಅನಿಲ್‌ಕುಮಾರ್ (29) ಸ್ಥಳದಲ್ಲೇ ಮೃತಪಟ್ಟಿದ್ದಾರೆ.

‘ಸವಾರನ ನಿಯಂತ್ರಣ ತಪ್ಪಿದ ಬೈಕ್ ಡಿವೈಡರ್‌ಗೆ ಡಿಕ್ಕಿ ಹೊಡಿದಿದೆ. ಗಂಭೀರವಾಗಿ ಗಾಯಗೊಂಡು ಸ್ಥಳದಲ್ಲೇ ಮೃತಪಟ್ಟರು’ ಎಂದು ಸಂಚಾರ ಪೊಲೀಸರು ತಿಳಿಸಿದರು.

ಸುರಂಜನಾ ದಾಸ್ ರಸ್ತೆಯ ಎಚ್‌ಎಎಲ್ ಆಸ್ಪತ್ರೆ ಬಳಿ ಶನಿವಾರ ಮುಂಜಾನೆ ಸಂಭವಿಸಿದ ಮತ್ತೊಂದು ಅಪಘಾತದಲ್ಲಿ ಜೊಮ್ಯಾಟೊ ಸಂಸ್ಥೆಯ ಡೆಲಿವರಿ ಬಾಯ್ ರಾಜೇಶ್ ಕುಮಾರ್ (32) ಮೃತಪಟ್ಟಿದ್ದಾರೆ.

ರಾಜೇಶ್ ಬೈಕ್‌ನಲ್ಲಿ ಎಚ್‌ಎಎಲ್ ಮುಖ್ಯ ಗೇಟ್ ಕಡೆಯಿಂದ ಜೆ.ಬಿ.ನಗರ ಕ್ರಾಸ್ ಕಡೆಗೆ ತೆರಳುತ್ತಿದ್ದರು. ಆಗ ವೇಗವಾಗಿ ಬಂದ ಕ್ಯಾಬ್‌ವೊಂದು ಬೈಕ್‌ಗೆ ಡಿಕ್ಕಿಯಾಗಿದೆ. ರಸ್ತೆಯ ಮೇಲೆ ಬಿದ್ದ ಅವರ ತಲೆಗೆ ಗಂಭೀರ ಸ್ವರೂಪದ ಗಾಯಗಳಾಗಿದ್ದವು. ಬೌರಿಂಗ್ ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗಮಧ್ಯದಲ್ಲಿ ಅವರು ಮೃತಪಟ್ಟಿದ್ದಾರೆ’ ಎಂದು ಪೊಲೀಸರು ಹೇಳಿದರು.

ಎಸ್ಸೆಸ್ಸೆಲ್ಸಿ ವಿದ್ಯಾರ್ಥಿ ಆತ್ಮಹತ್ಯೆ

ಬೆಂಗಳೂರು: ಭೈರವೇಶ್ವರನಗರದಲ್ಲಿ ವಿದ್ಯಾರ್ಥಿ ಶ್ರೇಯಸ್ (16) ನೇಣುಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ.

ಆಟೊ ಚಾಲಕ ಸಿದ್ದಪ್ಪ ಮತ್ತು ಖಾಸಗಿ ಶಾಲಾ ಶಿಕ್ಷಕಿ ನಳಿನಾ ಅವರ ಪುತ್ರ ಶ್ರೇಯಸ್, ಬಾಗಲಗುಂಟೆಯ ಖಾಸಗಿ ಶಾಲೆಯಲ್ಲಿ ಎಸ್ಸೆಸ್ಸೆಲ್ಸಿ ಓದುತ್ತಿದ್ದ.

ಶುಕ್ರವಾರ ಬೆಳಿಗ್ಗೆ ತಂದೆ ಆಟೊದಲ್ಲಿ ಬಾಡಿಗೆಗೆ ಹೋಗಿದ್ದರೆ, ತಾಯಿ ಶಾಲೆಗೆ ತೆರಳಿದ್ದರು. ಶ್ರೇಯಸ್ ಮನೆಯಲ್ಲೇ ಉಳಿದಿದ್ದು, ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಸಂಜೆ 5ಕ್ಕೆ ತಾಯಿ ಮನೆಗೆ ಮರಳಿದಾಗ ಆತ್ಮಹತ್ಯೆ ಗೊತ್ತಾಗಿದೆ ಎಂದು ಪೊಲೀಸರು ಹೇಳಿದರು.

‘ಆತ್ಮಹತ್ಯೆಗೆ ಸ್ಪಷ್ಟ ಕಾರಣ ತಿಳಿದು ಬಂದಿಲ್ಲ. ಪೋಷಕರಿಂದಲೂ ಮಾಹಿತಿ ಪಡೆದುಕೊಳ್ಳಲಾಗಿದೆ. ತನಿಖೆ ನಡೆಯುತ್ತಿದೆ’ ಎಂದು ಪೊಲೀಸರು ಹೇಳಿದರು. ಬಾಗಲಗುಂಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಟರ್ಫ್‌ಕ್ಲಬ್ ಮೇಲೆ ಸಿಸಿಬಿ ದಾಳಿ: 66 ಮಂದಿ ವಶ

ಬೆಂಗಳೂರು: ‘ಬೆಂಗಳೂರು ಟರ್ಫ್‌ಕ್ಲಬ್’ ಮೇಲೆ ಶುಕ್ರವಾರ ರಾತ್ರಿ ದಾಳಿ ನಡೆಸಿದ್ದ ಸಿಸಿಬಿ ಪೊಲೀಸರು, 66 ಮಂದಿಯನ್ನು ವಶಕ್ಕೆ ಪಡೆದು, ₹3.45 ಕೋಟಿ ಜಪ್ತಿ ಮಾಡಿ, 55 ಮೊಬೈಲ್ ವಶಕ್ಕೆ ಪಡೆದಿದ್ದಾರೆ.

‘9 ಮಂದಿ ತಲೆಮರೆಸಿಕೊಂಡಿದ್ದಾರೆ. 54 ಮಂದಿಗೆ ನೋಟಿಸ್ ನೀಡಿದ್ದು, ಕರೆದಾಗ ವಿಚಾರಣೆಗೆ ಬರಲು ಸೂಚಿಸಲಾಗಿದೆ. ವಶಕ್ಕೆ ಪಡೆದಿದ್ದವರಲ್ಲಿ ಏಳು ಮಂದಿ ಠಾಣಾ ಜಾಮೀನಿನ ಮೇಲೆ ಬಿಡುಗಡೆ ಆಗಿದ್ದಾರೆ’ ಎಂದು ಸಿಸಿಬಿ ಪೊಲೀಸರು ಹೇಳಿದರು.


‘ಅಧಿಕೃತ ಪರವಾನಗಿ ಇಲ್ಲದೇ ಹಣ ಸಂಪಾದನೆಯ ದುರುದ್ದೇಶದಿಂದ ಕೆಲವರು, ಟರ್ಫ್‌ಕ್ಲಬ್ ಪರವಾಗಿರುವ ಅಧಿಕೃತ ಬುಕ್ಕಿಗಳೆಂದು ಹೇಳಿಕೊಂಡು ಅಕ್ರಮ ರೇಸ್ ಬೆಟ್ಟಿಂಗ್ ನಡೆಸುತ್ತಿದ್ದರು. ಪರವಾನಗಿ ಪಡೆದ ಏಜೆಂಟ್‌ಗಳು ಸರ್ಕಾರದ ಆದೇಶಗಳನ್ನು ಸ್ಟಾಲ್‌ನಲ್ಲಿ ಪ್ರಕಟಿಸಿರಲಿಲ್ಲ. ಲೆಕ್ಕ ನಿರ್ವಹಣೆ ಮಾಡಿರಲಿಲ್ಲ. ಪಡೆದ ಹಣಕ್ಕೆ ದಾಖಲೆ ಇರಲಿಲ್ಲ. ತೆರಿಗೆ ವಂಚನೆ ಕುರಿತ ಮಾಹಿತಿ ಆಧರಿಸಿ ದಾಳಿ ನಡೆದಿತ್ತು’ ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

ಆರೋಪಿಯನ್ನು ಬಂಧಿಸಿದ ಜೆ.ಪಿ.ನಗರ ಠಾಣೆ ಪೊಲೀಸರು

ನಕಲಿ ದಾಖಲೆ ಸೃಷ್ಟಿಸಿ ₹1 ಕೋಟಿ ಸಾಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿವೇಶನಕ್ಕೆ ನಕಲಿ ದಾಖಲೆ ಸೃಷ್ಟಿಸಿ ಬೇರೊಬ್ಬರ ಹೆಸರಿಗೆ ಕ್ರಯಪತ್ರ ಮಾಡಿಕೊಟ್ಟು ಬ್ಯಾಂಕ್‌ನಿಂದ ₹ 1 ಕೋಟಿ ಸಾಲ ಪಡೆದಿದ್ದ ಪ್ರಕರಣದಲ್ಲಿ ಆರೋಪಿಯನ್ನು ಜೆ.ಪಿ.ನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.


ರಾಮಕೃಷ್ಣರೆಡ್ಡಿ

ಚಿಕ್ಕಬಳ್ಳಾಪುರದ ಟಿ.ವಿ.ರಾಮಕೃಷ್ಣರೆಡ್ಡಿ ಬಂಧಿತ ಆರೋಪಿ. ಬನಶಂಕರಿ 2ನೇ ಹಂತದ ಟೀಚರ್ಸ್ ಕಾಲೊನಿಯ ಬಿ.ಪಿ. ಮೋಹನ್ ಚಂದ್ ಅವರು ನೀಡಿದ ದೂರು ಆಧರಿಸಿ ಆರೋಪಿ ಬಂಧಿಸಿದ್ದು, ಸದ್ಯ ನ್ಯಾಯಾಂಗ ಬಂಧನದಲ್ಲಿದ್ದಾರೆ ಎಂದು ಪೊಲೀಸರು ಹೇಳಿದರು.

‘2012ರಲ್ಲಿ ಎಸ್.ಕೆ.ರಮೇಶ್ ಎಂಬುವರ ಹೌಸ್ ಬಿಲ್ಡಿಂಗ್ ಕೋ–ಆಪರೇಟಿವ್ ಸೊಸೈಟಿ ಅಡಿ ಸಾರಕ್ಕಿ ಸರ್ವೆ ನಂ. 68ರಲ್ಲಿ ಅಭಿವೃದ್ಧಿಪಡಿಸಿದ್ದ ನಿವೇಶನಗಳ ಪೈಕಿ 23X40 ಅಡಿ ವಿಸ್ತೀರ್ಣದ ನಿವೇಶನ ಖರೀದಿಸಿದ್ದು, ನೋಂದಣಿ ಸಹ ಆಗಿತ್ತು. ಅದಾದ ಮೇಲೆ ರಾಮಕೃಷ್ಣರೆಡ್ಡಿ ಎಂಬಾತ ಕಂದಾಯ ಇಲಾಖೆ ಅಧಿಕಾರಿಗಳ ಜೊತೆಗೆ ಶಾಮೀಲಾಗಿ, ತನ್ನ ಹೆಸರಿಗೆ ನಿವೇಶನದ ಕ್ರಯಪತ್ರ ಸೃಷ್ಟಿಸಿಕೊಂಡಿದ್ದ. ಈ ಬಗ್ಗೆ ನೋಂದಣಿ ಇಲಾಖೆಯ ಜಂಟಿ ಆಯುಕ್ತರಿಗೆ ದೂರು ನೀಡಿದ್ದೆವು’ ಎಂದು ದೂರುದಾರರು ತಿಳಿಸಿದ್ದಾರೆ.

ಜಂಟಿ ಆಯುಕ್ತರು ವಿಚಾರಣೆ ನಡೆಸಿ, 2013ರ ನವೆಂಬರ್ 26ರಂದು ರಾಮಕೃಷ್ಣರೆಡ್ಡಿ ಹೆಸರಿನಲ್ಲಿದ್ದ ಖಾತೆ ವಜಾಗಳಿಸಿದ್ದರು. ನಂತರ ನನ್ನ ಹಾಗೂ ಪತ್ನಿ ಹೆಸರಿಗೆ ಖಾತೆ ಮಾಡಿಸಿಕೊಂಡು ಆ ಜಾಗದಲ್ಲಿ ಮಳಿಗೆ ನಿರ್ಮಿಸಿದ್ದೆವು. ಕಂದಾಯ ಪಾವತಿಸುತ್ತಿದ್ದೇವೆ. ಕಟ್ಟಡದ ಮೇಲೆ ಸಾರಕ್ಕಿ ಕೆನರಾ ಬ್ಯಾಂಕ್‌ನಲ್ಲಿ ಸಾಲ ಪಡೆದಿದ್ದು, ಮೂಲ ದಾಖಲೆಗಳು ಬ್ಯಾಂಕ್‌ನಲ್ಲಿವೆ ಎಂದು ವಿವರಿಸಿದ್ದಾರೆ.

ಕಳೆದ ನವೆಂಬರ್‌ನಲ್ಲಿ ನಿವೇಶನದ ದಾಖಲೆ ಪರಿಶೀಲನೆ ವೇಳೆ ಆರೋಪಿ ರಾಮಕೃಷ್ಣ ನಕಲಿ ದಾಖಲೆ ಸೃಷ್ಟಿಸಿಕೊಂಡು ಫಲಕೃತ ಪ್ರದೀಪ್‌ಕುಮಾರ್ ಅವರಿಗೆ 2023ರ ಮೇ 17ರಂದು ₹75 ಲಕ್ಷಕ್ಕೆ ಕ್ರಯಪತ್ರ ಮಾಡಿಸಿಕೊಟ್ಟು ಎಂ.ಜಿ.ರಸ್ತೆಯ ಡಿಸಿಬಿ ಬ್ಯಾಂಕ್‌ನಲ್ಲಿ ₹1 ಕೋಟಿ ಸಾಲ ಪಡೆದುಕೊಂಡಿದ್ದ. ಈ ಕೃತ್ಯಕ್ಕೆ ಶಾಮೀಲಾಗಿರುವ ನೋಂದಣಿ ಇಲಾಖೆ ಅಧಿಕಾರಿಗಳು, ಬ್ಯಾಂಕ್ ಅಧಿಕಾರಿಗಳು ಹಾಗೂ ಫಲಕೃತ ಪ್ರದೀಪ್ ವಿರುದ್ಧ ಕ್ರಮ ಕೈಗೊಳ್ಳುವಂತೆ ದೂರು ನೀಡಿದ್ದರು.



ಶಿಕ್ಷಣ ತಜ್ಞ ಕೆ.ಪಿ.ಪುತ್ತೂರಾಯ (ಎಡದಿಂದ ಎಂಟನೆಯವರು) ಅವರ ‘ಪದ ಪಂಚಾಮೃತ’ ಕೃತಿಯನ್ನು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ನಗರದಲ್ಲಿ ಇತ್ತೀಚೆಗೆ ಬಿಡುಗಡೆ ಮಾಡಿದರು. ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಅಶೋಕ ಹಾರನಹಳ್ಳಿ, ಜಯದೇವ ಹೃದ್ರೋಗ ಸಂಸ್ಥೆ ನಿರ್ದೇಶಕ ಡಾ.ಸಿ.ಎನ್‌ಮಂಜುನಾಥ್ ಹಾಗೂ ಪುತ್ತೂರಾಯ ಕುಟುಂಬದ ಸದಸ್ಯರು ಪಾಲ್ಗೊಂಡಿದ್ದರು

ಕಾರ್ಖಾನೆಯಲ್ಲಿದ್ದ ಹೆಬ್ಬಾವು ರಕ್ಷಣೆ

ಪ್ರಜಾವಾಣಿ ವಾರ್ತೆ

ದಾಬಸ್ ಪೇಟೆ: ನೆಲಮಂಗಲ ತಾಲ್ಲೂಕು ರಾಯರ ಪಾಳ್ಯದಲ್ಲಿ ಇಟ್ಟಿಗೆ ಕಾರ್ಖಾನೆಯಲ್ಲಿದ್ದ ಹೆಬ್ಬಾವನ್ನು ತುಮಕೂರಿನ ಉರಗ ರಕ್ಷಕರು, ರಕ್ಷಿಸಿ ದೇವರಾಯನ ದುರ್ಗ ಅರಣ್ಯಕ್ಕೆ ಬಿಟ್ಟಿದ್ದಾರೆ.

ಗ್ರಾಮದ ಪ್ರತಾಪ್ ಅವರ ಇಟ್ಟಿಗೆ ಕಾರ್ಖಾನೆಯಲ್ಲಿ 8 ಅಡಿ ಉದ್ದದ ಹೆಬ್ಬಾವು ಸೇರಿತ್ತು. ಅವರು ಉರಗ ರಕ್ಷಕರಿಗೆ ಮಾಹಿತಿ ನೀಡಿದರು. ಶ್ಯಾಮ್, ಮನು ಅಗ್ನಿ ಮತ್ತು ಚೇತನ್ ಅಗ್ನಿ ಬಂದು ಹೆಬ್ಬಾವು ಹಿಡಿದರು.

ಹೆಬ್ಬಾವುಗಳು ಬಯಲುಸೀಮೆ ಪ್ರದೇಶಗಳಲ್ಲಿ ಕಂಡು ಬರುವುದು ಅಪರೂಪ. ಕಾರ್ಖಾನೆಯಲ್ಲಿ ನಾಯಿಯೊಂದು ಮರಿ ಹಾಕಿದ್ದು, ಅದನ್ನು ತಿನ್ನಲು ಬಂದಿರಬಹುದು ಎಂದು ಉರಗ ರಕ್ಷಕ ಶ್ಯಾಮ್ ಮಾಹಿತಿ ನೀಡಿದರು.

ಇಟ್ಟಿಗೆ ಕಾರ್ಖಾನೆ ಸಮೀಪ ರಾಮದೇವರ ಬೆಟ್ಟದ ಅರಣ್ಯ ಪ್ರದೇಶವಿದೆ. ಅಲ್ಲಿ ಹೆಬ್ಬಾವು ಆಗಾಗ ಕಾಣಿಸುತ್ತಿರುತ್ತದೆ. ಅಲ್ಲಿಂದಲೇ ಬಂದಿರಬಹುದು ಎಂಬುದು ಸ್ಥಳೀಯರ ಅಭಿಪ್ರಾಯವಾಗಿದೆ.

ಕಾಡಾನೆ ‘ಸಾರಾ ಮಾರ್ಟಿನ್’ ಸೆರೆ

ಆಲೂರು (ಹಾಸನ): ತಾಲ್ಲೂಕಿನ ಪಾಳ್ಯ ಮತ್ತು ಕೆ. ಹೊಸಕೋಟೆ ಹೋಬಳಿ ವ್ಯಾಪ್ತಿಯಲ್ಲಿ ಹಲವು ದಿನಗಳಿಂದ ಭಯದ ವಾತಾವರಣ ನಿರ್ಮಿಸಿದ್ದ ‘ಸಾರ ಮಾರ್ಟಿನ್’ ಹೆಸರಿನ ಕಾಡಾನೆಯನ್ನು ಅರಣ್ಯ ಇಲಾಖೆ ಅಧಿಕಾರಿಗಳು ಶನಿವಾರ ಸೆರೆ ಹಿಡಿದರು. ಆನೆಯನ್ನು ಮತ್ತಿಗೋಡು ಆನೆ ಕ್ಯಾಂಪ್‌ಗೆ ಲಾರಿಯಲ್ಲಿ ಸಾಗಿಸಲಾಯಿತು.

ಜ.12 ರಂದು ಬೇಲೂರು ತಾಲ್ಲೂಕು ಬಿಕ್ಕೋಡು ಗ್ರಾಮದಲ್ಲಿ ಕಾರ್ಯಾಚರಣೆ ಆರಂಭವಾಗಿತ್ತು. ಶನಿವಾರ ಬೆಳಿಗ್ಗೆ ಅರಣ್ಯ ಇಲಾಖೆ ಉಪ ನಿರ್ದೇಶಕ ಸೌರತ್‌ಕುಮಾರ್ ನೇತೃತ್ವದಲ್ಲಿ, ತಾಲ್ಲೂಕಿನ ಪಾಳ್ಯ ಹೋಬಳಿ ನಲ್ಲೂರು ಹಾಗೂ ಮುದ್ದನಾಯ್ಕನಹಳ್ಳಿಪುರ ಗ್ರಾಮಕ್ಕೆ ಸೇರಿದ ಸಹರಾ ಎಸ್ಟೇಟ್‌ನಲ್ಲಿ ಪ್ರಾರಂಭಿಸಲಾಯಿತು.

ಕೊಡಗು ಜಿಲ್ಲೆಯ ದುಬಾರೆ ಹಾಗೂ ಮತ್ತಿಗೋಡಿನಿಂದ ಬಂದಿದ್ದ ಅಭಿಮನ್ಯು, ಸುಗ್ರೀವ, ಧನಂಜಯ, ಪ್ರಶಾಂತ, ಭೀಮಾ, ಹರ್ಷ, ಅಶ್ವತ್ಥಾಮ ಮತ್ತು ಮಹೇಂದ್ರ ಎಂಬ ಎಂಟು ಸಾಕಾನೆಗಳನ್ನು ಬಳಸಲಾಯಿತು.

ಎಸ್ಟೇಟ್‌ನಲ್ಲಿ ಕಾಡಾನೆ ಬೀಡು ಬಿಟ್ಟಿದ್ದರಿಂದ ಸ್ಥಳೀಯರು ‘ಸಾರಾ ಮಾರ್ಟಿನ್’ ಎಂದು ಕರೆಯುತ್ತಿದ್ದರು.

ಇನ್ನಷ್ಟು ಸುದ್ದಿಗಳು 11 ಎ, 11 ಬಿ

ಹೆದ್ದಾರಿ ಅಭಿವೃದ್ಧಿಗೆ ₹640 ಕೋಟಿ ಬಿಡುಗಡೆ

ಪ್ರಜಾವಾಣಿ ವಾರ್ತೆ

ರಾಮನಗರ: 'ಬೆಂಗಳೂರು ಮತ್ತು ಮೈಸೂರು ನಡುವೆ ಸಂಪರ್ಕ ಕಲ್ಪಿಸುವ ರಾಷ್ಟ್ರೀಯ ಹೆದ್ದಾರಿ -275 ಅಭಿವೃದ್ಧಿಗೆ ಕೇಂದ್ರ ಸರ್ಕಾರ ಹೆಚ್ಚುವರಿಯಾಗಿ ₹ 640 ಕೋಟಿ ಬಿಡುಗಡೆ ಮಾಡಿದೆ. ಬಾಕಿ ಉಳಿದಿರುವ ಕಾಮ ಗಾರಿಯನ್ನು ಈ ಮೊತ್ತದಲ್ಲಿ ಪೂರ್ಣಗೊಳಿಸಬೇಕಿದೆ' ಎಂದು ಸಂಸದ ಡಿ.ಕೆ.ಸುರೇಶ್ ಹೇಳಿದರು.

ಶನಿವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಹೆದ್ದಾರಿಯಲ್ಲಿ ಹಲವೆಡೆ ಪ್ರವೇಶ ಮತ್ತು ನಿರ್ಗಮನ ಮಾರ್ಗಗಳಿಲ್ಲ. ವಿವಿಧೆಡೆ ಸರ್ವಿಸ್ ರಸ್ತೆ ಕೂಡಾ ಅಪೂರ್ಣವಾಗಿದೆ. ಸಾರ್ವಜನಿಕರು ರಸ್ತೆ ದಾಟಲು ಮೇಲ್ಸೇತುವೆ ನಿರ್ಮಾಣವಾಗಬೇಕಿದೆ. ಈ ಹಿನ್ನೆಲೆಯಲ್ಲಿ ಸರ್ಕಾರ ಹಣ ಬಿಡುಗಡೆ ಮಾಡಿದೆ' ಎಂದರು.

'ಸಂಪೂರ್ಣ ಅವೈಜ್ಞಾನಿಕವಾಗಿ ಹೆದ್ದಾರಿ ನಿರ್ಮಿಸಲಾಗಿದೆ. ಹಾಗಾಗಿಯೇ, ಧಾರಾಕಾರವಾಗಿ ಮಳೆ ಸುರಿದರೆ ಈಗಲೂ ನೀರು ಸರಾಗವಾಗಿ ಹರಿದು ಹೋಗದೆ, ರಸ್ತೆಯಲ್ಲೇ ನಿಲ್ಲುತ್ತದೆ. ಅಪಘಾತಗಳು ಸಂಭವಿಸುತ್ತಿವೆ' ಎಂದು ಹೇಳಿದರು.

'ಈ ನಿಟ್ಟಿನಲ್ಲಿ ಇನ್ನೂ ಹಲವು ಸುರಕ್ಷತಾ ಕ್ರಮ ಕೈಗೊಳ್ಳಬೇಕಿದೆ. ಹೆದ್ದಾರಿ ಸಚಿವಾಲಯದ ಅಧಿಕಾರಿಗಳು ಈ ಹಿಂದೆ ಬಂದಿದ್ದಾಗ ಈ ವಿಷಯವನ್ನೂ ಅವರ ಗಮನಕ್ಕೆ ತಂದಿದ್ದೆ' ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ಎಲ್ಲಾದರೂ ಸ್ಪರ್ಧಿಸಲಿ: ಲೋಕಸಭಾ ಚುನಾವಣೆಗೆ ಬೆಂಗಳೂರು ಗ್ರಾಮಾಂತರ ಕ್ಷೇತ್ರದಿಂದ ಜೆಡಿಎಸ್ ಅಧ್ಯಕ್ಷ ಎಚ್.ಡಿ. ಕುಮಾರಸ್ವಾಮಿ ಸ್ಪರ್ಧೆ ಕುರಿತು ಪ್ರತಿಕ್ರಿಯಿಸಿದ ಅವರು, 'ಪ್ರಜಾಪ್ರಭುತ್ವದಲ್ಲಿ ಯಾರು, ಎಲ್ಲಿಂದ ಬೇಕಾದರೂ ಸ್ಪರ್ಧಿಸಬಹುದು. ಗ್ರಾಮಾಂತರ ಕ್ಷೇತ್ರದಲ್ಲಿ ಸ್ಪರ್ಧಿಸಲಿ. ಇಲ್ಲಿ ಹೋರಾಟ ಶುರುವಾಗಿದೆ. ವೇದಿಕೆ ಸಿದ್ಧವಾಗಿದೆ. ನಾನಿನ್ನೂ ತಯಾರಾಗಿಲ್ಲ' ಎಂದರು.

ರಾಮಮಂದಿರ: ಸರ್ವೆಗೆ ಸೂಚನೆ

ರಾಮನಗರ: 'ಇಲ್ಲಿನ ರಾಮದೇವರ ಬೆಟ್ಟದಲ್ಲಿರುವ ರಾಮಮಂದಿರ ನಿರ್ಮಾಣಕ್ಕೆ ಸಂಬಂಧಿಸಿದಂತೆ, ಅಲ್ಲಿ ಎಷ್ಟು ಜಾಗ ಲಭ್ಯವಿದೆ ಎಂಬ ಕುರಿತು ಜಿಲ್ಲಾಧಿಕಾರಿಯಿಂದ ಮಾಹಿತಿ ಕೇಳಲಾಗಿದೆ' ಎಂದು ಡಿ.ಕೆ.ಸುರೇಶ್ ಅವರು ತಿಳಿಸಿದರು.

'ರಾಮದೇವರ ಬೆಟ್ಟ ಪರಿಸರ ಸೂಕ್ಷ್ಮ ವಲಯವಾಗಿದೆ. ಉದ್ದ ಕೊಕ್ಕಿನ ರಣಹದ್ದುಗಳ ಆವಾಸಸ್ಥಾನವಾಗಿದೆ. ಸರ್ವೆ ಮಾಡಿ ವರದಿ ಸಲ್ಲಿಸಲು ಅರಣ್ಯ ಇಲಾಖೆ ಅಧಿಕಾರಿಗಳಿಗೂ ಸೂಚಿಸಲಾಗಿದೆ. ವರದಿ ಬಂದ ಬಳಿಕ ಬೆಟ್ಟದ ಅಭಿವೃದ್ಧಿ ಕುರಿತು ಸರ್ಕಾರದ ಮಟ್ಟದಲ್ಲಿ ಚರ್ಚಿಸಲಾಗುವುದು' ಎಂದು ಹೇಳಿದರು.

ಕಾಣೆಯಾಗಿದ್ದಾರೆ



ಶ್ರೀ ಡಿ. ಶ್ರೀನಿವಾಸ್

ಇವರು ಬೆಂಗಳೂರಿನ ಆರ್.ಟಿ. ನಗರದಿಂದ ನವಂಬರ್ 2022 ರಿಂದ ಕಾಣೆಯಾಗಿರುತ್ತಾರೆ. ಇವರ ಬಗ್ಗೆ ಸುಳಿವು ಸಿಕ್ಕಲ್ಲಿ ಹತ್ತಿರದ ಪೊಲೀಸ್ ಸ್ಟೇಷನ್‌ಗೆ ಅಥವಾ ಈ ಮೊಬೈಲ್ ನಂಬರ್‌ಗೆ ತಿಳಿಸಬೇಕಾಗಿ ಕೋರುತ್ತಿದ್ದೇವೆ.

ಮೊಬೈಲ್: 9620031792 / 9844116440

ರಕ್ತಚಂದನ ವಶ

ಮುಳಬಾಗಿಲು: ಆಂಧ್ರಪ್ರದೇಶದ ಕಾಡುಗಳಲ್ಲಿ ರಕ್ತಚಂದನ ಮರಗಳನ್ನು ಕಡಿದು ಬೆಂಗಳೂರಿಗೆ ಸಾಗಿಸುತ್ತಿದ್ದ ಇಬ್ಬರನ್ನು ಪೊಲೀಸರು ಶುಕ್ರವಾರ ರಾತ್ರಿ ತಾಲ್ಲೂಕಿನ ಗುಡಿಪಲ್ಲಿ ಬಳಿ ಬಂಧಿಸಿ, ₹35 ಲಕ್ಷ ಮೌಲ್ಯದ 750 ಕೆಜಿ ತೂಕದ 31 ರಕ್ತ ಚಂದನ ತುಂಡುಗಳನ್ನು ವಶಪಡಿಸಿಕೊಂಡಿದ್ದಾರೆ.

ಚಿತ್ತೂರು ಜಿಲ್ಲೆ ಜಾನಕಾರಿಪಲ್ಲಿ ಗ್ರಾಮದ ಇಮ್ರಾನ್ ಮತ್ತು ವಹಾಬ್ ಬಂಧಿತರು ಎಂದು ಪೊಲೀಸರು ತಿಳಿಸಿದ್ದಾರೆ.

ಜಯದೇವ ಅರ್ಜಿ ಆಹ್ವಾನ

ಬೆಂಗಳೂರು: ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ಕಾಯಂ ನಿರ್ದೇಶಕ ಹುದ್ದೆಗೆ ಅರ್ಹ ಅಭ್ಯರ್ಥಿಗಳಿಂದ ವೈದ್ಯಕೀಯ ಶಿಕ್ಷಣ ಇಲಾಖೆ ಅರ್ಜಿ ಆಹ್ವಾನಿಸಿದೆ.

ಸಂಸ್ಥೆಯ ನಿರ್ದೇಶಕ ಡಾ.ಸಿ.ಎನ್. ಮಂಜುನಾಥ್ ಅವಧಿ 2023ರ ಜು.19ಕ್ಕೆ ಪೂರ್ಣಗೊಂಡಿತ್ತು. ಸಂಸ್ಥೆಯ ಆಡಳಿತ ಮಂಡಳಿಯ ಅಧ್ಯಕ್ಷರೂ ಆದ ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರು ಮಂಜುನಾಥ್ ಅವಧಿಯನ್ನು 6 ತಿಂಗಳು ಮುಂದುವರಿಸಿ, ಆದೇಶ ಹೊರಡಿಸಿದ್ದರು. ಈಗ ಅವಧಿ ಮುಗಿಯುತ್ತಿರುವುದರಿಂದ ನಿರ್ದೇಶಕ ಹುದ್ದೆಗೆ ಅರ್ಜಿ ಆಹ್ವಾನಿಸಲಾಗಿದೆ.

ಇದೇ 19ರ ಸಂಜೆ 5 ಗಂಟೆಯೊಳಗೆ ಅರ್ಜಿ ಸಲ್ಲಿಸಲು ಅವಕಾಶವಿದೆ. ವಿವರಕ್ಕೆ jayadevacardiology.karnataka.gov.inಗೆ ಭೇಟಿ ನೀಡಬಹುದು ಎಂದು ಪ್ರಕಟಣೆ ತಿಳಿಸಿದೆ.

ಟಿ20 ಕ್ರಿಕೆಟ್: ಹೆಚ್ಚುವರಿ ಬಸ್ ವ್ಯವಸ್ಥೆ

ಬೆಂಗಳೂರು: ನಗರದ ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಜ.17ರಂದು ನಡೆಯಲಿರುವ ಭಾರತ ಮತ್ತು ಅಫ್ಗಾನಿಸ್ತಾನ ನಡುವಿನ ಟಿ20 ಕ್ರಿಕೆಟ್ ಪಂದ್ಯ ವೀಕ್ಷಿಸಲು ಬರುವವರ ಅನುಕೂಲಕ್ಕಾಗಿ ಬಿಎಂಟಿಸಿ ಹೆಚ್ಚುವರಿ ಬಸ್ ವ್ಯವಸ್ಥೆ ಮಾಡಲು ನಿರ್ಧರಿಸಿದೆ.

ಕಾಡುಗೋಡಿ, ಸರ್ಜಾಪುರ, ಎಲೆಕ್ಟ್ರಾನಿಕ್ಸ್ ಸಿಟಿ, ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನ, ಕೆಂಗೇರಿ ಕೆಎಚ್‌ಬಿ, ಯಲಹಂಕ 5ನೇ ಹಂತ, ಯಲಹಂಕ ಆರ್‌ಕೆ ಹೆಗಡೆ ನಗರ, ಬಾಗಲೂರು, ಹೊಸಕೋಟೆಗೆ ಬಿಎಂಟಿಸಿ ಬಸ್‌ಗಳು ಸಂಚರಿಸಲಿವೆ.



ಪ್ರೊ.ಅರವಿಂದ್, ಪ್ರೊ.ಅಕೀಲ್ ಬಿಲ್ಗ್ರಾಮಿ, ಪ್ರೊ. ಮೃಗಾಂಕಾ ಸುರ್, ಪ್ರೊ. ಚಂದ್ರಶೇಖರ ಖರೆ, ಪ್ರೊ. ಶ್ರೀನಿವಾಸ ಕುಲಕರ್ಣಿ, ಪ್ರೊ. ಕೌಶಿಕ್ ಬಸು ಅವರಿಗೆ ಇನ್ಫೊಸಿಸ್ ಸೈನ್ಸ್ ಫೌಂಡೇಷನ್ ವತಿಯಿಂದ 'ಇನ್ಫೊಸಿಸ್ ಪ್ರಶಸ್ತಿ–2023' ಪ್ರದಾನ ಮಾಡಲಾಯಿತು. ನೊಬೆಲ್ ಪ್ರಶಸ್ತಿ ಪುರಸ್ಕೃತ ಪ್ರೊ.ಬ್ರಯಾನ್ ಷ್ಮಿಟ್, ಇನ್ಫೊಸಿಸ್ ಸೈನ್ಸ್ ಫೌಂಡೇಷನ್ ಟ್ರಸ್ಟ್ ಮಂಡಳಿ ಅಧ್ಯಕ್ಷ ಕ್ರಿಸ್ ಗೋಪಾಲಕೃಷ್ಣನ್, ಟ್ರಸ್ಟಿಗಳಾದ ನಾರಾಯಣಮೂರ್ತಿ, ಶ್ರೀನಾಥ್ ಬಾಟ್ನಿ, ಕೆ. ದಿನೇಶ್, ನಂದನ್ ನಿಲೇಕಣಿ, ಮೋಹನದಾಸ್ ಪೈ, ಸಲೀಲ್ ಪಾರೇಖ್ ಮತ್ತು ಎಸ್‌.ಡಿ. ಶಿಬುಲಾಲ್ ಅವರು ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಭಾಗವಹಿಸಿದ್ದರು

ಸಾಮೂಹಿಕ ಅತ್ಯಾಚಾರ ಪ್ರಕರಣ: ಆರೋಪಿಗಳ ಕಡೆಯವರ ಮೇಲೆ ಸಂತ್ರಸ್ತೆ ಗಂಭೀರ ಆರೋಪ

ದೂರು ಹಿಂಪಡೆಯಲು ಹಣದ ಆಮಿಷ

• ಸಿದ್ದು ಆರ್.ಜಿ.ಹಳ್ಳಿ

ಹಾವೇರಿ: 'ಅತ್ಯಾಚಾರದ ಬಗ್ಗೆ ಪೊಲೀಸರಿಗೆ ಕೊಟ್ಟ ದೂರು ಹಿಂಪಡೆಯುವಂತೆ ಅಕ್ಕಿಆಲೂರಿನ ಆರೋಪಿಗಳ ಕಡೆಯವರು ಲಕ್ಷಾಂತರ ರೂಪಾಯಿ ನೀಡುವುದಾಗಿ ಆಮಿಷ ಒಡ್ಡಿದ್ದರು. ಮಾನ ಮರ್ಯಾದೆ ಹೋದ ಬಳಿಕ ದುಡ್ಡು ತೆಗೆದುಕೊಂಡು ನಾನೇನು ಮಾಡಲಿ ಎಂದು ನಿರಾಕರಿಸಿದೆ' ಎಂದು ಸಾಮೂಹಿಕ ಅತ್ಯಾಚಾರದ ಸಂತ್ರಸ್ತೆ ಹೇಳಿದರು.

ನಗರದ ಸ್ವಧಾರಾ ಮಹಿಳಾ ಸಾಂತ್ವನ ಕೇಂದ್ರಕ್ಕೆ ಶನಿವಾರ ಬಿಜೆಪಿ ಜಿಲ್ಲಾ ಘಟಕದ ಪದಾಧಿಕಾರಿಗಳು ಭೇಟಿ ನೀಡಿದ ಸಂದರ್ಭದಲ್ಲಿ ಮಾತನಾಡಿದ ಅವರು, 'ನ್ಯಾಯಾಧೀಶರ ಮುಂದೆ ಕೊಟ್ಟ '164' ಹೇಳಿಕೆಯಲ್ಲಿ ಘಟನೆಯನ್ನು ಎಳೆಎಳೆಯಾಗಿ ವಿವರಿಸಿದ್ದೇನೆ. ಸತ್ಯಾಂಶವನ್ನು ಬಿಚ್ಚಿಟ್ಟಿದ್ದೇನೆ' ಎಂದರು.

₹25 ಸಾವಿರ ಪರಿಹಾರ: ಮಾಜಿ ಸಚಿವ ಬಿ.ಸಿ. ಪಾಟೀಲ ನೇತೃತ್ವದಲ್ಲಿ ಜಿಲ್ಲಾ ಬಿಜೆಪಿ ಘಟಕದ ಪದಾಧಿಕಾರಿಗಳು ಸಾಂತ್ವನ ಕೇಂದ್ರದಲ್ಲಿದ್ದ ಸಂತ್ರಸ್ತೆಯನ್ನು ಭೇಟಿಯಾಗಿ, ಸಾಂತ್ವನ ಹೇಳಿದರು. 'ಯಾರಿಂದಾದರೂ ಬೆದರಿಕೆ ಕರೆ ಬರುತ್ತಿವೆಯೇ?' ಎಂದು ಬಿ.ಸಿ.ಪಾಟೀಲ ಅವರು ಕೇಳಿದಾಗ ಸಂತ್ರಸ್ತೆ ಇಲ್ಲ ಎಂದರು. 'ನಿಮ್ಮೊಂದಿಗೆ ನಾವಿದ್ದೇವೆ. ಯಾರಿಗೂ ಹೆದರಬೇಡಿ' ಎಂದು ಧೈರ್ಯ ತುಂಬಿ, ಬಿಜೆಪಿ ಜಿಲ್ಲಾ ಘಟಕದ ವತಿಯಿಂದ ₹25 ಸಾವಿರ ಪರಿಹಾರ ನೀಡಿದರು.

ಐಜಿಪಿ ಭೇಟಿ: ದಾವಣಗೆರೆ ಪೂರ್ವ ವಲಯದ ಐಜಿಪಿ ಕೆ.ತ್ಯಾಗರಾಜನ್ ಅವರು ಹಾನಗಲ್ ಪೊಲೀಸ್ ಠಾಣೆ ಮತ್ತು ಹಲ್ಲೆ, ಅತ್ಯಾಚಾರ ನಡೆದ ಘಟನಾ ಸ್ಥಳಗಳಿಗೆ ಶನಿವಾರ ಭೇಟಿ ನೀಡಿ, ಸ್ಥಳೀಯ ಪೊಲೀಸರಿಂದ ವಿವರ ಪಡೆದರು. 'ತನಿಖೆ ಚುರುಕುಗೊಳಿಸಿ, ಉಳಿದ ಆರೋಪಿಗಳನ್ನು ಬಂಧಿಸಬೇಕು' ಎಂದು ಸೂಚನೆ ನೀಡಿದರು.

ಮೊಬೈಲ್ ಸ್ವಿಚ್ಡ್ ಆಫ್ : ಘಟನೆಗೆ ಸಂಬಂಧಿಸಿದಂತೆ ಒಟ್ಟು ಏಳು ಆರೋಪಿಗಳ ವಿರುದ್ಧ ಪ್ರಕರಣ ದಾಖಲಾಗಿದ್ದು, ಮೂವರು ಆರೋಪಿಗಳನ್ನು ಬಂಧಿಸಲಾಗಿದೆ. ಒಬ್ಬ ಆರೋಪಿ ಅಪಘಾತದಲ್ಲಿ ಕಾಲಿನ ಮೂಳೆ ಮುರಿದುಕೊಂಡು ಹಾವೇರಿ ಜಿಲ್ಲಾಸ್ಪತ್ರೆಯಲ್ಲಿ ದಾಖಲಾಗಿದ್ದಾನೆ. ಉಳಿದ ಮೂವರು ಆರೋಪಿಗಳ ಬಂಧನಕ್ಕೆ 3 ವಿಶೇಷ ತಂಡಗಳನ್ನು ರಚಿಸಲಾಗಿದೆ.

'ಒಬ್ಬ ಡಿವೈಎಸ್‌ಪಿ, ಇಬ್ಬರು ಇನ್‌ಸ್ಪೆಕ್ಟರ್, ಮೂವರು ಸಬ್‌ಇನ್‌ಸ್ಪೆಕ್ಟರ್‌ಗಳಿರುವ ತಂಡವು, ಆರೋಪಿಗಳ ಜಾಡು ಹಿಡಿದು ಖಾನಾಪುರ, ಬೆಳಗಾವಿ, ಬಾಗಲಕೋಟೆ ಮುಂತಾದ ಸ್ಥಳಗಳಿಗೆ ಹೋಗಿದೆ. ಆದರೆ ಶುಕ್ರವಾರ ಸಂಜೆಯಿಂದ ಆರೋಪಿಗಳು ಮೊಬೈಲ್ ಸ್ವಿಚ್ ಆಫ್ ಮಾಡಿಕೊಂಡ ಕಾರಣ ಪತ್ತೆಗೆ ತೊಡಕಾಗಿದೆ. ಸಾರ್ವಜನಿಕರಿಂದಲೂ ಮಾಹಿತಿ ಸಂಗ್ರಹಿಸಲಾಗುತ್ತಿದೆ' ಎಂದು ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಗೋಪಾಲ್ ಸಿ. 'ಪ್ರಜಾವಾಣಿ'ಗೆ ತಿಳಿಸಿದರು.

ಮತ್ತೊಂದು ವಿಡಿಯೊ ಗಮನಕ್ಕೆ ಬಂದಿದೆ. ದೂರು ಬಂದಿಲ್ಲ. ದೂರು ಕೊಟ್ಟ ಬಳಿಕ ಎಫ್.ಐ.ಆರ್ ದಾಖಲಿಸಿ, ಕಾನೂನು ಕ್ರಮ ಕೈಗೊಳ್ಳುತ್ತೇವೆ

ಅಂಶುಕುಮಾರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಹಾವೇರಿ

ಅತ್ಯಾಚಾರದಂತಹ ಹೀನ ಕೃತ್ಯ ನಡಸಿದ ಆರೋಪಿಗಳಿಗೆ ಕಠಿಣ ಶಿಕ್ಷೆಯಾಗಬೇಕು. ಬೇರೆ ಯಾವ ಹೆಣ್ಣು ಮಕ್ಕಳಿಗೂ ನನ್ನ ಪರಿಸ್ಥಿತಿ ಬರಬಾರದು

ಸಂತ್ರಸ್ತೆ

'ತಪ್ಪಿತಸ್ಥರನ್ನು ರಕ್ಷಿಸುವುದಿಲ್ಲ'

'ಹಾನಗಲ್‌ನಲ್ಲಿ ನಡೆದಿರುವ ಸಾಮೂಹಿಕ ಅತ್ಯಾಚಾರ ಪ್ರಕರಣದಲ್ಲಿ ತಪ್ಪಿತಸ್ಥರನ್ನು ರಕ್ಷಿಸುವ ಪ್ರಶ್ನೆಯೇ ಇಲ್ಲ. ತಪ್ಪೆಸಗಿರುವವರ ವಿರುದ್ಧ ಕ್ರಮ ನಿಶ್ಚಿತ' ಎಂದು ಗೃಹ ಸಚಿವ ಜಿ. ಪರಮೇಶ್ವರ ತಿಳಿಸಿದರು.

'ಬಿಜೆಪಿ ನಾಯಕರ ಆರೋಪಗಳಲ್ಲಿ ಹುರುಳಿಲ್ಲ. ತನಿಖೆ ಪೂರ್ಣಗೊಳ್ಳುವ ಮೊದಲೇ ಟೀಕಿಸುವುದು ಸರಿಯಲ್ಲ. ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಸರಿಯಿಲ್ಲ ಎಂಬ ಆರೋಪವೂ ಸತ್ಯಕ್ಕೆ ದೂರವಾದುದು' ಎಂದರು.

'ಎಫ್‌ಐಆರ್ ದಾಖಲಿಸದ ಪೊಲೀಸರು'

'ಸಾಮೂಹಿಕ ಅತ್ಯಾಚಾರ ಪ್ರಕರಣ ದಾಖಲಾದ ಬೆನ್ನಲ್ಲೇ ಮುಸ್ಲಿಂ ಯುವತಿಯರಿಗೆ ಯುವಕರ ಗುಂಪು ಕಿರುಕುಳ ನೀಡುತ್ತಿರುವ ಮೂರು–ನಾಲ್ಕು ವಿಡಿಯೊಗಳು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದ್ದರೂ ಪೊಲೀಸರು ಸ್ವಯಂ ದೂರು ದಾಖಲಿಸದೇ ಕರ್ತವ್ಯಲೋಪ ಎಸಗಿದ್ದಾರೆ' ಎಂದು ಬಿಜೆಪಿ ಜಿಲ್ಲಾ ರೈತ ಮೋರ್ಚಾ ಘಟಕದ ಅಧ್ಯಕ್ಷ ಕಲ್ಯಾಣಕುಮಾರ್ ಶೆಟ್ಟರ್ ದೂರಿದರು.

'ಕಾಡು ಪ್ರದೇಶದ ಹಾದಿಯಲ್ಲಿ ಮುಸ್ಲಿಂ ಯುವತಿಯ ಮೇಲೆ ಹಲ್ಲೆ ನಡೆಸುತ್ತಿರುವ ಹಾಗೂ ಕಾರಿನಲ್ಲಿ ಮುಸ್ಲಿಂ ಯುವತಿಯನ್ನು ಕೂರಿಸಿಕೊಂಡು ಸುತ್ತ ಕೂತ ಯುವಕರ ಗುಂಪು ಯುವತಿಯ ಕಪಾಳಕ್ಕೆ ಹೊಡೆಯುತ್ತಿರುವ ವಿಡಿಯೊಗಳು ಜಾಲತಾಣದಲ್ಲಿ ನಾಲ್ಕೈದು ದಿನಗಳಿಂದ ಹರಿದಾಡುತ್ತಿವೆ. ಬಂಧಿತ ಆರೋಪಿಗಳ ಮೊಬೈಲ್ ಪರಿಶೀಲಿಸಿದರೆ ಅವರು ನಡೆಸಿರುವ ದುಷ್ಕೃತ್ಯ ಮತ್ತು ಅವರಿಗಿರುವ ಸಮಾಜಘಾತುಕ ಸಂಘಟನೆಗಳ ಜೊತೆಗಿನ ನಂಟು ಬಯಲಾಗುತ್ತದೆ' ಎಂದರು.

ಸಂತ್ರಸ್ತೆಯ ಒಳಉಡುಪು ಘಟನಾ ಸ್ಥಳದಲ್ಲಿ ಪತ್ತೆ

ಹಾನಗಲ್ ಪಟ್ಟಣದಿಂದ 8 ಕಿ.ಮೀ. ದೂರದ ಶಿರಗೋಡ ಗ್ರಾಮದ ಸಮೀಪದ ಕಾಡಿನಲ್ಲಿ ಜನವರಿ 8ರಂದು ನಡೆದಿದ್ದ ಸಾಮೂಹಿಕ ಅತ್ಯಾಚಾರದ ಘಟನಾ ಸ್ಥಳದಲ್ಲಿ ಸಂತ್ರಸ್ತೆಯ ಒಳ ಉಡುಪು ಮತ್ತು ಕೂದಲು ಸಿಕ್ಕಿದ್ದು, ಪ್ರಕರಣಕ್ಕೆ ಮಹತ್ವದ ಸಾಕ್ಷ್ಯ ದೊರೆತಂತಾಗಿದೆ.

ದಾವಣಗೆರೆಯ ವಿಧಿ ವಿಜ್ಞಾನ ಪ್ರಯೋಗಾಲಯದ (ಎಫ್‌ಎಸ್‌ಎಲ್) ಅಧಿಕಾರಿಗಳು ಮತ್ತು ಪೊಲೀಸರು ನಡೆಸಿದ ಸ್ಥಳ ಮಹಜರು ವೇಳೆ ಸಾಕ್ಷ್ಯಗಳು ಸಿಕ್ಕಿವೆ. ಆರೋಪಿಗಳನ್ನು ಹೋಟೆಲ್ ಕೊಠಡಿ ಮತ್ತು ಕೃತ್ಯ ಎಸಗಿದ್ದ ಸ್ಥಳಗಳಿಗೆ ಕರೆದೊಯ್ದು ಪೊಲೀಸರು ಮಾಹಿತಿ ಕಲೆ ಹಾಕಿದರು.

ಮಹಿಳಾ ಆಯೋಗದಿಂದ ಸ್ವಯಂಪ್ರೇರಿತ ದೂರು

ಹಾವೇರಿ: ಹಾನಗಲ್ ಸಮೀಪದ ನಾಲ್ಕರ್ ಕ್ರಾಸ್ ಬಳಿ ನಡೆದ ಸಾಮೂಹಿಕ ಅತ್ಯಾಚಾರ ಪ್ರಕರಣದ ಬಗ್ಗೆ ರಾಷ್ಟ್ರೀಯ ಮಹಿಳಾ ಆಯೋಗ ಸ್ವಯಂಪ್ರೇರಿತ ದೂರು ದಾಖಲಿಸಿಕೊಂಡಿದೆ.

ಮೂರು ದಿನದೊಳಗೆ ವರದಿ ನಿಡುವಂತೆ ಕರ್ನಾಟಕ ಪೊಲೀಸ್ ಮಹಾನಿರ್ದೇಶಕರಿಗೆ (ಡಿಜಿಪಿ) ಸೂಚನೆ ನೀಡಿದೆ. ನಿಗದಿತ ಅವಧಿಯಲ್ಲಿ ವರದಿ ಕಳುಹಿಸದಿದ್ದರೆ, ಆಯೋಗದ ತಂಡವೇ ಕರ್ನಾಟಕಕ್ಕೆ ಭೇಟಿ ನೀಡಲಿದೆ ಎಂದು ಆಯೋಗದ ಅಧ್ಯಕ್ಷೆ ರೇಖಾ ಶರ್ಮಾ ತಿಳಿಸಿದ್ದಾರೆ.

'ಇದು ಅತ್ಯಂತ ಅಮಾನವೀಯ ಮತ್ತು ಆಘಾತಕಾರಿ ಘಟನೆ. ಸಮಾಜ ದೊಡ್ಡ ಮಟ್ಟದಲ್ಲಿ ಇದರ ಜವಾಬ್ದಾರಿ ಹೊರಬೇಕಿದೆ. ಯಾವಾಗ ಬೇಕಾದರೂ ಮಹಿಳೆಯ ಮೇಲೆ ದಾಳಿ ನಡೆಯಬಹುದು ಎಂಬ ಭಯ ಮಹಿಳೆಯರನ್ನು ಕಾಡುತ್ತಿದೆ' ಎಂದು ಆಯೋಗದ ಅಧ್ಯಕ್ಷೆ ರೇಖಾ ಶರ್ಮಾ ಆತಂಕ ವ್ಯಕ್ತಪಡಿಸಿದ್ದಾರೆ.

'ಸಮಾಜದಲ್ಲಿ ನೈತಿಕತೆ ಕುಸಿದಿದೆ. ಮಹಿಳೆಯರನ್ನು ಯಾವ ರೀತಿ ನಡೆಸಿಕೊಳ್ಳಬೇಕು ಎಂಬುದನ್ನು ನಾವು ಗಂಡು ಮಕ್ಕಳಿಗೆ ಕಲಿಸುತ್ತಿಲ್ಲ' ಎಂದು ತಿಳಿಸಿದ್ದಾರೆ.



ಕೂಡಲಸಂಗಮದಲ್ಲಿ ಶನಿವಾರ ನಡೆದ ಶರಣ ಮೇಳದಲ್ಲಿ ಸಂಗೀತ ನಿರ್ದೇಶಕ ಹಂಸಲೇಖ ಅವರಿಗೆ 'ಸ್ವಾಮಿ ಲಿಂಗಾನಂದ ಶ್ರೀ' ಪ್ರಶಸ್ತಿ ಪ್ರದಾನ ಮಾಡಲಾಯಿತು

'ರೈತರದ್ದು ಆತ್ಮಹತ್ಯೆಯಲ್ಲ, ಹತ್ಯೆ'

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: 'ದೇಶದಲ್ಲಿ ನಿತ್ಯ 500ಕ್ಕೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಅವರದ್ದು ಆತ್ಮಹತ್ಯೆಯಲ್ಲ, ಹತ್ಯೆ' ಎಂದು ಹೋರಾಟಗಾರ್ತಿ ಮೇಧಾ ಪಾಟ್ಕರ್ ಆರೋಪಿಸಿದರು.

ಜಿಲ್ಲೆಯ ಕೂಡಲಸಂಗಮದಲ್ಲಿ ಶನಿವಾರ ಬಸವ ಧರ್ಮ ಪೀಠದಿಂದ ನಡೆದ ಶರಣ ಮೇಳದಲ್ಲಿ ಶನಿವಾರ 'ಬಸವಾತ್ಮಜೆ' ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಅವರು, 'ಬೆಳೆಗೆ ಬೆಲೆ ಸಿಗದ ಕಾರಣ ರೈತರು ಕಂಗಾಲು ಆಗಿದ್ದಾರೆ' ಎಂದರು.

'ನದಿಗಳು ಕಲುಷಿತಗೊಳ್ಳುತ್ತಿವೆ. ನಗರ ತ್ಯಾಜ್ಯ ನದಿಗಳ ಒಡಲು ಸೇರುತ್ತಿದೆ. ಚಾರ್‌ಧಾಮ ರಸ್ತೆ ನಿರ್ಮಾಣದಿಂದ ನದಿ ನೀರಿನ ಮೂಲಗಳು ಹಾಳಾದವು' ಎಂದರು.

'ಧರ್ಮವನ್ನು ನಶೆಯಾಗಿ ಪರಿವರ್ತಿಸಲಾಗುತ್ತಿದೆ. ಇದರ ಬಗ್ಗೆ ಜಾಗೃತಿ ಮೂಡಿಸುವ ಶಕ್ತಿ ವಚನಗಳಿಗಿದೆ. 12ನೇ ಶತಮಾನದಲ್ಲಿ ಬಸವಣ್ಣ ಉಳ್ಳವರು ದೇವಾಲಯ ಮಾಡುವರು, ನಾನೇನು ಮಾಡಲಯ್ಯ ಎನ್ನ ಕಾಲೇ ಕಂಬ, ದೇಹವೇ ದೇಗುಲ ಎಂದು ಹೇಳಿದ್ದರು' ಎಂದು ವಚನ ಉಲ್ಲೇಖಿಸಿದರು.

'ಬಸವಣ್ಣನ ಕಾಯಕ ತತ್ವ ಅಳವಡಿಸಿಕೊಂಡಿದ್ದೇವೆಯೇ ಎಂಬ ಆತ್ಮಾವಲೋಕನ ಮಾಡಿಕೊಳ್ಳಬೇಕು. ಉತ್ಪಾದನೆಯನ್ನು ಎಲ್ಲರಿಗೂ ಹಂಚುವ ದಾಸೋಹ ತತ್ವದ ಮೂಲಕ ಸಂಪತ್ತು ವಿತರಣೆಯಾಗಬೇಕು' ಎಂದರು.

'ಹಲವರು ವಿಶ್ವಗುರು ಎಂದು ಹೇಳಿಕೊಳ್ಳುತ್ತಾರೆ. ಆದರೆ, ಬಸವಣ್ಣನ ಒಬ್ಬರೇ ವಿಶ್ವಗುರು ಎಂಬುದನ್ನು ಅನುಭವ ಮಂಟಪ ಸಾರಿದೆ. ಜಾತಿ ನಿರ್ಮೂಲನೆಗಾಗಿ ಬಸವಣ್ಣ ಹೋರಾಟ ಮಾಡಿದ್ದರು. ಇಂದಿಗೂ ಆ ಹೋರಾಟ ಪೂರ್ಣಗೊಂಡಿಲ್ಲ. ಅವರು ಸಮಾನತೆಗಾಗಿ ಜೀವವನ್ನೇ ನೀಡಿದ್ದಾರೆ. ನಾವು ಜೀವನ ನೀಡಲು ತೊಂದರೆ ಏನು' ಎಂದು ಪ್ರಶ್ನಿಸಿದರು

ಸಂಗೀತ ನಿರ್ದೇಶಕ ಹಂಸಲೇಖ ಅವರಿಗೆ 'ಸ್ವಾಮಿ ಲಿಂಗಾನಂದ ಶ್ರೀ' ಪ್ರಶಸ್ತಿ ಪ್ರದಾನ ಮಾಡಲಾಯಿತು. ಲಿಂಗಾನಂದಶ್ರೀ ಪ್ರಶಸ್ತಿಯು ₹1 ಲಕ್ಷ ಮತ್ತು ಬಸವಾತ್ಮಜೆ ಪ್ರಶಸ್ತಿ ₹50 ಸಾವಿರ ನಗದು, ಸ್ಮರಣಿಕೆ ಒಳಗೊಂಡಿದೆ.

ಬಸವ ಪೀಠದ ಅಧ್ಯಕ್ಷೆ ಮಾತೆ ಗಂಗಾದೇವಿ, ಇಳಕಲ್‌ನ ಗುರು ಮಹಾಂತ ಸ್ವಾಮೀಜಿ, ಅನ್ನದಾನ ಭಾರತೀ ಅಪ್ಪಣ್ಣ ಸ್ವಾಮೀಜಿ, ಅನಿಮಿಷಾನಂದ ಸ್ವಾಮೀಜಿ, ಮಹದೇಶ್ವರ ಸ್ವಾಮೀಜಿ, ಚಿತ್ರನಟ ಡಾಲಿ ಧನಂಜಯ, ಶಾಸಕ ವಿಜಯಾನಂದ ಕಾಶಪ್ಪನವರ ಇದ್ದರು.

'ಮೈಸೂರು ಲೋಕಸಭಾ ಟಿಕೆಟ್ ಕೇಳಿಲ್ಲ'

ರಾಯಚೂರು: 'ಲೋಕಸಭಾ ಚುನಾವಣೆಯಲ್ಲಿ ಮೈಸೂರು ಕ್ಷೇತ್ರದಿಂದ ಮಾಜಿ ಶಾಸಕ ಯತೀಂದ್ರ ಅವರನ್ನು ಕಣಕ್ಕಿಳಿಸುವುದಾಗಿ ನಾನಾಗಲಿ, ಯತೀಂದ್ರ ಆಗಲಿ ಹೇಳಿಲ್ಲ. ಟಿಕೆಟ್ ಕೇಳಿಲ್ಲ. ಪ್ರತಾಪ ಸಿಂಹ ಅವರಿಗೆ ಸೋಲಿನ ಹೆದರಿಕೆ ಶುರುವಾಗಿದೆ. ಹಾಗಾಗಿ ಏನೇನೋ ಹೇಳಿಕೆ ನೀಡುತ್ತಿದ್ದಾರೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ದೇವದುರ್ಗ ತಾಲ್ಲೂಕಿನ ತಿಂಥಣಿ ಬ್ರಿಜ್‌ನ ಕಾಗಿನೆಲೆ ಮಹಾಸಂಸ್ಥಾನ ಕನಕ ಗುರುಪೀಠದಲ್ಲಿ ಶನಿವಾರ ಆಯೋಜಿಸಿದ್ದ ಹಾಲುಮತ ಸಂಸ್ಕೃತಿ ವೈಭವ ಸಮಾವೇಶದಲ್ಲಿ ಪಾಲ್ಗೊಳ್ಳುವ ಮೊದಲು ಅವರು ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡುವಾಗ ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

'ನಗರಾಭಿವೃದ್ಧಿ ಸಚಿವರು ಚುನಾವಣಾ ವೀಕ್ಷಕರಾಗಿ ಹೋಗಿದ್ದರು. ಅವರು ನೀಡಿರುವ ವರದಿ ಆಧಾರದ ಮೇಲೆ ನಾವು ನಿರ್ಧಾರ ಕೈಗೊಳ್ಳುತ್ತೇವೆ' ಎಂದರು.

ಸುದ್ದಿ 2 ನಿಮಿಷ

ಕನ್ನಡ ಸಾಹಿತ್ಯ ಪರಿಷತ್ ಕಡೆಗಣಿಸಿದ ಸಿ.ಎಂ: ಜೋಶಿ

ಧಾರವಾಡ: 'ಮಂಡ್ಯದಲ್ಲಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಆಯೋಜನೆಗೆ ಪೂರ್ವಭಾವಿ ಸಭೆ ನಡೆಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಭೇಟಿಗೆ ಮೂರು ಸಲ ಸಮಯ ನೀಡಿ, ರದ್ದು ಗೊಳಿಸಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತನ್ನು ಕಡೆಗಣಿಸುತ್ತಿದ್ದಾರೆಯೇ ಎಂಬ ಸಂಶಯ ಕಾಡುತ್ತಿದೆ' ಎಂದು ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ಹೇಳಿದರು.

'ಕರ್ನಾಟಕ ಎಂದು ನಾಮಕರಣವಾದ ಬಳಿಕ ಮೊದಲ ಸಮ್ಮೇಳನ ಮಂಡ್ಯದಲ್ಲಿ ನಡೆಯಿತು. ಸುವರ್ಣ ಸಂಭ್ರಮದ ಈ ಸಂದರ್ಭದಲ್ಲೂ ಮತ್ತೆ ಮಂಡ್ಯದಲ್ಲಿ ಸಮ್ಮೇಳನ ನಿಗದಿಯಾಗಿದೆ. 2024ರಲ್ಲಿ ಸಮ್ಮೇಳನ ಆಗಲೇಬೇಕು. ಸಮ್ಮೇಳನ ದಿನ ನಿಗದಿಗೆ ಮುಖ್ಯಮಂತ್ರಿ ಆಸಕ್ತಿ ತೋರುತ್ತಿಲ್ಲ' ಎಂದು ಅವರು ಶನಿವಾರ ಪತ್ರಿಕಾ ಗೋಷ್ಠಿಯಲ್ಲಿ ಆರೋಪಿಸಿದರು.

'ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಅವರ ಜೊತೆಗೂಡಿ ಮುಖ್ಯಮಂತ್ರಿ ಅವರನ್ನು ಇನ್ನೊಮ್ಮೆ ಭೇಟಿಯಾಗುವೆ. ಸಮ್ಮೇಳನ ಆಯೋಜನೆಗೆ ₹25 ಕೋಟಿ ಅನುದಾನ ಒದಗಿಸಲು ಕೋರುವೆ' ಎಂದು ಜೋಶಿ ಹೇಳಿದರು.

ಜನಾರೋಗ್ಯ ವಿಮಾ ಕೇಂದ್ರಕ್ಕೆ ಬೀಗ



ಬೆಳಗಾವಿ: ನಗರದಲ್ಲಿ ತೆರೆಯಲಾಗಿದ್ದ ಮಹಾರಾಷ್ಟ್ರ ಸರ್ಕಾರದ ಮಹಾತ್ಮ ಜ್ಯೋತಿರಾವ್ ಫುಲೆ ಜನಾರೋಗ್ಯ ವಿಮೆ ಯೋಜನೆಯ ನಾಲ್ಕು ಸೇವಾ ಕೇಂದ್ರಗಳಿಗೆ ಜಿಲ್ಲಾಡಳಿತ ಶನಿವಾರ ಬೀಗ ಹಾಕಿದೆ.

ಕರ್ನಾಟಕದ ಗಡಿಯೊಳಗಿನ 865 ಹಳ್ಳಿ– ಪಟ್ಟಣಗಳಲ್ಲಿ ಇರುವ ಮರಾಠಿ ಭಾಷಿಕರಿಗೆ ಈ ವಿಮಾ ಯೋಜನೆಯನ್ನು ಅನುಷ್ಠಾನ ಮಾಡಲು ಯೋಜಿಸಲಾಗಿತ್ತು.

'ಈ ಸೇವಾ ಕೇಂದ್ರಗಳು ಅನಧಿಕೃತವಾಗಿವೆ. ಮರಾಠಿಗರನ್ನು ರಾಜ್ಯದ ವಿರುದ್ಧ ಎತ್ತಿಕಟ್ಟಲು ಮಹಾರಾಷ್ಟ್ರ ಇಂಥ ಹೆಜ್ಜೆ ಇಟ್ಟಿದೆ ಎಂದು ಜಿಲ್ಲಾ ಕನ್ನಡ ಸಂಘಟನೆಗಳ ಕ್ರಿಯಾ ಸಮಿತಿ ದೂರು ನೀಡಿದೆ. ಅದರ ಆಧಾರದ ಮೇಲೆ ನಾಲ್ಕೂ ಸೇವಾ ಕೇಂದ್ರಗಳ ಮೇಲೆ ದಾಳಿ ನಡೆಸಲಾಯಿತು. ಅನುಮತಿ ಇಲ್ಲದೇ ಹೊರರಾಜ್ಯದ ಜನಾರೋಗ್ಯ ವಿಮೆಯ ಕೆಲಸಗಳನ್ನು ಮಾಡುತ್ತಿರುವುದು ಕಂಡುಬಂದ ಕಾರಣ ಕೇಂದ್ರಗಳನ್ನು ಬಂದ್ ಮಾಡಲಾಗಿದೆ. ಕಾರಣ ಕೇಳಿ ನೋಟಿಸ್ ಕೂಡ ನೀಡಲಾಗಿದೆ' ಎಂದು ಜಿಲ್ಲಾಧಿಕಾರಿ ನಿತೇಶ್ ಪಾಟೀಲ ತಿಳಿಸಿದರು.

ರಾಷ್ಟ್ರೀಯ ಭದ್ರತೆ ನಿರ್ಲಕ್ಷ್ಯ: ಕಾಂಗ್ರೆಸ್ ಆರೋಪ

ನವದೆಹಲಿ (ಪಿಟಿಐ): ರಾಷ್ಟ್ರೀಯ ಭದ್ರತೆಯ ವಿಚಾರವನ್ನು ನರೇಂದ್ರ ಮೋದಿ ಸರ್ಕಾರ ನಿರ್ಲಕ್ಷ್ಯ ಮಾಡುತ್ತಿದೆ ಮತ್ತು ಅದನ್ನು ಚುನಾವಣಾ ಲಾಭ ಹಾಗೂ ಪ್ರಧಾನಿಯ ಸ್ವಲಾಭದ ದೃಷ್ಟಿಯಿಂದ ಮಾತ್ರವೇ ನೋಡಲಾಗುತ್ತಿದೆ ಎಂದು ಕಾಂಗ್ರೆಸ್ ಶನಿವಾರ ಆರೋಪಿಸಿದೆ.

ಸೇನಾ ಮುಖ್ಯಸ್ಥ ಜನರಲ್ ಮನೋಜ್ ಪಾಂಡೆ ಅವರು ಇತ್ತೀಚೆಗೆ ತಮ್ಮ ವಾರ್ಷಿಕ ಪತ್ರಿಕಾ ಗೋಷ್ಠಿಯಲ್ಲಿ ಹೇಳಿದ ಮಾತುಗಳು ಮೋದಿ ಅವಧಿಯಲ್ಲಿನ ಭಾರತದ ರಾಷ್ಟ್ರೀಯ ಭದ್ರತೆಯ 'ಗಂಭೀರ ಅಧೋಗತಿ' ಕುರಿತ ಸಕಾಲಿಕ ಎಚ್ಚರಿಕೆಯಾಗಿದೆ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಹೇಳಿದ್ದಾರೆ.

ಲಡಾಕ್‌ನಲ್ಲಿ ಚೀನಾ ಒತ್ತುವರಿ ಹಾಗೂ ಜಮ್ಮು ಕಾಶ್ಮೀರದ ರಜೌರಿ–ಪೂಂಚ್ ಭಾಗದಲ್ಲಿ ಹೆಚ್ಚಾಗಿರುವ ಉಗ್ರರ ಚಟುವಟಿಕೆಗಳ ಬಗ್ಗೆ ಜನರಲ್ ಪಾಂಡೆ ಹೇಳಿಕೆಗಳನ್ನು ಉಲ್ಲೇಖಿಸಿರುವ ಜೈರಾಮ್ ರಮೇಶ್, 'ಲಡಾಕ್‌ನಲ್ಲಿ ಚೀನಾದ ಒಳನುಸುಳುವಿಕೆ ತಡೆಯಲು ಹಾಗೂ ಅಲ್ಲಿನ 2000 ಚದರ ಕಿ.ಮೀ. ಪ್ರದೇಶ ಪ್ರವೇಶಿಸಲು ಭಾರತದ ಸೈನ್ಯಕ್ಕೆ ಇನ್ನೂ ಸಾಧ್ಯವಾಗಿಲ್ಲ' ಎಂದು ಕಿಡಿಕಾರಿದ್ದಾರೆ.

'ಅಗ್ನಿಪಥ ಯೋಜನೆ ಬಗ್ಗೆ ಸೇನೆಯು ಅಚ್ಚರಿ ವ್ಯಕ್ತಪಡಿಸಿತ್ತು. ನೌಕಾಪಡೆ ಮತ್ತು ವಾಯುಪಡೆಗೆ ಅದು ಅತ್ಯಂತ ಅನಿರೀಕ್ಷಿವಾಗಿತ್ತು ಎನ್ನುವುದನ್ನು ಸೇನೆಯ ಮಾಜಿ ಮುಖ್ಯಸ್ಥ ಎಂ.ಎಂ. ನರವಣೆ ಅವರ ಪುಸ್ತಕ ಬಯಲು ಮಾಡಿದೆ ಎಂದು ಜೈರಾಮ್ ರಮೇಶ್ ಹೇಳಿದ್ದಾರೆ.

ನನ್ನ ಹತ್ಯೆಗೂ ಸಂಚು: ರೇವಣ್ಣ ಆರೋಪ

ಹಾಸನ: 'ಜೆಡಿಎಸ್ ಮುಖಂಡ ಕೃಷ್ಣೇಗೌಡರ ಹತ್ಯೆ ನಂತರ ಒಂದು ವಾರ ನನ್ನ ಮೇಲೆ ಹಾಗೂ ಗುತ್ತಿಗೆದಾರ ಅಶ್ವತ್ ನಾರಾಯಣ್ ಅವರ ಮೇಲೆ ನಿಗಾ ಇಡಲಾಗಿತ್ತು; ನನ್ನ ಹತ್ಯೆಗೂ ಸಂಚು ರೂಪಿಸಲಾಗಿತ್ತು' ಎಂದು ಶಾಸಕ ಎಚ್.ಡಿ. ರೇವಣ್ಣ ಆರೋಪಿಸಿದರು.

ನಗರದಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿ, 'ಇದಕ್ಕಾಗಿ ಹೊರ ಜಿಲ್ಲೆಯ ಯಾರು ಹಣದ ನೆರವು ನೀಡುತ್ತಿದ್ದಾರೆ ಎಂಬುದನ್ನು ಕಾಲ ಬಂದಾಗ ಬಹಿರಂಗ ಮಾಡುವೆ' ಎಂದರು. 'ಕೃಷ್ಣೇಗೌಡ ಕೊಲೆ ಪ್ರಕರಣದಲ್ಲಿ ಇಬ್ಬರು ಆರೋಪಿಗಳನ್ನು ಇನ್ನೂ ಬಂಧಿಸಿಲ್ಲ. ಅವರಿಗೆ ಯಾರು ನೆರವು ನೀಡುತ್ತಿದ್ದಾರೆ ಎಂಬುದೂ ಗೊತ್ತಿದೆ. ದೇವೇಗೌಡರ ಕುಟುಂಬವನ್ನು ಮುಗಿಸಲು ನಾಲ್ಕು ವರ್ಷಗಳಿಂದ ದೊಡ್ಡ ಷಡ್ಯಂತ್ರಗಳು ನಡೆಯುತ್ತಿವೆ. ಅದರಲ್ಲಿ ದೊಡ್ಡವರ ಕೈವಾಡವಿದೆ. ಯಾವುದಕ್ಕೂ ನಾನು ಜಗ್ಗುವುದಿಲ್ಲ' ಎಂದು ಹೇಳಿದರು.

ಡ್ರೋನ್ ಚಿತ್ರೀಕರಣ: ನೋಟಿಸ್

ಚಾಮರಾಜನಗರ: ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಹಿಮವದ್ ಗೋಪಾಲಸ್ವಾಮಿ ಬೆಟ್ಟದಲ್ಲಿ ಡ್ರೋನ್ ಕ್ಯಾಮೆರಾದಲ್ಲಿ ಚಿತ್ರೀಕರಣ ಮಾಡಿದ್ದ ಪತ್ರಕರ್ತ ವಿಶ್ವೇಶ್ವರ ಭಟ್ ಅವರಿಗೆ ಗೋಪಾಲಸ್ವಾಮಿ ಬೆಟ್ಟ ವಲಯ ಅರಣ್ಯ ಅಧಿಕಾರಿ ನೋಟಿಸ್ ನೀಡಿದ್ದಾರೆ.

'ಬೆಟ್ಟದಲ್ಲಿ ಅನುಮತಿ ಇಲ್ಲದೆ ಡ್ರೋನ್ ಮೂಲಕ ಚಿತ್ರೀಕರಣ ಮಾಡಿ ಸಾಮಾಜಿಕ ಜಾಲತಾಣದಲ್ಲಿ ಪ್ರಕಟಿಸಿದ್ದೀರಿ. ಇದು ವನ್ಯಜೀವಿ ಸಂರಕ್ಷಣೆ ಕಾಯ್ದೆ 1972ರ ಸೆಕ್ಷನ್ 28, 1(ಬಿ) ಉಲ್ಲಂಘನೆ. ಬೆಟ್ಟದ ತಪ್ಪಲಿನಿಂದ ಬೆಟ್ಟಕ್ಕೆ ತೆರಳಲು ಸಂಜೆ 4 ಗಂಟೆಯವರೆಗೆ ಮಾತ್ರ ಅವಕಾಶ ಇರುತ್ತದೆ. ನೀವು ಚಿತ್ರಗಳನ್ನು ಪೋಸ್ಟ್ ಮಾಡಿ ಸಂಜೆ 6 ಗಂಟೆಗೆ ಎಂದು ನಮೂದಿಸಿದ್ದೀರಿ. ಈ ಪತ್ರ ತಲುಪಿದ ಕೂಡಲೇ ಕಚೇರಿಗೆ ಹಾಜರಾಗಿ ಈ ಎರಡು ವಿಷಯಗಳ ಬಗ್ಗೆ ಸ್ಪಷ್ಟೀಕರಣ ನೀಡಬೇಕು' ಎಂದು ನೋಟಿಸ್‌ನಲ್ಲಿ ಆರ್‌ಎಫ್‌ಒ ಮಂಜುನಾಥ್ ಹೇಳಿದ್ದಾರೆ.



EXCHANGE BONANZA
UPTO ₹25,000
ವರೆಗೂ ಕಡಿತ ಹಳೆಯ ಎಲೆಕ್ಟ್ರಾನಿಕ್ಸ್ ಮತ್ತು ಗೃಹೋಪಯೋಗಿ ವಸ್ತುಗಳ ಎಕ್ಸ್‌ಚೇಂಜ್ ಮೇಲೆ*
MASSIVE DISCOUNTS
UPTO 70% OFF
ಗಿರಿಯಾಸ್®
ಗೃಹಬಳಕೆ ವಸ್ತುಗಳ ವ್ಯಾಪಾರಿಗಳು
1971 ರಿಂದ
Sakkath SANKRANTHI Sale
CASH BACK BONANZA
UPTO 20%
ಕ್ಯಾಶ್ ಬ್ಯಾಕ್*
AXIS BANK citi HDFC BANK HSBC ICICI Bank IndusInd Bank kotak RBL BANK Union Bank YES BANK Standard Chartered Bank of Baroda FEDERAL BANK SBI card
ಉಚಿತ FIRE-BOLTT SMART CALLING WATCH WORTH ₹20,000
FINANCE POWERED BY Groww
0% EMI ₹2,000 Cash Back
MIN PRODUCT VALUE ₹10,000
MobiKwik 5% CASH BACK* on UPI
MINIMUM TRANSACTION ₹5000 MAXIMUM CASHBACK UPTO ₹1000
ಕೇವಲ ಪಾವತಿಸಿ ₹1 ಮನೆಗೆ ತೆಗೆದುಕೊಂಡು ಹೋಗಿ*
FINANCE BONANZA 1 EMI FREE*
INSTANT LOAN APPROVAL UPTO ₹4,00,000*
ASSURED GIFTS ON ALL LG PRODUCTS*
BT SPEAKER INDUCTION COOKER STEAM IRON KETTLE DRY IRON
24 HOURS EXPRESS DELIVERY*
LG 77 4K SMART OLED OLED77B3PSA
ಇ.ಎಮ್.ಐ ₹4,999
ಉಚಿತ: ₹20000 ಮೌಲ್ಯದ FIRE-BOLTT SMART CALLING WATCH
SAMSUNG 77 OLED 4K SMART TV 77S90C
ಇ.ಎಮ್.ಐ ₹6,990
ಉಚಿತ: SAMSUNG SOUNDBAR WORTH ₹48,900
Haier 55 QLED SMART GOOGLE TV
ಇ.ಎಮ್.ಐ ₹2,994
ಉಚಿತ: ₹20000 ಮೌಲ್ಯದ FIRE-BOLTT SMART CALLING WATCH
SONY 65 4K ULTRA HD SMART OLED 65A80L
ಇ.ಎಮ್.ಐ ₹6,500
NEVER BEFORE PRICES
43 4K SMART LED ₹18,990 ಇ.ಎಮ್.ಐ: ₹1,583
55 4K SMART LED ₹29,990 ಇ.ಎಮ್.ಐ: ₹2,499
65 4K SMART LED ₹49,990 ಇ.ಎಮ್.ಐ: ₹4,166
vivo Y56 (5G*) ₹14,990* ONWARDS ಇ.ಎಮ್.ಐ ₹1,249
ಉಚಿತ: ₹1,599 ಮೌಲ್ಯದ SMART WATCH+ 70% OFF ON DAMAGE PROTECTION
Redmi 13C 8/256 OFFER PRICE ₹14,499* ಇ.ಎಮ್.ಐ ₹1,208
70% DISCOUNT ON DAMAGE PROTECTION
ONEPLUS NORD CE 3 -8/128 OFFER PRICE ₹24,990* ಇ.ಎಮ್.ಐ ₹2,083*
70% OFF ON DAMAGE PROTECTION
oppo RENO 10 – 8/256 GB OFFER PRICE ₹32,999* ಇ.ಎಮ್.ಐ ₹2,750 UPTO 10% CASH BACK
ಉಚಿತ: SMART WATCH WORTH ₹3999 + 70% OFF ON DAMAGE PROTECTION
SAMSUNG First AI Phone
Galaxy Unpacked
Pre Reserve & Get ₹5,000 Additional benefit
iPhone 15\15 PRO\ PRO MAX STARTS FROM ₹72,990* ಇ.ಎಮ್.ಐ ₹3,042
70% OFF ON DAMAGE PROTECTION
hp 15s
N4500
8GB,512GB SSD,
15.6" HD
WIN 11
MSO 2021
ಇ.ಎಮ್.ಐ ₹2,499 OFFER PRICE ₹29,990*
FREE: SMART WATCH WORTH ₹3999 + PAY RS. 2499 AND GET GOODIES WORTH ₹10999
Lenovo SLIM 3i
RYZEN 7 5700U
16GB, 512GB SSD
15.6 FHD
INT AMD RADEON GFX
WIN 11 MSO 21
ಇ.ಎಮ್.ಐ ₹4,166 OFFER PRICE ₹49,990*
FREE: METAL BT SMART WATCH WORTH ₹7999 + PAY ₹1499 AND GET 1 YRS ADDITIONAL WARRANTY + DAMAGE PROTECTION WORTH ₹7999
HOT DEAL
i5 10TH GEN
8GB/1TB+ 256 GB SSD
14 FHD
WIN10
ಇ.ಎಮ್.ಐ ₹3,083 OFFER PRICE ₹36,990*
FREE: METAL BT SMART WATCH WORTH ₹7999
DELL INS 3520
12TH GEN I5-1235U
16GB DDR4
512GB SSD/15.6 FHD
WIN 11 MSO 2021
ಇ.ಎಮ್.ಐ ₹4,583 OFFER PRICE ₹54,990*
FREE: METAL BT SMART WATCH WORTH ₹7999+ PAY ₹2499 AND GET GOODIES WORTH ₹12199
hp VICTUS- GAMING
RYZEN 5 5600H
16GB, 512GB SSD
RADEON RX6500M 4GB GFX
15.6 FHD, WIN 11
ಇ.ಎಮ್.ಐ ₹4,749 OFFER PRICE ₹56,990*
FREE: METAL BT SMART WATCH WORTH ₹7999 + PAY ₹1499 AND GET 1 YRS ADDITIONAL WARRANTY + DAMAGE PROTECTION WORTH ₹7999
LG 650 Ltr, CONVERTIBLE SIDE-BY-SIDE REFRIGERATOR B257EPZ3
ಇ.ಎಮ್.ಐ ₹4,999
ಉಚಿತ: ₹20000 ಮೌಲ್ಯದ FIRE-BOLTT SMART CALLING WATCH
SAMSUNG 653 Ltrs WI-FI ENABLED SMARTTHINGS SIDE BY SIDE INVERTER RS76CG8113SLHL
ಇ.ಎಮ್.ಐ ₹6,990
Godrej 564 LTRS SIDE BY SIDE
ಇ.ಎಮ್.ಐ ₹5,466
ಉಚಿತ: ₹20000 ಮೌಲ್ಯದ FIRE-BOLTT SMART CALLING WATCH
IFB 8 ಕೆಜಿ ಫ್ರಂಟ್ ಲೋಡಿಂಗ್
ಇ.ಎಮ್.ಐ ₹3,168
ಉಚಿತ: ₹20000 ಮೌಲ್ಯದ FIRE-BOLTT SMART CALLING WATCH
Haier 7 ಕೆಜಿ ಫ್ರಂಟ್ ಲೋಡಿಂಗ್
ಇ.ಎಮ್.ಐ ₹3,025
ಉಚಿತ: ₹20000 ಮೌಲ್ಯದ FIRE-BOLTT SMART CALLING WATCH
LG SOUND BAR OK55
500W for Karaoke Playback, Recording, Echo Effects and Vocal Effects, DJ Effects, DJ Wheel, DJ Loop, Party Thruster, DJ Pad and Multi-Color Lighting, Bass Blast, XBOOM App (Black)
ಇ.ಎಮ್.ಐ ₹1,833 OFFER PRICE ₹21,990*
LG SOUND BAR SC9S
3.1.3 Ch, 400W, DOLBY ATMOS & IMAX ENHANCED.
ಇ.ಎಮ್.ಐ ₹2,666 OFFER PRICE ₹31,990*
BOSCH 13 PLACE SETTINGS DISHWASHER
ಇ.ಎಮ್.ಐ ₹4,205
ಉಚಿತ: ₹20000 ಮೌಲ್ಯದ FIRE-BOLTT SMART CALLING WATCH
Whirlpool 29ಲೀ ಕನ್‌ವೆಕ್ಷನ್ ಮೈಕ್ರೋವೇವ್
ಇ.ಎಮ್.ಐ ₹1,399
Greenchef MIXER GRINDERS:TULIP 3 JAR 600W + PRESSURE COOKERS:3 LTR NAMO
OFFER PRICE: ₹2,024 COMBI MRP: ₹4,798
Greenchef GAS STOVES:BLISS 2 BURNER + NON STICK COOKWARE:2PC DUET PACK
OFFER PRICE: ₹2,024 COMBI MRP: ₹4,798
Greenchef CLASSIC SS 2IN1 COMBO (3LTRS + 2LTRS PAN) KETTLES:S S KETTLE 1.5LTRS - SWIFT
OFFER PRICE: ₹2,024 COMBI MRP: ₹4,798
NON STICK COOKWARE: ASPA 4 Pc SET +
IRON BOX:ECO DRY IRON
OFFER PRICE: ₹2,024 COMBI MRP: ₹4,798
LG SAMSUNG SONY Panasonic Haier IFB Godrej LLOYD Whirlpool BOSCH Electrolux PHILIPS hp acer DELL Lenovo ASUS vivo oppo ONEPLUS mi iPhone JBL
BLUE STAR HAFELE Symphony HAVELLS USHA DAIKIN GENERAL Prestige VOLTAS VOLTAS·beko Butterfly Preethi VIJAYALAKSHMI ULTRA EUREKA FORBES pureit Livpure FABER KENSTAR Pigeon BAJAJ Crompton MAHARAJA V-GUARD ZEBRONICS KAFF ELECTROLUX
GIRIAS THE CONSUMER DURABLE PEOPLE Since 1971
ಶಿರಾ 9035023188 | ಬಾಗೇಪಲ್ಲಿ 9036289562 | ಚನ್ನಪಟ್ಟಣ 9035023186 | ಹಿರಿಯೂರು 9035023185 | ತಿಪಟೂರು 90362 89548 | ಉತ್ತರಹಳ್ಳಿ 90362 89563 | ಹೊಸಕೋಟೆ 90362 89545 | ಕುಣಿಗಲ್ 90362 89546 | ಮಾದನಾಯಕನಹಳ್ಳಿ 90362 89550 | ಗೌರಿಬಿದನೂರು 90354 99244 | ಮಾಗಡಿರಸ್ತೆ 90362 89557 | ಹೆಸರಘಟ್ಟ ಮುಖ್ಯ ರಸ್ತೆ 90362 89551 | ಕೆಆರ್ ಪುರಂ 9019929881 | ಅಂದ್ರಹಳ್ಳಿ 95918 35070 | ಚಿಕ್ಕಜಾಲ 95918 32080 | ಅತ್ತಿಬೆಲೆ 99009 77747 | ಹೆಬ್ಬಗೋಡಿ 90350 50023 | ಭಾರ್ತಿಯಾ ಮಾಲ್ 70900 00981 | ಮಂತ್ರಿ ಮಾಲ್ 95919 25353 | ಕೆಂಗೇರಿ 99009 77712 | ಸಹಕಾರನಗರ 90199 29882 | ದೊಡ್ಡಬಳ್ಳಾಪುರ 77602 12888 | ಎಲೆಕ್ಟ್ರಾನಿಕ್ ಸಿಟಿ 9591103536 | ಕನಕಪುರ ಮುಖ್ಯ ರಸ್ತೆ 90082 20739 | ಜಾಲಹಳ್ಳಿ ಕ್ರಾಸ್ 9008220804 | ಆರ್.ಟಿ.ನಗರ 91080 65665 | ಬನಶಂಕರಿ 9035499199 | ಬನ್ನೇರುಘಟ್ಟ ರೋಡ್ 9035422500 | ಬಸವನಗುಡಿ 90354 99244 | ಗಾಂಧಿನಗರ 9035499311 | ಹೊಸೂರು ರಸ್ತೆ 9035499022 | ಹೆಚ್‌ಆರ್‌ಬಿಆರ್ ಲೇಔಟ್ 90354 99177 | ಇಂದಿರಾನಗರ 9035499255 | ಜಯನಗರ 90354 99077 | ಜೆ.ಪಿ.ನಗರ 9606922698 | ಕತ್ರಿಗುಪ್ಪೆ 9035499288 | ಕೋರಮಂಗಲ 90354 11200 | ಮಲ್ಲೇಶ್ವರಂ 90354 99233 | ಮತ್ತಿಕೆರೆ 90352 22377 | ಮಾರತ್‌ಹಳ್ಳಿ 90354 99011 | ಮೈಸೂರು ರಸ್ತೆ 90354 99188 | ನಾಗರಭಾವಿ 90354 99191 | ನೆಲಮಂಗಲ 9606922798 | ರಾಜಾಜಿನಗರ 9035499144 | ಸದಾಶಿವನಗರ 9035499088 | ವಿಜಯನಗರ 96069 22795 | ಯಲಹಂಕ 9036001315 | ರಾಮನಗರ 9606922697 | ತುಮಕೂರು 90082 18009 | ಕೋಲಾರ 90082 20791 | ಚಿಕ್ಕಬಳ್ಳಾಪುರ 9591561669 | ಹೊಸೂರು 04344 243633.
STORE LOCATOR
*Terms & conditions apply. Finance at the sole discretion of the Finance company. Upto 20% Cashback & 1 EMI off on selected brands and models. EMI offers the above products based on 9,12,18,24 & fixed emi schemes.*Exchange offer valid on MRP and Product as to be in good working condition. Free smart watch valid on 20000 & above Purchase on select models & brands.
150+ ಮೆಗಾ ಸ್ಟೋರ್ಸ್. ದಕ್ಷಿಣ ಭಾರತದ ನಂ.1 ಗೃಹೋಪಯೋಗಿ ವಸ್ತುಗಳ ಮಾರಾಟಗಾರರು.
SHOP ONLINE @ www.giriasindia.com
"like" us on facebook HTTPS://WWW.FACEBOOK.COM/GIRIAS.INDIA
WE SUPPORT ROUND TABLE INDIA LADIES CIRCLE INDIA

5 ಮರಿಗಳಿಗೆ ಜನ್ಮ ನೀಡಿದ ಮೇಕೆ

ಔರಾದ್ (ಬೀದರ್): ತಾಲ್ಲೂಕಿನ ಹೆಡಗಾಪುರ ಗ್ರಾಮ ಪಂಚಾಯಿತಿ ಮಾಜಿ ಸದಸ್ಯ ಬಸವರಾಜ ಲಾಲಪ್ಪ ಅವರ ಮೇಕೆ ಶುಕ್ರವಾರ ಐದು ಮರಿಗಳಿಗೆ ಜನ್ಮ ನೀಡಿದ್ದು, ನಾಲ್ಕು ಗಂಡು ಹಾಗೂ ಒಂದು ಹೆಣ್ಣು ಮರಿ ಆರೋಗ್ಯದಿಂದಿವೆ.

ಇದೇ ಮೇಕೆ ಈ ಮೊದಲು ಮೂರು, ಎರಡನೇ ಹೆರಿಗೆಯಲ್ಲಿ ನಾಲ್ಕು ಮರಿಗಳಿಗೆ ಜನ್ಮ ನೀಡಿತ್ತು ಎಂದು ಬಸವರಾಜ ಲಾಲಪ್ಪ ತಿಳಿಸಿದ್ದಾರೆ. ಮೇಕೆಗಳು ಎರಡು–ಮೂರು ಮರಿಗಳಿಗೆ ಜನ್ಮ ನೀಡುವುದು ಸಹಜ. ಐದು ಮರಿ ಹಾಕುವುದು ಅಪರೂಪ. ಅವುಗಳಿಗೆ ಗುಣಮಟ್ಟದ ಆಹಾರ ಒದಗಿಸಿದರೆ ಈ ರೀತಿ ಹೆಚ್ಚು ಮರಿ ಕೊಡುವ ಸಾಮರ್ಥ್ಯ ಹೊಂದಿರುತ್ತವೆ' ಎಂದು ಪಶು ವೈದ್ಯ ರವಿ ಬಾವುಗೆ ತಿಳಿಸಿದ್ದಾರೆ.

ಸ್ವಪಕ್ಷೀಯರಿಗೆ ಮಾಗಡಿ ಶಾಸಕ ಎಚ್‌.ಸಿ. ಬಾಲಕೃಷ್ಣ ಸವಾಲು

‘3 ಡಿಸಿಎಂ: 2 ಕ್ಷೇತ್ರ ಗೆಲ್ಲಿಸಿ ತರಲಿ’

ಪ್ರಜಾವಾಣಿ ವಾರ್ತೆ

ಮಾಗಡಿ (ರಾಮನಗರ): ‘ಮೂರು ಉಪ ಮುಖ್ಯಮಂತ್ರಿ ಹುದ್ದೆ ಸೃಷ್ಟಿಗೆ ಬೇಡಿಕೆ ಇಟ್ಟವರಿಗೆ ಲೋಕಸಭಾ ಚುನಾವಣೆಯಲ್ಲಿ ಎರಡು ಕ್ಷೇತ್ರ ಗೆಲ್ಲಿಸಿಕೊಂಡು ಬರುವಂತೆ ಪಕ್ಷದ ಹೈಕಮಾಂಡ್ ಟಾಸ್ಕ್ ನೀಡಬೇಕು. ಒಂದು ವೇಳೆ ಅವರು ಗೆಲ್ಲಿಸಿಕೊಂಡು ಬಂದರೆ ಆಗ ಅವರನ್ನು ಡಿಸಿಎಂ ಮಾಡಿದರಾಯಿತು’ ಎಂದು ಶಾಸಕ ಎಚ್‌.ಸಿ. ಬಾಲಕೃಷ್ಣ ಸ್ವಪಕ್ಷೀಯರಿಗೆ ತಿರುಗೇಟು ನೀಡಿದ್ದಾರೆ.


ಎಚ್‌.ಸಿ. ಬಾಲಕೃಷ್ಣ

ಮೂರು ಡಿಸಿಎಂ ಹುದ್ದೆ ಚರ್ಚೆ ಕುರಿತು ಪಟ್ಟಣದಲ್ಲಿ ಶುಕ್ರವಾರ ಸಂಜೆ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ‘ಸುಮ್ಮನೆ ಜಾತಿ ಹೆಸರಲ್ಲಿ ಡಿಸಿಎಂ ಮಾಡಿ ಅನ್ನೋದಲ್ಲ. ಕೆಲವರು ಅನಗತ್ಯವಾಗಿ ಈ ಬಗ್ಗೆ ಹೇಳಿಕೆ ನೀಡುತ್ತಿದ್ದಾರೆ. ಬೇಕಿದ್ದರೆ ಹೈಕಮಾಂಡ್ ಭೇಟಿ ಮಾಡಿ ಹೇಳಿಕೊಳ್ಳಲಿ. ಅದನ್ನು ಬಿಟ್ಟು, ಮಾಧ್ಯಮಗಳ ಮುಂದೆ ಮಾತನಾಡಿ ಗೊಂದಲ ಸೃಷ್ಟಿಸುವುದನ್ನು ಬಿಡಬೇಕು ಎಂದು ಹಿರಿಯ ಸಚಿವರಲ್ಲಿ ಮನವಿ ಮಾಡುವೆ’ ಎಂದರು.

‘ಡಿಸಿಎಂ ಹುದ್ದೆ ಬೇಡಿಕೆಯನ್ನು ಮುನ್ನೆಲೆಗೆ ತಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಕಡಿವಾಣ ಹಾಕಲು ಸಾಧ್ಯವಿಲ್ಲ. ಅಧಿಕಾರವಿದ್ದರೂ, ಇಲ್ಲದಿದ್ದರೂ ಶಿವಕುಮಾರ್ ಅವರಿಗೆ ಶಕ್ತಿ ಇರುತ್ತದೆ. ಅವರ ಶಕ್ತಿ ಏನೆಂದು ಹೈಕಮಾಂಡ್‌ಗೂ ಗೊತ್ತಿದೆ. ಈ ವಿಷಯಕ್ಕೆ ಸಂಬಂಧಿಸಿದಂತೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಮಧ್ಯೆ ಭಿನ್ನಾಭಿಪ್ರಾಯವಿಲ್ಲ. ಅವರ ಸುತ್ತ ಇರುವವರು ತಮ್ಮ ಬೇಳೆ ಬೇಯಿಸಿಕೊಳ್ಳಲು ಈ ರೀತಿ ಹೇಳಿಕೊಂಡು ತಿರುಗುತ್ತಿದ್ದಾರೆ’ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಮಂತ್ರಾಕ್ಷತೆಗೆ ಮತ ಕೊಡಬೇಕಾ?: ‘ರಾಮಮಂದಿರ ನಿರ್ಮಾಣ ಇನ್ನೂ ಪೂರ್ಣಗೊಂಡಿಲ್ಲ. ಆದರೂ, ರಾಜಕೀಯ ಉದ್ದೇಶದಿಂದ ಉದ್ಘಾಟನೆ ಮಾಡುತ್ತಿದ್ದಾರೆ. ಇಂತಹ ಕಾರ್ಯಕ್ರಮಕ್ಕೆ ನಾವು ಹೋಗಬೇಕಾ? ರಾಮಮಂದಿರದ ಹೆಸರಲ್ಲಿ ಅವರು ಮನೆಮನೆಗೆ ಮಂತ್ರಾಕ್ಷತೆ ಕೊಡುತ್ತಿದ್ದಾರೆ. ನಾವು ಗೃಹಲಕ್ಷ್ಮಿ ಯೋಜನೆಯಡಿ ಮನೆ ಯಜಮಾನಿಗೆ ₹ 2 ಸಾವಿರ ದುಡ್ಡು ಕೊಡುತ್ತಿದ್ದೇವೆ. ಮಂತ್ರಾಕ್ಷತೆಗೆ ಮತ ಹಾಕಬೇಕಾ ಅಥವಾ ಸ್ವಾವಲಂಬನೆಗಾಗಿ ₹ 2 ಸಾವಿರ ಕೊಟ್ಟವರಿಗೆ ಮತ ಹಾಕಬೇಕಾ ಎಂದು ಜನ ತೀರ್ಮಾನ ಮಾಡಲಿ’ ಎಂದು ಹೇಳಿದರು.

‘ಆಚೆ ತಳ್ಳಲು ಎಚ್‌ಡಿಕೆ, ಸಿಪಿವೈ ತಂತ್ರ’

‘ಲೋಕಸಭಾ ಚುನಾವಣೆಯಲ್ಲಿ ಬೆಂಗಳೂರು ಗ್ರಾಮಾಂತರ ಕ್ಷೇತ್ರದಿಂದ ಯಾರು ಸ್ಪರ್ಧಿಸಬೇಕೆಂಬ ವಿಷಯಕ್ಕೆ ಸಂಬಂಧಿಸಿದಂತೆ, ಜೆಡಿಎಸ್‌ನ ಎಚ್‌.ಡಿ. ಕುಮಾರಸ್ವಾಮಿ ಮತ್ತು ವಿಧಾನ ಪರಿಷತ್ ಸದಸ್ಯ ಸಿ.ಪಿ. ಯೋಗೇಶ್ವರ್ (ಸಿಪಿವೈ) ಒಬ್ಬರನ್ನೊಬ್ಬರು ಕ್ಷೇತ್ರದಿಂದ ಆಚೆ ತಳ್ಳುವುದಕ್ಕೆ ನೋಡುತ್ತಿದ್ದಾರೆ. ಯೋಗೇಶ್ವರ್ ಅವರನ್ನು ಇಲ್ಲಿಂದ ತಳ್ಳಿದರೆ ಪುತ್ರ ನಿಖಿಲ್‌ನನ್ನು ಪ್ರತಿಷ್ಠಾಪಿಸಬಹುದು ಎಂಬ ಲೆಕ್ಕಾಚಾರದಲ್ಲಿ ಕುಮಾರಸ್ವಾಮಿ ಹಾಗೂ ಎಚ್‌ಡಿಕೆಯನ್ನು ಆಚೆ ತಳ್ಳಿದರೆ, ಚನ್ನಪಟ್ಟಣದಲ್ಲಿ ತಾನು ಪ್ರತಿಷ್ಠಾಪನೆಯಾಗಬಹುದು ಎಂಬ ಲೆಕ್ಕಾಚಾರ ಸಿಪಿವೈ ಅವರದ್ದಾಗಿದೆ. ಆದರೆ, ಯಾರೂ ಇಲ್ಲಿ ಪ್ರತಿಷ್ಠಾಪನೆ ಆಗುವುದಿಲ್ಲ. ಹಾಲಿ ಸಂಸದ ಡಿ.ಕೆ. ಸುರೇಶ್ ಮತ್ತೆ ಗೆಲ್ಲುವುದು ಖಚಿತ’ ಎಂದು ಬಾಲಕೃಷ್ಣ ವಿಶ್ವಾಸ ವ್ಯಕ್ತಪಡಿಸಿದರು.

‘ಜೆಡಿಎಸ್ ಅಧ್ಯಕ್ಷ ಎಚ್‌.ಡಿ. ಕುಮಾರಸ್ವಾಮಿ ಅವರು ಎಲ್ಲಿಂದ ಸ್ಪರ್ಧೆ ಮಾಡುತ್ತಾರೆ ಎಂಬುದನ್ನು ಮೊದಲು ಘೋಷಣೆ ಮಾಡಲಿ. ಮಂಡ್ಯದಲ್ಲಿ ಸ್ಪರ್ಧೆ ಮಾಡುವ ಕುರಿತು ಈಗಾಗಲೇ ಸರ್ವೇ ಮಾಡಿಸುತ್ತಿದ್ದಾರೆ. ಮತ್ತೊಂದೆಡೆ ಬೆಂಗಳೂರು ಗ್ರಾಮಾಂತರದಿಂದ ಸ್ಪರ್ಧಿಸಲಿದ್ದಾರೆ ಎಂದು ಮಾಧ್ಯಮಗಳಲ್ಲಿ ಬರುತ್ತಿದೆ. ಎಲ್ಲಿ ಸ್ಪರ್ಧಿಸುತ್ತಾರೆ ಎಂಬುದನ್ನು ಖಚಿತಪಡಿಸಲಿ’ ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

‘ಗ್ರಾಮಾಂತರ ಕ್ಷೇತ್ರದಲ್ಲಿ ಡಿ.ಕೆ.ಸುರೇಶ್ ಅವರಂತಹ ಸಂಸದನನ್ನು ಕಳೆದುಕೊಂಡರೆ ಜಿಲ್ಲೆಯ ಜನರಿಗೆ ದೊಡ್ಡ ನಷ್ಟ. ರಾಮನಗರ ಅಭಿವೃದ್ಧಿಯಲ್ಲಿ ಅವರ ಪಾತ್ರ ದೊಡ್ಡದು. ಕೆಲಸಕ್ಕೆ ಬಾರದವರನ್ನು ಆಯ್ಕೆ ಮಾಡುವ ಬದಲು ಡಿ.ಕೆ ಸುರೇಶ್ ಅವರನ್ನೇ ಆಯ್ಕೆ ಮಾಡಿದರೆ ಜಿಲ್ಲೆ ಮತ್ತಷ್ಟು ಅಭಿವೃದ್ಧಿಯತ್ತ ಸಾಗಲಿದೆ’ ಎಂದರು.

ಖರ್ಗೆ ಭೇಟಿ ಮಾಡಿದ ಸಚಿವರು

ನವದೆಹಲಿ: ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಸಮಾಜ ಕಲ್ಯಾಣ ಸಚಿವ ಡಾ.ಎಚ್‌.ಸಿ.ಮಹದೇವಪ್ಪ, ಅರಣ್ಯ ಸಚಿವ ಈಶ್ವರ ಖಂಡ್ರೆ ಹಾಗೂ ಸಹಕಾರ ಸಚಿವ ಕೆ.ಎನ್‌.ರಾಜಣ್ಣ ಭೇಟಿ ಮಾಡಿ ಚರ್ಚಿಸಿದರು.

ಶನಿವಾರ ಇಲ್ಲಿ ಸುದ್ದಿಗಾರರ ಜತೆಗೆ ಮಾತನಾಡಿದ ರಾಜಣ್ಣ, ‘ರಾಜ್ಯದಲ್ಲಿ ಹೆಚ್ಚಿನ ಸ್ಥಾನಗಳನ್ನು ಗೆಲ್ಲಿಸಿಕೊಂಡು ಬರಬೇಕು ಎಂದು ಖರ್ಗೆ ಸೂಚಿಸಿದ್ದಾರೆ. ಖರ್ಗೆ ಮಾತುಗಳಿಂದ ಮತ್ತಷ್ಟು ಉತ್ಸಾಹ ಹೆಚ್ಚಿದೆ’ ಎಂದರು.

ರಾಜ್ಯದಲ್ಲಿ ಹೆಚ್ಚುವರಿಯಾಗಿ ಮೂರು ಉಪಮುಖ್ಯಮಂತ್ರಿ ಹುದ್ದೆಗಳನ್ನು ಸೃಷ್ಟಿಸಬೇಕು ಎಂದು ರಾಜಣ್ಣ ಹಲವು ಸಲ ಒತ್ತಾಯಿಸಿದ್ದರು. ‘ಭೇಟಿ ಸಂದರ್ಭದಲ್ಲಿ ಈ ಬಗ್ಗೆ ಯಾವುದೇ ಚರ್ಚೆ ಆಗಿಲ್ಲ’ ಎಂದು ರಾಜಣ್ಣ ಸ್ಪಷ್ಟಪಡಿಸಿದರು.

‘ಲೋಕಸಭಾ ಚುನಾವಣೆಗೆ 3–4 ತಿಂಗಳಷ್ಟೇ ಉಳಿದಿದೆ. ಈ ಸಂದರ್ಭದಲ್ಲಿ ಪಕ್ಷದ ವರ್ಚಸ್ಸಿಗೆ ಹಾನಿಯಾಗುವ ಹೇಳಿಕೆಗಳನ್ನು ನೀಡಬೇಡಿ’ ಎಂದು ಖರ್ಗೆ ತಾಕೀತು ಮಾಡಿದರು ಎಂದು ಮೂಲಗಳು ಹೇಳಿವೆ.

ಸುದ್ದಿ 2 ನಿಮಿಷ

ವಿಜಯೇಂದ್ರ ಮಂಪರು ಪರೀಕ್ಷೆಗೆ ಬಿ.ಕೆ.ಹರಿಪ್ರಸಾದ್ ಆಗ್ರಹ

ನವದೆಹಲಿ: ಬಿಜೆಪಿ ಸರ್ಕಾರದ ಅವಧಿಯಲ್ಲಿ ಕೋವಿಡ್ ಹೆಸರಿನಲ್ಲಿ ₹40 ಸಾವಿರ ಕೋಟಿ ಹಗರಣ ನಡೆದಿದೆ ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿಕೆ ನೀಡಿದ್ದಾರೆ. ಇದರ ಬಗ್ಗೆ ತನಿಖೆ ಆಗಬೇಕು. ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರ ಮಂಪರು ಪರೀಕ್ಷೆ ನಡೆಸಬೇಕು’ ಎಂದು ವಿಧಾನ ಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್ ಆಗ್ರಹಿಸಿದರು.

ಶನಿವಾರ ಇಲ್ಲಿ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, ‘ರಾಮ ಮಂದಿರ ಉದ್ಘಾಟನೆ ವೇಳೆ ಗೋಧ್ರಾ ಮಾದರಿ ಘಟನೆ ನಡೆಯಬಹುದು ಎಂದು ನಾನು ಈ ಹಿಂದೆ ಹೇಳಿಕೆ ನೀಡಿದ್ದೆ. ನನ್ನ ಮಂಪರು ಪರೀಕ್ಷೆ ನಡೆಸಬೇಕು ಎಂದು ವಿಜಯೇಂದ್ರ ಹೇಳಿದ್ದಾರೆ. ಮಂಪರು ಪರೀಕ್ಷೆಗೆ ಒಳಪಡಲು ನಾನು ಸಿದ್ಧನಿದ್ದೇನೆ. ಅದೇ ರೀತಿ, ವಿಜಯೇಂದ್ರ ಅವರನ್ನೂ ಪರೀಕ್ಷೆಗೆ ಒಳಪಡಿಸಲಿ. ಲೈವ್ ಮೂಲಕವೇ ಇಬ್ಬರ ಪರೀಕ್ಷೆ ನಡೆಸಲಿ’ ಎಂದರು.

‘ನನ್ನನ್ನು ಬಂಧಿಸಬೇಕು ಎಂದು ವಿರೋಧ ಪಕ್ಷದ ನಾಯಕ ಆರ್‌. ಅಶೋಕ ಒತ್ತಾಯಿಸಿದ್ದಾರೆ. ಅದಕ್ಕೆ ಮೊದಲು ಜಾಲಹಳ್ಳಿ ಠಾಣೆಯಲ್ಲಿ ಇರುವ ಪ್ರಕರಣಗಳ ಕುರಿತು ಅಶೋಕ ಯೋಚಿಸಲಿ. ಬಿಜೆಪಿಯವರ ಇತಿಹಾಸ ಏನೆಂಬುದು ನನಗೆ ಗೊತ್ತಿದೆ’ ಎಂದರು.



‘ಮಸೀದಿ ಕೆಡವಿ ಸೇಡು ತೀರಿಸಿಕೊಳ್ಳಬೇಕು’

ಕುಮಟಾ (ಉತ್ತರ ಕನ್ನಡ ಜಿಲ್ಲೆ): ‘ಬಾಬ್ರಿ ಮಸೀದಿಯಂತೆ ರಾಜ್ಯದ ಹಲವೆಡೆ ಮಸೀದಿಗಳನ್ನು ಕೆಡವಿ ಹಾಕಿ, ಹಿಂದೂಗಳಿಗೆ ಆದ ಅಪಮಾನಕ್ಕೆ ಸೇಡು ತೀರಿಸಿಕೊಳ್ಳಬೇಕು. ಅಲ್ಲಿಯವರೆಗೆ ಸುಮ್ಮನೆ ಕೂರಬಾರದು’ ಎಂದು ಸಂಸದ ಅನಂತಕುಮಾರ ಹೆಗಡೆ ಹೇಳಿದರು.

ಪಟ್ಟಣದಲ್ಲಿ ಶನಿವಾರ ನಡೆದ ಬಿಜೆಪಿ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, ‘ಭಟ್ಕಳದ ಚಿನ್ನದ ಪಳ್ಳಿಯ ಮಸೀದಿ, ಶಿರಸಿಯ ಸಿ.ಪಿ. ಬಜಾರದಲ್ಲಿರುವ ಮಸೀದಿ, ಶ್ರೀರಂಗಪಟ್ಟಣದಲ್ಲಿನ ಮಸೀದಿಗಳು ಒಂದು ಕಾಲದಲ್ಲಿ ಹಿಂದೂ ದೇವಾಲಯಗಳು ಆಗಿದ್ದವು’ ಎಂದರು.

‘ಕಾಂಗ್ರೆಸ್ ನಮ್ಮ ವಿರೋಧಿಯಲ್ಲ. ರಾಜಕೀಯವಾಗಿ ಅದೊಂದು ವಿರೋಧ ಪಕ್ಷವಷ್ಟೆ. ಸನಾತನ ವಿರೋಧಿಗಳು, ಹಿಂದುತ್ವದ ವಿರೋಧಿಗಳು ನಮ್ಮ ನಿಜವಾದ ವೈರಿಗಳು’ ಎಂದರು.

ಜಾತಿ ಸೃಷ್ಟಿಸಿದವರಿಂದಲೇ ಜಾತಿ ಸಮಾವೇಶಕ್ಕೆ ಅಡ್ಡಿ

‘ಹಾಲುಮತ ಸಂಸ್ಕೃತಿ ವೈಭವ’ ಸಮಾವೇಶದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಟೀಕೆ

ಪ್ರಜಾವಾಣಿ ವಾರ್ತೆ

ರಾಯಚೂರು: ‘ಜಾತಿಗಳನ್ನು ಸೃಷ್ಟಿಸಿದವರೇ ಜಾತಿ ಸಮಾವೇಶಗಳಿಗೆ ವಿರೋಧ ವ್ಯಕ್ತಪಡಿಸುತ್ತಿದ್ದಾರೆ. ಹಿಂದೆ ವರ್ಗೀಕರಣ ಮಾಡಿ ಲಾಭ ಪಡೆದುಕೊಂಡವರು ಇಂದಿಗೂ ಸಮುದಾಯಗಳ ವರ್ಗೀಕರಣ ಮಾಡುತ್ತಿದ್ದಾರೆ. ಅಂಥವರ ಬಗ್ಗೆ ಎಚ್ಚರಿಕೆ ವಹಿಸಬೇಕು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ದೇವದುರ್ಗ ತಾಲ್ಲೂಕಿನ ತಿಂಥಣಿ ಬ್ರಿಜ್ ಸಮೀಪದ ಕಾಗಿನೆಲೆ ಮಹಾಸಂಸ್ಥಾನ ಕನಕ ಗುರುಪೀಠದಲ್ಲಿ ಶನಿವಾರ ನಡೆದ ಹಾಲುಮತ ಸಂಸ್ಕೃತಿ ವೈಭವಕ್ಕೆ ಚಾಲನೆ ನೀಡಿದ ಅವರು ಮಾತನಾಡಿದರು.

‘ಸಮಾಜದಲ್ಲಿ ಅವಕಾಶಗಳಿಂದ ವಂಚಿತರಾಗಿರುವವರೇ ಹಿಂದುಳಿದವರು ಹಾಗೂ ಕೆಳ ಜಾತಿಯವರು. ಇದನ್ನು ದೇವರು ಮಾಡಲಿಲ್ಲ. ಜಾತಿ ವ್ಯವಸ್ಥೆ ಹಾಗೂ ಚಾತುರ್ವರ್ಣ ವ್ಯವಸ್ಥೆಯನ್ನು ಮೇಲ್ವರ್ಗದವರೇ ಮಾಡಿದರು. ಅನೇಕ ವರ್ಷಗಳವರೆಗೆ ಮಹಿಳೆಯರಿಗೂ ಅವಕಾಶಗಳನ್ನು ದೊರಕಿಸಿ ಕೊಡಲಿಲ್ಲ’ ಎಂದು ವಿಶ್ಲೇಷಿಸಿದರು.

‘ಡಾ. ಬಿ.ಆರ್‌.ಅಂಬೇಡ್ಕರ್ ಅವರು ಬರೆದ ಸಂವಿಧಾನದಿಂದಾಗಿ ಎಲ್ಲರೂ ಶಿಕ್ಷಣ ಪಡೆಯಲು ಸಾಧ್ಯವಾಯಿತು. ಅಕ್ಷರ ಸಂಸ್ಕೃತಿಯಿಂದ ವಂಚಿತರಾದವರು ಶೂದ್ರರಾದರು. ಸಮಾಜವನ್ನು ವಿಂಗಡಣೆ ಮಾಡಿ ಸ್ವಾರ್ಥಕ್ಕಾಗಿ ಬಳಸಿಕೊಳ್ಳುವ ಪ್ರಯತ್ನವನ್ನು ಒಂದು ವರ್ಗ ಮಾಡಿತು’ ಎಂದರು.

‘ಇಂತಹ ಸಮಾವೇಶಗಳಲ್ಲಿ ಪ್ರಮುಖ ವಿಷಯಗಳ ಕುರಿತು ಚರ್ಚೆ ನಡೆಯಬೇಕು. ಮುಂದುವರಿದ ಸಮುದಾಯದವರು ಸಮಾವೇಶ ಮಾಡಿದರೆ ಮಾತ್ರ ಜಾತಿ ಸಮಾವೇಶವಾಗುತ್ತದೆ. ಜಾತಿ ಮಾಡಿದವರೇ ಜಾತಿ ಸಮಾವೇಶ ಮಾಡಬಾರದು ಎಂದು ಸಲಹೆಗಳನ್ನು ಕೊಡುತ್ತಿದ್ದಾರೆ. ಹಿಂದುಳಿದವರು, ಶೋಷಿತರು ಸಮಾವೇಶ ಮಾಡಿದರೆ ಜಾತಿ ಸಮಾವೇಶ ಅಲ್ಲ ಎನ್ನುವುದನ್ನು ರಾಮಮನೋಹರ ಲೋಹಿಯಾ ಅವರೂ ಪ್ರತಿಪಾದಿಸಿದ್ದಾರೆ’ ಎಂದರು.

‘ಶಿಕ್ಷಣ, ಸಂಘಟನೆ ಹಾಗೂ ಹೋರಾಟದ ಮೂಲಕ ಸಮಾಜ ಕಟ್ಟಬೇಕಿದೆ. ಶಿಕ್ಷಣ ಪಡೆಯದ ಹೊರತು ಸಂಘಟನೆ ಹಾಗೂ ಹೋರಾಟ ಸಾಧ್ಯವಿಲ್ಲ. ಯಾರೂ ಶಿಕ್ಷಣದಿಂದ ವಂಚಿತರಾಗಬಾರದು. ಶಿಕ್ಷಣ ಇದ್ದರೆ ಮಾತ್ರ ಸ್ವಾಭಿಮಾನಿಯಾಗಲು ಸಾಧ್ಯ. ಅಂಬೇಡ್ಕರ್ ಓದದೇ ಇದ್ದರೆ ಸಮಾಜ ಮತ್ತೆ ಮುಂದುವರಿದ ಸಮುದಾಯದ ಕಪಿಮುಷ್ಟಿಯಲ್ಲಿ ಸಿಕ್ಕಿ ಹಾಕಿಕೊಳ್ಳುತ್ತಿತ್ತು. ಅದಕ್ಕೆ ಪ್ರತಿಯೊಬ್ಬರೂ ಶಿಕ್ಷಣ ಪಡೆಯಬೇಕು’ ಎಂದು ತಿಳಿಸಿದರು.


ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ ತಿಂಥಣಿ ಬ್ರಿಡ್ಜ್‌ನ ಕಾಗಿನೆಲೆ ಮಹಾಸಂಸ್ಥಾನ ಕನಕ ಗುರುಪೀಠದಲ್ಲಿ ಆಯೋಜಿಸಿದ್ದ ಹಾಲುಮತ ಸಂಸ್ಕೃತಿ ವೈಭವಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ ನೀಡಿದರು

ಕೇಂದ್ರ ರಸಗೊಬ್ಬರ ಖಾತೆಗಳ ರಾಜ್ಯ ಸಚಿವರಾದ ಭಗವಂತ ಖೂಬಾ, ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್, ವಿಧಾನ ಪರಿಷತ್ ಸದಸ್ಯ ಎಚ್‌. ವಿಶ್ವನಾಥ್ ಮಾತನಾಡಿದರು.

ಕಂಚ ಐಲಯ್ಯ ಶೆಫರ್ಡ್ ಅವರಿಗೆ ಹಾಲುಮತ ಭಾಸ್ಕರ ಪ್ರಶಸ್ತಿ, ವಿಜಯಲಕ್ಷ್ಮಿ ಶಿಬರೂರು ಅವರಿಗೆ ಕನಕರತ್ನ ಪಶಸ್ತಿ ಪ್ರದಾನ ಮಾಡಲಾಯಿತು. ಬಮ್ಮನ್ ದಂಪತಿಗೆ ಸಿದ್ಧಶ್ರೀ ಪ್ರಶಸ್ತಿ ಪ್ರದಾನ ಮಾಡಲಾಯಿತು. ಇದೇ ಸಂದರ್ಭದಲ್ಲಿ, ವಿದ್ಯಾರ್ಥಿ ನಿಲಯದ ಕಟ್ಟಡಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಶಂಕುಸ್ಥಾಪನೆ ನೆರವೇರಿಸಿದರು.

ಹಾಲುಮತ ಸಮಾಜದ ಸಿದ್ದರಮಾನಂದ ಸ್ವಾಮೀಜಿ, ಕೆ.ಆರ್. ನಗರ ಕನಕ ಗುರುಪೀಠದ ಶಿವಾನಂದ ಸ್ವಾಮೀಜಿ, ಸಿಂಧಿಗೆಯ ಅಭಿನವ ಪುಂಡಲಿಂಗ ಮಹಾರಾಜ ಅವರು ಸಾನ್ನಿಧ್ಯ ವಹಿಸಿದ್ದರು.

ಬಸವಣ್ಣ ಸಾಂಸ್ಕೃತಿಕ ನಾಯಕ: ಸಂಪುಟ ಸಭೆಯಲ್ಲಿ ನಿರ್ಣಯ–ಮುಖ್ಯಮಂತ್ರಿ

ಬಾಗಲಕೋಟೆ: ‘ಕ್ರಾಂತಿಕಾರಿ ಬಸವಣ್ಣ ರಾಜ್ಯದ ಸಾಂಸ್ಕೃತಿಕ ನಾಯಕ ಎಂಬ ಘೋಷಣೆಯನ್ನು ಸಚಿವ ಸಂಪುಟದಲ್ಲಿ ಚರ್ಚಿಸಿ, ನಿರ್ಧರಿಸಲಾಗುವುದು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಕೂಡಲಸಂಗಮದಲ್ಲಿ ಶನಿವಾರ ಬಸವ ಧರ್ಮ ಪೀಠದಿಂದ ನಡೆದ 37ನೇ ಶರಣ ಮೇಳ ಉದ್ಘಾಟಿಸಿ ಮಾತನಾಡಿದ ಅವರು, ‘ಬಸವಣ್ಣವರ ಮೌಲ್ಯಗಳು ಎಂದಿಗೂ ಪ್ರಸ್ತುತವಾಗಿವೆ. ನಮ್ಮದು ಬಸವ ವಿಚಾರಧಾರೆಯ ಸರ್ಕಾರ’ ಎಂದರು.


‘ಕೂಡಲಸಂಗಮದಲ್ಲಿ ಅಕ್ಷರಧಾಮ ಮಾದರಿ ಅಂತರರಾಷ್ಟ್ರೀಯ ಬಸವ ಕೇಂದ್ರ ಸೇರಿ ವಿವಿಧ ಅಭಿವೃದ್ಧಿ, ಬೀದರ್ ಜಿಲ್ಲೆಯ ಅನುಭವ ಮಂಟಪ ಪುನರುಜ್ಜೀವನ ಕಾರ್ಯ ಪೂರ್ಣಗೊಳಿಸಲು ಪ್ರಯತ್ನಿಸಲಾಗುವುದು’ ಎಂದು ಹೇಳಿದರು

ಇದೇ ಸಂದರ್ಭದಲ್ಲಿ ಸಿದ್ದರಾಮಯ್ಯ ಅವರಿಗೆ ‘ದಾಸೋಹ ರತ್ನ’ ಪ್ರಶಸ್ತಿ ಪ್ರದಾನ ಮಾಡಲಾಯಿತು.

ನಮ್ಮ ವಿರೋಧಿ ಸಿದ್ದರಾಮಯ್ಯ ಹೊರತು ಕಾಂಗ್ರೆಸ್ ಅಲ್ಲ: ಹೆಗಡೆ

ಪ್ರಜಾವಾಣಿ ವಾರ್ತೆ

ಕುಮಟಾ: ‘ಹಿಂದೂ ಸಮಾಜವನ್ನು ಜಾತಿ, ಧರ್ಮ, ಭಾಷೆಯ ಹೆಸರಿನಲ್ಲಿ ಮುರುಕುರಾಮಯ್ಯ ಅಂಥವರು ಒಡೆಯುತ್ತಿದ್ದಾರೆ. ಹಿಂದೂತ್ವ, ಸನಾತನ ಪದ್ಧತಿಗಳ ವಿರುದ್ಧ ಕೆಟ್ಟ ವಿಚಾರಗಳನ್ನು ತಲೆಯಲ್ಲಿ ತುಂಬುವವರು ನಮ್ಮ ವಿರೋಧಿಗಳು’ ಎಂದು ಸಂಸದ ಅನಂತಕುಮಾರ ಹೆಗಡೆ ವ್ಯಂಗ್ಯವಾಡಿದರು.


ಅನಂತಕುಮಾರ ಹೆಗಡೆ

ಪಟ್ಟಣದಲ್ಲಿ ಶನಿವಾರ ಬಿಜೆಪಿ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, ‘ನಮ್ಮ ವಿರೋಧಿ ಸಿದ್ದರಾಮಯ್ಯ ಹೊರತು ಕಾಂಗ್ರೆಸ್ ಅಲ್ಲ. ಕಾಂಗ್ರೆಸ್‌ಗೆ ನಮ್ಮನ್ನು ವಿರೋಧಿಸುವಷ್ಟು ಸಾಮರ್ಥ್ಯವಿಲ್ಲ’ ಎಂದರು.

‘ಅಲ್ಪಸಂಖ್ಯಾತರ ಮತಗಳಿಗಾಗಿ ಗತಿಗೆಟ್ಟ ಮಾನಸಿಕತೆಗೆ ನಮ್ಮ ವಿರೋಧವಿದೆ. ರಾಮಮಂದಿರ ಉದ್ಘಾಟನೆಗೆ ಆಹ್ವಾನ ಬಂದಿಲ್ಲ ಎಂದಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ನಂತರ ಆಹ್ವಾನ ಬಂದರೂ ಹೋಗಲ್ಲ ಎಂದರು. ಈಗ ಜನವರಿ 22ಕ್ಕೆ ಹೋಗಲ್ಲ. ನಂತರ ಅಯೋಧ್ಯೆಗೆ ಹೋಗುವೆ ಎಂದಿದ್ದಾರೆ. ಎಂಟೇ ದಿನಗಳಲ್ಲಿ ಅವರ ಭಾಷೆ ಬದಲಾಗಲು ಹಿಂದೂ ಸಮಾಜದ ಶಕ್ತಿಯೇ ಕಾರಣ’ ಎಂದರು.

‘ಅನಂತಕುಮಾರ್ ಹೆಗಡೆಯಿಂದ ಸಂಸ್ಕೃತಿ ಬಯಸಬಹುದೇ?’

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: ‘ಕೇಂದ್ರದಲ್ಲಿ ಸಚಿವರಾಗಿದ್ದ ಸಂಸದ ಅನಂತಕುಮಾರ್ ಹೆಗಡೆ ಅವರಿಂದ ಸಂಸ್ಕೃತಿ ಬಯಸೋಕೆ ಆಗುತ್ತಾ? ಸುಸಂಸ್ಕೃತ ಎನ್ನಲು ಆಗುತ್ತಾ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶ್ನಿಸಿದರು.

ಸಂಸದ ಅನಂತಕುಮಾರ್ ಹೆಗಡೆ ಟೀಕಿಸಿರುವ ಬಗ್ಗೆ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, ‘ರಾಜಕೀಯವಾಗಿ ಅಶ್ಲೀಲ ಪದಗಳನ್ನು ಬಳಸಿದರೆ, ಅವರ ಘನತೆಗೆ ಕುಂದು ಬರುತ್ತದೆಯೇ ಹೊರತು ನನಗೇನೂ ಆಗಲ್ಲ’ ಎಂದರು.

‘ರಾಜ್ಯದ ಮುಖ್ಯಮಂತ್ರಿಗೆ ಗೌರವ ಕೊಡುವವರೂ ಇದ್ದಾರೆ. ಕೊಡದಿರುವವರೂ ಇದ್ದಾರೆ. ಇಂಥವರಿಗೆ ಗೌರವ ಕೊಡಿ ಎಂದು ಹೇಳೋಕೆ ಆಗುತ್ತಾ? ಯಾವ ಭಾಷೆ ಬಳಸಬೇಕು ಎಂಬುದು ಗೊತ್ತಿಲ್ಲ ಎಂದರೆ, ಅವರು ಸುಸಂಸ್ಕೃತರಲ್ಲ, ಮನುಷ್ಯರಲ್ಲ. ಎಂತಹ ಅಮಾನವೀಯರು ಎಂಬುದು ಗೊತ್ತಾಗುತ್ತದೆ’ ಎಂದರು.

ಹೆಗಡೆ ವಿರುದ್ಧ ಕ್ರಮ; ಪೊಲೀಸರ ನಿರ್ಧಾರ–ಗೃಹ ಸಚಿವ ಪರಮೇಶ್ವರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಂಸದ ಅನಂತ ಕುಮಾರ್ ಹೆಗಡೆ ಪ್ರಚೋದನಕಾರಿಯಾಗಿ ಮಾತನಾಡುತ್ತಿರುವುದನ್ನು ಪೊಲೀಸ್ ಇಲಾಖೆ ಗಮನಿಸುತ್ತಿದೆ. ಅವರ ವಿರುದ್ಧದ ಕ್ರಮದ ಕುರಿತು ಪೊಲೀಸರೇ ನಿರ್ಧರಿಸುತ್ತಾರೆ’ ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

ಭಟ್ಕಳದ ಚಿನ್ನದಪಳ್ಳಿ ಮಸೀದಿ ಧ್ವಂಸ ಮಾಡುವುದಾಗಿ ಹೇಳಿರುವುದು ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ನಿಂದಿಸಿ ಹೆಗಡೆ ನೀಡಿರುವ ಹೇಳಿಕೆ ಕುರಿತು ಗೃಹ ಸಚಿವರು ಮಾಧ್ಯಮ ಪ್ರತಿನಿಧಿಗಳಿಗೆ ಶನಿವಾರ ಪ್ರತಿಕ್ರಿಯೆ ನೀಡಿದರು.

‘ಸಂಸದರು ಪ್ರಚೋದನಕಾರಿಯಾಗಿ, ಅಸಂಬದ್ಧವಾಗಿ ಮಾತನಾಡಿರುವುದು ಮತ್ತು ವೈಯಕ್ತಿಕವಾಗಿ ನಿಂದಿಸಿ ಹೇಳಿಕೆ ನೀಡಿರುವುದನ್ನು ಗಮನಿಸಿದ್ದೇನೆ. ಪ್ರಕರಣ ದಾಖಲಿಸುವಂತೆ ನಾನು ಪೊಲೀಸರಿಗೆ ನಿರ್ದೇಶನ ನೀಡಿಲ್ಲ. ಆದರೆ, ಪೊಲೀಸರು ಸರಿಯಾದ ನಿರ್ಧಾರ ತೆಗೆದುಕೊಳ್ಳುತ್ತಾರೆ’ ಎಂದರು.

‘ಸಾರ್ವಜನಿಕ ಜೀವನದಲ್ಲಿ ಇರುವವರು ಜವಾಬ್ದಾರಿಯುತವಾಗಿ ಮಾತನಾಡಬೇಕು. ಈ ರೀತಿ ಪ್ರಚೋದನಕಾರಿಯಾಗಿ ಮಾತನಾಡುವುದು ಸರಿಯಲ್ಲ. ಆ ಮಾತುಗಳಿಂದ ಆಗುವ ಪರಿಣಾಮಗಳಿಗೆ ಅವರೇ ಹೊಣೆ ಆಗಬೇಕಾಗುತ್ತದೆ’ ಎಂದು ಹೇಳಿದರು.

ರಾಜ್ಯಸಭಾ ಸ್ಥಾನ: ಸೋಮಣ್ಣ ಬೇಡಿಕೆ

ಬಿಜೆಪಿ ಅಧ್ಯಕ್ಷ ನಡ್ಡಾ, ಅಮಿತ್ ಶಾ ಭೇಟಿ ಮಾಡಿದ ಮಾಜಿ ಸಚಿವ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದ ಬಿಜೆಪಿಯ ಕೆಲವು ನಾಯಕರ ನಡೆಯಿಂದ ಅಸಮಾಧಾನಗೊಂಡಿರುವ ಮಾಜಿ ಸಚಿವ ವಿ.ಸೋಮಣ್ಣ ಅವರು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಭೇಟಿ ಮಾಡಿ ಸಮಾಲೋಚನೆ ನಡೆಸಿದರು. ತಮ್ಮನ್ನು ರಾಜ್ಯಸಭಾ ಸದಸ್ಯರನ್ನಾಗಿ ಮಾಡುವಂತೆ ವರಿಷ್ಠರಲ್ಲಿ ಮನವಿ ಮಾಡಿದರು.

ಜನವರಿ 8ರಂದು (ಸೋಮವಾರ) ದೆಹಲಿಗೆ ಬಂದಿದ್ದ ಸೋಮಣ್ಣ ಅವರು ವರಿಷ್ಠರ ಭೇಟಿಗೆ ನಿರಂತರ ಪ್ರಯತ್ನ ನಡೆಸಿದ್ದರು. ವರಿಷ್ಠರನ್ನು ಶನಿವಾರ ಭೇಟಿ ಮಾಡಿ ಚರ್ಚಿಸಿದರು. ವಿಧಾನಸಭಾ ಚುನಾವಣೆಯಲ್ಲಿ ಪಕ್ಷದ ಕೆಲವು ಮುಖಂಡರು ದ್ವೇಷದ ರಾಜಕಾರಣ ಮಾಡಿ ತಮ್ಮನ್ನು ಸೋಲಿಸಿದರು ಎಂದು ಸೋಮಣ್ಣ ಅವರು ವರಿಷ್ಠರ ಗಮನಕ್ಕೆ ತಂದರು.

‘ಕರ್ನಾಟಕದಿಂದ ರಾಜ್ಯಸಭೆಗೆ ಚುನಾಯಿತರಾಗಿರುವ ನಾಲ್ವರು ಸದಸ್ಯರು ಮಾರ್ಚ್‌ನಲ್ಲಿ ನಿವೃತ್ತರಾಗಲಿದ್ದಾರೆ. ವಿಧಾನಸಭೆಯ ಬಲಾಬಲದ ಆಧಾರದಲ್ಲಿ ಬಿಜೆಪಿ ಒಂದು ಸ್ಥಾನ ಗೆಲ್ಲಲಿದೆ. ನನ್ನನ್ನು ಬಿಜೆಪಿಯ ಅಭ್ಯರ್ಥಿಯನ್ನಾಗಿ ಮಾಡಬೇಕು. ಬಳಿಕ ನಡೆಯುವ ಲೋಕಸಭಾ ಚುನಾವಣೆಯಲ್ಲಿ ಕಷ್ಟದ ಮೂರು ಕ್ಷೇತ್ರಗಳ ಹೊಣೆಯನ್ನು ನನಗೆ ನೀಡಿ. ಪಕ್ಷದ ಅಭ್ಯರ್ಥಿಗಳನ್ನು ಗೆಲ್ಲಿಸುವ ಜವಾಬ್ದಾರಿ ನನ್ನದು’ ಎಂದು ಸೋಮಣ್ಣ ಅವರು ಅಮಿತ್ ಶಾ ಅವರಿಗೆ ತಿಳಿಸಿದರು.


ಗೃಹ ಸಚಿವ ಅಮಿತ್ ಶಾ ಅವರಿಗೆ ವಿ.ಸೋಮಣ್ಣ ಹೂಗುಚ್ಛ ನೀಡಿದರು

‘ಹೈಕಮಾಂಡ್ ಸೂಚನೆಯ ಹಿನ್ನೆಲೆಯಲ್ಲಿ ವಿಧಾನಸಭಾ ಚುನಾವಣೆಯಲ್ಲಿ ನೀವು ಎರಡು ಕ್ಷೇತ್ರಗಳಲ್ಲಿ ಸ್ಪರ್ಧೆ ಮಾಡಿದ್ದೀರಿ. ನಿಮ್ಮ ಸೋಲಿಗೆ ಯಾರು ಕಾರಣ ಎಂಬ ಕುರಿತು ನಮ್ಮಲ್ಲಿ ಮಾಹಿತಿ ಇದೆ. ನಿಮ್ಮ ನೋವು ನಮಗೆ ಅರ್ಥವಾಗಿದೆ. ಅದನ್ನೆಲ್ಲ ಸದ್ಯಕ್ಕೆ ಮರೆತುಬಿಡಿ. ಮುಂದಿನ ದಿನಗಳಲ್ಲಿ ನಿಮಗೆ ಸೂಕ್ತ ಸ್ಥಾನಮಾನ ಸಿಗಲಿದೆ. ನಿಮ್ಮ ಸೇವೆಯನ್ನು ಪಕ್ಷ 10–15 ವರ್ಷಗಳ ಕಾಲ ಬಳಸಿಕೊಳ್ಳಲಿದೆ. ದುಡುಕಿನ ನಿರ್ಧಾರ ತೆಗೆದುಕೊಳ್ಳಬೇಡಿ’ ಎಂಬ ಕಿವಿಮಾತನ್ನು ಶಾ ಹೇಳಿದರು ಎಂದು ಮೂಲಗಳು ತಿಳಿಸಿವೆ.

ಸುದ್ದಿಗಾರರ ಜತೆಗೆ ಮಾತನಾಡಿದ ಸೋಮಣ್ಣ, ‘ವಿಧಾನಸಭಾ ಚುನಾವಣೆಯ ಸೋಲಿನ ಕುರಿತು ಸಂಪೂರ್ಣ ಮಾಹಿತಿ ನೀಡಿದ್ದೇನೆ. ನನ್ನ ಅಂತರಂಗದ ಮಾತುಗಳನ್ನು ಹೇಳಿದ್ದೇನೆ. ರಾಜ್ಯದಲ್ಲಿ ಪಕ್ಷ ಸಂಘಟನೆ ಮಾಡುವಂತೆ ವರಿಷ್ಠರು ಸೂಚಿಸಿದ್ದಾರೆ. ಮುಂದಿನ ದಿನಗಳಲ್ಲಿ ಸ್ಥಾನಮಾನ ನೀಡುವುದಾಗಿಯೂ ಭರವಸೆ ನೀಡಿದ್ದಾರೆ’ ಎಂದರು.

ಮುಖ್ಯಾಂಶಗಳು
- ವರಿಷ್ಠರಿಂದ ಸ್ಥಾನಮಾನದ ಭರವಸೆ ಪಡೆದ ಸೋಮಣ್ಣ
- ದುಡುಕಿನ ನಿರ್ಧಾರ ಕೈಗೊಳ್ಳದಂತೆ ಕಿವಿಮಾತು
- 3 ಕ್ಷೇತ್ರಗಳ ಹೊಣೆಗಾರಿಕೆ ಕೇಳಿದ ಮಾಜಿ ಸಚಿವ

ವಜ್ರ ಕಳ್ಳಸಾಗಣೆ ಜಾಲ ಭೇದಿಸಿದ ಅಧಿಕಾರಿಗಳು • ಚಿಕ್ಕಬಳ್ಳಾಪುರದ ಇಬ್ಬರು ಆರೋಪಿಗಳ ಬಂಧನ

ಚಾಕೊಲೇಟ್ ಕವರ್‌ನಲ್ಲಿ ₹7.76 ಕೋಟಿಯ ವಜ್ರ


ಪ್ರಜಾವಾಣಿ ವಾರ್ತೆ

ದೇವನಹಳ್ಳಿ (ಬೆಂಗಳೂರು ಗ್ರಾಮಾಂತರ ಜಿಲ್ಲೆ): ಇಲ್ಲಿನ ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದಿಂದ ದುಬೈಗೆ ಅಕ್ರಮವಾಗಿ ಸಾಗಿಸುತ್ತಿದ್ದ ₹7.76 ಕೋಟಿ ಮೌಲ್ಯದ 8,053 ಕ್ಯಾರೆಟ್ ತೂಕದ ವಜ್ರಗಳು, ₹4.62 ಲಕ್ಷ ಮೊತ್ತದ ಅಮೆರಿಕ ಡಾಲರ್ ಮತ್ತು ದಿರ್‌ಹಂ ಕರೆನ್ಸಿ ವಶಪಡಿಸಿಕೊಳ್ಳಲಾಗಿದೆ.

ಕಳ್ಳಸಾಗಣೆ ಮಾಡಲು ಯತ್ನಿಸಿದ ಚಿಕ್ಕಬಳ್ಳಾಪುರದ ಇಬ್ಬರು ಪ್ರಯಾಣಿಕರನ್ನು ವೈಮಾನಿಕ ಗುಪ್ತಚರ ನಿರ್ದೇಶನಾಲಯದ (ಡಿಆರ್‌ಐ) ಅಧಿಕಾರಿಗಳು ಬುಧವಾರ (ಜ.10) ಬಂಧಿಸಿದ್ದಾರೆ.

ಮುಂಬೈನಿಂದ ಬೆಂಗಳೂರಿಗೆ ವಜ್ರಗಳನ್ನು ತಂದಿದ್ದ ಈ ಇಬ್ಬರೂ ಅವನ್ನು ಚಾಕೊಲೇಟ್ ಪ್ಯಾಕ್‌ನಲ್ಲಿ ಬಚ್ಚಿಟ್ಟು ದುಬೈಗೆ ಸಾಗಿಸುತ್ತಿದ್ದರು ಎಂದು ತಿಳಿದು ಬಂದಿದೆ.

ಈ ಬಗ್ಗೆ ವೈಮಾನಿಕ ಗುಪ್ತಚರ ನಿರ್ದೇಶನಾಲಯದ ಅಧಿಕಾರಿಗಳಿಗೆ ಸುಳಿವು ದೊರೆತಿತ್ತು.


ಚಾಕೊಲೇಟ್ ಪ್ಯಾಕೆಟ್‌ನಲ್ಲಿ ಅಡಗಿಸಿಟ್ಟ ವಜ್ರ

ರನ್ ವೇ ಬೇಯಲ್ಲಿ ದುಬೈಗೆ ಹಾರಲು ಸಿದ್ಧವಾಗಿದ್ದ ವಿಮಾನದಲ್ಲಿ ಅಧಿಕಾರಿಗಳ ತಂಡ ತಪಾಸಣೆ ನಡೆಸಿದಾಗ ಪ್ರಯಾಣಿಕರ ಬ್ಯಾಗ್‌ನಲ್ಲಿದ್ದ ಚಾಕೊಲೇಟ್ ಪ್ಯಾಕ್‌ನಲ್ಲಿ ಅಡಗಿಸಿ ಇಡಲಾಗಿದ್ದ ವಜ್ರಗಳು ಪತ್ತೆಯಾಗಿವೆ.

ಆರೋಪಿಗಳನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಹೈದರಾಬಾದ್ ವಿಮಾನ ನಿಲ್ದಾಣದಿಂದ ಕಳ್ಳ ಸಾಗಣೆ ಜಾಲದ ಮತ್ತಿಬ್ಬರು ಸದಸ್ಯರು ಇನ್ನಷ್ಟು ವಜ್ರಗಳನ್ನು ದುಬೈಗೆ ಸಾಗಿಸುತ್ತಿದ್ದಾರೆ ಎಂಬ ಮಾಹಿತಿ ದೊರೆತಿದೆ.

ತಕ್ಷಣ ಅಧಿಕಾರಿಗಳು ಹೈದರಾಬಾದ್‌ನ ಗುಪ್ತಚರ ನಿರ್ದೇಶನಾಲಯಕ್ಕೆ ಮಾಹಿತಿ ನೀಡಿದ್ದಾರೆ. ಅದೇ ದಿನ ಬೆಳಗ್ಗೆ ಹೈದರಾಬಾದ್ ವಿಮಾನ ನಿಲ್ದಾಣದಲ್ಲಿ ₹6.03 ಕೋಟಿ ಬೆಲೆಬಾಳುವ ವಜ್ರಗಳು ಹಾಗೂ ₹9.83 ಲಕ್ಷ ಮೊತ್ತದ ಅಮೆರಿಕ ಡಾಲರ್ ಕರೆನ್ಸಿ ವಶಪಡಿಸಿಕೊಂಡಿದ್ದಾರೆ. ವಜ್ರ ಕಳ್ಳ ಸಾಗಣೆ ಜಾಲದ ವಿರುದ್ಧ ಪ್ರಕರಣ ದಾಖಲಾಗಿದ್ದು, ವಿಚಾರಣೆ ನಡೆಯುತ್ತಿದೆ.

ಸಂಗೀತ ಲೋಕದಲ್ಲಿ ಅಚ್ಚಳಿಯದ ಛಾಪು ಮೂಡಿಸಿದ ಕಿರಾಣಾ ಘರಾಣಾ ತಾರೆ

‘ಸ್ವರ’ ಮುತ್ತಾಗಿಸಿದ ಮೇರು ಕಲಾವಿದೆ

● ಸುಮಂಗಲಾ



ನುಡಿ ನಮನ

ಮನದ ಚಿಪ್ಪಿನೊಳಗೆ
ಧ್ಯಾನಸ್ಥ ಸ್ವರವೊಂದು
ಕರೆಯುತಿದೆ ಆತ್ಮವನು,
ಸಾಗಬೇಕಿದೆ, ಸಾಗಬೇಕಿದೆ,
ಆ ಸ್ವರವನು ಮುತ್ತಾಗಿಸುವ ತನಕ
ನಿರಂತರ ಸಾಗುತ್ತಲೇ ಇರಬೇಕಿದೆ.

(ಡಾ. ಪ್ರಭಾ ಅತ್ರೆ, ‘ಅಂತಃಸ್ವರ’ ಮರಾಠಿ ಕವನಸಂಕಲನ)

ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತದ ಪ್ರಸಿದ್ಧ ಗಾಯಕಿ, ಪದ್ಮಭೂಷಣ, ಸ್ವರಯೋಗಿನಿ ಡಾ. ಪ್ರಭಾ ಅತ್ರೆ ತಮ್ಮೊಳಗಿನ ಸ್ವರವನ್ನು ಮುತ್ತಾಗಿಸುವವರೆಗೂ ರಿಯಾಜ್‌ನಲ್ಲಿ ಸಾಗುತ್ತಲೇ ಇದ್ದವರು... ಇದೀಗ ಅದಾವುದೋ ಅಗೋಚರ ಗಂಧರ್ವಲೋಕದ ಸ್ವರಗಳು ಆತ್ಮವನು ಕರೆದಂತೆ ನಸುಕಿನ ನಿದ್ದೆಗಣ್ಣಿನಲ್ಲಿಯೇ ಸಾಗಿಬಿಟ್ಟಿದ್ದಾರೆ. ಕಳೆದ ಸೆಪ್ಟೆಂಬರ್ 13ಕ್ಕೆ 91 ವಸಂತಗಳನ್ನು ಪೂರೈಸಿ, 92ರ ಹೊಸ್ತಿಲಿಗೆ ಕಾಲಿಟ್ಟಿದ್ದ ಡಾ. ಪ್ರಭಾ ಅವರ ವ್ಯಕ್ತಿತ್ವವನ್ನು ಒಂದೆರಡು ಪದಗಳಲ್ಲಿ ಕಟ್ಟಿಕೊಡುವುದು ಅಸಾಧ್ಯ. ಕಿರಾಣಾ ಘರಾಣಾದ ಶ್ರೇಷ್ಠ, ಹಿರಿಯ ಗಾಯಕಿಯಾಗಿ ಮಾತ್ರವಲ್ಲ, ವಾಗ್ಗೇಯಕಾರ್ತಿ, ಲೇಖಕಿ, ಚಿಂತಕಿ, ಸಂಶೋಧಕಿ, ಶಿಕ್ಷಣತಜ್ಞೆಯಾಗಿಯೂ ಡಾ. ಪ್ರಭಾ ಸಂಗೀತಲೋಕದಲ್ಲಿ ಹೆಜ್ಜೆಗುರುತು ಮೂಡಿಸಿದವರು.

ಸಂಗೀತಗಾರರ ಮನೆತನದಿಂದ ಬಂದವರು ಅವರಲ್ಲ. ಅವರ ತಂದೆ, ತಾಯಿ ಇಬ್ಬರೂ ಶಿಕ್ಷಕರಾಗಿದ್ದವರು. ಕಿರಾಣಾ ಘರಾಣಾದ ಸುರೇಶ್‌ಬಾಬು ಮಾನೆಯವರಲ್ಲಿ ಆರು ವರ್ಷ ಕಲಿತಿದ್ದು ಮುಂದಿನ ಇಡೀ ಸಂಗೀತ ಪಯಣಕ್ಕೆ ಭದ್ರ ಬುನಾದಿಯಾಯಿತು. ವಿಜ್ಞಾನ ಮತ್ತು ಕಾನೂನು ಪದವೀಧರೆಯಾಗಿದ್ದ ಪ್ರಭಾ ಅವರಿಗೆ ಆ ಎರಡೂ ಕ್ಷೇತ್ರಗಳಲ್ಲಿ ಮುಂದುವರೆಯುವುದು ತನ್ನಿಂದಾಗದು ಎನ್ನಿಸಿತ್ತು. ಆಗ ಕೈಬೀಸಿ ಕರೆದಿದ್ದು ರಾಂಚಿ ಆಕಾಶವಾಣಿ. ಅಲ್ಲಿ ಹತ್ತು ವರ್ಷ ಕೆಲಸ ಮಾಡಿದ್ದು ಅವರಿಗೆ ಧ್ವನಿಯ ನಾದಗುಣ ನಿರ್ಮಿತಿಯಲ್ಲಿ ಧ್ವನಿಶಾಸ್ತ್ರ, ಮಾಧ್ಯಮ ಹಾಗೂ ಸಂಸ್ಕರಣದ ಮಹತ್ವವನ್ನು ಕಂಡುಕೊಳ್ಳಲು ಸಾಧ್ಯವಾಯಿತು.

ಪ್ರಭಾ ಅವರಿಗೆ ಸಂಗೀತದ ಶೈಕ್ಷಣಿಕ ಅಧ್ಯಯನದಲ್ಲಿ ಗಂಭೀರವಾದ ಆಸಕ್ತಿ ಇದ್ದಿದ್ದರಿಂದ 1979ರಿಂದ 1992ರವರೆಗೆ ಎಸ್.ಎನ್.ಡಿ.ಟಿ. ಮಹಿಳಾ ವಿಶ್ವವಿದ್ಯಾಲಯದ ಸಂಗೀತ ವಿಭಾಗದ ಮುಖ್ಯಸ್ಥೆ ಹಾಗೂ ಪ್ರೊಫೆಸರ್ ಆದರು. ಪುಣೆಯಲ್ಲಿ ಅವರು ಆರಂಭಿಸಿದ ‘ಸ್ವರಮಯೀ ಗುರುಕುಲ’ವು ಅಕಾಡೆಮಿಕ್ ಸಂಸ್ಥೆಗಳು ಹಾಗೂ ಸಾಂಪ್ರದಾಯಿಕ ಗುರು-ಶಿಷ್ಯ ಪರಂಪರೆಯ ನಡುವಣ ಸೇತುವೆಯಂತೆ ಇದೆ. ತಮ್ಮ ಕಛೇರಿಗಳು ಹಾಗೂ ಶಿಷ್ಯರಿಗೆ ಬೋಧನೆ, ಎರಡನ್ನೂ ಸಮನಾಗಿ ತೂಗಿಸಿಕೊಂಡು ಕೌಶಲ ಮೆರೆದವರು ಅವರು. ಸಂಗೀತದ ಕುರಿತು ಇಂಗ್ಲಿಷ್, ಹಿಂದಿ, ಮರಾಠಿಯಲ್ಲಿ ಹಲವಾರು ಕೃತಿಗಳನ್ನು ರಚಿಸಿದ್ದಾರೆ. ನೂರಾರು ಬಂದಿಶ್‌ಗಳನ್ನು ರಚಿಸಿರುವ ಪ್ರಭಾ ಅವರು ತಾವೇ ರಾಗ ಸಂಯೋಜಿಸಿ, ತಮ್ಮ ಕಛೇರಿಗಳಲ್ಲಿ ಪ್ರಸ್ತುತಪಡಿಸುತ್ತಿದ್ದರು. ಅವರ ಸಾಂಗೀತಿಕ ಶೈಲಿಯ ಎದ್ದು ಕಾಣುವ ವೈಶಿಷ್ಟ್ಯ ಎಂದರೆ ಖಯಾಲ್ ಗಾಯನದಲ್ಲಿ ಸರಗಮ್ ಬಳಕೆ. ಇದಕ್ಕಾಗಿ ಬಹಳಷ್ಟು ಟೀಕೆಯನ್ನೂ ಅವರು ಎದುರಿಸಬೇಕಾಗಿ ಬಂದಿತು.

‘ತನ್ನ ಘರಾಣಾವನ್ನು ಇನ್ನಷ್ಟು ಸಮೃದ್ಧಗೊಳಿಸಿ, ಸಶಕ್ತಗೊಳಿಸಿ, ಅದನ್ನು ಮುನ್ನಡೆಸುವುದು ಪ್ರತಿ ಕಲಾವಿದರ ಜವಾಬ್ದಾರಿ. ನಾನು ಅದೇ ಕೆಲಸವನ್ನು ಮಾಡಿರುವೆ. ಘರಾಣಾ ಎಂದರೆ ಫೋಟೊ ಕಾಪಿ ಅಲ್ಲ, ಅದನ್ನು ಜೀವಂತವಾಗಿಡುವುದಕ್ಕೆ ಏನಾದರೂ ಹೊಸತನ್ನು ನೀಡಬೇಕಾಗುತ್ತದೆ. ಕಿರಾಣಾ ಘರಾಣಾದ ವೈಶಿಷ್ಟ್ಯಗಳನ್ನು ಕಾಪಾಡಿಕೊಳ್ಳುವ ಜೊತೆಗೆ ಒಂದು ತಾರ್ಕಿಕ, ವೈಜ್ಞಾನಿಕ ದೃಷ್ಟಿಕೋನದಿಂದ ಈ ಘರಾಣಾವನ್ನು ನೋಡಿರುವೆ. ಹೀಗಾಗಿ ನನ್ನ ಗಾಯನ ಮುಖ್ಯದಾರಿಯಿಂದ ಆಚೆ ಈಚೆ ಸರಿದಂತೆ ಅನ್ನಿಸುತ್ತೆ’ ಎಂದು ತಮ್ಮನ್ನು ಟೀಕಿಸುತ್ತಿದ್ದವರ ಬಾಯಿ ಮುಚ್ಚಿಸಿದ್ದರು.

2022ರ ಪ್ರಜಾವಾಣಿ ದೀಪಾವಳಿ ವಿಶೇಷಾಂಕದ ಲೇಖನಕ್ಕೆಂದು ಅವರನ್ನು ನಾನು ಮಾತನಾಡಿಸಿದ್ದೆ. ಅಷ್ಟು ಹಿರಿಯ ಸಂಗೀತಗಾರ್ತಿಯಾದರೂ ಯಾವುದೇ ಹಮ್ಮುಬಿಮ್ಮು ಇಲ್ಲದೇ, ತುಂಬು ಅಕ್ಕರೆಯಿಂದ, ಹಲವಾರು ವಿಷಯಗಳನ್ನು ಸರಳವಾಗಿ ವಿವರಿಸಿದ್ದರು.

ಪ್ರಭಾ ಅವರು ಬದುಕಿನ ಕೊನೆಯ ಕ್ಷಣದವರೆಗೂ ಪ್ರತಿ ಬೆಳಗನ್ನು ಉತ್ಸಾಹದಿಂದ ಎದುರು ನೋಡುತ್ತಿದ್ದವರು. ಬೆಳಗಿನ ಚಹಾವನ್ನು ತಾವೇ ಸಿದ್ಧಮಾಡಿಕೊಂಡು ಕುಡಿಯುವುದರಿಂದ ಹಿಡಿದು, ರಾತ್ರಿ ಊಟದ ನಂತರ, ಮಿಕ್ಕಿದ್ದನ್ನು ಎತ್ತಿಡುವವರೆಗೆ ಅವರ ಎಲ್ಲ ಕೆಲಸಗಳಲ್ಲಿ ಒಂದು ಅಚ್ಚುಕಟ್ಟು, ಸೊಬಗು ಮೇಳೈಸಿತ್ತು. ‘ಉಸ್ಸಪ್ಪ’ ಎಂಬುದಾಗಲೀ, ‘ಅಯ್ಯೋ ಸಾಕಾಯಿತು’ ಎಂಬ ಪದವಾಗಲೀ ಎಂದೂ ಅವರ ತುಟಿಗಳಿಂದ ಹೊರಬೀಳಲಿಲ್ಲ. ಉಸಿರಿನ ಕೊನೆಯವರೆಗೂ ಕೊರಳಿಂದ ಹೊರಹೊಮ್ಮಿದ್ದು ಸಪ್ತಸ್ವರಗಳು. ತೊಂಬತ್ತೊಂದು ವರ್ಷ, ನಾಲ್ಕು ತಿಂಗಳ ಸ್ವಸ್ಥವಾದ, ತುಂಬು ಜೀವನ ನಡೆಸಿದ ಪ್ರಭಾ ಅವರು ಪ್ರಶಾಂತ ನಿದ್ದೆಯಲ್ಲಿಯೇ ಸ್ವರ ಪಯಣವನ್ನು ಮುಗಿಸಿದ್ದಾರೆ.

ಹಿಂದೂಸ್ತಾನಿ ಗಾಯಕಿ ಪ್ರಭಾ ಅತ್ರೆ ನಿಧನ

ಮುಂಬೈ: ಹಿಂದೂಸ್ತಾನಿ ಸಂಗೀತದ ಮೇರು ಗಾಯಕಿ ಡಾ.ಪ್ರಭಾ ಅತ್ರೆ (92) ಅವರು ಪುಣೆಯಲ್ಲಿ ಶನಿವಾರ ಹೃದಯಾಘಾತದಿಂದ ನಿಧನರಾದರು.

ಪ್ರಭಾ ಅವರು ಶನಿವಾರ ನಸುಕಿನಲ್ಲಿ ಹೃದಯಾಘಾತಕ್ಕೆ ಒಳಗಾಗಿದ್ದರು. ಕೂಡಲೇ ಅವರನ್ನು ದೀನನಾಥ ಮಂಗೇಶ್ಕರ್ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಅಲ್ಲಿ, ಅವರು ನಿಧನರಾಗಿದ್ದಾರೆ ಎಂದು ಘೋಷಿಸಲಾಯಿತು.

1932ರ ಸೆಪ್ಟೆಂಬರ್ 13ರಂದು ಜನಿಸಿದ್ದ ಪ್ರಭಾ ಅವರು ಗಾಯಕಿಯಾಗಿ ಮಾತ್ರವಲ್ಲದೆ ಶಿಕ್ಷಣತಜ್ಞೆಯಾಗಿಯೂ ಹೆಸರಾಗಿದ್ದರು. ಕರ್ನಾಟಕದೊಂದಿಗೆ, ವಿಶೇಷವಾಗಿ ಹುಬ್ಬಳ್ಳಿ-ಧಾರವಾಡದೊಂದಿಗೆ ಅವರು ನಂಟನ್ನು ಹೊಂದಿದ್ದರು.

ಡಾ. ಅತ್ರೆಯವರಿಗೆ ಸಂದ ಸಮ್ಮಾನಗಳಿಗೆ ಲೆಕ್ಕವಿಲ್ಲ. ಮೂರೂ ಪ್ರತಿಷ್ಠಿತ ಪದ್ಮ (1990–ಪದ್ಮಶ್ರೀ, 2002–ಪದ್ಮಭೂಷಣ, 2022–ಪದ್ಮವಿಭೂಷಣ) ಪ್ರಶಸ್ತಿಗಳನ್ನು ಪಡೆದ ಕಲಾವಿದೆ ಅವರು. ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿಯೂ ಅವರಿಗೆ ಸಂದಿತ್ತು. ಮಧ್ಯಪ್ರದೇಶ ಸರ್ಕಾರದ ಕಾಳಿದಾಸ ಸಮ್ಮಾನ್; ಮಹಾರಾಷ್ಟ್ರ ಸರ್ಕಾರದ ಪಂಡಿತ್ ಭೀಮಸೇನ ಜೋಷಿ ಶಾಸ್ತ್ರೀಯ ಸಂಗೀತ ಗೌರವ ಪುರಸ್ಕಾರ; ಕರ್ನಾಟಕ ಸರ್ಕಾರದ ಮಲ್ಲಿಕಾರ್ಜುನ ಮನ್ಸೂರ್ ಸಮ್ಮಾನ್ ಹಾಗೂ ಸ್ವರಸಾಮ್ರಾಟ ಪಂ. ಬಸವರಾಜ ರಾಜಗುರು ಸಮ್ಮಾನ್; ಗುಜರಾತ್ ಸರ್ಕಾರದ ತಾನಾ-ರೀರೀ ಸಂಗೀತ್ ಸಮ್ಮಾನ್ – ಅವರು ಪಡೆದ ಪ್ರಶಸ್ತಿಗಳಲ್ಲಿ ಪ್ರಮುಖವಾದುವು.

ಲೋಕಸಭೆ ಚುನಾವಣೆಗೆ ಸ್ಪರ್ಧಿಸುವುದಿಲ್ಲ: ಎಚ್‌.ಡಿ. ದೇವೇಗೌಡ

‘ಎಚ್‌ಡಿಕೆ ಕೇಂದ್ರ ಮಂತ್ರಿ: ಮೋದಿಗಷ್ಟೇ ಗೊತ್ತು’

ಪ್ರಜಾವಾಣಿ ವಾರ್ತೆ



ಎಚ್‌.ಡಿ. ದೇವೇಗೌಡ

ಬೆಂಗಳೂರು: ‘ಎಚ್‌.ಡಿ. ಕುಮಾರಸ್ವಾಮಿ ಕೇಂದ್ರದ ಮಂತ್ರಿಯಾಗುವ ವಿಷಯ ನನಗೆ ಗೊತ್ತಿಲ್ಲ. ಪ್ರಧಾನಿ ನರೇಂದ್ರ ಮೋದಿಯವರ ಮನಸ್ಸಿನಲ್ಲಿ ಏನಿದೆಯೋ ಗೊತ್ತಿಲ್ಲ’ ಎಂದು ಜೆಡಿಎಸ್ ವರಿಷ್ಠ ಎಚ್‌.ಡಿ. ದೇವೇಗೌಡ ಹೇಳಿದರು.

ಕೇಂದ್ರ ಸಂಪುಟಕ್ಕೆ ಕುಮಾರಸ್ವಾಮಿ ಸೇರ್ಪಡೆ ಕುರಿತು ಸುದ್ದಿಗೋಷ್ಠಿಯಲ್ಲಿ ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ಕುಮಾರಸ್ವಾಮಿ ಸಚಿವರಾಗುವ ಸಾಧ್ಯತೆಯನ್ನು ಅಲ್ಲಗಳೆಯಲಿಲ್ಲ.

‘ಮೋದಿಯವರು ಮೊದಲ ಬಾರಿ ಸಂಸದರಾದವರನ್ನು ಮಂತ್ರಿ ಮಾಡಿದ್ದಾರೆ, ಮೊದಲ ಬಾರಿಗೆ ಗೆದ್ದವರನ್ನು ಮುಖ್ಯಮಂತ್ರಿ ಮಾಡಿದ್ದಾರೆ. ಮೋದಿಯವರ ತಂತ್ರಗಾರಿಕೆ, ಯೋಜನೆಗಳೇನು ಎಂಬುದು ಅವರ ಸಹೋದ್ಯೋಗಿಗಳಿಗೂ ಗೊತ್ತಾಗುವುದಿಲ್ಲ. ಈ ವಿಷಯದಲ್ಲಿ ಅವರ ಭಾವನೆ ಏನಿದೆಯೋ ಎಂಬುದು ನನಗೆ ಗೊತ್ತಿಲ್ಲ. ನನ್ನ ಬಳಿ ಈ ಬಗ್ಗೆ ಚರ್ಚೆ ನಡೆಸಿಲ್ಲ’ ಎಂದರು.

ಲೋಕಸಭೆ ಚುನಾವಣೆಗೆ ಕುಮಾರಸ್ವಾಮಿ ಸ್ಪರ್ಧಿಸುವ ಬಗ್ಗೆ ಕೇಳಿದ ಪ್ರಶ್ನೆಗೂ, ‘ಮೋದಿಯವರ ಮನಸ್ಸಿನಲ್ಲಿ ಏನಿದೆಯೋ ಗೊತ್ತಿಲ್ಲ. ಅವರು ಏನು ಹೇಳುತ್ತಾರೋ ನೋಡೋಣ. ಮೋದಿಯವರು ಹೇಳಿದ್ದನ್ನು ಕುಮಾರಸ್ವಾಮಿ ಕೇಳುತ್ತಾರೆ. ಅವರು ಸ್ಪರ್ಧಿಸುವ ಪರಿಸ್ಥಿತಿ ಎದುರಾದರೆ ಎಲ್ಲರೂ ಕುಳಿತು ಚರ್ಚಿಸಿ ತೀರ್ಮಾನ ಮಾಡುತ್ತೇವೆ’ ಎಂದರು.

ಸ್ಪರ್ಧೆ ಇಲ್ಲ: ‘ನನಗೀಗ 92 ವರ್ಷ. ಯಾವುದೇ ಕಾರಣಕ್ಕೂ ಲೋಕಸಭೆ ಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲ. ರಾಜ್ಯಸಭೆಯ ಅವಧಿ ಎರಡೂವರೆ ವರ್ಷವಿದೆ. ಚುನಾವಣೆ ವೇಳೆ ಮೈತ್ರಿ ಕೂಟದ ಪರವಾಗಿ ಪ್ರಚಾರ ಮಾಡುತ್ತೇನೆ. ಬಿಜೆಪಿಯವರು ಎಲ್ಲಿಗೆ ಕರೆದರೂ ಹೋಗುತ್ತೇನೆ’ ಎಂದು ದೇವೇಗೌಡ ಹೇಳಿದರು.

‘ಪ್ರಜ್ವಲ್ ರೇವಣ್ಣಗೆ ಮೋದಿ ಹಾಗೂ ಕುಮಾರಸ್ವಾಮಿ ಇಬ್ಬರೂ ಆಶೀರ್ವಾದ ಮಾಡಲಿದ್ದಾರೆ. ನಾನು ಕೂಡ ಆಶೀರ್ವಾದ ಮಾಡಿದ್ದೇನೆ. ಹಾಸನದಿಂದ ಅವರು ಸ್ಪರ್ಧಿಸುವ ಬಗ್ಗೆ ನಿಮಗೆ ಅನುಮಾನವೇಕೆ’ ಎಂದು ಗೌಡರು ಸುದ್ದಿಗಾರರನ್ನು ಪ್ರಶ್ನಿಸಿದರು.

ಸುದ್ದಿಗೋಷ್ಠಿಯಲ್ಲಿ ಜೆಡಿಎಸ್ ಪ್ರಮುಖರ ಸಮಿತಿಯ ಅಧ್ಯಕ್ಷ ಜಿ.ಟಿ.ದೇವೇಗೌಡ, ಮಾಜಿ ಸಂಸದ ಕುಪೇಂದ್ರ ರೆಡ್ಡಿ, ವಿಧಾನಪರಿಷತ್ತಿನ ಸದಸ್ಯರಾದ ಕೆ.ಎ. ತಿಪ್ಪೇಸ್ವಾಮಿ, ಟಿ.ಎ. ಶರವಣ ಉಪಸ್ಥಿತರಿದ್ದರು.

‘ಕಾವೇರಿ: ಪ್ರಧಾನಿಯಿಂದಷ್ಟೇ ಪರಿಹಾರ’

‘ರಾಜ್ಯವು ಕಾವೇರಿ ವಿಷಯದಲ್ಲಿ ಎದುರಿಸುತ್ತಿರುವ ಜಲಸಂಕಷ್ಟವನ್ನು ಪರಿಹರಿಸುವ ಶಕ್ತಿ ಇರುವುದು ಪ್ರಧಾನಿ ಮೋದಿಗೆ ಮಾತ್ರ. ಈ ಚುನಾವಣೆ ಮುಗಿದ ನಂತರ ಮತ್ತೆ ಪ್ರಧಾನಿ ಆಗಲಿರುವ ಅವರೇ ಪರಿಹಾರ ಕಲ್ಪಿಸಲಿದ್ದಾರೆ’ ಎಂದು ದೇವೇಗೌಡ ಹೇಳಿದರು.

‘ಪ್ರತಿ ವರ್ಷ ತಮಿಳುನಾಡಿನವರು ಕಾವೇರಿ ಜಲ ನಿರ್ವಹಣಾ ಸಮಿತಿ ಹಾಗೂ ಕಾವೇರಿ ಜಲ ನಿರ್ವಹಣಾ ಪ್ರಾಧಿಕಾರದ ಮುಂದೆ ಕರ್ನಾಟಕದಿಂದ ನೀರು ಕೊಡಿಸಿ ಎಂದು ಅರ್ಜಿ ಹಾಕುತ್ತಾರೆ. ನಮ್ಮ ಬಳಿ ನೀರು ಇಲ್ಲದೆ ಇದ್ದರೂ ನೀರು ಬಿಡಿ ಎಂದು ಪ್ರಾಧಿಕಾರದವರು ಹೇಳುತ್ತಾರೆ. ನಮ್ಮ ಅಧಿಕಾರಿಗಳು ಏನೇ ವಾದ ಮಾಡಿದರೂ ಪ್ರಯೋಜನ ಆಗುತ್ತಿಲ್ಲ’ ಎಂದರು.

‘ಕಾವೇರಿ ವಿಷಯದಲ್ಲಿ ಕರ್ನಾಟಕಕ್ಕೆ ಆಗಿರುವ ಅನ್ಯಾಯದ ಪ್ರತಿಯೊಂದು ಅಂಶವನ್ನು ನಾನು ಮೋದಿ ಅವರ ಗಮನಕ್ಕೆ ತಂದಿದ್ದೇನೆ. ಮೇಕೆದಾಟು ಯೋಜನೆಗೆ ಕೂಡಲೇ ಅನುಮತಿ ಕೊಡುವಂತೆ ಮನವಿ ಮಾಡಿದ್ದೇನೆ. ಮೇಕೆದಾಟು ಯೋಜನೆ ಅನುಷ್ಠಾನಕ್ಕೆ ತಂದರೆ ಮಾತ್ರ ಬೆಂಗಳೂರು ನಗರದ ನೀರಿನ ಬವಣೆ ತಪ್ಪಿಸಬಹುದು. ಇಲ್ಲದಿದ್ದರೆ ಬೆಂಗಳೂರು ನಗರ ಅತಿ ದೊಡ್ಡ ಜಲ ಸಂಕಷ್ಟಕ್ಕೆ ಸಿಲುಕಿಕೊಳ್ಳಲಿದೆ’ ಎಂದು ಹೇಳಿದರು.

‘ಯುವನಿಧಿ ಒಳ್ಳೆಯ ಯೋಜನೆ’

ರಾಜ್ಯ ಸರ್ಕಾರ ಜಾರಿಗೊಳಿಸಿರುವ ಐದನೇ ಗ್ಯಾರಂಟಿ ‘ಯುವನಿಧಿ’ ಬಗ್ಗೆ ದೇವೇಗೌಡ ಮೆಚ್ಚುಗೆ ವ್ಯಕ್ತಪಡಿಸಿದರು.

‘ಈ ಯೋಜನೆ ಒಳ್ಳೆಯದು. ಯುವ ಜನರಿಗೆ ಹಣ ಕೊಡುವುದರಲ್ಲಿ ತಪ್ಪೇನೂ ಇಲ್ಲ. ಎಲ್ಲ ಯುವಕರಿಗೂ ಕೊಡಲಿ. ಆ ಯುವಜನರು ಕೂಡ ರಾಮ ಮಂದರಕ್ಕೆ ಹೋಗಿ ಬರಲಿ’ ಎಂದರು.

‘ಜ. 22ರ ಬಳಿಕ ರಾಮಮಂದಿರಕ್ಕೆ ಹೋಗುತ್ತೇನೆ’ ಎಂಬ ಸಿದ್ದರಾಮಯ್ಯ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ‘ಹೇಳಿಕೆಯನ್ನು ಸ್ವಾಗತಿಸುತ್ತೇನೆ. ರಾಜ್ಯದ ಮುಜರಾಯಿ ದೇವಾಲಯಗಳಲ್ಲಿ ಪೂಜೆ ಮಾಡಲು ಹೇಳಿದ್ದಾರೆ. ಇದು ಒಳ್ಳೆಯ ವಿಚಾರ. ಮೃದು ಹಿಂದುತ್ವವೋ ಮತ್ತೊಂದೋ ಗೊತ್ತಿಲ್ಲ. ಹಿಂದುತ್ವವೋ, ಇನ್ನೊಂದೋ ಗೊತ್ತಿಲ್ಲ’ ಎಂದು ಹೇಳಿದರು.

‘ಪ್ರಿಯಾಂಕಾ ಗಾಂಧಿ ಸ್ಪರ್ಧೆ ಮಾಹಿತಿ ಇಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಲೋಕಸಭೆಗೆ ಪ್ರಿಯಾಂಕಾ ಗಾಂಧಿ ಕರ್ನಾಟಕ ಅಥವಾ ತೆಲಂಗಾಣದಿಂದ ಸ್ಪರ್ಧೆ ಮಾಡುವ ಬಗ್ಗೆ ಮಾಹಿತಿ ಇಲ್ಲ. ನನ್ನ ಜೊತೆಗೆ ಯಾರೂ ಮಾತನಾಡಿಲ್ಲ’ ಎಂದು ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ನಗರದಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದರು.

‘ಬಿಜೆಪಿ ಆಡಳಿತದ ಕಾಲದಲ್ಲಿ ರಾಜ್ಯದಲ್ಲಿ ಭದ್ರತೆ ಇಲ್ಲದಿರುವುದನ್ನು ಈಗ ಹೇಳುತ್ತಿದ್ದಾರೆ. ನಾವು ಯಾವುದೇ ಹಂತದಲ್ಲಿ ಮತೀಯ ಗೂಂಡಾಗಿರಿಗೆ ಪ್ರೋತ್ಸಾಹ ನೀಡುವುದಿಲ್ಲ’ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಅನುಭವ ಮಂಟಪಕ್ಕೆ ಅನುದಾನ ನೀಡುತ್ತಿಲ್ಲ ಎಂಬ ಬಸವಕಲ್ಯಾಣದ ಶಾಸಕರ ಆರೋಪಕ್ಕೆ ಉತ್ತರಿಸಿ, ‘ಅನುಭವ ಮಂಟಪ ಯೋಜನೆ ಆರಂಭವಾಗಿದ್ದೇ ಕಾಂಗ್ರೆಸ್ ಕಾಲದಲ್ಲಿ. ಬಸವ ಕಲ್ಯಾಣದ ಶಾಸಕರು ಹೊಸಬರು. ಅವರಿಗೆ ಮಾಹಿತಿ ಇಲ್ಲದ ಕಾರಣ ಏನೇನೋ ಆರೋಪ ಮಾಡುತ್ತಿದ್ದಾರೆ. ಮುಖ್ಯಮಂತ್ರಿಯವರು ಶಿವಮೊಗ್ಗದಲ್ಲಿ ಅಲ್ಲಮ ಪ್ರಭು ಹೆಸರನ್ನು ಘೋಷಣೆ ಮಾಡಿರುವುದು ನಮ್ಮ ಕಾಳಜಿಗೆ ಸಾಕ್ಷಿ. ಬಿಜೆಪಿ ಕಾಲದಲ್ಲಿ ಯಾಕೆ ಅನುದಾನ ಬಿಡುಗಡೆ ಮಾಡಿಲ್ಲ’ ಎಂದು ಪ್ರಶ್ನಿಸಿದರು.

ಗುಲ್ಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ಸಂಖ್ಯೆ:ಗುವಿಸಕಂ/ಮುಅ(ಕಾ)/ಕಾ.ನಿ.ಅ(ನಿ.ವ್ಯ)/ಸ.ಕಾ.ನಿ.ಅ(ನಿ.ವ್ಯ)/ಪ್ರ.ಲೆ.ಅ(ನಿ.ವ್ಯ)2023–24/49669–74 ದಿನಾಂಕ: 11–01–2024

ಅಧಿಸೂಚನೆ

ಮಾನ್ಯ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ, #16, ಸಿ–1, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯ, ವಸಂತನಗರ, ಬೆಂಗಳೂರು–560052 ರವರ ಸಮ್ಮುಖದಲ್ಲಿ “ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ವಿದ್ಯುತ್ ದರ) ಎಮ್.ವೈ.ಟಿ. ನಿಯಮಾವಳಿ–2000ರ ಹಾಗೂ 2006ರ ದಿನಾಂಕ: 31.05.2006 ನಿಯಮಾವಳಿಯ ಜೊತೆಗೆ ಓದಿಕೊಳ್ಳಲಾಗುವ ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣೆ ಅಧಿನಿಯಮ 1999ರ ಪ್ರಕರಣ 27 ಹಾಗೂ ವಿದ್ಯುಚ್ಛಕ್ತಿ ಕಾಯ್ದೆ 2003ರ ಪರಿಚ್ಛೇದ 61 ಮತ್ತು 62ರ ಅಡಿಯಲ್ಲಿ ಆರ್ಥಿಕ ವರ್ಷ–23ರ ಟ್ರೋಯಿಂಗ್ ಅಪ್, ಆರ್ಥಿಕ ವರ್ಷ–2025ರ ವಿದ್ಯುತ್ ಸರಬರಾಜು ವ್ಯವಹರಣೆಗಾಗಿ ಶುಲ್ಕಗಳಿಂದ ನಿರೀಕ್ಷಿತ ಕಂದಾಯ (ಇ.ಆರ್.ಸಿ), ಆರ್ಥಿಕ ವರ್ಷ–25ಕ್ಕೆ ರೀಟೈಲ್ ವಿದ್ಯುತ್ ಸರಬರಾಜು ದರಗಳ ಅನುಮೋದನೆಗಾಗಿ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಮುಂದೆ ಗುಲ್ಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ (ಗುವಿಸಕಂನಿ) ಕಲಬುರಗಿಯಿಂದ ಅರ್ಜಿ ಸಲ್ಲಿಸಿದೆ. ಗೌರವಾನ್ವಿತ ಆಯೋಗವು ಈ ಮನವಿಯನ್ನು ತಾಳೆ ನೋಡುವುದಕ್ಕೆ ಮತ್ತು ಸಿಂಧುಗೊಳಿಸುವುದಕ್ಕೆ ಒಳಪಟ್ಟು ದರ ನಿಯಮಗಳ ಪ್ರಕಾರ ಇದನ್ನು ಪೆಟಿಷನ್ (ಮನವಿ) ಎಂದು ಪರಿಗಣಿಸಿದೆ.

ಗುಲ್ಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ, ಕಲಬುರಗಿ–585102

.......ಅರ್ಜಿದಾರರು

ಅರ್ಜಿಯ ಸಾರಂಶ (ಸೂಚನೆ)

1. ಪರಿಷ್ಕರಣೆಯ ಅಗತ್ಯತೆ: ಪ್ರಸಕ್ತ ವಿದ್ಯುತ್ ದರಗಳಿಂದ ಗುವಿಸಕಂನಿ ಗಳಿಸುತ್ತಿರುವ ರೆವಿನ್ಯೂ ಸ್ವೀಕೃತಿ ಹಾಗೂ ವಾರ್ಷಿಕ ರೆವಿನ್ಯೂ ಅಗತ್ಯತೆಯ ನಡುವೆ ಸ್ವಾಮ್ಯತೆ ಇಲ್ಲದೆ ಪ್ರಯುಕ್ತ ಕೆಳಕಂಡಂತೆ ರೆವಿನ್ಯೂ ಕೊರತೆ ಉಂಟಾಗಿದೆ. (ಕರ್ನಾಟಕ ಸರ್ಕಾರ ಸಬ್ಸಿಡಿ ಒಳಗೊಂಡಂತೆ).

ಆರ್ಥಿಕ ವರ್ಷ	ರೆವಿನ್ಯೂ ಸ್ವೀಕೃತಿ ರೂ. ಕೋಟಿಗಳಲ್ಲಿ	ರೆವಿನ್ಯೂ ಅಗತ್ಯತೆ ರೂ. ಕೋಟಿಗಳಲ್ಲಿ	ಹೆಚ್ಚಳ/ (ಕೊರತೆ) ರೂ. ಕೋಟಿಗಳಲ್ಲಿ	ಮಾರಾಟ ದಶಲಕ್ಷ ಯುನಿಟಗಳಲ್ಲಿ	ವಿದ್ಯುತ್ ಸರಬರಾಜು ಸರಾಸರಿ ವೆಚ್ಚ (ಪ್ರತಿ ಯೂನಿಟ್‌ಗೆ) ರೂ.ಗಳಲ್ಲಿ
1	2	3	4	5	6=(3/5)
2022-23*	7341.61	7637.83	(296.22)	8440.51	9.05
2024-25**	8079.66	9672.92	(1,593.26)	9775.88	9.89

ಸೂಚನೆ* : ಆ.ವ.–23ರ ಆದಾಯವು ಪರಿಷ್ಕೃತ ಫೈನಾನ್ಸಿಯಲ್‌ಗಳ ಪ್ರಕಾರ ಕೆ.ಇ.ಆರ್.ಸಿ. ಪ್ರಾಥಮಿಕ ಅವಲೋಕನಗಳಿಗೆ ಪ್ರತ್ಯುತ್ತರಗಳಲ್ಲಿ ಸೂಚಿಸಲಾಗಿದೆ. (ಪುಟ ಸಂಖ್ಯೆ : 111)

ಸೂಚನೆ** : ಆ.ವ.–25ರ ಕಂದಾಯ ಕೊರತೆಯು ಆ.ವ.–23ರ ಕಂದಾಯ ಕೊರತೆಯನ್ನು ಒಳಗೊಂಡಿದೆ (ರೂ. 385.44 ಕೋಟಿಗಳು).
ಜಕಾತಿ ಅರ್ಜಿಯಿಂದ ವಸೂಲಾತಿಗಾಗಿ ಪ್ರಸ್ತಾಪಿಸಲಾದ ಒಟ್ಟು ಕೊರತೆ: ರೂ. 1593.26 ಕೋಟಿ ಮತ್ತು ಕಂದಾಯದ ಬೇಡಿಕೆಯನ್ನು ಹೆಚ್ಚುವರಿ ಮಾಹಿತಿಯಲ್ಲಿ ಒದಗಿಸಲಾಗಿದೆ.

1) ರೆವಿನ್ಯೂ ಸ್ವೀಕೃತಿಗಳನ್ನು (ಆದಾಯ) ಪ್ರಸ್ತುತ ಜಕಾತಿಯ ಪ್ರಕಾರ ಅಂದಾಜಿಸಲಾಗಿದೆ ಮತ್ತು ಪ್ರಸ್ತುತ ಜಕಾತಿಯಿಂದ ಆಗುವ ಕೊರತೆಯನ್ನು ತುಂಬಿಕೊಳ್ಳಲು ಸಾಧ್ಯವಿಲ್ಲವಾದುದರಿಂದ ನಿಗದಿತ ಶುಲ್ಕವನ್ನು ಹೆಚ್ಚಿಸಿ ವಿದ್ಯುತ್ ದರವನ್ನು ಕಡಿಮೆ/ಹೆಚ್ಚಳದ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. ಆರ್ಥಿಕ ವರ್ಷ–25ರ ವಾರ್ಷಿಕ ಕಾರ್ಯಕ್ಷಮತೆ ವರದಿಯಲ್ಲಿನ ಕೊರತೆ **ರೂ. 1593.26 ಕೋಟಿ** ಗಳನ್ನು ಎಲ್ಲಾ ಪ್ರವರ್ಗಗಳ ಬಳಕೆದಾರರಿಂದ ತುಂಬಿಕೊಳ್ಳಲು ಗು.ವಿ.ಸ.ಕಂ.ನಿ ಯು ಈ ದರ ಹೆಚ್ಚಳ ಪ್ರಸ್ತಾವನೆಯನ್ನು ಸಲ್ಲಿಸಿದೆ. 2) ವಿದ್ಯುತ್‌ದರ ಹೆಚ್ಚಳದ ಪ್ರಸ್ತಾವನೆ: ವಿವಿಧ ಪ್ರವರ್ಗದ ಗ್ರಾಹಕರಿಗೆ ವಿಧಿಸಲು ಉದ್ದೇಶಿಸಿರುವ ಪ್ರಸ್ತಾಪಿತ ನಿಗದಿತ ಶುಲ್ಕ ಮತ್ತು ವಿದ್ಯುತ್ ಬಳಕೆ ಶುಲ್ಕ ಹೆಚ್ಚಳದ ವಿವರವನ್ನು ಈ ಕೆಳಗಿನ ಅನುಬಂಧದಲ್ಲಿ ತೋರಿಸಲಾಗಿದೆ. 3) ಕವಿನಿ ಆಯೋಗ (ವಿದ್ಯುತ್‌ದರ) ನಿಬಂಧನೆಗಳು 2000ದ ನಿಯಮಾವಳಿ–5ರ ಅನುಸರಣೆಯಾಗಿ, ಮೇಲಿನ ಅರ್ಜಿದಾರರ ಮನವಿಯ ವಿರುದ್ಧ ಆಕ್ಷೇಪಣೆಯನ್ನು ಸಲ್ಲಿಸಲು ಇಚ್ಛಿಸುವ ವ್ಯಕ್ತಿಗಳು ತಮ್ಮ ಆಕ್ಷೇಪಣೆಯನ್ನು 6 (ಆರು) ಪ್ರತಿಗಳಲ್ಲಿ, ಅಫಿಡವಿಟ್‌ನೊಂದಿಗೆ ಈ ಪ್ರಕಟಣೆಯ ದಿನಪತ್ರಿಕೆಯಲ್ಲಿ ಪ್ರಕಟಗೊಂಡ ಮೊದಲ ಪ್ರಕಟಣೆಯ ದಿನಾಂಕದಿಂದ ಮೂವತ್ತು (30) ದಿನದೊಳಗೆ ಸ್ವೀಕರಣಾಧಿಕಾರಿ, ಕಾರ್ಯದರ್ಶಿಯವರ ಕಚೇರಿ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ, #16, ಸಿ–1, ಮಿಲ್ಲರ್ ಟ್ಯಾಂಕ್ ಬೆಡ್ ಏರಿಯ, ವಸಂತನಗರ, ಬೆಂಗಳೂರು–560052 ಇವರಿಗೆ ಸಲ್ಲಿಸತಕ್ಕದ್ದು. ತಮ್ಮ ಆಕ್ಷೇಪಣೆ ಇದ್ದಲ್ಲಿ, ಸಾರ್ವಜನಿಕ ವಿಚಾರಣೆಯಲ್ಲಿ (Public Hearing) ವೈಯಕ್ತಿಕವಾಗಿ ಭಾಗವಹಿಸುವರೇ ಎಂಬುದನ್ನೂ ತಿಳಿಸತಕ್ಕದ್ದು. ಆಕ್ಷೇಪಣೆಗೆ ಉತ್ತರವನ್ನು ಒದಗಿಸುವುದಕ್ಕಾಗಿ ಆಕ್ಷೇಪಣೆಯ ಪ್ರತಿಯನ್ನು ಕಾರ್ಯನಿರ್ವಾಹಕ ಇಂಜಿನೀಯರ್ (ವಿ) (ನಿಯಂತ್ರಣ ವ್ಯವಹಾರ) ನಿಗಮ ಕಛೇರಿ, ಗು.ವಿ.ಸ.ಕಂ.ನಿ, ಕಲಬುರಗಿ–585102 ರವರಿಗೆ ಸಲ್ಲಿಸಬಹುದಾಗಿದೆ. 4) ಆಸಕ್ತ ವ್ಯಕ್ತಿಗಳಿಗೆ ಪರಾಮರ್ಷೆಗಾಗಿ ಅರ್ಜಿದಾರರ ಮನವಿಯ ಪ್ರತಿಗಳು (Tariff Petition Booklet) ಕಾರ್ಯನಿರ್ವಾಹಕ ಇಂಜಿನೀಯರ್ (ವಿ) (ನಿಯಂತ್ರಣ ವ್ಯವಹಾರ) ನಿಗಮ ಕಛೇರಿ, ಗು.ವಿ.ಸ.ಕಂ.ನಿ, ಕಲಬುರಗಿ –585102 ರಲ್ಲಿ ಮತ್ತು ಎಲ್ಲಾ ವೃತ್ತ ಕಛೇರಿಗಳಲ್ಲಿ ಅಧೀಕ್ಷಕ ಇಂಜನಿಯರು (ವಿ) (ಕಾ ಮತ್ತು ಪಾ), ಕಲಬುರಗಿ, ಬೀದರ್, ರಾಯಚೂರ, ಬಳ್ಳಾರಿ, ಕೊಪ್ಪಳದಲ್ಲಿ ದೊರಕುತ್ತವೆ. ಅರ್ಜಿದಾರರ ಮನವಿ ಹಾಗೂ ಸಂಬಂಧಿತ ದಾಖಲೆಗಳ ಪೂರ್ಣ ಪ್ರತಿಯನ್ನು ರೂ. 600/– ಮತ್ತು ಆಯೋಗದ ಅವಲೋಕನಕ್ಕೆ ಗು.ವಿ.ಸ.ಕಂ.ನಿಯು ಒದಗಿಸಿದ ಉತ್ತರ ಇವುಗಳನ್ನು ರೂ. 800/– ಒಟ್ಟು ರೂ. 1400/– ಪಾವತಿಸಿ ಪ್ರತಿಯನ್ನು ಖರೀದಿಸಬಹುದಾಗಿದೆ. 5) ಇ.ಆರ್.ಸಿ., ವಿದ್ಯುತ್ ದರ ಪರಿಷ್ಕರಣೆ ಅರ್ಜಿ, ಈ ಸಂಬಂಧವಾಗಿ ಆಯೋಗದ ಪೂರ್ವಭಾವಿ ಅವಲೋಕನ ಮತ್ತು ಆಯೋಗದ ಅವಲೋಕನಕ್ಕೆ ಗುವಿಸಕಂನಿಯು ಒದಗಿಸಿದ ಉತ್ತರ ಇವುಗಳನ್ನು ಜೆಸ್ಕಾಂ ವೆಬ್‌ಸೈಟ್ (http://gescom.karnataka.gov.in/) ದಿಂದಲೂ ಪಡೆಯಬಹುದಾಗಿದೆ ಅಥವಾ ಕಾರ್ಯನಿರ್ವಾಹಕ ಇಂಜಿನಿಯರ (ವಿ), (ನಿಯಂತ್ರಣ ವ್ಯವಹಾರ) ನಿಗಮ ಕಛೇರಿ, ಗು.ವಿ.ಸ.ಕಂ.ನಿ, ಕಲಬುರಗಿ ರವರ ಕಛೇರಿಯಲ್ಲಿ ಸೂಕ್ತ ಶುಲ್ಕ ನೀಡಿ ಅವುಗಳ ಝೆರಾಕ್ಸ್ ಪ್ರತಿಗಳನ್ನು ಪಡೆದುಕೊಳ್ಳಬಹುದಾಗಿದೆ.

ಅನುಬಂಧ

ಅನುಬಂಧ: ಆ.ವ–24 ಪ್ರಸಕ್ತ ದರ ಮತ್ತು ಆ.ವ–25ರ ಪ್ರಸ್ತಾಪಿತ ದರಗಳ ವಿವರಗಳನ್ನು ತೋರಿಸುವ ಪಟ್ಟಿ

ಗ್ರಾಹಕರ ವರ್ಗೀಕರಣ		ನಿಗದಿತ/ವಿದ್ಯುಚ್ಛಕ್ತಿ ದರ (ರೂ./ಯೂನಿಟ್) ಪ್ರಸ್ತುತ	ಪ್ರಸ್ತಾಪಿತ
ಎಲ್ ಟಿ–1 ಭಾಗ್ಯ ಜ್ಯೋತಿ / ಕುಟೀರ ಜ್ಯೋತಿ ಸ್ಥಾವರಗಳಿಗೆ:			
ವಿದ್ಯುತ್ ಬಳಕೆ ಶುಲ್ಕ	0–40 ಯುನಿಟ್‌ಗಳಿಗೆ	8.75	11.13
	ಮಾಸಿಕ ಕನಿಷ್ಠ ಶುಲ್ಕ	100	100
ಎಲ್ ಟಿ–2(ಎ): ಗೃಹಬಳಕೆ			
ನಿಗದಿತ ಶುಲ್ಕ/ಕಿ.ವ್ಯಾ/ ಮಾಸಿಕ	ಪ್ರತಿ ಕಿ.ವ್ಯಾ.ಗೆ ಪ್ರತಿ ತಿಂಗಳಿಗೆ 50 ಕಿ.ವ್ಯಾನ್ನು ಒಳಗೊಂಡಂತೆ	110	210
	50 ಕಿ.ವ್ಯಾ.ಗೆ ಮೀರಿದ ಪ್ರತಿ ಹೆಚ್ಚುವರಿ ಕಿ.ವ್ಯಾ.ಗೆ	210	310
ವಿದ್ಯುತ್ ಬಳಕೆ ಶುಲ್ಕ/ ಯೂನಿಟ್‌ಗೆ/ತಿಂಗಳಿಗೆ	0–100 ಯೂನಿಟ್ಟುಗಳು	4.75	5.75
	0 ರಿಂದ ಎಲ್ಲಾ ಯೂನಿಟ್ಟುಗಳು (ಒಟ್ಟು ಬಳಕೆಯ 100 ಯೂನಿಟ್ಟುಗಳನ್ನು ಮೀರಿದರೆ)	7.00	8.00
	ಗ್ರಾಮ ಪಂಚಾಯಿತಿಗಳ ಗ್ರಾಹಕರಿಗೆ ಇಂಧನ ಶುಲ್ಕದಲ್ಲಿ ಪ್ರತಿ ಯೂನಿಟ್‌ಗೆ 30 ಪೈಸೆ ರಿಯಾಯಿತಿ		
ಎಲ್ ಟಿ–2 (ಬಿ): ಖಾಸಗಿ ವೃತ್ತಿಪರ/ ವಿದ್ಯಾಸಂಸ್ಥೆಗಳು			
ನಿಗದಿತ ಶುಲ್ಕ/ಕಿ.ವ್ಯಾ/ ಮಾಸಿಕ	ಪ್ರತಿ ಕಿ.ವ್ಯಾ.ಗೆ ಪ್ರತಿ ತಿಂಗಳಿಗೆ 50 ಕಿ.ವ್ಯಾನ್ನು ಒಳಗೊಂಡಂತೆ	180	280
	50 ಕಿ.ವ್ಯಾ.ಗೆ ಮೀರಿದ ಪ್ರತಿ ಹೆಚ್ಚುವರಿ ಕಿ.ವ್ಯಾ.ಗೆ	250	350
ವಿದ್ಯುತ್ ಬಳಕೆ ಶುಲ್ಕ/ ಯೂನಿಟ್‌ಗೆ/ತಿಂಗಳಿಗೆ	ಸಂಪೂರ್ಣ ಬಳಕೆಗಾಗಿ	7.75	8.75
	ಗ್ರಾಮ ಪಂಚಾಯಿತಿಗಳ ಗ್ರಾಹಕರಿಗೆ ಇಂಧನ ಶುಲ್ಕದಲ್ಲಿ ಪ್ರತಿ ಯೂನಿಟ್‌ಗೆ 30 ಪೈಸೆ ರಿಯಾಯಿತಿ		
ಎಲ್ ಟಿ–3(ಎ): ವಾಣಿಜ್ಯ			
ನಿಗದಿತ ಶುಲ್ಕ/ಕಿ.ವ್ಯಾ/ ಮಾಸಿಕ	ಪ್ರತಿ ಕಿ.ವ್ಯಾ.ಗೆ ಪ್ರತಿ ತಿಂಗಳಿಗೆ 50 ಕಿ.ವ್ಯಾನ್ನು ಒಳಗೊಂಡಂತೆ	200	300
	50 ಕಿ.ವ್ಯಾ.ಗೆ ಮೀರಿದ ಪ್ರತಿ ಹೆಚ್ಚುವರಿ ಕಿ.ವ್ಯಾ.ಗೆ	300	400
ವಿದ್ಯುತ್ ಬಳಕೆ ಶುಲ್ಕ/ ಯೂನಿಟ್‌ಗೆ/ತಿಂಗಳಿಗೆ	ಸಂಪೂರ್ಣ ಬಳಕೆಗಾಗಿ	8.50	8.00
	ಗ್ರಾಮ ಪಂಚಾಯಿತಿಗಳ ಗ್ರಾಹಕರಿಗೆ ಇಂಧನ ಶುಲ್ಕದಲ್ಲಿ ಪ್ರತಿ ಯೂನಿಟ್‌ಗೆ 30 ಪೈಸೆ ರಿಯಾಯಿತಿ		
ಎಲ್.ಟಿ.–3(ಬಿ): ಹೋರ್ಡಿಂಗ್ ಮತ್ತು ಜಾಹಿರಾತು ಫಲಕಗಳು			
ನಿಗದಿತ ಶುಲ್ಕ/ಕಿ.ವ್ಯಾ/ ಮಾಸಿಕ	67 ಎಚ್.ಪಿ. ಗಿಂತ ಕಡಿಮೆ	200	300
ವಿದ್ಯುತ್ ಬಳಕೆ ಶುಲ್ಕ/ ಯೂನಿಟ್‌ಗೆ	ಸಂಪೂರ್ಣ ಬಳಕೆಗಾಗಿ	10.50	11.50
ಎಲ್ ಟಿ–4 (ಎ): ಐ.ಪಿ. ಸೆಟ್ಟುಗಳು–10 ಎಚ್.ಪಿ. ಮತ್ತು ಕಡಿಮೆ ಲೋಡ್			
ನಿಗದಿತ ಶುಲ್ಕ/ ಎಚ್.ಪಿ./ಮಾಸಿಕ	10 ಎಚ್.ಪಿ. ಗಿಂತ ಕಡಿಮೆ	–	100
ವಿದ್ಯುತ್ ಬಳಕೆ ಶುಲ್ಕ/ ಯೂನಿಟ್‌ಗೆ	ಸಂಪೂರ್ಣ ಬಳಕೆಗಾಗಿ	7.22	8.22
ಎಲ್ ಟಿ–4 (ಬಿ): ಐ.ಪಿ. ಸೆಟ್ಟುಗಳು–10 ಎಚ್.ಪಿ.ಗಿಂತ ಅಧಿಕ ಲೋಡ್			
ನಿಗದಿತ ಶುಲ್ಕ/ ಎಚ್.ಪಿ./ಮಾಸಿಕ	10 ಎಚ್.ಪಿ. ಗಿಂತ ಅಧಿಕ	135	235
ವಿದ್ಯುತ್ ಬಳಕೆ ಶುಲ್ಕ/ ಯೂನಿಟ್‌ಗೆ	ಸಂಪೂರ್ಣ ಬಳಕೆಗಾಗಿ	4.10	5.10
ಎಲ್ ಟಿ–4 (ಸಿ) : ಖಾಸಗಿ ತೋಟಗಾರಿಕೆ/ನರ್ಸರಿಗಳು			
ನಿಗದಿತ ಶುಲ್ಕ/ ಎಚ್.ಪಿ./ಮಾಸಿಕ	ಪ್ರತಿ ಎಚ್.ಪಿ.ಗೆ	135	235
ವಿದ್ಯುತ್ ಬಳಕೆ ಶುಲ್ಕ/ ಯೂನಿಟ್‌ಗೆ	ಸಂಪೂರ್ಣ ಬಳಕೆಗಾಗಿ	4.25	5.25
ಎಲ್ ಟಿ–5 : ಕೈಗಾರಿಕೆಗಳು			
ನಿಗದಿತ ಶುಲ್ಕ/ ಎಚ್.ಪಿ./ಮಾಸಿಕ	100 ಎಚ್.ಪಿ.ಗಿಂತೆ ಕಡಿಮೆ	140	240
	100 ಎಚ್.ಪಿ ಮತ್ತು ಮೇಲ್ಪಟ್ಟು	250	350
ವಿದ್ಯುತ್ ಬಳಕೆ ಶುಲ್ಕ/ ಯೂನಿಟ್‌ಗೆ	0–500 ಯೂನಿಟ್ಟುಗಳಿಗೆ	6.10	5.60
	500 ಮೇಲ್ಪಟ್ಟ ಯೂನಿಟ್ಟುಗಳಿಗೆ	7.10	6.60
	ಗ್ರಾಮ ಪಂಚಾಯಿತಿಗಳ ಇಂಧನ ಶುಲ್ಕದಲ್ಲಿ ಪ್ರತಿ ಯೂನಿಟ್‌ಗೆ 30 ಪೈಸೆ ರಿಯಾಯಿತಿ		
ಎಲ್ ಟಿ–6(ಎ): ನೀರು ಸರಬರಾಜು			
ನಿಗದಿತ ಶುಲ್ಕ/ ಎಚ್.ಪಿ./ಮಾಸಿಕ	ಪ್ರತಿ ಎಚ್.ಪಿ.ಗೆ 67 ಎಚ್.ಪಿ ಒಳಗೊಂಡಂತೆ	175	275
	ಪ್ರತಿ ಎಚ್.ಪಿ.ಗೆ 67 ಎಚ್.ಪಿ ಗಿಂತ ಮೇಲ್ಪಟ್ಟು	275	375
ವಿದ್ಯುತ್ ಬಳಕೆ ಶುಲ್ಕ/ ಯೂನಿಟ್‌ಗೆ	ಸಂಪೂರ್ಣ ಬಳಕೆಗಾಗಿ	5.50	6.50
ಎಲ್ ಟಿ–6(ಬಿ): ಸಾರ್ವಜನಿಕರ ಬೀದಿ ದೀಪ			
ನಿಗದಿತ ಶುಲ್ಕ/ ಕಿ.ವ್ಯಾ/ಮಾಸಿಕ	ಪ್ರತಿ ಕಿ.ಲೋ ವ್ಯಾಟ್ ಗೆ	175	275
ವಿದ್ಯುತ್ ಬಳಕೆ ಶುಲ್ಕ/ ಯೂನಿಟ್‌ಗೆ/ತಿಂಗಳಿಗೆ	ಸಂಪೂರ್ಣ ಬಳಕೆಗಾಗಿ	7.00	8.00
ಎಲ್.ಟಿ–6 (ಸಿ): ವಿದ್ಯುತ್ ವಾಹನಗಳ ಚಾರ್ಜಿಂಗ್ ಸ್ಟೇಷನ್‌ಗಳು			
ನಿಗದಿತ ಶುಲ್ಕ/ಕಿ.ವ್ಯಾ/ ಮಾಸಿಕ (ಎಲ್‌ಟಿ)	ಪ್ರತಿ ಕಿ.ವ್ಯಾ.ಗೆ ಪ್ರತಿ ತಿಂಗಳಿಗೆ 50 ಕಿ.ವ್ಯಾನ್ನು ಒಳಗೊಂಡಂತೆ	70	70
	50 ಕಿ.ವ್ಯಾ.ಗೆ ಮೀರಿದ ಪ್ರತಿ ಹೆಚ್ಚುವರಿ ಕಿ.ವ್ಯಾ.ಗೆ	170	170
ನಿಗದಿತ ಶುಲ್ಕ/ ಕೆ.ವಿ.ಎ.ನ ಬಿಲ್ಲಿಂಗ್ ಡಿಮ್ಯಾಂಡ್ /ಮಾಸಿಕ	ಪ್ರತಿ ಕೆ.ವಿ.ಎ ಗೆ	200	200
ಬಳಕೆ ಶುಲ್ಕ/ತಿಂಗಳಿಗೆ/ (ಎಲ್‌ಟಿ/ಎಚ್‌ಟಿ)	ಸಂಪೂರ್ಣ ಬಳಕೆಗಾಗಿ	4.50	4.50
ಎಲ್ ಟಿ–7: ತಾತ್ಕಾಲಿಕ ವಿದ್ಯುತ್ ಸರಬರಾಜು			
ನಿಗದಿತ ಶುಲ್ಕ/ಕಿ.ವ್ಯಾ/ ಮಾಸಿಕ	ಪ್ರತಿ ಎಚ್.ಪಿ.ಗೆ 67 ಎಚ್.ಪಿ ಗಿಂತ ಕಡಿಮೆ	200	300
ವಿದ್ಯುತ್ ಬಳಕೆ ಶುಲ್ಕ/ ಯೂನಿಟ್‌ಗೆ/ತಿಂಗಳಿಗೆ	ಸಂಪೂರ್ಣ ಬಳಕೆಗಾಗಿ	11.50	12.50
ಎಚ್ ಟಿ–1: ನೀರು ಸರಬರಾಜು, ಚರಂಡಿ ನೀರು ಶುದ್ಧಿಕರಣ/ ಪಂಪಿಂಗ್ ಸ್ಥಾವರಗಳು			
ನಿಗದಿತ ಶುಲ್ಕ/ಕೆ.ವಿ.ಎ.ನ ಬಿಲ್ಲಿಂಗ್ ಡಿಮ್ಯಾಂಡ್ / ಮಾಸಿಕ	ಪ್ರತಿ ಕೆ.ವಿ.ಎ. ಗೆ	350	450
ವಿದ್ಯುತ್ ಬಳಕೆ ಶುಲ್ಕ/ ಯೂನಿಟ್‌ಗೆ/ತಿಂಗಳಿಗೆ	ಸಂಪೂರ್ಣ ಬಳಕೆಗಾಗಿ	6.00	7.00
ಎಚ್ ಟಿ–2 (ಎ): ಕೈಗಾರಿಕೆಗಳು			
ನಿಗದಿತ ಶುಲ್ಕ/ಕೆ.ವಿ.ಎ.ನ ಬಿಲ್ಲಿಂಗ್ ಡಿಮ್ಯಾಂಡ್/ ಮಾಸಿಕ	ಪ್ರತಿ ಕೆ.ವಿ.ಎ. ಗೆ	350	450
ವಿದ್ಯುತ್ ಬಳಕೆ ಶುಲ್ಕ/ ಯೂನಿಟ್‌ಗೆ/ತಿಂಗಳಿಗೆ	ಸಂಪೂರ್ಣ ಬಳಕೆಗಾಗಿ	7.40	6.90
ಎಚ್ ಟಿ–2 (ಎ): ರೈಲ್ವೆ ಟ್ರ್ಯಾಕ್ಷನ್ / ಮಲೀನ ನೀರು ಶುದ್ಧೀಕರಣ			
ನಿಗದಿತ ಶುಲ್ಕ/ಕೆ.ವಿ.ಎ.ನ ಬಿಲ್ಲಿಂಗ್ ಡಿಮ್ಯಾಂಡ್/ ಮಾಸಿಕ	ಪ್ರತಿ ಕೆ.ವಿ.ಎ. ಗೆ	350	450
ವಿದ್ಯುತ್ ಬಳಕೆ ಶುಲ್ಕ/ ಯೂನಿಟ್‌ಗೆ/ತಿಂಗಳಿಗೆ	ಸಂಪೂರ್ಣ ಬಳಕೆಗಾಗಿ	7.00	6.90
ಎಚ್ ಟಿ–2 (ಬಿ): ವಾಣಿಜ್ಯ			
ನಿಗದಿತ ಶುಲ್ಕ/ಕೆ.ವಿ.ಎ.ನ ಬಿಲ್ಲಿಂಗ್ ಡಿಮ್ಯಾಂಡ್/ ಮಾಸಿಕ	ಪ್ರತಿ ಕೆ.ವಿ.ಎ. ಗೆ	375	475
ವಿದ್ಯುತ್ ಬಳಕೆ ಶುಲ್ಕ/ ಯೂನಿಟ್‌ಗೆ/ತಿಂಗಳಿಗೆ	ಸಂಪೂರ್ಣ ಬಳಕೆಗಾಗಿ	9.25	8.75
ಎಚ್ ಟಿ–2 (ಸಿ)(i) : ಸರ್ಕಾರಿ/ಅನುದಾನಿತ/ದತ್ತಿ ವಿದ್ಯಾ ಸಂಸ್ಥೆಗಳು/ಆಸ್ಪತ್ರೆಗಳು			
ನಿಗದಿತ ಶುಲ್ಕ/ಕೆ.ವಿ.ಎ.ನ ಬಿಲ್ಲಿಂಗ್ ಡಿಮ್ಯಾಂಡ್/ ಮಾಸಿಕ	ಪ್ರತಿ ಕೆ.ವಿ.ಎ. ಗೆ	300	400
ವಿದ್ಯುತ್ ಬಳಕೆ ಶುಲ್ಕ/ ಯೂನಿಟ್‌ಗೆ/ತಿಂಗಳಿಗೆ	ಸಂಪೂರ್ಣ ಬಳಕೆಗಾಗಿ	7.50	7.00
ಎಚ್ ಟಿ–2(ಸಿ)(ii): ಎಚ್ ಟಿ–2(ಸಿ)(i)ಗೆ ಒಳಪಡದ ವಿದ್ಯಾ ಸಂಸ್ಥೆಗಳು/ಆಸ್ಪತ್ರೆಗಳು			
ನಿಗದಿತ ಶುಲ್ಕ/ಕೆ.ವಿ.ಎ.ನ ಬಿಲ್ಲಿಂಗ್ ಡಿಮ್ಯಾಂಡ್/ಮಾಸಿಕ	ಪ್ರತಿ ಕೆ.ವಿ.ಎ. ಗೆ	350	450
ವಿದ್ಯುತ್ ಬಳಕೆ ಶುಲ್ಕ/ ಯೂನಿಟ್‌ಗೆ/ತಿಂಗಳಿಗೆ	ಸಂಪೂರ್ಣ ಬಳಕೆಗಾಗಿ	8.50	8.00
ಎಚ್ ಟಿ–3: ಏತ ನೀರಾವರಿ ಯೋಜನೆಗಳು			
ನಿಗದಿತ ಶುಲ್ಕ/ಎಚ್.ಪಿ/ ಮಾಸಿಕ	ಪ್ರತಿ ಎಚ್.ಪಿ ಗೆ	150	250
ವಿದ್ಯುತ್ ಬಳಕೆ ಶುಲ್ಕ/ ಯೂನಿಟ್‌ಗೆ/ತಿಂಗಳಿಗೆ	ಸಂಪೂರ್ಣ ಬಳಕೆಗಾಗಿ	3.50	4.50
ಎಚ್ ಟಿ–4 : ವಸತಿ ಸಮುಚ್ಛಯಗಳು/ ಕಾಲೋನಿಗಳು			
ನಿಗದಿತ ಶುಲ್ಕ/ಎಚ್.ಪಿ/ ಮಾಸಿಕ	ಪ್ರತಿ ಎಚ್.ಪಿ ಗೆ	300	400
ವಿದ್ಯುತ್ ಬಳಕೆ ಶುಲ್ಕ/ ಯೂನಿಟ್‌ಗೆ/ತಿಂಗಳಿಗೆ	ಸಂಪೂರ್ಣ ಬಳಕೆಗಾಗಿ	7.25	8.25
ಎಚ್.ಟಿ–5 : ಎಚ್.ಟಿ. ತಾತ್ಕಾಲಿಕ ವಿದ್ಯುತ್ ಸರಬರಾಜು 67 ಎಚ್.ಪಿ. & ಅಧಿಕ ಲೊಡ್			
ನಿಗದಿತ ಶುಲ್ಕ/ಎಚ್.ಪಿ/ ಮಾಸಿಕ	ಪ್ರತಿ ಎಚ್.ಪಿ ಗೆ ಸಂಪೂರ್ಣ ಒಪ್ಪಿದ ಬೇಡಿಕೆಗೆ	400	500
ವಿದ್ಯುತ್ ಬಳಕೆ ಶುಲ್ಕ/ ಯೂನಿಟ್‌ಗೆ/ತಿಂಗಳಿಗೆ	ಸಂಪೂರ್ಣ ಬಳಕೆಗಾಗಿ	11.50	12.50
ಎಚ್.ಟಿ–6 : ಸರಕಾರಿ ಏತ ನೀರಾವರಿ ಯೋಜನೆಗಳು			
ನಿಗದಿತ ಶುಲ್ಕ/ಎಚ್.ಪಿ/ ಮಾಸಿಕ	ಪ್ರತಿ ಎಚ್.ಪಿ ಗೆ ಮಂಜೂರಾದ ಲೋಡ್	150	250
ವಿದ್ಯುತ್ ಬಳಕೆ ಶುಲ್ಕ/ ಯೂನಿಟ್‌ಗೆ/ತಿಂಗಳಿಗೆ	ಸಂಪೂರ್ಣ ಬಳಕೆಗಾಗಿ	5.50	6.50

ಗ್ರಾಹಕರು (ಎಲ್.ಟಿ.–5, ಎಲ್.ಟಿ.–6(ಸಿ) ಹೆಚ್.ಟಿ, ಹೆಚ್‌ಟಿ–1, ಹೆಚ್‌ಟಿ–2 (ರೈಲ್ವೆ ಟ್ರೈಕ್ಸನ್ ಹೊರತುಪಡಿಸಿ) ಕೋರಿಕೆಯ ಮೇರೆಗೆ ಸಮಯಾಧಾರಿತ ವಿದ್ಯುತ್ ದರ (ಟಿ.ಒ.ಡಿ) ಸೌಲಭ್ಯ ಪಡೆಯಬಹುದು. ಗ್ರಾಹಕರು (ಎಲ್.ಟಿ.–3 ಮತ್ತು ಎಲ್.ಟಿ.–5) ಬೇಡಿಕೆ ಆಧಾರಿತ ವಿದ್ಯುಚ್ಛಕ್ತಿ ದರ ಐಚ್ಛಿಕದ (ಡಿಬಿಟಿ) ಸೌಲಭ್ಯ ಪಡೆಯಬಹುದು. ಸೂಚನೆ: ಮೇಲಿನ ಶುಲ್ಕಗಳೊಂದಿಗೆ ಸರ್ಕಾರ ವಿಧಿಸಿದ/ಸಮಯ ಸಮಯಕ್ಕೆ ವಿಧಿಸಬಹುದಾದ ವಿದ್ಯುತ್ ತೆರಿಗೆಯನ್ನು ಬಿಲ್ ಜೊತೆಗೆ ಪಾವತಿಸಬೇಕಾಗುತ್ತದೆ. ಹೆಚ್ಚಿನ ಪ್ರಸ್ತಾಪಿತ ವಿದ್ಯುತ್ ದರದ ಬಗ್ಗೆ ಜೆಸ್ಕಾಂ ವೆಬ್‌ಸೈಟ್ https://gescom.karnataka.gov.in/) ರಲ್ಲಿ ಮಾಹಿತಿಯನ್ನು ಪಡೆಯಬಹುದು.

ಸಹಿ/– ಕಾರ್ಯನಿರ್ವಾಹಕ ಇಂಜಿನಿಯರ (ವಿದ್ಯುತ್)
ನಿಯಂತ್ರಣ ವ್ಯವಹಾರ, ನಿಗಮ ಕಛೇರಿ, ಗು.ವಿ.ಸ.ಕಂ.ನಿ. ಕಲಬುರಗಿ–585102

ವಾ.ಸಾ.ಸಂ.ಇ/ಕಲಬುರಗಿ/672/ಕೆ.ಎಸ್.ಎಂ.ಸಿ.&ಎ/2023–24

ಯುವ ರೈತರಿಗೆ ಬೇಕು ಸಂಗಾತಿ

ಎರಡನೇ ಮುಖಪುಟದಿಂದ...

15 ವರ್ಷಗಳ ಹಿಂದೆ ಪರಿಸ್ಥಿತಿ ಹೀಗಿರಲಿಲ್ಲ. ಹೆಣ್ಣುಮಕ್ಕಳಿಗೆ ಗಂಡು ಹುಡುಕುವುದೇ ಪೋಷಕರಿಗೆ ಕಷ್ಟವಾಗಿತ್ತು. ಕೇಳಿದಷ್ಟು ವರದಕ್ಷಿಣೆ ನೀಡಲು ಸಿದ್ಧವಾಗಿದ್ದರೂ ವರ ಸಿಗುತ್ತಿರಲಿಲ್ಲ. ಈಗ ವರನ ಕಡೆಯವರು 'ವಧು ದಕ್ಷಿಣೆ ಕೊಡುತ್ತೇವೆ' ಎಂದರೂ ಹೆಣ್ಣು ಸಿಗುತ್ತಿಲ್ಲ!

ಕಾರಣಗಳೇನು?: 'ಶೈಕ್ಷಣಿಕ ಸ್ಥಿತಿಯಲ್ಲಾದ ಬದಲಾವಣೆ, ಓದುವ ಹಂತದಲ್ಲೇ ಹೆಣ್ಣು ಮಕ್ಕಳಿಗೆ ಮದುವೆ ಮಾಡುತ್ತಿದ್ದ ಪ್ರವೃತ್ತಿ ಕಡಿಮೆಯಾಗಿರುವುದು, ಹೆಣ್ಣುಮಕ್ಕಳು ಮತ್ತು ಪೋಷಕರ ನಿರೀಕ್ಷೆ ಹೆಚ್ಚಾಗಿರುವುದು, ಸ್ವತಂತ್ರವಾಗಿ ಬದುಕುವ ಹೆಣ್ಣುಮಕ್ಕಳ ಇರಾದೆ, ಕೆಲವು ಸಮುದಾಯಗಳಲ್ಲಿ ಲಿಂಗಾನುಪಾತದಲ್ಲಿನ ಅಸಮಾನತೆ, ಕೃಷಿಯಲ್ಲಿ ಆದಾಯವಿಲ್ಲ ಮತ್ತು ಕೃಷಿ ಕೆಲಸ ಕೀಳೆಂಬ ಭಾವನೆ, ಹಳ್ಳಿಗಳಲ್ಲಿ ಸೌಲಭ್ಯಗಳ ಕೊರತೆ, ಕೂಡು ಕುಟುಂಬದ ಬಗ್ಗೆ ನಿರ್ಲಕ್ಷ್ಯ ಧೋರಣೆ, ನಗರ ಪ್ರದೇಶಗಳಲ್ಲಿ ಬದುಕು ಸುಲಭ ಎಂಬ ಗ್ರಹಿಕೆ, ಅಂತರ್ಜಾತಿ ವಿವಾಹದ ಪರಿಕಲ್ಪನೆಗೆ ಸಮಾಜ ಸಂಪೂರ್ಣವಾಗಿ ತೆರೆದುಕೊಳ್ಳದಿರುವುದು ಪ್ರಮುಖ ಕಾರಣಗಳು' ಎನ್ನುತ್ತಾರೆ ಸಮಾಜ ಶಾಸ್ತ್ರಜ್ಞರು.

ಈ ವಿಷಯದಲ್ಲಿ ಯುವಕರು, ಅವರ ಪೋಷಕರ ಅಭಿಪ್ರಾಯಗಳು ಹಾಗೂ ಹೆಣ್ಣು ಹೆತ್ತವರ ಅಭಿಪ್ರಾಯಗಳೂ ಸಂಪೂರ್ಣ ಭಿನ್ನ.

'ನಾನೊಬ್ಬ ಯುವ ರೈತ. ಆಸ್ತಿ ಇದೆ. ಆದಾಯವಿದೆ. ಮೂರ್ನಾಲ್ಕು ವರ್ಷಗಳಿಂದ ಹೆಣ್ಣು ಹುಡುಕುತ್ತಿದ್ದೇನೆ. ರೈತನೆಂಬ ಒಂದೇ ಕಾರಣಕ್ಕೆ ಹೆಣ್ಣು ಕೊಡಲು ಯಾರೂ ಮುಂದೆ ಬಂದಿಲ್ಲ. ಸರ್ಕಾರಿ ನೌಕರನೇ ಬೇಕೆನ್ನುತ್ತಾರೆ. ದೇಶಕ್ಕೆ ಅನ್ನ ಹಾಕುವ ಯುವ ರೈತರನ್ನು ಅಸಡ್ಡೆಯಿಂದ ನೋಡುತ್ತಾರೆ...' ಎಂಬುದು ಸಂತೇಮರಹಳ್ಳಿಯ ಯುವಕ ನಾಗೇಂದ್ರ ಅವರ ನೋವಿನ ನುಡಿ.

'ಉತ್ತಮ ಭೂಮಿ ಹೊಂದಿದ ಕೃಷಿಕರು ಸಾಫ್ಟ್‌ವೇರ್ ಎಂಜಿನಿಯರ್‌ಗಿಂತಲೂ ಹೆಚ್ಚು ಆದಾಯ ಗಳಿಸುತ್ತಿದ್ದಾರೆ. ಆದರೆ ಅವರ ಜೀವನಶೈಲಿ ಈಗಿನ ತಲೆಮಾರಿನ ಯುವತಿಯರಿಗೆ ಹೊಂದಿಕೆಯಾಗುತ್ತಿಲ್ಲ' ಎಂಬುದು ರೈತ ಸಂಘ ಹಸಿರು ಸೇನೆಯ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ರಾಘವೇಂದ್ರ ನಾಯ್ಕ ಅವರ ಅಭಿಪ್ರಾಯ.

ಬಯಸುವುದು ತಪ್ಪೇ?: 'ಸರ್ಕಾರಿ ನೌಕರರಿಗೆ ಹೆಣ್ಣು ಮಕ್ಕಳನ್ನು ಕೊಟ್ಟು ಮದುವೆ ಮಾಡಬೇಕು ಎಂಬುದು ನಮ್ಮಾಸೆ. ರೈತ ಕುಟುಂಬಗಳ ಕಷ್ಟ ನೋಡಿದ್ದೇವೆ. ಈಗ ರೈತರು ಹೇಗಿರುತ್ತಾರೆ? ಸರ್ಕಾರಿ ನೌಕರಿ ಅಥವಾ ಇನ್ನಿತರ ಉದ್ಯೋಗಸ್ಥರು ಹೇಗಿರುತ್ತಾರೆಂಬುದು ಎಲ್ಲರಿಗೂ ಗೊತ್ತು. ನೌಕರಿಯಲ್ಲಿರುವವರಿಗೆ ಪ್ರತಿ ತಿಂಗಳು ಖಚಿತ ಆದಾಯವಿರುತ್ತದೆ. ಆದರೆ, ರೈತರದ್ದು ಹೇಳಲಾಗದು. ಬೆಳೆ ನಷ್ಟವಾದರೆ ತುಂಬಿಕೊಡುವವರು ಯಾರು? ನಮ್ಮ ಹೆಣ್ಣುಮಕ್ಕಳು ಮದುವೆಯಾದ ನಂತರ ಕಷ್ಟಪಡಬಾರದು ಎಂದು ಬಯಸುವುದು ತಪ್ಪೇ' ಎಂದು ಪ್ರಶ್ನಿಸುತ್ತಾರೆ ಕೊಳ್ಳೇಗಾಲದ ಸತ್ತೇಗಾಲ ಗ್ರಾಮದ ರಾಜಮ್ಮ.

ವಿಚಿತ್ರ ಎಂದರೆ, 'ಕೃಷಿ ಮಾಡುತ್ತಿರುವ ಮಗನಿಗೆ ವಧು ಸಿಗುತ್ತಿಲ್ಲ' ಎಂದು ದುಃಖಿಸುವ ಪೋಷಕರೇ, ತಮ್ಮ ಮಗಳಿಗೆ ಮಾತ್ರ 'ನಗರದಲ್ಲಿರುವ, ಕೈತುಂಬಾ ಸಂಬಳ ಸಿಗುವ ಅಳಿಯನೇ ಬೇಕು' ಎಂದೇ ಬಯಸುತ್ತಾರೆ!

'ನನ್ನ ಮಗಳನ್ನು ಯುವ ರೈತನಿಗೆ ಕೊಟ್ಟಿದ್ದೇನೆ. ಹೆಣ್ಣು ಹೆತ್ತವರು ಆದಾಯವನ್ನಷ್ಟೇ ನೋಡದೆ, ಸಮಗ್ರ ದೃಷ್ಟಿಕೋನದಿಂದ ಕಾಣಬೇಕು. ಹುಡುಗ ನಗರದಲ್ಲಿ ಕೆಲಸದಲ್ಲಿದ್ದಾನೆ ಎಂದುಕೊಂಡು ಹೆಣ್ಣು ಕೊಟ್ಟು ಸಮಸ್ಯೆಗೆ ಸಿಲುಕಿದ ಹಲವು ಪೋಷಕರಿದ್ದಾರೆ. ಘನತೆಯುತ ಜೀವನಕ್ಕೆ ಒಂದು ಎಕರೆ ಕೃಷಿ ಭೂಮಿ ಇದ್ದರೆ ಸಾಕು.



ಮಂಡ್ಯದ ಅಖಿಲ ಕರ್ನಾಟಕ ಬ್ರಹ್ಮಾಚಾರಿಗಳ ಸಂಘ ಹೆಣ್ಣು ಸಿಗಲೆಂದು ದೇವರಲ್ಲಿ ಬೇಡಿ ಚಾಮರಾಜನಗರದ ಮಹದೇಶ್ವರ ಬೆಟ್ಟಕ್ಕೆ ಆಯೋಜಿಸಿದ್ದ ಪಾದಯಾತ್ರೆಯಲ್ಲಿ ಭಾಗವಹಿಸಿದ್ದ ಯುವಕರು

> **ಸಮಾಜದ ನಿರೀಕ್ಷೆಗಳು ಬದಲಾಗಿರುವುದರಿಂದ ರೈತರ ಮಕ್ಕಳಿಗೆ ಹೆಣ್ಣು ಕೊಡಲು ಯಾರೂ ಮುಂದೆ ಬರುವುದಿಲ್ಲ. ಇದರಿಂದ ಹತಾಶೆ, ನಿರಾಸೆ ಮೂಡಿ, ಆತ್ಮಹತ್ಯೆಯ ದಾರಿ ತೆರೆದುಕೊಳ್ಳುತ್ತದೆ. ಕೃಷಿಯಲ್ಲಿ ಲಾಭ ತರುವ ಪ್ರಯೋಗ ಮಾಡಬೇಕು.**
> **ಡಾ.ಸಿ.ಆರ್. ಚಂದ್ರಶೇಖರ**
> ಮನೋವೈದ್ಯ

> **ವಧು ಸಿಗದಿರುವುದನ್ನು ಸಮುದಾಯದ ಮಟ್ಟದಲ್ಲೇ ಪರಿಹರಿಸಬೇಕು. ಅದಕ್ಕಾಗಿಯೇ 'ಮಾಂಗಲ್ಯ ತಂತು' ಎಂಬ ಕಾರ್ಯಕ್ರಮ ರೂಪಿಸಿದ್ದೇವೆ. ದಾಂಪತ್ಯ ಸುರಕ್ಷೆ ಕುರಿತು ಅವಿವಾಹಿತರಿಗೆ ಮತ್ತು ನವಜೋಡಿಗಳಿಗೆ ತರಬೇತಿ ನೀಡುತ್ತಿದ್ದೇವೆ.**
> **ಎಂ.ಮೋಹನ ಹೆಗಡೆ**
> ಹವ್ಯಕ ಮಹಾಮಂಡಲ ಅಧ್ಯಕ್ಷ, ರಾಮಚಂದ್ರಾಪುರ ಮಠ

ಆದರೆ, ವ್ಯವಸ್ಥಿತವಾಗಿ ಕೃಷಿ ಮಾಡಬೇಕು. ಹಳ್ಳಿಯಲ್ಲಿ ಈಗ ಸೌಲಭ್ಯಗಳಿವೆ. ಓದಿದವರೂ ಕೆಲಸ ಬಿಟ್ಟು ಕೃಷಿಗೆ ಮರಳುತ್ತಿದ್ದಾರೆ. ಗ್ರಾಮೀಣ ಭಾಗದಲ್ಲಿ ಮಾಲಿನ್ಯ ಇಲ್ಲ. ಹೀಗಾಗಿ ಆರೋಗ್ಯ ಚೆನ್ನಾಗಿರುತ್ತದೆ. ನಗರ ಪ್ರದೇಶಗಳಲ್ಲಿ 40 ವರ್ಷಕ್ಕೆ ಕಾಯಿಲೆ ಬರುತ್ತದೆ. ರೋಗ ಬಂದ ಬಳಿಕ ಎಷ್ಟು ಆದಾಯ ಇದ್ದರೆ ಏನು ಪ್ರಯೋಜನ? ಇದೆಲ್ಲವನ್ನೂ ಪೋಷಕರು, ಹೆಣ್ಣುಮಕ್ಕಳು ಯೋಚನೆ ಮಾಡಬೇಕು' ಎಂದು ಸಲಹೆ ನೀಡುತ್ತಾರೆ ಚಾಮರಾಜನಗರ ಜಿಲ್ಲೆಯ ರೈತ ಮುಖಂಡ ಹೊನ್ನೂರು ಪ್ರಕಾಶ್.

ಎಲ್ಲೆಲ್ಲೂ ಒಂದೇ ಸಮಸ್ಯೆ

ಹಳ್ಳಿಯ ಹುಡುಗರಿಗೆ ಹೆಣ್ಣು ಸಿಗದಿರುವ ಸಮಸ್ಯೆ ಒಂದೆರಡು ಜಿಲ್ಲೆಗಳಿಗೆ ಅಥವಾ ಒಂದೆರಡು ಜಾತಿಗಳಿಗೆ ಸೀಮಿತವಾಗಿಲ್ಲ. ಎಲ್ಲ ಜಿಲ್ಲೆಗಳಲ್ಲಿ, ಎಲ್ಲ ಸಮುದಾಯಗಳಲ್ಲಿದೆ. ಕೆಲವು ಕಡೆಗಳಲ್ಲಿ ಕಡಿಮೆ ಇರಬಹುದಷ್ಟೇ. ಕರಾವಳಿ, ಮಲೆನಾಡು ಭಾಗದ ಹವ್ಯಕರು ಸೇರಿದಂತೆ ಇತರ ಬ್ರಾಹ್ಮಣ ಸಮುದಾಯಗಳಲ್ಲಿ ಇದು ತೀವ್ರವಾಗಿದೆ. ಇತರೆ ಪ್ರಬಲ ಜಾತಿಗಳಲ್ಲೂ ಸಮಸ್ಯೆ ಕಡಿಮೆ ಏನಲ್ಲ. ಮಂಡ್ಯ, ಮೈಸೂರು ಭಾಗಗಳಲ್ಲೂ ಪರಿಸ್ಥಿತಿ ಗಂಭೀರವಾಗಿದೆ.

ಕೊಡಗು ಜಿಲ್ಲೆಯ ಪರಿಸ್ಥಿತಿಯೂ ಭಿನ್ನವಾಗಿಲ್ಲ. ರೈತರ ಮಕ್ಕಳಿರಲಿ, ಕಾಫಿ ತೋಟಗಳ ಮಾಲೀಕರ ಮಕ್ಕಳನ್ನು ಮದುವೆಯಾಗಲು ಹೆಚ್ಚಿನ ಹೆಣ್ಣುಮಕ್ಕಳು ಬಯಸುತ್ತಿಲ್ಲ. ಉತ್ತರ ಕರ್ನಾಟಕ, ಕಲ್ಯಾಣ ಕರ್ನಾಟಕದ ಜಿಲ್ಲೆಗಳಲ್ಲೂ ಹಳ್ಳಿಗಳಲ್ಲಿ ಇರುವ ವರರಿಗೆ ವಧುಗಳನ್ನು ಹುಡುಕಲು ಪೋಷಕರು ಪ್ರಯಾಸ ಪಡಬೇಕು.

ಕಳೆದ ವಿಧಾನಸಭೆ ಚುನಾವಣೆ ವೇಳೆ ಬೆಳಗಾವಿ ಜಿಲ್ಲೆಯ ಮೂರು ಕ್ಷೇತ್ರಗಳಲ್ಲಿ ಪಕ್ಷೇತರರಾಗಿ ಸ್ಪರ್ಧಿಸಿದ್ದ ಇಬ್ಬರು ಸಹೋದರರು 'ಮದುವೆ ಭಾಗ್ಯ' ಯೋಜನೆ ಜಾರಿಗೆ ತರುತ್ತೇವೆ ಎಂದು ಪ್ರಚಾರ ನಡೆಸಿದ್ದರು! ಉತ್ತರ ಕರ್ನಾಟಕದ ಗ್ರಾಮೀಣ ಪ್ರದೇಶದ ರೈತರಿಗೆ 'ಮದುವೆ' ವಿಚಾರ ಕಗ್ಗಂಟಾದ ಸಮಸ್ಯೆ ಎಂಬುದನ್ನು ಆ ಪ್ರಣಾಳಿಕೆ ಸಾರಿ ಹೇಳಿತ್ತು. ಬೆಳಗಾವಿ, ಬಾಗಲಕೋಟೆ, ವಿಜಯಪುರ ಸೇರಿ ಹಲವು ಜಿಲ್ಲೆಗಳಲ್ಲಿ ನೂರಾರು ಎಕರೆ ಕೃಷಿ ಭೂಮಿಯ ಒಡೆಯರಾಗಿದ್ದರೂ 'ರೈತ' ಎಂಬ ಕಾರಣಕ್ಕೆ ವಧು ಸಿಗುತ್ತಿಲ್ಲ.

ವಲಸೆ, ಅನಾರೋಗ್ಯ: 'ನಗರ, ಪಟ್ಟಣಗಳಲ್ಲಿದ್ದರೆ ಮಾತ್ರ ಹೆಣ್ಣು ಸಿಗುತ್ತದೆ' ಎಂಬ ಸನ್ನಿವೇಶವಿರುವುದರಿಂದ ಮನೆ ವ್ಯವಹಾರದಲ್ಲಿ ತೊಡಗಿರುವ ಯುವಕರು ಊರಲ್ಲಿ ಪೋಷಕರನ್ನು ಬಿಟ್ಟು ನಗರಗಳತ್ತ ಹೋಗುತ್ತಿದ್ದಾರೆ. ಕಡಿಮೆ ಸಂಬಳದ ಕೆಲಸಕ್ಕೆ ಸೇರುತ್ತಿದ್ದಾರೆ.

'ಹಿಂದಿನ ಕಾಲದಲ್ಲಿ, ಗಂಡಿನ ಮನೆಯ ತಿಪ್ಪೆಮೆದೆಯಲ್ಲಿನ ಹುಲ್ಲಿನ ರಾಶಿ ನೋಡಿ, ಅದೇ ಸಂಪತ್ತೆಂದು ಭಾವಿಸಿ ಹೆಣ್ಣು ಕೊಡುತ್ತಿದ್ದರು. ಈಗ ಹತ್ತಾರು ಎಕರೆ ಒಣಭೂಮಿ ಹೊಂದಿರುವ ಭಾಗಗಳ ಕುಟುಂಬಗಳಲ್ಲಿನ ಮಕ್ಕಳು ಹೊರ ಭಾಗಕ್ಕೆ ಉದ್ಯೋಗಕ್ಕೆ ಹೋಗುತ್ತಿದ್ದು, ಹಳ್ಳಿಗಳು ಹಿರಿಯರ ನಿರಾಶ್ರಿತ ಕೇಂದ್ರದಂತೆ, ಸ್ಮಶಾನದಂತೆ ಭಾಸವಾಗುತ್ತಿವೆ' ಎಂದು ಮಂಡ್ಯದ ರೈತ ಮುಖಂಡ ಕೆ.ಬೋರಯ್ಯ ವಿಷಾದಿಸುತ್ತಾರೆ.

ಪ್ರತಿಷ್ಠೆಯ ಸಂಗತಿ: 'ರೈತರನ್ನು, ಅವರ ಮಕ್ಕಳನ್ನು ಅನುತ್ಪಾದಕ ವರ್ಗದವರಂತೆ ಕಾಣುತ್ತಿರುವುದರಿಂದ ರೈತರ ಮಕ್ಕಳಿಗೆ ಹುಡುಗಿ ಕೊಡಲು ಸಮಾಜ ಹಿಂದೇಟು ಹಾಕುತ್ತಿದೆ. ಸಾಮಾಜಿಕ, ಆರ್ಥಿಕ ಬಿಕ್ಕಟ್ಟುಗಳಿಂದ ತಪ್ಪಿಸಿಕೊಳ್ಳಬೇಕೆಂದರೆ ಸುಸ್ಥಿರ ಕೃಷಿ ಕಡೆ ಮುಖ ಮಾಡಬೇಕು' ಎಂದು ಸಲಹೆ ನೀಡುತ್ತಾರೆ ಗುಲಬರ್ಗ ವಿಶ್ವವಿದ್ಯಾಲಯದ ಸಮಾಜ ವಿಜ್ಞಾನ ನಿಕಾಯದ ಡೀನ್ ಪ್ರೊ.ಜಿ.ಶ್ರೀರಾಮುಲು.

ಬೇರೆ ಸಮುದಾಯದ ಹೆಣ್ಣು

ಇದಕ್ಕೆ ಪರಿಹಾರ ಕಂಡುಕೊಳ್ಳುವ ಪ್ರಯತ್ನಗಳು ವಿವಿಧ ಸಮುದಾಯಗಳಲ್ಲಿ ನಡೆಯುತ್ತಿವೆ. ಜಾತಿಯ ಉಪ ಪಂಗಡಗಳ ನಡುವೆ ಸಂಬಂಧ ಏರ್ಪಡಿಸಿಕೊಳ್ಳಲಾಗುತ್ತಿದೆ. ಅಂತರ್ಜಾತಿ ವಿವಾಹಗಳಿಗೂ ಜಾತಿಗಳು ನಿಧಾನವಾಗಿ ತೆರೆದುಕೊಳ್ಳುತ್ತಿವೆ.

ಕರಾವಳಿ, ಮಲೆನಾಡು ಭಾಗಗಳಲ್ಲಿ ಬ್ರಾಹ್ಮಣ ಸಮುದಾಯಗಳು ಒಳಪಂಗಡಗಳ ಗೋಡೆಗಳನ್ನು ಒಡೆದು, 'ಯಾರಾದರೂ ಸರಿ, ಬ್ರಾಹ್ಮಣ ಸಮುದಾಯದ ಹೆಣ್ಣು ಸಿಕ್ಕರೆ ಆಗಬಹುದು' ಎಂಬ ನಿಲುವಿಗೆ ಬಂದಿವೆ. ಹೀಗೆ ಒಂದಿಷ್ಟು ಮದುವೆಗಳು ನಡೆದಿವೆ. ಎಲ್ಲ ಸಮುದಾಯಗಳಲ್ಲೂ ಇದೇ ಸಮಸ್ಯೆ ಇರುವುದರಿಂದ ಬೇರೆ ಪರಿಹಾರ ಕಂಡುಕೊಳ್ಳಲು ಹೊರಟಿವೆ. ಕೆಲವು ಮಠಗಳು ಕೂಡ ಇದಕ್ಕೆ ಸಮ್ಮತಿ ಸೂಚಿಸಿವೆ.

ಉತ್ತರ ಪ್ರದೇಶ, ಈಶಾನ್ಯ ರಾಜ್ಯಗಳು, ಕಾಶ್ಮೀರಗಳಿಂದ ಬ್ರಾಹ್ಮಣ ಹೆಣ್ಣುಮಕ್ಕಳನ್ನು ಕರೆ ತಂದು ಇಲ್ಲಿನ ಯುವಕರಿಗೆ ಮದುವೆ ಮಾಡಿಸುವ ಪ್ರಯತ್ನ ನಡೆದಿವೆ. ಇಲ್ಲಿನ ಸಂಪ್ರದಾಯ, ಹವಾಗುಣಗಳಿಗೆ ಒಗ್ಗಿಕೊಳ್ಳಲು ಅಲ್ಲಿನ ಹುಡುಗಿಯರಿಗೆ ಸಾಧ್ಯವಾಗದೆ ಕೆಲವು ಮದುವೆಗಳು ಮುರಿದುಬಿದ್ದಿವೆ.

ಕಷ್ಟ, ಅಸಾಧ್ಯವೇನಲ್ಲ: 'ಉತ್ತರ ಪ್ರದೇಶ ಸೇರಿದಂತೆ ಉತ್ತರಭಾರತದ ರಾಜ್ಯಗಳಿಂದ ವಧು ಹುಡುಕುವ ಪ್ರಯತ್ನ ಹಿಂದಿನಿಂದಲೂ ನಡೆಯುತ್ತಿದೆ. ನಾಲ್ಕು ಮದುವೆಗಳೂ ಆಗಿವೆ. ಈಗ ಮತ್ತೆ ಪ್ರಯತ್ನ ಆರಂಭವಾಗಿದೆ. ಒಂದೆರಡು ಸಭೆಗಳೂ ನಡೆದಿವೆ. ಅಲ್ಲಿಯವರನ್ನು ಸಂಪರ್ಕಿಸಿ, ಅವರ ವಿವರಗಳನ್ನು ಕಲೆ ಹಾಕಿ ವಧುವಿನ ಕಡೆಯವನ್ನು ಇಲ್ಲಿಗೆ ಕರೆತಂದು ಮಾತುಕತೆ ನಡೆಸುವುದು ಕಷ್ಟವೇ. ಆದರೆ, ಆಗದ ಕೆಲಸವೇನಲ್ಲ ' ಎಂದು ಹೇಳುತ್ತಾರೆ ದಕ್ಷಿಣ ಕನ್ನಡ ಸುಳ್ಯದ ಹವ್ಯಕ ಮುಖಂಡ ಎಂ.ಜಿ.ಸತ್ಯನಾರಾಯಣ.

ಉತ್ತರ ಕರ್ನಾಟಕ ಭಾಗದಿಂದ ಲಿಂಗಾಯತ ಸಮುದಾಯದ ಯುವತಿಯರನ್ನು ತರುವ ಪ್ರಯತ್ನ ನಡೆಯುತ್ತಿದೆ. ಹಲವು ವಿವಾಹಗಳೂ ನಡೆದಿವೆ. ಮದುವೆಯಾದ ಕೆಲವು ಹೆಣ್ಣುಮಕ್ಕಳು ಸ್ಥಳೀಯ ಜೀವನ ಶೈಲಿ, ಭಾಷೆ, ಸಂಪ್ರದಾಯಗಳಿಗೆ ಒಗ್ಗಿಕೊಂಡು ಸುಖ ಜೀವನ ನಡೆಸುತ್ತಿದ್ದರೆ, ಇನ್ನೂ ಕೆಲವು ಮದುವೆಗಳು ಮುರಿದುಬಿದ್ದಿವೆ.

ಆಶ್ರಮಗಳಲ್ಲಿರುವ ಅನಾಥ ಹೆಣ್ಣುಮಕ್ಕಳನ್ನೂ ಮದುವೆಯಾಗುತ್ತಿದ್ದಾರೆ. ಉಡುಪಿ ಜಿಲ್ಲೆಯ ನಿಟ್ಟೂರಿನಲ್ಲಿರುವ ರಾಜ್ಯ ಮಹಿಳಾ ನಿಲಯದಲ್ಲಿ ತೀರಾ ಇತ್ತೀಚೆಗೆ ಕೃಷಿಕ ಮತ್ತು ಪುರೋಹಿತರೊಬ್ಬರು ಅನಾಥ ವಧುಗಳನ್ನು ಕೈಹಿಡಿದಿರುವುದು ಇದಕ್ಕೆ ತಾಜಾ ನಿದರ್ಶನ.

ದೇವರಿಗೆ ಮೊರೆ

ಹೆಣ್ಣು ಸಿಗದೆ ಬೇಸತ್ತ ಹಳೆ ಮೈಸೂರು ಭಾಗದ ಯುವಕರು ದೇವರಿಗೆ ಮೊರೆ ಹೋಗುತ್ತಿದ್ದಾರೆ. ಮಂಡ್ಯದ ಮಳವಳ್ಳಿ, ಮೈಸೂರು ಜಿಲ್ಲೆಯ ತಿ.ನರಸೀಪುರ, ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕಿನ ವ್ಯಾಪ್ತಿಯಲ್ಲಿ 30 ವರ್ಷ ದಾಟಿದವರು ಮಹದೇಶ್ವರ ಬೆಟ್ಟ ಸೇರಿದಂತೆ ವಿವಿಧ ದೇವಾಲಯಗಳಿಗೆ ಪಾದಯಾತ್ರೆ ನಡೆಸುತ್ತಿದ್ದಾರೆ.

'ಮದುವೆಯಾಗದ 40ರಿಂದ 50 ಮಂದಿ ಮಂಡ್ಯ ಜಿಲ್ಲೆಯ ಪ್ರತಿ ಊರಿನಲ್ಲೂ ಸಿಗುತ್ತಾರೆ. ಎಲ್ಲರಿಗೂ ಜಮೀನುಗಳಿವೆ. ಕೃಷಿಯಲ್ಲಿ ಆದಾಯವೂ ಚೆನ್ನಾಗಿದೆ. ಊರಲ್ಲಿದ್ದಾನೆಂದು ಹುಡುಗಿ ಸಿಗುತ್ತಿಲ್ಲ. ಬೇರೆ ದಾರಿ ಕಾಣದೆ ಹೆಣ್ಣು ಸಿಗಲಿ ಎಂದು ದೇವರ ಮೊರೆ ಹೋಗಿದ್ದೇವೆ. ಮಹದೇಶ್ವರ ಬೆಟ್ಟ, ಆದಿಚುಂಚನಗಿರಿಗೆ ಪಾದಯಾತ್ರೆ ಹೋಗುತ್ತಿದ್ದೇವೆ. ಮದುವೆಗೆ ಹುಡುಗಿ ಸಿಗದ ನೂರಾರು ಯುವಕರು ನಮ್ಮೊಂದಿಗೆ ಬರುತ್ತಿದ್ದಾರೆ' ಎಂದು ಮಳವಳ್ಳಿಯ ಅಖಿಲ ಕರ್ನಾಟಕ ಬ್ರಹ್ಮಚಾರಿಗಳ ಸಂಘದ ಸಂಸ್ಥಾಪಕ ಶಿವಪ್ರಸಾದ್ ಹೇಳಿದರು.

'ಮಗಳು ಕಷ್ಟ ಪಡಬಾರದು. ಗಂಡನೊಂದಿಗೆ ಸುಖವಾಗಿರಬೇಕೆಂಬ ಕಾಳಜಿಯಿಂದ ಪೋಷಕರು ಹಳ್ಳಿಗಳಲ್ಲಿರುವವರಿಗೆ ಹೆಣ್ಣು ಕೊಡುತ್ತಿಲ್ಲ. ಕಾಳಜಿ ತಪ್ಪಲ್ಲ. ಆದರೆ, ಹಳ್ಳಿಗಳಲ್ಲೂ ಸೌಲಭ್ಯಗಳಿವೆ. ರಸ್ತೆ, ಇಂಟರ್‌ನೆಟ್ ಬಂದಿದೆ. ಮೊದಲಿನ ಕಷ್ಟ ಈಗಿಲ್ಲ. ಅದನ್ನೂ ಯೋಚಿಸಬೇಕು' ಎನ್ನುತ್ತಾರೆ ಪಾದಯಾತ್ರೆ ಸಂಘಟಕ ಗುಂಡ್ಲುಪೇಟೆ ತಾಲ್ಲೂಕು ಕೋಡಹಳ್ಳಿಯ ಸಿದ್ದರಾಜು.

ಲಿಂಗಾನುಪಾತ ಕುಸಿತವೂ ಕಾರಣವೇ?

ಲಿಂಗಾನುಪಾತದಲ್ಲಿನ ಅಸಮಾನತೆ, ಹೆಣ್ಣುಭ್ರೂಣಹತ್ಯೆ ಈ ಸಮಸ್ಯೆಗೆ ಕಾರಣವೇ ಎಂಬ ಚರ್ಚೆಯೂ ನಡೆಯುತ್ತಿದೆ. 'ಗಂಡು ಶ್ರೇಷ್ಠವೆನ್ನುತ್ತಾ, ಹೆಣ್ಣನ್ನು ಎರಡನೇ ದರ್ಜೆಯಲ್ಲಿರಿಸಿ ಘನತೆ ಕುಗ್ಗಿಸುವ ಪರಿಪಾಠ ಸಮಾಜದಲ್ಲಿದೆ. ಆರ್ಥಿಕತೆ ಮತ್ತು ಸಾಮಾಜಿಕತೆಯೊಂದಿಗೆ ಬೆಸೆದುಕೊಂಡಿರುವ ಈ ಶ್ರೇಷ್ಠತೆಯ ವ್ಯಸನ ಲಿಂಗಾನುಪಾತದಲ್ಲಿ ಭಾರೀ ವ್ಯತ್ಯಾಸಕ್ಕೆ ಕಾರಣವಾಗಿದೆ. ಮುಂದುವರಿದ ಜಾತಿಗಳು ಸೇರಿದಂತೆ ಹಲವು ಸಮುದಾಯಗಳಲ್ಲಿ ಈ ಸಮಸ್ಯೆ ಇದೆ. ನಿರ್ಲಕ್ಷ್ಯ, ಹೆಣ್ಣುಭ್ರೂಣ ಹತ್ಯೆಯಂತಹ ಪ್ರಕರಣಗಳಿಂದ ಹೆಣ್ಣುಮಕ್ಕಳ ಸಂಖ್ಯೆ ಕಡಿಮೆಯಾಗುತ್ತಿದೆ' ಎಂಬುದು ಸಮಾಜ ಶಾಸ್ತ್ರಜ್ಞರ ಅಭಿಮತ.

'ಈ ಸಮಸ್ಯೆ ಬಗ್ಗೆ ರಾಜ್ಯದ ವಿವಿಗಳಲ್ಲಿ ಅಧ್ಯಯನ, ಸಂಶೋಧನೆಗಳು ನಡೆದಿಲ್ಲ. ಸಮಗ್ರವಾಗಿ ಅಧ್ಯಯನ ಮಾಡಿ ಪರಿಹಾರ ಕಂಡುಕೊಳ್ಳುವ ಅವಶ್ಯತೆ ಇದೆ' ಎಂದು ಪ್ರತಿಪಾದಿಸುತ್ತಾರೆ ಸಮಾಜಶಾಸ್ತ್ರಜ್ಞರು.

ಪೂರಕ ಮಾಹಿತಿ: ಉದಯ ಯು., ಎಂ.ಮಹೇಶ, ಜಿತೇಂದ್ರ, ಕೆ.ಎಸ್.ಗಿರೀಶ, ಓದೇಶ ಸಕಲೇಶಪುರ, ಗಣಪತಿ ಹೆಗಡೆ, ಭೀಮಣ್ಣ ಬಾಲಯ್ಯ

ರೈತ ಸಂಘದಿಂದ ಅವಿವಾಹಿತ ಯುವ ರೈತರ ನೋಂದಣಿ

ಯುವ ರೈತರ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿರುವ ರಾಜ್ಯ ರೈತ ಸಂಘ, ಸರ್ಕಾರದ ಗಮನ ಸೆಳೆಯಲು ನಿರ್ಧರಿಸಿ, ಅವಿವಾಹಿತ ಯುವ ರೈತರ ನೋಂದಣಿ ಆರಂಭಿಸಿದೆ. ಬೃಹತ್ ಸಮಾವೇಶವೊಂದನ್ನು ಶೀಘ್ರದಲ್ಲಿ ನಡೆಸಲಿದೆ.

'ರೈತ ವರನನ್ನು ಮದುವೆಯಾಗುವ ವಧುವಿಗೆ ಸರ್ಕಾರದಿಂದ ₹ 5 ಲಕ್ಷ ಪ್ರೋತ್ಸಾಹಧನ ನೀಡಬೇಕು. ಸರ್ಕಾರಿ ಹಾಗೂ ಅರೆ ಸರ್ಕಾರಿ ಉದ್ಯೋಗಗಳಲ್ಲಿ ರೈತರ ಮಕ್ಕಳಿಗೆ ಮೀಸಲಾತಿ ಜಾರಿಗೊಳಿಸಬೇಕು. ಕೃಷಿ ಸಂಬಂಧಿಸಿದ ವಾಣಿಜ್ಯ ಚಟುವಟಿಕೆಗಳನ್ನು ನಡೆಸಲು ರೈತರ ಮಕ್ಕಳಿಗೆ 'ಮುದ್ರಾ' ಯೋಜನೆ ಮಾದರಿಯಲ್ಲಿ ಬಡ್ಡಿ ರಹಿತ ಸಾಲ ನೀಡಬೇಕು. ಹೆಣ್ಣು ಮಕ್ಕಳಿಗೆ ವಿಶೇಷ ಪ್ಯಾಕೇಜ್ ಘೋಷಿಸಿ, ಸಾಮೂಹಿಕ–ಸರಳ ವಿವಾಹವನ್ನು ಪ್ರೋತ್ಸಾಹಿಸಬೇಕು ಎಂಬುದು ನಮ್ಮ ಬೇಡಿಕೆ' ಎಂದು ಹೇಳುತ್ತಾರೆ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ ಹಾಗೂ ಸರ್ವೋದಯ ಕರ್ನಾಟಕ ಪಕ್ಷದ ಪ್ರಧಾನ ಕಾರ್ಯದರ್ಶಿ ಪ್ರಸನ್ನ ಎನ್. ಗೌಡ.



ಕಳೆದ ದೀಪಾವಳಿ ಸಮಯದಲ್ಲಿ ವಧು ಸಿಗಲೆಂದು ದೇವರಲ್ಲಿ ಬೇಡಿ ಚಾಮರಾಜನಗರದ ಗುಂಡ್ಲುಪೇಟೆ ತಾಲ್ಲೂಕಿನ ಕೋಡಹಳ್ಳಿಯಿಂದ ಮಹದೇಶ್ವರ ಬೆಟ್ಟಕ್ಕೆ ಪಾದಯಾತ್ರೆ ಕೈಗೊಂಡಿದ್ದ ಯುವಕರ ತಂಡ

ಮದುವೆಯಲ್ಲೂ ವಂಚನೆಯ ಜಾಲ

ಎರಡನೇ ಮುಖಪುಟದಿಂದ...

ಹೀಗೆ ವಂಚನೆಗೆ ಒಳಗಾದವರು ಹಲವರಿದ್ದಾರೆ.

ಇಂಥ ಕೆಲವರು ಮಠಗಳ ಹೆಸರು ಬಳಸಿದ್ದೂ ಇದೆ. 'ಜಮ್ಮು–ಕಾಶ್ಮೀರದ ಹೆಣ್ಣುಮಕ್ಕಳನ್ನು ಕರೆತಂದು ಮದುವೆ ಮಾಡಿಸುವ ಕಾರ್ಯಕ್ರಮವನ್ನು ನಮ್ಮ ಮಠದ ವತಿಯಿಂದ ಮಾಡಲಾಗುತ್ತಿಲ್ಲ' ಎಂದು ರಾಮಚಂದ್ರಾಪುರ ಮಠ ಸ್ಪಷ್ಟನೆ ನೀಡುವ ಸ್ಥಿತಿಯೂ ಈಚೆಗೆ ನಿರ್ಮಾಣವಾಗಿತ್ತು.

ಇನ್ನೂ ಕೆಲವೆಡೆ ಮದುವೆ ನಡೆದು, ಮದುಮಗಳು ಕೆಲವೇ ದಿನಗಳಲ್ಲಿ ಮನೆಯ ಒಡವೆ- ಹಣದೊಂದಿಗೆ ಪರಾರಿಯಾದದ್ದೂ ಇದೆ. ಪ್ರತಿ ಹಳ್ಳಿಯಲ್ಲೂ ಇಂಥ ಒಂದೆರಡು ಪ್ರಕರಣಗಳು ಸಿಗುತ್ತವೆ.

ರಾಜ್ಯದಲ್ಲಿ ಲಿಂಗಾನುಪಾತ (ಸಾವಿರ ಗಂಡು ಮಕ್ಕಳಿಗೆ)

ಜಿಲ್ಲೆಗಳು	2001	2011
ಬೆಳಗಾವಿ	960	973
ಬಾಗಲಕೋಟೆ	980	989
ವಿಜಯಪುರ	950	960
ಕಲಬುರಗಿ	958	971
ಬೀದರ್	949	956
ರಾಯಚೂರು	983	1,000
ಕೊಪ್ಪಳ	983	986
ಗದಗ	969	982
ಧಾರವಾಡ	949	971
ಉತ್ತರಕನ್ನಡ	971	979
ಹಾವೇರಿ	944	950
ಬಳ್ಳಾರಿ	968	984
ಚಿತ್ರದುರ್ಗ	955	974
ದಾವಣಗೆರೆ	952	972
ಶಿವಮೊಗ್ಗ	978	998
ಉಡುಪಿ	1,130	1,094
ಚಿಕ್ಕಮಗಳೂರು	984	1,008
ತುಮಕೂರು	967	984
ಕೋಲಾರ	977	978
ಬೆಂಗಳೂರು ನಗರ	908	916
ಬೆಂಗಳೂರು ಗ್ರಾಮಾಂತರ	975	946
ಮಂಡ್ಯ	986	995
ಹಾಸನ	1,004	1,010
ದಕ್ಷಿಣ ಕನ್ನಡ	1,022	1,020
ಕೊಡಗು	996	1019
ಮೈಸೂರು	964	985
ಚಾಮರಾಜನಗರ	971	993
ಚಿಕ್ಕಬಳ್ಳಾಪುರ	966	972
ರಾಮನಗರ	964	976
ಯಾದಗಿರಿ	982	989
ವಿಜಯನಗರ	965	976
ಒಟ್ಟು	965	973

ಆಧಾರ: ಜನಗಣತಿ ವರದಿ

ಮಿಲಿಂದ್ ದೇವ್ರಾ ಮುನಿಸು?

ಪ್ರಜಾವಾಣಿ ವಾರ್ತೆ

ಮುಂಬೈ: ಕಾಂಗ್ರೆಸ್ ನಾಯಕ, ಮಾಜಿ ಸಂಸದ ಮಿಲಿಂದ್ ದೇವ್ರಾ ಅಸಮಾಧಾನಗೊಂಡಿದ್ದಾರೆ ಎಂಬ ವರದಿಗಳ ನಡುವೆಯೇ, ಪಕ್ಷಕ್ಕೆ ಬರುವಂತೆ ಏಕನಾಥ ಶಿಂದೆ ನೇತೃತ್ವದ ಶಿವಸೇನೆಯು ಅವರಿಗೆ ಬಹಿರಂಗ ಆಹ್ವಾನ ನೀಡಿದೆ.

ಮಿಲಿಂದ್ ದೇವ್ರಾ ಅವರು ಕಾಂಗ್ರೆಸ್‌ನ ಹಿರಿಯ ನಾಯಕ, ಏಳು ಬಾರಿಯ ಸಂಸದರಾಗಿದ್ದ ಮುರುಳಿ ದಿಯೋರಾ ಅವರ ಮಗ. ದಿಯೋರಾ ಕುಟುಂಬವು ಸೋನಿಯಾ ಗಾಂಧಿ ಅವರ ಆಪ್ತ ವಲಯದಲ್ಲಿ ಗುರುತಿಸಿಕೊಂಡಿದೆ. ಮಹಾರಾಷ್ಟ್ರದಲ್ಲಿ ಸೀಟು ಹಂಚಿಕೆ ವಿಚಾರವಾಗಿ ಮಿಲಿಂದ್ ಕಾಂಗ್ರೆಸ್ ಜತೆಗೆ ಮುನಿಸಿಕೊಂಡಿದ್ದಾರೆ ಎಂಬ ವಿಷಯ 'ಮಹಾವಿಕಾಸ ಅಘಾಡಿ' ಮೈತ್ರಿಕೂಟದಲ್ಲಿ ಕೇಳಿಬರುತ್ತಿದೆ.

ಮಿಲಿಂದ್ ದೇವ್ರಾ ಅವರು ಶನಿವಾರ ತಮ್ಮ ಬೆಂಬಲಿಗರ ಸಭೆ ನಡೆಸಿದರು. ಈ ಮೂಲಕ ಅವರ ಅಸಮಾಧಾನ ಬಹಿರಂಗಗೊಂಡಿದೆ. ಆದರೆ, ಮಿಲಿಂದ್ ಇದುವರೆಗೆ ಅಧಿಕೃತವಾಗಿ ಏನನ್ನೂ ಹೇಳಿಲ್ಲ.

ಮಿಲಿಂದ್ ಮುನಿಸಿನ ಲಾಭ ಪಡೆಯಲು ಏಕನಾಥ ಶಿಂದೆ ನೇತೃತ್ವದ ಶಿವಸೇನೆ ಪ್ರಯತ್ನಿಸಿದೆ. ಪಕ್ಷ ಸೇರುವಂತೆ ಅವರಿಗೆ ಬಹಿರಂಗ ಆಹ್ವಾನ ನೀಡಿದೆ. ಈ ಕುರಿತು ಮಾತನಾಡಿರುವ ಸಚಿವ ಉದಯ್ ಸಮಂತ್, 'ಮಿಲಿಂದ್ ದಿಯೋರಾ ಅವರಿಗೆ ಸದಾ ಸ್ವಾಗತ. ಒಂದು ವೇಳೆ ಅವರು ಶಿಂದೆ ಅವರೊಂದಿಗೆ ಕೆಲಸ ಮಾಡಲು ಇಚ್ಛಿಸಿದ್ದೇ ಆದರೆ, ಅದು ಪಕ್ಷಕ್ಕೆ ಲಾಭ ಮಾಡಿಕೊಡಲಿದೆ' ಎಂದು ಹೇಳಿದ್ದಾರೆ.

ಮಿಲಿಂದ್ ಮುನಿಸಿಕೊಂಡಿದ್ದಾರೆ ಎಂಬ ವರದಿಗಳನ್ನು ವಿಧಾನಸಭೆಯ ವಿರೋಧ ಪಕ್ಷದ ನಾಯಕ ವಿಜಯ್ ವಾಡೆಟ್ಟಿವಾರ್ ತಳ್ಳಿಹಾಕಿದ್ದಾರೆ. 'ಆ ರೀತಿ ಏನೂ ಇಲ್ಲ. ನಮ್ಮ ವಿರೋಧಿಗಳು ಇಂಥ ಸುದ್ದಿಗಳನ್ನು ಹರಡುತ್ತಿದ್ದಾರೆ' ಎಂದು ಹೇಳಿದ್ದಾರೆ.


ಹವಾಮಾನ ಮುನ್ಸೂಚನೆಗೆ 'ಎಐ' ತಂತ್ರಜ್ಞಾನ

ಎರಡನೇ ಮುಖಪುಟದಿಂದ

ಸಂಭ್ರಮಾಚರಣೆಗೆ ನಾಳೆ ಚಾಲನೆ: 150ನೇ ವರ್ಷಾಚರಣೆ ಅಂಗವಾಗಿ ಐಎಂಡಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. 'ಪಂಚಾಯತ್ ಮೌಸಮ್ ಸೇವೆ'ಯನ್ನು ಜಾರಿಗೊಳಿಸುವ ಮೂಲಕ ಸಂಭ್ರಮಾಚರಣೆಗೆ ಸೋಮವಾರ ಚಾಲನೆ ನೀಡಲಿದೆ. ಪ್ರತಿ ಗ್ರಾಮದ ರೈತರಿಗೆ ಹವಾಮಾನ ಮುನ್ಸೂಚನೆ ನೀಡುವುದು ಈ ಯೋಜನೆಯ ಉದ್ದೇಶವಾಗಿದೆ.

'ಹತ್ತೊಂಬತ್ತನೇ ಶತಮಾನದ ಕೊನೆಯಲ್ಲಿ ಕೋಲ್ಕತ್ತದ ಬಂದರಿನಲ್ಲಿ ಚಂಡಮಾರುತದ ಮುನ್ಸೂಚನೆ ನೀಡುವುದರಿಂದ ಹಿಡಿದು, ಇಂದು ಪ್ರತಿಯೊಬ್ಬರ ಮೊಬೈಲ್ ಫೋನ್‌ಗಳಿಗೆ ಹವಾಮಾನ ಮುನ್ಸೂಚನೆಯ ಸಂದೇಶ ತಲುಪಿಸುವುದರವರೆಗೆ ಐಎಂಡಿ ಬಲುದೂರ ಸಾಗಿ ಬಂದಿದೆ' ಎಂದು ಅವರು ತಿಳಿಸಿದರು.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಭಾನುವಾರ ಜನವರಿ 14, 2024

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಪುಷ್ಯ ಶುಕ್ಲ ತೃತೀಯ ಗಂ. 08-00 ನಂತರ ಚತುರ್ಥಿ ಗಂ. 29-00 ನಕ್ಷತ್ರ: ಧನಿಷ್ಠಾ ಗಂ. 10-23 ಯೋಗ: ವ್ಯತೀಪಾತ ಗಂ. 26-40 ಕರಣ: ಗರ ಗಂ. 08-00, ಧನು ಮಾಸದ 29 ನೇ ದಿನ, ಮಳೆನಕ್ಷತ್ರ: ಉತ್ತರಾಷಾಢ 1. ರಾಹುಕಾಲ : ಸಾಯಂಕಾಲ 04-30 – 06-00
ಸೂರ್ಯೋದಯ: 07-01 ಸೂರ್ಯಾಸ್ತ : 06-18
ಮುಸ್ಲಿಂ ದಿನಾಂಕ : 02 ರಜಬ್
ದಿನ ಭವಿಷ್ಯ : ಭೋಗಿ ಅದೃಷ್ಟ ಸಂಖ್ಯೆ: 9, 8 ದಿನ ಭವಿಷ್ಯ

ಮೇಷ: ಕೆಲಸದಲ್ಲಿ ನೀವು ಸಾಗುತ್ತಿರುವ ಮಾರ್ಗವು ಸರಿಯಾಗಿದೆ ಎಂಬ ದೃಢತೆ ನಿಮಗೆ ಬರಲಿದೆ. ಕಲಿತ ವಿದ್ಯೆಯನ್ನು ಬಳಸಿಕೊಳ್ಳುವ ಬಗ್ಗೆ ನಿಮ್ಮ ಪ್ರಯತ್ನವಿರಲಿ. ರಾಜಕೀಯ ವ್ಯಕ್ತಿಗಳಿಗೆ ಅಧಿಕಾರಿಗಳ ಭಯ ಎದುರಾಗಲಿದೆ.

ವೃಷಭ: ಬೇಕರಿ ವಸ್ತುಗಳು ಹಾಗೂ ಸಿಹಿ ಪದಾರ್ಥಗಳ ಮಾರಾಟದಿಂದ ಅಧಿಕ ಲಾಭ ಸಿಗಲಿದೆ. ಯಶಸ್ಸಿನ ಹೊಸ ಮಾರ್ಗಗಳು ನಿಮಗೆ ಇಂದು ಅರಿವಿಗೆ ಬರಲಿವೆ. ಹೊಸ ವಿಷಯಗಳ ಕಲಿಕೆಗೆ ಇಂದು ಸುಗಮ.

ಮಿಥುನ: ನಿರುದ್ಯೋಗಸ್ಥರಿಗೆ ಹೊರ ರಾಜ್ಯವೊಂದರಲ್ಲಿ ಕೆಲಸ ನಿರ್ವಹಿಸುವ ಅವಕಾಶ ಎದುರಾದರೆ ಒಪ್ಪಿಕೊಳ್ಳಬೇಕು. ಅನಗತ್ಯ ವಸ್ತುಗಳ ಖರೀದಿಯಿಂದ ಹೆಚ್ಚು ವೆಚ್ಚವಾಗಲಿದೆ. ಧಾರ್ಮಿಕ ವಿಚಾರಗಳಲ್ಲಿ ಶ್ರದ್ಧೆ ಮೂಡುವುದು.

ಕರ್ಕಾಟಕ: ಸವಾಲೊಡ್ಡುವ ಸನ್ನಿವೇಶಗಳು ಸಹೋದರಿ ಅಥವಾ ಭಾವನಿಂದ ಎದುರಾಗಬಹುದು. ಸಹೋದರರ ಆಗಮನದಿಂದ ಮನಸ್ಸಿಗೆ ನೆಮ್ಮದಿ ಮತ್ತು ಸಂತೋಷ ಇರಲಿದೆ. ತೀರ್ಥಕ್ಷೇತ್ರದ ದರ್ಶನದ ಯೋಗ ಕೂಡಿಬರುವುದು.

ಸಿಂಹ: ನಿಮ್ಮಲ್ಲಿರುವ ಸೃಜನಾತ್ಮಕ ಕಲ್ಪನೆಯನ್ನು ನಿಮ್ಮ ಸ್ವಾರ್ಥಕ್ಕಾಗಿ ಅಲ್ಲದೇ, ಸೂಕ್ತ ಹಾದಿಯಲ್ಲಿ ಬಳಸಿಕೊಳ್ಳಿ. ಸಹೋದ್ಯೋಗಿಯೊಬ್ಬರ ನೆರವಿನಿಂದ ಕೆಲಸ ಕಾರ್ಯಗಳು ಶೀಘ್ರ ಪೂರ್ಣಗೊಳ್ಳಲಿವೆ.

ಕನ್ಯಾ: ಕೆಲಸವನ್ನು ಮುಂದೂಡುವ ಅಭ್ಯಾಸ ಕಡಿಮೆ ಮಾಡಿಕೊಂಡರೆ ಒಳಿತು. ಆದಾಯದಲ್ಲಿ ವೃದ್ಧಿ ಕಂಡರೂ ನೆಮ್ಮದಿಯ ಕೊರತೆ ಎದ್ದುಕಾಣಲಿದೆ. ವಿದ್ಯಾರ್ಥಿಗಳು ಹೆಚ್ಚಿನ ಅಭ್ಯಾಸ ನಡೆಸುವ ಅಗತ್ಯವಿದೆ.

ತುಲಾ: ಸ್ನೇಹಿತರೊಂದಿಗಿನ ಹೆಚ್ಚಿನ ಒಡನಾಟದಿಂದ ಭವಿಷ್ಯ ಹಾಳಾಗುವ ಸಾಧ್ಯತೆ ಇದೆ. ವೈದ್ಯಕೀಯ ಖರ್ಚು ಹೆಚ್ಚಲಿದೆ. ಸಂತಾನದ ಅಪೇಕ್ಷಿಗಳಿಗೆ ಶುಭ ಫಲ ಪ್ರಾಪ್ತಿಯಾಗಲಿದೆ. ಅನಿರೀಕ್ಷಿತವಾಗಿ ಉಡುಗೊರೆ ಸಿಗಲಿದೆ.

ವೃಶ್ಚಿಕ: ಕೃಷಿ ಸಂಬಂಧಿತ ಕಾರ್ಯಕ್ರಮಗಳು ವೇಗದಲ್ಲಿ ಸಾಗಲಿವೆ. ತಂದೆಯ ಆರೋಗ್ಯ ಸುಧಾರಣೆಯಾಗಿ ಮನಸ್ಸಿಗೆ ನೆಮ್ಮದಿ ಉಂಟಾಗಲಿದೆ. ಪಶುಸಂಗೋಪನೆ ಮತ್ತು ಹಾಲು ಉತ್ಪನ್ನಗಳಿಂದ ಲಾಭ ಸಿಗಲಿದೆ.

ಧನು: ಜೀವನೋಪಾಯಕ್ಕೆ ರಾಜಾಶ್ರಯದಂತಹ ಪರ್ಯಾಯ ವ್ಯವಸ್ಥೆ ಪ್ರಾಪ್ತಿಯಾಗಲಿದೆ. ಹಕ್ಕಿಯಂತೆ ಹಾರಾಡುವ ಆಸೆ ತಪ್ಪಲ್ಲ. ಆದರೆ ಸಾಧಕ-ಬಾಧಕ ಅರಿತು ಹೆಜ್ಜೆ ಇಟ್ಟರೆ ಕ್ಷೇಮ. ಕೌಟುಂಬಿಕ ಸಮಸ್ಯೆಗಳು ಬಗೆಹರಿಯಲಿವೆ.

ಮಕರ: ಬಟ್ಟೆ ವ್ಯಾಪಾರಿಗಳಿಗೆ ರೇಷ್ಮೆ ಮತ್ತು ಹತ್ತಿ ಬಟ್ಟೆ ಮೇಲೆ ಅಧಿಕ ಬಂಡವಾಳ ಹೂಡುವ ಯೋಚನೆ ಬರಲಿದೆ. ಈ ಹೊಸ ಯೋಜನೆಗಳ ಬಗೆಗೆ ವ್ಯಾವಹಾರಿಕ ಸ್ನೇಹಿತರಲ್ಲಿ ಚರ್ಚಿಸಿ. ಹೊಸ ವಾಹನ ಖರೀದಿಸುವ ಯೋಗವಿದೆ.

ಕುಂಭ: ನಿಶ್ಚಿತ ಯೋಜನೆಗಳಿಗೆ ಸಿದ್ಧತೆಗಳೊಡನೆ ಸನ್ನದ್ಧರಾಗುವ ಬಗ್ಗೆ ಹೆಚ್ಚಿನ ಗಮನವಿರಲಿ. ಎಲ್ಲರನ್ನೂ ನಂಬುವ ನಿಮ್ಮ ದೌರ್ಬಲ್ಯದಿಂದ ತೊಂದರೆಯೇ ಹೆಚ್ಚು. ಮಕ್ಕಳ ಆರೋಗ್ಯದ ಕಡೆ ಗಮನವಹಿಸಿ.

ಮೀನ: ಇನ್ನೊಬ್ಬರ ಕಷ್ಟಗಳಿಗೆ ಸಹಕರಿಸುವ ಸಮಯದಲ್ಲಿ ನಿಮ್ಮ ಸ್ವಾರ್ಥವನ್ನು ಬಳಸಿಕೊಳ್ಳಬೇಡಿ. ಆ ಕೆಲಸವನ್ನು ದೇವರು ಮೆಚ್ಚುವುದಿಲ್ಲ. ವಿವಿಧ ರೀತಿಯ ಬರವಣಿಗೆ ಮುಖಾಂತರ ಹೆಚ್ಚುವರಿ ಆದಾಯ ಬರಲಿದೆ.

25 ವರ್ಷಗಳ ಹಿಂದೆ — ಗುರುವಾರ, 14-1-1999

● ಅಗತ್ಯ ವಸ್ತು ಮಸೂದೆ ತಿದ್ದುಪಡಿಗೆ ಸಮ್ಮತಿ

ನವದೆಹಲಿ, ಜ. 13– (ಯುಎನ್‌ಐ, ಪಿಟಿಐ) ಇದೀಗ ಲೋಕಸಭೆಯಲ್ಲಿ ಬಾಕಿ ಉಳಿದಿರುವ 1998ರ ಅವಶ್ಯಕ ವಸ್ತು (ತಿದ್ದುಪಡಿ) ಮಸೂದೆಗೆ ಇನ್ನಷ್ಟು ತಿದ್ದುಪಡಿ ತರುವುದಕ್ಕೆ ಕೇಂದ್ರ ಸಚಿವ ಸಂಪುಟ ಇಂದು ತನ್ನ ಒಪ್ಪಿಗೆ ನೀಡಿತು.

ಕಳ್ಳ ದಾಸ್ತಾನುಗಾರರೊಂದಿಗೆ ಕಠಿಣವಾಗಿ ವ್ಯವಹರಿಸುವುದಕ್ಕಾಗಿ ಮತ್ತು ಕಾನೂನನ್ನು ಬಲಗೊಳಿಸುವುದಕ್ಕಾಗಿ ಉದ್ದೇಶಿತ ಮಸೂದೆಗೆ ಇನ್ನಷ್ಟು ತಿದ್ದುಪಡಿ ತರಲು ಸಚಿವ ಸಂಪುಟ ಸಮ್ಮತಿ ನೀಡಿತು ಎಂದು ಎರಡೂವರೆ ಗಂಟೆ ನಡೆದ ಸಚಿವ ಸಂಪುಟ ಸಭೆಯ ಬಳಿಕ ಅಧಿಕೃತ ವಕ್ತಾರರೊಬ್ಬರು ತಿಳಿಸಿದರು.

50 ವರ್ಷಗಳ ಹಿಂದೆ — ಸೋಮವಾರ, 14-1-1974

● ಕೋಮುವಾದದ ವಿರುದ್ಧ ಸರ್ಕಾರ–ಜನತೆ ಒಗ್ಗಟ್ಟಿನ ಹೋರಾಟಕ್ಕೆ ಪ್ರಧಾನಿ ಕರೆ

ನವದೆಹಲಿ, ಜ. 13– ಕೋಮುವಾದ ಮತ್ತು ವಿಚ್ಛಿದ್ರಕಾರಕ ಶಕ್ತಿಗಳ ವಿರುದ್ಧ ಸರ್ಕಾರ ಮತ್ತು ಜನತೆ ಒಗ್ಗಟ್ಟಿನಿಂದ ಹೋರಾಡಲಿದ್ದಾರೆ ಎಂದು ಪ್ರಧಾನಿ ಇಂದಿರಾಗಾಂಧಿ ಅವರು ಇಂದು ಆಶಿಸಿದರು.


ಈ ವ್ಯಾಧಿಯ ತಡೆಗೆ ಯಾವುದೇ ಶಾಸನ ರೂಪಿಸುವುದಕ್ಕೆ ಸರ್ಕಾರ ಹಿಂದೆ ಸರಿಯುವುದಿಲ್ಲ ಎಂದು ಅವರು ಇಲ್ಲಿ ಕೋಮುವಾದ ವಿರುದ್ಧದ ಆರನೇ ರಾಷ್ಟ್ರೀಯ ಅಧಿವೇಶನವನ್ನುದ್ದೇಶಿಸಿ ಹೇಳಿದರು.

ಈ ಕುರಿತ ಜಾಗೃತ ಅಭಿಯಾನ ಸರ್ಕಾರದ ಕೈಯನ್ನು ಬಲಪಡಿಸುತ್ತದೆ ಎಂದೂ ಹೇಳಿದ್ದಾರೆ.

ಪದಬಂಧ 5560 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಜಟಕಾಬಂಡಿ ಎಂದೆನಿಸುವ ಜೀವನ (3)
3.ದ್ವೇಷ ಈ ರೀತಿ ಬಂದಿದೆ (3)
4.ಒಣಗಿದ ವಸ್ತು (3)
6.ಕುಲಗೇಡಿಯಲ್ಲಿ ಚಿಗುರು ಇದೆ! (2)
7.ಭವನದ ಮೇಲಿಂದ ವೀಕ್ಷಿಸಿರುವ ಆಕಾಶ (2)
10.ಸಂಯಮದಿಂದ ನಿಂತಿರುವ ಮೃತ್ಯುದೇವತೆ (2)
13.ಮನಸ್ಸು ಇಲ್ಲಿ ಚಿಕ್ಕದಾಗಿದೆ! (2)
14.ಈತ ತಿರುಪೆ ಬೇಡುವವನು (3)
15.ಒಳ್ಳೆಯ ಅಥವಾ ಕೆಟ್ಟ ನಾತ (3)
16.ಹಿಸ್ಸೆಯುಳ್ಳ ಅಂಚೆ! (3)

ಮೇಲಿಂದ ಕೆಳಕ್ಕೆ
1.ದುರ್ಭಿಕ್ಷೆಯ ಕಾಲ (4)
2.ನ್ಯಾಯವಲ್ಲದ ತರ್ಕ (3)
3.ನೈರ್ಮಲ್ಯದ ಪಾತಿ! (2)
5.ನಡುಗುತ್ತಿರುವವನ ಮಂದಹಾಸವೇ ಇಲ್ಲಿ ಉಲ್ಟಾ! (2)
6.ವಂಚನೆಯ ಯುಕ್ತಿ (5)
8.ಸಂಸಾರದ ಸೆರೆಯಿದು (5)
9.ತೊಂದರೆಯ ನಿವಾರಣೆಗಾಗಿ ಮಾಡುವ ಮನವಿ (4)
11.ಸುಮತಿಯ ಬುದ್ಧಿ! (2)
12.ಅಸಹ್ಯ ರೂಪವುಳ್ಳದ್ದು (3)
13.ಮನದನ್ನೆ ಇರುವ ಸದನ (2)



5559ರ ಪದಬಂಧದ ಉತ್ತರ

ಎಡದಿಂದ ಬಲಕ್ಕೆ
1.ಉಪವಾಸ 3.ಮಜಕೂರು 5.ರಶ್ವನ 6.ವ್ಯವಹಾರ 7.ಪಶ್ಚಾತ್ತಾಪ 9.ನಪುಂಸಕ 11.ತರಬೇತಿ 13.ನಾಪಿತ 15.ಸುಡುಗಾಡು 16.ಮಧುಚಂದ್ರ

ಮೇಲಿಂದ ಕೆಳಕ್ಕೆ
1.ಉಕ್ತಿ 2.ಸರದಾರ 3.ಮನಸ್ತಾಪ 4.ರುಜು 6.ವ್ಯಸನ 8.ಪದಾತಿ 10.ಕರುನಾಡು 11.ತರತಮ 12.ಮಾಸು 14.ಇಂದ್ರ

ಸುಡೊಕು 5945

9		7						4
			4		9	8		7
5		8					6	
		6	5			7		9
7				6	1			
	5		8			3		6
8			3			4		2
	9			8			7	
6		4		9		1		3

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ

5944ಸುಡೊಕು

7	1	5	9	4	6	3	2	8
3	4	6	5	8	2	7	9	1
2	8	9	3	7	1	5	6	4
9	6	4	1	3	7	8	5	2
5	2	8	4	6	9	1	3	7
1	3	7	8	2	5	9	4	6
4	9	3	2	1	8	6	7	5
6	5	1	7	9	4	2	8	3
8	7	2	6	5	3	4	1	9

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ರಾಮನಾಥಪುರ ಮಾರುಕಟ್ಟೆಯಲ್ಲಿ ₹288 ಕೋಟಿ ವಹಿವಾಟು

ತಂಬಾಕಿಗೆ ಬಂಪರ್ ಬೆಲೆ

• ಗಂಗೇಶ್ ಬಿ.ಪಿ.

ಕೊಣನೂರು (ಹಾಸನ ಜಿಲ್ಲೆ): ಹಲವು ವರ್ಷಗಳಿಂದ ಉತ್ತಮ ಧಾರಣೆ ಸಿಗದೆ ನಷ್ಟ ಅನುಭವಿಸಿ ಕೈಸುಟ್ಟು-ಕೊಳ್ಳುತ್ತಿದ್ದ ರೈತರನ್ನು ಈ ಬಾರಿ ಕಡಿಮೆ ಗುಣಮಟ್ಟದ ತಂಬಾಕು ಕೈಹಿಡಿದಿದೆ.

ಕಪ್ಪು ತರಗು, ಕಂಪು ತರಗು ಹಾಗೂ ಹಸಿರು (ಗ್ರೇಡ್ 40ರಿಂದ 6) ತಂಬಾಕು ಧಾರಣೆ ಏರಿಕೆಯಾಗಿದೆ. ಹಾಗಾಗಿ, ಈ ಬಾರಿ ಬರಗಾಲದಿಂದ ಅಧಿಕ ಸಂಕಷ್ಟಕ್ಕೆ ಸಿಲುಕಿದ್ದ ಬೆಳೆಗಾರರ ಮೊಗದಲ್ಲಿ ಸಂತಸ ಮೂಡಿದೆ.

ರಾಮನಾಥಪುರ ತಂಬಾಕು ಮಾರುಕಟ್ಟೆಯಲ್ಲಿ ನಡೆಯುತ್ತಿರುವ ಹರಾಜು ಪ್ರಕ್ರಿಯೆಯಲ್ಲಿ ಕಡಿಮೆ ಗುಣಮಟ್ಟದ ಹೊಗೆಸೊಪ್ಪಿಗೆ ಸರಾಸರಿ ದರವು ಗರಿಷ್ಠ ಮಟ್ಟ ತಲುಪಿದ್ದು, ಬೆಳೆಗಾರರಿಗೆ ಬಂಪರ್ ಬೆಲೆ ದೊರೆತಿದೆ.

ತಂಬಾಕು ಮಾರುಕಟ್ಟೆಯ ಪ್ಲಾಟ್ ಫಾರಂ 7ರಲ್ಲಿ 2023ರ ಸೆಪ್ಟೆಂಬರ್ 27ರಿಂದ ಜನವರಿ 11ರವರೆಗೆ 6,035 ಟನ್ ಹೊಗೆಸೊಪ್ಪು ಖರೀದಿಯಾಗಿದ್ದು, ₹150.57 ಕೋಟಿ ವಹಿವಾಟು ನಡೆದಿದೆ. ಪ್ರತಿ ಕೆ.ಜಿ.ಗೆ ಗರಿಷ್ಠ ₹272 ಹಾಗೂ ಕನಿಷ್ಠ ₹200 ದರ ದೊರೆತಿದೆ.

ಪ್ಲಾಟ್ ಫಾರಂ 63ರಲ್ಲಿ 5,022 ಟನ್ ತಂಬಾಕು ಖರೀದಿಯಾಗಿದ್ದು, ₹138.39 ಕೋಟಿ ವಹಿವಾಟು ನಡೆದಿದೆ. ಇಲ್ಲಿ ಬೆಳೆಗಾರರಿಗೆ ಗರಿಷ್ಠ ₹272 ಹಾಗೂ ಕನಿಷ್ಠ ₹198 ದರ ಸಿಕ್ಕಿದೆ.

> ಈ ಬಾರಿ ತಂಬಾಕಿನ ಬೆಲೆ ಸುಧಾರಣೆ ಕಂಡಿದೆ. ಕಡಿಮೆ ಗುಣಮಟ್ಟದ ಹಾಗೂ ಹುಡಿ ಬೇಳ್‌ಗಳಿಗೂ ಉತ್ತಮ ಧಾರಣೆ ದೊರೆಯುತ್ತಿದೆ
> **ಸಿ.ಪಿ. ನಂಜಪ್ಪ,** ತಂಬಾಕು ಬೆಳೆಗಾರ

> ಮಾರುಕಟ್ಟೆಯ ಕೊನೆಯ ದಿನದವರೆಗೂ ದರ ಹೀಗೆಯೇ ಮುಂದುವರಿದರೆ ಉತ್ತಮ. ಬರಗಾಲದಲ್ಲಿ ಕಷ್ಟಪಟ್ಟು ಬೆಳೆದ ಬೆಳೆಗೆ ಒಳ್ಳೆಯ ದರ ದೊರೆತಿರುವುದು ಸಮಾಧಾನ ತಂದಿದೆ
> **ಎನ್. ಚಲೇಗೌಡ,** ತಂಬಾಕು ಬೆಳೆಗಾರ

'ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ತಂಬಾಕಿಗೆ ಬೇಡಿಕೆ ಹೆಚ್ಚಿರುವುದರಿಂದ ಉತ್ತಮ ದರ ಸಿಗುತ್ತಿದೆ. ರಾಜ್ಯದಲ್ಲಿ ಈ ಬಾರಿ 82,800 ಟನ್ ಹೊಗೆಸೊಪ್ಪು ಖರೀದಿಸುವ ಗುರಿ ಇದ್ದು, ಇಲ್ಲಿಯವರೆಗೆ ನಡೆದ ಹರಾಜು ಪ್ರಕ್ರಿಯೆಯಲ್ಲಿ 49,300 ಟನ್ ಮಾರಾಟವಾಗಿದೆ' ಎಂದು ತಂಬಾಕು ಮಂಡಳಿಯ ಪ್ರಾದೇಶಿಕ ವ್ಯವಸ್ಥಾಪಕ ಜಿ.ಬಿ. ಸುಬ್ಬರಾವ್ ತಿಳಿಸಿದರು.

ಹಿಂದಿನ ವರ್ಷ ಕೆ.ಜಿ.ಗೆ ಸರಾಸರಿ ₹231.81 ದರ ಸಿಕ್ಕಿತ್ತು. ಈ ಬಾರಿ ಕೆ.ಜಿ.ಗೆ ₹246.71 ದರ ಸಿಕ್ಕಿದೆ. ಒಟ್ಟಾರೆ ಸರಾಸರಿ ದರದಲ್ಲಿ ಕೆ.ಜಿ.ಗೆ ₹14.9 ಹೆಚ್ಚಳವಾಗಿದ್ದು, ರೈತರಿಗೆ ಲಾಭವಾಗಿದೆ.



ಹಾಸನ ಜಿಲ್ಲೆಯ ಕೊಣನೂರು ಸಮೀಪದ ರಾಮನಾಥಪುರ ತಂಬಾಕು ಮಾರುಕಟ್ಟೆಯಲ್ಲಿನ ಹೊಗೆಸೊಪ್ಪು ವಹಿವಾಟು

ತಂಬಾಕು ಹುಡಿಗೂ ಬೇಡಿಕೆ

ಈ ವರ್ಷ ಹೊಗೆಸೊಪ್ಪಿನ ಹುಡಿಗೂ ಉತ್ತಮ ಬೆಲೆ ದೊರೆಕಿದೆ. ಇಷ್ಟು ವರ್ಷ ಜಮೀನಿಗೆ ಸುರಿಯುತ್ತಿದ್ದ ಹುಡಿಯನ್ನೂ ಈಗ ಕೆ.ಜಿ.ಗೆ ₹100ರಿಂದ ₹166 ದರದಲ್ಲಿ ಖರೀದಿಸಲಾಗುತ್ತಿದೆ.

ಬೀಡಿ ಕಟ್ಟಲು ಚಾಮರಾಜನಗರ ಜಿಲ್ಲೆಯ ದಲ್ಲಾಳಿಗಳು ರೈತರ ಮನೆ ಬಾಗಿಲಿಗೆ ತೆರಳಿ ತಂಬಾಕು ಹುಡಿಯನ್ನು ಖರೀದಿಸುತ್ತಿದ್ದರು. ಹಿಂದಿನ ವರ್ಷಗಳಲ್ಲಿ ಪ್ರತಿ ಕೆ.ಜಿ. ಹುಡಿಗೆ ಕೇವಲ ₹10ರಿಂದ ₹12 ದರ ಇತ್ತು. ಈ ಬಾರಿ ಯಾರಿಗೂ ಬೇಡವಾಗಿದ್ದ ಹುಡಿ ರೈತರ ಜೇಬು ತುಂಬಿಸುತ್ತಿದೆ.

ಅಮೆರಿಕದ ವೀಸಾ ವಿಳಂಬ: ಭಾರತ ಕಳವಳ

ನವದೆಹಲಿ (ಪಿಟಿಐ): ದೇಶದ ವ್ಯಾಪಾರಿಗಳು ಮತ್ತು ಹೂಡಿಕೆದಾರರಿಗೆ ಅಮೆರಿಕದಿಂದ ಕಾಲಮಿತಿಯಲ್ಲಿ ವೀಸಾ ಸಿಗುತ್ತಿಲ್ಲ. ಇದರಿಂದ ದೇಶೀಯ ವ್ಯವಹಾರದಲ್ಲಿ ಹಲವು ಸಮಸ್ಯೆಗಳು ಎದುರಾಗುತ್ತಿವೆ ಎಂದು ಟ್ರೇಡ್ ಪಾಲಿಸಿ ಪೋರಂ (ಟಿಪಿಎಫ್) ಸಭೆಯಲ್ಲಿ ಕೇಂದ್ರ ಸರ್ಕಾರ ಕಳವಳ ವ್ಯಕ್ತಪಡಿಸಿದೆ.

ಉಭಯ ದೇಶಗಳ ನಡುವಿನ ವ್ಯಾಪಾರ ಮತ್ತು ಹೂಡಿಕೆ ಸಂಬಂಧ ಶುಕ್ರವಾರ ಟಿಪಿಎಫ್‌ನ 14ನೇ ಸಭೆ ನಡೆಯಿತು. ಅಮೆರಿಕದ ವ್ಯಾಪಾರ ಪ್ರತಿನಿಧಿ ಕ್ಯಾಥರೀನ್ ತೈ ಮತ್ತು ಕೇಂದ್ರ ವಾಣಿಜ್ಯ ಹಾಗೂ ಕೈಗಾರಿಕಾ ಸಚಿವ ಪೀಯೂಷ್ ಗೋಯಲ್, ವೀಸಾ ವಿಳಂಬದ ಸಮಸ್ಯೆ ಕುರಿತು ಚರ್ಚಿಸಿದರು.

ದೇಶದ ವೃತ್ತಿಪರರು, ನುರಿತ ಕೆಲಸಗಾರರು, ವಿದ್ಯಾರ್ಥಿಗಳು, ಹೂಡಿಕೆದಾರರು ಮತ್ತು ವ್ಯಾಪಾರಿಗಳು ದ್ವಿಪಕ್ಷೀಯ ಆರ್ಥಿಕತೆ ಮತ್ತು ತಾಂತ್ರಿಕ ಪಾಲುದಾರಿಕೆಗೆ ನೀಡುತ್ತಿರುವ ಕೊಡುಗೆ ಬಗ್ಗೆ ಚರ್ಚಿಸಲಾಯಿತು.

ವಾಣಿಜ್ಯ ಉದ್ದೇಶದಿಂದ ಅಮೆರಿಕಕ್ಕೆ ಭೇಟಿ ನೀಡುವವರಿಗೆ ಸಕಾಲದಲ್ಲಿ ವೀಸಾ ಸಿಗದೆ ಎದುರಿಸುತ್ತಿರುವ ಸವಾಲುಗಳ ಬಗ್ಗೆ ಸಭೆಯಲ್ಲಿ ಸಚಿವ ಪೀಯೂಷ್ ಪ್ರಸ್ತಾಪಿಸಿದರು. ಅರ್ಹರಿಗೆ ತ್ವರಿತವಾಗಿ ವೀಸಾ ಸೌಲಭ್ಯ ಕಲ್ಪಿಸುವಂತೆ ಅಮೆರಿಕಕ್ಕೆ ಕೋರಿದ್ದಾರೆ ಎಂದು ಜಂಟಿ ಹೇಳಿಕೆಯಲ್ಲಿ ತಿಳಿಸಲಾಗಿದೆ.

ಎಚ್ - 1 ಬಿ ವಲಸೆ ಯೇತರ ವೀಸಾ ಆಗಿದೆ. ಇದರಡಿ ಅಮೆರಿಕದ ಸಂಸ್ಥೆಗಳು ವಿದೇಶಿ ಉದ್ಯೋಗಿಗಳನ್ನು ನೇಮಿಸಿಕೊಳ್ಳಲು ಅವಕಾಶವಿದೆ. ಭಾರತೀಯರಿಗೆ ಅನುಕೂಲ ಕಲ್ಪಿಸಲು ಪ್ರಸ್ತುತ ಅಮೆರಿಕವು ಈ ವೀಸಾ ನವೀಕರಣಕ್ಕೆ ಪ್ರಾಯೋಗಿಕ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ.

ಆದರೆ, ಈ ವೀಸಾದಡಿ ಹಲವು ಭಾರತೀಯರು ಅಮೆರಿಕದಲ್ಲಿ ನೆಲೆಸಿದ್ದಾರೆ. ಅವರ ವೀಸಾ ನವೀಕರಣಕ್ಕೆ ಕಾಯಂ ವ್ಯವಸ್ಥೆ ರೂಪಿಸುವಂತೆ ಕೋರಲಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

₹3,935 ಕೋಟಿ ಮೊತ್ತದ ಹೂಡಿಕೆ ಪ್ರಸ್ತಾವಗಳಿಗೆ ಒಪ್ಪಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿವಿಧೆಡೆ ₹3,935 ಕೋಟಿ ಹೂಡಿಕೆಯ 73 ಪ್ರಸ್ತಾವಗಳಿಗೆ ರಾಜ್ಯಮಟ್ಟದ ಏಕಗವಾಕ್ಷಿ ಅನುಮೋದನಾ ಸಮಿತಿ ಸಭೆಯಲ್ಲಿ ಶುಕ್ರವಾರ ಅನುಮೋದನೆ ನೀಡಲಾಗಿದೆ ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ತಿಳಿಸಿದ್ದಾರೆ.

'ಅನುಮೋದನೆ ನೀಡಿರುವ ಪ್ರಸ್ತಾವಗಳಲ್ಲಿ ₹50 ಕೋಟಿಗೂ ಹೆಚ್ಚು ಮೊತ್ತದ ಹೂಡಿಕೆಯ 10 ಯೋಜನೆಗಳಿವೆ. ₹15 ಕೋಟಿಯಿಂದ ₹50 ಕೋಟಿವರೆಗಿನ ಹೂಡಿಕೆಯ 59 ಪ್ರಸ್ತಾವಗಳಿವೆ. 73 ಪ್ರಸ್ತಾವಗಳಿಂದ ಒಟ್ಟು 14,497 ಉದ್ಯೋಗಗಳು ಸೃಜನೆಯಾಗಲಿವೆ' ಎಂದು ಪ್ರಕಟಣೆಯಲ್ಲಿ ಮಾಹಿತಿ ನೀಡಿದ್ದಾರೆ.

ದೇವನಹಳ್ಳಿ, ಶಿರಾ ಕೈಗಾರಿಕಾ ಪ್ರದೇಶ, ಹೂವಿನಹಡಗಲಿ, ರಾಮನಗರ, ಕಡೇಚೂರು, ಚಾಮರಾಜನಗರ, ಗೌರಿಬಿದನೂರು ಮತ್ತು ತುಮಕೂರಿನ ವಸಂತ ನರಸಾಪುರ ಕೈಗಾರಿಕಾ ಪ್ರದೇಶಗಳಲ್ಲಿ ಪ್ರಮುಖ ಕಂಪನಿಗಳು ಹೂಡಿಕೆ ಮಾಡಲಿವೆ. ಕೆಲವು ಯೋಜನೆಗಳಲ್ಲಿ ₹450 ಕೋಟಿವರೆಗೂ ಹೂಡಿಕೆಯಾಗಲಿದೆ ಎಂದು ವಿವರಿಸಿದ್ದಾರೆ.

ಕೈಗಾರಿಕಾ ಇಲಾಖೆ ಪ್ರಧಾನ ಕಾರ್ಯದರ್ಶಿ ಎಸ್. ಸೆಲ್ವಕುಮಾರ್, ಆಯುಕ್ತೆ ಗುಂಜನ್ ಕೃಷ್ಣ, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ವ್ಯವಸ್ಥಾಪಕ ನಿರ್ದೇಶಕ ಮಹೇಶ್, ಕರ್ನಾಟಕ ಉದ್ಯೋಗ ಮಿತ್ರದ ವ್ಯವಸ್ಥಾಪಕ ನಿರ್ದೇಶಕ ದೊಡ್ಡ ಬಸವರಾಜ್ ಸಭೆಯಲ್ಲಿ ಇದ್ದರು.

ಚೆನ್ನಂಗಿ ಬೇಳೆ ಉತ್ಪಾದನೆ ಹೆಚ್ಚಳ ನಿರೀಕ್ಷೆ

ನವದೆಹಲಿ (ಪಿಟಿಐ): ದೇಶದಲ್ಲಿ 2023–24ರ ರಾಬಿ ಋತುವಿನಲ್ಲಿ ಚೆನ್ನಂಗಿ ಬೇಳೆ (ಮಸೂರ್ ದಾಲ್) ಉತ್ಪಾದನೆಯು 1.6 ದಶಲಕ್ಷ ಟನ್ ದಾಟುವ ನಿರೀಕ್ಷೆಯಿದೆ ಎಂದು ಕೇಂದ್ರ ಗ್ರಾಹಕ ವ್ಯವಹಾರಗಳ ಸಚಿವಾಲಯ ಅಂದಾಜಿಸಿದೆ.

2022–23ರಲ್ಲಿ ಒಟ್ಟು 1.55 ದಶಲಕ್ಷ ಟನ್ ಉತ್ಪಾದನೆಯಾಗಿತ್ತು.

ಜಾಗತಿಕವಾಗಿ ಅತಿಹೆಚ್ಚು ಪ್ರಮಾಣದಲ್ಲಿ ದ್ವಿದಳಧಾನ್ಯಗಳ ಉತ್ಪಾದನೆ ಮತ್ತು ಬಳಕೆಯ ರಾಷ್ಟ್ರಗಳ ಪೈಕಿ ಭಾರತವೂ ಒಂದಾಗಿದೆ. ದೇಶೀಯ ಮಾರುಕಟ್ಟೆಯಲ್ಲಿ ಕೊರತೆ ತಲೆದೋರಿದ ವೇಳೆ ಚೆನ್ನಂಗಿ ಬೇಳೆ ಮತ್ತು ತೊಗರಿ ಬೇಳೆಯನ್ನು ವಿದೇಶಗಳಿಂದ ಆಮದು ಮಾಡಿಕೊಳ್ಳಲಾಗುತ್ತದೆ.

ಶುಕ್ರವಾರ ನಡೆದ ಜಾಗತಿಕ ದ್ವಿದಳಧಾನ್ಯಗಳ ಸಮಾವೇಶದಲ್ಲಿ ಮಾತನಾಡಿದ ಕೇಂದ್ರ ಗ್ರಾಹಕ ವ್ಯವಹಾರಗಳ ಸಚಿವಾಲಯದ ಕಾರ್ಯದರ್ಶಿ ರೋಹಿತ್ ಕುಮಾರ್ ಸಿಂಗ್, 'ಈ ಬಾರಿ ಚೆನ್ನಂಗಿ ಬೇಳೆ ಬಿತ್ತನೆ ಪ್ರದೇಶ ಹೆಚ್ಚಾಗಿದೆ. ಹಾಗಾಗಿ, ಉತ್ಪಾದನೆಯೂ ಏರಿಕೆಯಾಗುವ ಸಾಧ್ಯತೆಯಿದೆ' ಎಂದು ಹೇಳಿದ್ದಾರೆ.

ದೇಶದಲ್ಲಿ ದ್ವಿದಳಧಾನ್ಯಗಳ ವಾರ್ಷಿಕ ಸರಾಸರಿ ಉತ್ಪಾದನೆ 26ರಿಂದ 27 ದಶಲಕ್ಷ ಟನ್‌ನಷ್ಟಿದೆ. ಕಡಲೆ ಕಾಳು ಮತ್ತು ಹೆಸರು ಕಾಳು ಉತ್ಪಾದನೆಯಲ್ಲಿ ಭಾರತವು ಸ್ವಾವಲಂಬನೆ ಸಾಧಿಸಿದೆ. ಆದರೆ, ಚೆನ್ನಂಗಿ ಬೇಳೆ ಮತ್ತು ತೊಗರಿ ಬೇಳೆ ಕೊರತೆಯಾದಾಗ ಆಮದಿನ ಮೊರೆ ಹೋಗುವುದು ಅನಿವಾರ್ಯ ಎಂದು ಹೇಳಿದ್ದಾರೆ.

ಕೇಂದ್ರ ಕೃಷಿ ಸಚಿವಾಲಯದ ಅಂಕಿಅಂಶದ ಪ್ರಕಾರ ಹಿಂದಿನ ವರ್ಷ 1.83 ದಶಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಚೆನ್ನಂಗಿ ಬೇಳೆ ಬಿತ್ತನೆಯಾಗಿತ್ತು. ಈ ಬಾರಿ 1.94 ದಶಲಕ್ಷ ಹೆಕ್ಟೇರ್‌ಗೆ ವಿಸ್ತರಣೆಯಾಗಿದೆ.

ಮುಂಬೈ ಧಾರಣೆ

ಶೇಂಗಾ

13-1-2024

ಜಾವಾ 70/80(ಹೊಸ)	12100-12200
ಜಾವಾ 80/90(ಹೊಸ)	11500-11600
ದಪ್ಪ ಮಧ್ಯಪ್ರದೇಶ(ಹೊಸ)	10000-10100
ದಪ್ಪ ಗುಜರಾತ್(ಹೊಸ)	10800-10900

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1590 (1600)
ಒಂದು ವಾರದ ಡೆಲಿವರಿ	1585 (1595)
ಸೋಯಾ ಕಚ್ಚಾ	870 (880)
ಪಾಮ್ ವಾರದ ಡೆಲಿವರಿ	843 (846)
ಸೂರ್ಯಕಾಂತಿ ಎಣ್ಣೆ ಕಚ್ಚಾ	870 (875)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
62,350 (62,250)
ಬೆಳ್ಳಿ ಕೆ.ಜಿ 71,850 (71,600)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ

ಬಂಟ್ವಾಳ	
ಕೋಕ	18000-28500
ಹೊಸತು	28500-37000
ಹಳತು	42000-44500
ಚಿತ್ರದುರ್ಗ	
ಅಪಿ	48019-48429
ಬೆಟ್ಟೆ	37249-37699
ಕೆಂಪುಗೋಟು	30700-31100
ರಾಶಿ	46599-49800
ಹೊನ್ನಾವರ	
ಹಳೆಚಾಲಿ	35000-39500
ಕುಮಟ	
ಚಿಪ್ಪು	26899-32999
ಕೋಕ	20109-32019
ಹಳೆಚಾಲಿ	37299-38999
ಹೊಸಚಾಲಿ	33299-55000

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

ಮೂಡಿಗೆರೆ

	ಮುದ್ರೆಮನೆ
ಎಪಿ	13900
ಎಸಿ	7840
ಆರ್‌ಪಿ	11000
ಆರ್‌ಸಿ	7020

ಹೊಸತು	27000-36500
ಸಾಗರ	
ಬಿಳಿಗೋಟು	21569-32309
ಚಾಲಿ	31469-38599
ಕೋಕ	20001-33989
ಕೆಂಪುಗೋಟು	32899-37099
ರಾಶಿ	42699-49429
ಸಿಪ್ಪೆಗೋಟು	10290-20699
ಶಿವಮೊಗ್ಗ	
ಬೆಟ್ಟೆ	26069-55109
ಗೊರಬಲು	16009-37909
ಹೊಸತು	45368-48899
ರಾಶಿ	34779-49519
ಸರಕು	46000-82296
ಸಿದ್ದಾಪುರ	
ಬಿಳಿಗೋಟು	31319-33499
ಚಾಲಿ	37419-40099
ಕೋಕ	30899-33300
ಕೆಂಪುಗೋಟು	30099-33199
ರಾಶಿ	46269-49199
ತಟ್ಟಿಬೆಟ್ಟೆ	41222-48399

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹565
12 ಮೊಟ್ಟೆಗೆ	₹75
ಮೈಸೂರು	
100 ಮೊಟ್ಟೆಗೆ	₹565

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈಂಡ್)	₹1590 (1590)
ಸೋಯಾ (ರಿಫೈಂಡ್)	₹870 (910)
ಸೂರ್ಯಕಾಂತಿ (ರಿಫೈಂಡ್)	₹930 (935)
ಪಾಮೋಲಿನ್	₹848 (848)

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹266-462
ದ್ವಿತಳಿ (ಬಿ.ವಿ)	₹140-565

'ಗೋಧಿ, ಅಕ್ಕಿ, ಸಕ್ಕರೆ ರಫ್ತು ನಿರ್ಬಂಧ ಸಡಿಲಿಸಲ್ಲ'

ನವದೆಹಲಿ (ಪಿಟಿಐ): ಗೋಧಿ, ಅಕ್ಕಿ ಮತ್ತು ಸಕ್ಕರೆ ಮೇಲಿನ ರಫ್ತು ನಿರ್ಬಂಧವನ್ನು ತೆರವುಗೊಳಿಸುವ ಪ್ರಸ್ತಾವ ಸರ್ಕಾರದ ಮುಂದಿಲ್ಲ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ಹೇಳಿದರು.



ಪೀಯೂಷ್ ಗೋಯಲ್

ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ವಿದೇಶಗಳಿಂದ ಗೋಧಿ ಮತ್ತು ಸಕ್ಕರೆ ಆಮದಿಗೆ ಚಿಂತಿಸಿಲ್ಲ. ಸದ್ಯ ಅದರ ಅಗತ್ಯವೂ ಇಲ್ಲ' ಎಂದು ಸಚಿವರು ಸ್ಪಷ್ಟಪಡಿಸಿದರು.

ಇಂಡೊನೇಷ್ಯಾ, ಸೆನೆಗಲ್ ಮತ್ತು ಗಾಂಬಿಯಾ ಭಾರತದ ಮಿತ್ರರಾಷ್ಟ್ರಗಳಾಗಿವೆ. ಆಹಾರ ಭದ್ರತೆ ದೃಷ್ಟಿಯಿಂದ ಆ ರಾಷ್ಟ್ರಗಳಿಗೆ ಅಕ್ಕಿಯನ್ನು ಪೂರೈಸಲಾಗುತ್ತದೆ ಎಂದು ಹೇಳಿದರು.

ಕೇಂದ್ರ ಸರ್ಕಾರವು 2022ರ ಮೇ ತಿಂಗಳಿನಲ್ಲಿ ಗೋಧಿ ರಫ್ತಿಗೆ ನಿಷೇಧ ಹೇರಿತ್ತು. 2023ರ ಜುಲೈನಲ್ಲಿ ಬಾಸುಮತಿಯೇತರ ಅಕ್ಕಿಗಳ ರಫ್ತಿಗೂ ನಿರ್ಬಂಧ ವಿಧಿಸಿದೆ. ಅದೇ ವರ್ಷದ ಅಕ್ಟೋಬರ್‌ನಲ್ಲಿ ಸಕ್ಕರೆ ರಫ್ತಿಗೂ ನಿಷೇಧ ಹೇರಿತು. ದೇಶೀಯ ಮಾರುಕಟ್ಟೆಯಲ್ಲಿ ದರ ನಿಯಂತ್ರಣ ಕಾಯ್ದುಕೊಳ್ಳಲು ಈ ಕ್ರಮಕೈಗೊಂಡಿದೆ.



ಒಂಟೆ ಉತ್ಸವ ರಾಜಸ್ಥಾನದ ಬಿಕಾನೆರ್‌ನಲ್ಲಿ ನಡೆದ ಒಂಟೆ ಉತ್ಸವದ ನೋಟ ಪಿಟಿಐ ಚಿತ್ರ

ಕಾರ್ಮಿಕರಿಗೆ ಅವಧಿ ವಿಮೆ ಪ್ರಸ್ತಾವಕ್ಕೆ ಒಪ್ಪಿಗೆ

ನವದೆಹಲಿ (ಪಿಟಿಐ): ಗಡಿ ರಸ್ತೆಗಳ ಸಂಸ್ಥೆ (ಬಿಆರ್‌ಒ) ಕೈಗೊಂಡಿರುವ ವಿವಿಧ ಮೂಲಸೌಕರ್ಯ ಯೋಜನೆಗಳಲ್ಲಿ ತೊಡಗಿಸಿಕೊಂಡಿರುವ ಕೂಲಿ ಕಾರ್ಮಿಕರಿಗೆ ಅವಧಿ ವಿಮಾ ಸೌಲಭ್ಯ ಜಾರಿಗೊಳಿಸುವ ಪ್ರಸ್ತಾವಕ್ಕೆ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅನುಮೋದನೆ ನೀಡಿದ್ದಾರೆ.

ಕಾಮಗಾರಿಯ ಸಮಯದಲ್ಲಿ ಕಾರ್ಮಿಕರು ಸಾವನ್ನಪ್ಪಿದರೆ ಈ ವಿಮಾ ಯೋಜನೆಯಡಿ ಅವರ ಅವಲಂಬಿತರಿಗೆ ₹10 ಲಕ್ಷ ಪರಿಹಾರ ಸಿಗಲಿದೆ ಎಂದು ರಕ್ಷಣಾ ಸಚಿವಾಲಯ ಹೇಳಿದೆ.

'ಬಿಆರ್‌ಒ/ ಜನರಲ್ ರಿಸರ್ವ್ ಎಂಜಿನಿಯರ್ ಫೋರ್ಸ್ ಕೈಗೊಂಡಿರುವ ಯೋಜನೆಗಳಲ್ಲಿ ತೊಡಗಿರುವ ಕೂಲಿ ಕಾರ್ಮಿಕರಿಗೆ ವಿಮಾ ಯೋಜನೆ ಪ್ರಾರಂಭಿಸುವ ಪ್ರಸ್ತಾಪವನ್ನು ರಕ್ಷಣಾ ಸಚಿವರು ಅನುಮೋದಿಸಿದ್ದಾರೆ' ಎಂದು ಸಚಿವಾಲಯ ಹೇಳಿಕೆಯಲ್ಲಿ ತಿಳಿಸಿದೆ.

'ಈ ಯೋಜನೆಯು, ಅಪಾಯಕಾರಿ ತಾಣಗಳು, ಪ್ರತಿಕೂಲ ವಾತಾವರಣದಲ್ಲಿ ಕೆಲಸ ಮಾಡುವಾಗ ಅವಘಡ ಸಂಭವಿಸಿದರೆ, ಅನಾರೋಗ್ಯ ಪರಿಸ್ಥಿತಿಯಲ್ಲಿ ಸಾವು–ನೋವು ಸಂಭವಿಸಿದರೆ ಕೂಲಿ ಕಾರ್ಮಿಕರ ಕುಟುಂಬಕ್ಕೆ ವಿಮಾ ರಕ್ಷಣೆ ಒದಗಿಸಲಿದೆ' ಎಂದು ಹೇಳಿದೆ.

'ಡೆಸ್ಕ್‌ಟಾಪ್ ಕಂಪ್ಯೂಟರ್ ಆಮದಿಗೆ ನಿರ್ಬಂಧ ಇಲ್ಲ'

ನವದೆಹಲಿ (ಪಿಟಿಐ): ಡೆಸ್ಕ್‌ಟಾಪ್ ಕಂಪ್ಯೂಟರ್‌ಗಳ ಆಮದಿನ ಮೇಲೆ ಯಾವುದೇ ನಿರ್ಬಂಧ ವಿಧಿಸಿಲ್ಲ ಎಂದು ಕೇಂದ್ರ ಸರ್ಕಾರ ಹೇಳಿದೆ.

ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯದ ಅಡಿಯಲ್ಲಿ ಕಾರ್ಯ ನಿರ್ವಹಿಸುವ ವಿದೇಶಿ ವ್ಯಾಪಾರದ ಮಹಾ ನಿರ್ದೇಶನಾಲಯವು (ಡಿಜಿಎಫ್‌ಟಿ) ಹೊರಡಿಸಿರುವ ಸುತ್ತೋಲೆಯಲ್ಲಿ ಈ ಕುರಿತು ಸ್ಪಷ್ಟನೆ ನೀಡಲಾಗಿದೆ.

ಲ್ಯಾಪ್‌ಟಾಪ್, ಪರ್ಸನಲ್ ಕಂಪ್ಯೂಟರ್, ಟ್ಯಾಬ್, ಅಲ್ಟ್ರಾ ಸ್ಮಾಲ್ ಫಾರ್ಮ್ ಫ್ಯಾಕ್ಟರ್ ಕಂಪ್ಯೂಟರ್ ಮತ್ತು ಸರ್ವರ್‌ಗಳ ಆಮದಿಗೆ ಮಾತ್ರವಷ್ಟೇ ನಿರ್ಬಂಧ ಹೇರಲಾಗಿದೆ ಎಂದು ತಿಳಿಸಿದೆ.

ದೇಶದಲ್ಲಿಯೇ ಇವುಗಳ ಉತ್ಪಾದನೆಗೆ ಉತ್ತೇಜನ ನೀಡಲು ಸರ್ಕಾರವು ಈ ಕ್ರಮಕೈಗೊಂಡಿದೆ.

ಲೋಕಸಭೆ ಸೀಟು ಹಂಚಿಕೆ: ಕಾಂಗ್ರೆಸ್– ಎಎಪಿ ಸಭೆ

ನವದೆಹಲಿ: ಲೋಕಸಭೆ ಚುನಾವಣೆ ಸಂಬಂಧ ಕಾಂಗ್ರೆಸ್ ಮತ್ತು ಎಎಪಿ ಪಕ್ಷಗಳ ಮುಖಂಡರು ನವದೆಹಲಿಯಲ್ಲಿ ಶನಿವಾರ ಚರ್ಚೆ ನಡೆಸಿದ್ದು, ಸೀಟು ಹಂಚಿಕೆ ವಿಚಾರದಲ್ಲಿ ಪರಸ್ಪರ ರಾಜಿ ಮಾಡಿಕೊಳ್ಳಲು ನಿರ್ಧರಿಸಿದ್ದಾರೆ ಎನ್ನಲಾಗಿದೆ.

ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಪಕ್ಷದ ನಾಯಕ ರಾಹುಲ್ ಗಾಂಧಿ ಅವರ ಜೊತೆ ಎಎಪಿ ಸಂಚಾಲಕ, ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ಸಭೆ ನಡೆಸಿದರು.

ಯಾವ ಪಕ್ಷ ಎಷ್ಟು ಸ್ಥಾನಗಳಲ್ಲಿ ಸ್ಪರ್ಧಿಸಬೇಕು ಎಂಬ ಕುರಿತು ಸ್ಪಷ್ಟ ನಿರ್ಧಾರವನ್ನು ಸಭೆಯಲ್ಲಿ ತೆಗೆದು-ಕೊಳ್ಳಲಾಗಲಿಲ್ಲ. ಆದರೆ, ಲೋಕಸಭೆ ಚುನಾವಣೆಯಲ್ಲಿ 'ಇಂಡಿಯಾ' ಮೈತ್ರಿಕೂಟವನ್ನು ಗೆಲುವಿನತ್ತ ಕೊಂಡೊಯ್ಯುವ ನಿಟ್ಟಿನಲ್ಲಿ ಉಭಯ ಪಕ್ಷಗಳು ಬದ್ಧತೆ ವ್ಯಕ್ತಪಡಿಸಿದವು ಎಂದು ಮೂಲಗಳು ತಿಳಿಸಿವೆ.

ಗೆಲ್ಲುವ ಅಭ್ಯರ್ಥಿಯನ್ನು ಕಾಂಗ್ರೆಸ್ ಕಣಕ್ಕಿಳಿಸುವುದಾದರೆ, ತಾವು ಯಾವ ಹಂತದವರೆಗಾದರೂ ರಾಜಿ ಮಾಡಿಕೊಳ್ಳಲು ಸಿದ್ಧರಿರುವುದಾಗಿ ಕೇಜ್ರಿವಾಲ್ ಸಭೆಯಲ್ಲಿ ಹೇಳಿದರು. ಇದೇ ವೇಳೆ, ಕೆಲ ಕ್ಷೇತ್ರಗಳಲ್ಲಿ ಉಭಯ ಪಕ್ಷಗಳು ಪರಸ್ಪರ ಎದುರಾಳಿಗಳಾಗಿ ಸ್ಪರ್ಧಿಸಬೇಕಾಗುತ್ತದೆ ಎಂದು ಕೂಡಾ ಅವರು ಕಾಂಗ್ರೆಸ್ ನಾಯಕರಿಗೆ ಹೇಳಿದರು ಎಂದು ಮೂಲಗಳು ತಿಳಿಸಿವೆ.

ದೆಹಲಿ, ಹರಿಯಾಣ, ಗುಜರಾತ್ ಮತ್ತು ಗೋವಾದಲ್ಲಿ ಸೀಟುಹಂಚಿಕೆ ಕುರಿತು ಉಭಯ ಪಕ್ಷಗಳಲ್ಲಿ ಬಹುತೇಕ ಒಮ್ಮತ ಮೂಡಿದೆ. ಆದರೆ ಪಂಜಾಬ್‌ನಲ್ಲಿ ಸೀಟುಹಂಚಿಕೆ ಮಾತುಕತೆ ಅಷ್ಟು ಸುಲಭವಲ್ಲ ಎಂದು ಮೂಲಗಳು ತಿಳಿಸಿವೆ. ಸಭೆಯಲ್ಲಿ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಕೆ.ಸಿ. ವೇಣುಗೋಪಾಲ್, ಎಎಪಿ ಸಂಸದ ರಾಘವ್ ಛಡ್ಡಾ ಅವರೂ ಪಾಲ್ಗೊಂಡಿದ್ದರು.



ನವದೆಹಲಿಯಲ್ಲಿ ಶನಿವಾರ ನಡೆದ ಸಭೆಯಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಚರ್ಚಿಸಿದರು. ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ಎಎಪಿ ನಾಯಕ ರಾಘವ ಛಡ್ಡಾ, ಕೆ.ಸಿ. ವೇಣುಗೋಪಾಲ್ ಹಾಜರಿದ್ದರು ಪಿಟಿಐ ಚಿತ್ರ

ಖರ್ಗೆ ಅಧ್ಯಕ್ಷ : ಮೂಡಿದ ಒಮ್ಮತ

ಒಂದನೇ ಪುಟದಿಂದ

'ಸಿಪಿಎಂ ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚೂರಿ ಅವರು ಅಧ್ಯಕ್ಷ ಹಾಗೂ ಸಂಚಾಲಕರ ಹುದ್ದೆಯನ್ನು ಭರ್ತಿ ಮಾಡುವ ಬಗ್ಗೆ ಚರ್ಚಿಸುತ್ತೀರಾ ಎಂದು ಕೇಳಿ ಈ ಸ್ಥಾನಗಳಿಗೆ ಕ್ರಮವಾಗಿ ಖರ್ಗೆ ಹಾಗೂ ನಿತೀಶ್ ಅವರ ಹೆಸರುಗಳನ್ನು ಸೂಚಿಸಿದರು. ಎನ್‌ಸಿಪಿಯ ಶರದ್ ಪವಾರ್, ಎಎಪಿಯ ಅರವಿಂದ ಕೇಜ್ರಿವಾಲ್ ಮತ್ತು ಸಿಪಿಐ ಪಕ್ಷದ ಡಿ.ರಾಜಾ ಒಳಗೊಂಡಂತೆ ಸಭೆಯಲ್ಲಿ ಪಾಲ್ಗೊಂಡಿದ್ದ ಇತರ ನಾಯಕರು ಅದಕ್ಕೆ ಒಪ್ಪಿಗೆ ಸೂಚಿಸಿದರು' ಎಂದು ಮೂಲಗಳು ಹೇಳಿವೆ.

ಲಾಲು ಹೆಸರು ಸೂಚಿಸಿದ ನಿತೀಶ್: 'ಯಾರು ಬೇಕಾದರೂ ಸಂಚಾಲಕರು ಆಗಬಹುದು. ಆರ್‌ಜೆಡಿ ನಾಯಕ ಲಾಲು ಪ್ರಸಾದ್ ಅವರೂ ಸಭೆಯಲ್ಲಿ ಪಾಲ್ಗೊಂಡಿದ್ದು, ಒಬ್ಬ ಹಿರಿಯ ನಾಯಕರಾಗಿರುವ ಕಾರಣ ಅವರನ್ನು ಸಂಚಾಲಕರಾಗಿ ನೇಮಕ ಮಾಡಬೇಕು' ಎಂದು ಸಭೆಯಲ್ಲಿ ನಿತೀಶ್ ಹೇಳಿದ್ದಾಗಿ ಮೂಲಗಳು ತಿಳಿಸಿವೆ. ಪಶ್ಚಿಮ ಬಂಗಾಳದಲ್ಲಿ ಸೀಟು ಹಂಚಿಕೆ ವಿಚಾರ ಮತ್ತು ನಿತೀಶ್ ಅವರನ್ನು ಸಂಚಾ-ಲಕರನ್ನಾಗಿ ನೇಮಕ ಮಾಡುವುದಕ್ಕೆ ಟಿಎಂಸಿ ಅಸಮಾಧಾನ ವ್ಯಕ್ತಪಡಿಸಿತ್ತು. ಮಮತಾ ಅವರು ವರ್ಚುವಲ್ ಸಭೆಯಲ್ಲಿ ಪಾಲ್ಗೊಳ್ಳುವುದಿಲ್ಲ' ಎಂದು ಟಿಎಂಸಿ ಶುಕ್ರವಾರವೇ ತಿಳಿಸಿತ್ತು.

ಸಂಕ್ಷಿಪ್ತ ಸುದ್ದಿ

ಕಲ್ಲಿದ್ದಲು ಗಣಿಯಲ್ಲಿ ಅವಘಡ 10 ಮಂದಿ ಸಾವು

ಬೀಜಿಂಗ್ (ಪಿಟಿಐ): ಕೇಂದ್ರ ಚೀನಾದ ಹೆನನ್ ಪ್ರಾಂತ್ಯದಲ್ಲಿರುವ ಕಲ್ಲಿದ್ದಲು ಗಣಿಯಲ್ಲಿ ಸಂಭವಿಸಿದ ಅವಘಡದಲ್ಲಿ ಹತ್ತು ಮಂದಿ ಮೃತಪಟ್ಟಿದ್ದು, ಆರು ಜನರು ಗಾಯಗೊಂಡಿದ್ದಾರೆ ಎಂದು ಸ್ಥಳೀಯ ಅಧಿಕಾರಿಗಳು ಶನಿವಾರ ತಿಳಿಸಿದರು. ಪಿಂಗ್ಡಿಂಶ್ಯಾನ್ ಟಿಯನಾನ್ ಕೋಲ್ ಮೈನಿಂಗ್ ಕೊ. ಲಿಮಿಟೆಡ್‌ನ ಗಣಿಯಲ್ಲಿ ಶುಕ್ರವಾರ ರಾತ್ರಿ 2.55ರ ಸುಮಾರಿಗೆ ಕಲ್ಲಿದ್ದಲು ಮತ್ತು ಅನಿಲ ಸ್ಫೋಟಗೊಂಡು ದುರಂತ ಸಂಭವಿಸಿರುವ ಸಾಧ್ಯತೆ ಇದೆ. ಈ ವೇಳೆ 425 ಮಂದಿ ನೆಲದಡಿಯಲ್ಲಿ ಕೆಲಸ ಮಾಡುತ್ತಿದ್ದರು. ಸದ್ಯ 380 ಮಂದಿಯನ್ನು ಸುರಕ್ಷಿತವಾಗಿ ಹೊರಗೆ ತರಲಾಗಿದೆ. ರಕ್ಷಣಾ ಕಾರ್ಯಾಚರಣೆ ಪ್ರಗತಿಯಲ್ಲಿದೆ ಎಂದು ಸರ್ಕಾರಿ ಒಡೆತನದ ಸಿಸಿಟಿವಿ ವರದಿ ಮಾಡಿದೆ.

ಉಕ್ರೇನ್ ಮೇಲೆ ರಷ್ಯಾ ಕ್ಷಿಪಣಿ ದಾಳಿ

ಕೀವ್ (ರಾಯಿಟರ್ಸ್): ಉಕ್ರೇನ್ ಮೇಲೆ ಶನಿವಾರ ಮುಂಜಾನೆ ಕ್ಷಿಪಣಿ ದಾಳಿಯನ್ನು ರಷ್ಯಾ ತೀವ್ರಗೊಳಿಸಿದೆ. ಭೀಕರ ಹೈಪರ್‌ಸಾನಿಕ್ ಕ್ಷಿಪಣಿ ಮೂಲಕವೂ ದಾಳಿ ನಡೆಸಿದೆ ಎಂದು ಉಕ್ರೇನ್ ವಾಯುಪಡೆ ತಿಳಿಸಿದೆ.

ಕನಿಷ್ಠ ಐದು ಪ್ರದೇಶಗಳಲ್ಲಿ ರಷ್ಯಾದ ಕ್ಷಿಪಣಿಗಳನ್ನು ಹೊಡೆದುರುಳಿಸಲಾಗಿದೆ ಎಂದು ಸ್ಥಳೀಯ ಅಧಿಕಾರಿಗಳು ತಿಳಿಸಿದ್ದಾರೆ.

'ರಷ್ಯಾ ದಾಳಿ ಪರಿಣಾಮ ಹಲವು ಮನೆಗಳು, ಕಟ್ಟಡಗಳು ಹಾನಿಗೊಳಗಾಗಿವೆ. ನಾಯಿಯೊಂದು ಮೃತಪಟ್ಟಿದೆ. ಜನರಿಗೆ ಹಾನಿಯಾಗಿಲ್ಲ' ಎಂದು ಉಕ್ರೇನ್ ಪೊಲೀಸರು ತಿಳಿಸಿದ್ದಾರೆ.

ಕೊಲಂಬಿಯಾದಲ್ಲಿ ಭೂ ಕುಸಿತ: 17 ಜನರ ಸಾವು

ಬೊಗೋಟಾ (ರಾಯಿಟರ್ಸ್): ಕೊಲಂಬಿಯಾದ ವಾಯವ್ಯ ಭಾಗದಲ್ಲಿ ಸುರಿದ ಭಾರೀ ಮಳೆಯಿಂದ, ಶುಕ್ರವಾರ ಮಧ್ಯಾಹ್ನ ಸಂಭವಿಸಿದ ಭೂ ಕುಸಿತದಲ್ಲಿ 17 ಮಂದಿ ಮೃತಪಟ್ಟಿದ್ದು, 35 ಜನರು ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ಶನಿವಾರ ತಿಳಿಸಿದ್ದಾರೆ. ಪೆಸಿಫಿಕ್ ಪ್ರಾಂತ್ಯದ ಚೋಕೊದಲ್ಲಿ ಭೂ ಕುಸಿತವಾಗಿದ್ದು, ಕ್ವಿಬ್ಡೊ–ಮೆಡೆಲಿನ್ ನಗರಗಳನ್ನು ಸಂಪರ್ಕಿಸುವ ಹೆದ್ದಾರಿಯನ್ನು ಮಣ್ಣು ಆವರಿಸಿದೆ. ವಾಹನ ದಟ್ಟಣೆಯ ಈ ಹೆದ್ದಾರಿಯಲ್ಲಿ ಚಲಿಸುತ್ತಿದ್ದ ಕಾರುಗಳು ಮಣ್ಣಿನಡಿ ಸಿಲುಕಿರುವುದರಿಂದ, ಇನ್ನೂ ಹಲವರು ನಾಪತ್ತೆಯಾಗಿದ್ದಾರೆ ಎಂದು ಅಧಿಕಾರಿಗಳು ಹೇಳಿದ್ದಾರೆ.

'ಇದೂವರೆಗೆ ದುರಂತ ನಡೆದ ಸ್ಥಳದಿಂದ 17 ಮೃತದೇಹಗಳನ್ನು ಹೊರ ತೆಗೆಯಲಾಗಿದೆ. ಗಾಯ-ಗೊಂಡವರನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಲಾಗಿದೆ' ಎಂದು ಚೋಕೊ ಸರ್ಕಾರ ತನ್ನ ಎಕ್ಸ್ ಖಾತೆಯಲ್ಲಿ ತಿಳಿಸಿದೆ.

ಪರ್ವತದ ದೊಡ್ಡ ಭಾಗವೊಂದು ಕುಸಿದು ಹೆದ್ದಾರಿಯಲ್ಲಿ ಸಂಚರಿಸುತ್ತಿದ್ದ ಹಲವು ಕಾರುಗಳ ಮೇಲೆ ಬೀಳುತ್ತಿರುವ ಚಿತ್ರ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

ಗುವಾಹಟಿಗೆ ವಿಮಾನ ವಾಪಸ್

ಗುವಾಹಟಿ/ ಮುಂಬೈ (ಪಿಟಿಐ): ಹವಾಮಾನ ವೈಪರೀತ್ಯದಿಂದಾಗಿ ಬಾಂಗ್ಲಾದೇಶದ ಢಾಕಾಗೆ ಮಾರ್ಗ ಬದಲಾವಣೆ ಮಾಡಿದ್ದ ಇಂಡಿಗೊ ವಿಮಾನವು ಗುವಾಹಟಿಯ ಲೋಕಪ್ರಿಯ ಗೋಪಿನಾಥ ಬೊರ್ಡೊಲೊಯ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಇಳಿಯಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಶನಿವಾರ ಬೆಳಿಗ್ಗೆ 10.54ಕ್ಕೆ ಢಾಕಾದಿಂದ ಹೊರಟ ವಿಮಾನವು 11.10 ಗಂಟೆಗೆ ಗುವಾಹಟಿಗೆ ಬಂದಿದೆ. ಶುಕ್ರವಾರ ಮುಂಬೈನಿಂದ ಗುವಾಹಟಿಗೆ ಹೊರಟಿದ್ದ ಇಂಡಿಗೊ 5319 ವಿಮಾನ ಹವಾಮಾನ ವೈಪರೀತ್ಯದಿಂದಾಗಿ ಢಾಕಾಗೆ ಮಾರ್ಗ ಬದಲಾವಣೆ ಮಾಡಿತ್ತು.

ಬ್ರಿಟನ್ ಹೈಕಮಿಷನರ್‌ಗೆ ಆಕ್ಷೇಪ ತಿಳಿಸಿದ ವಿದೇಶಾಂಗ ಕಾರ್ಯದರ್ಶಿ ವಿನಯ್ ಮೋಹನ್ ಕ್ವಾತ್ರಾ

ಪಿಒಕೆಗೆ ಬ್ರಿಟನ್ ರಾಯಭಾರಿ: ಭಾರತ ಕಿಡಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೇಂದ್ರಾಡಳಿತ ಪ್ರದೇಶ ಜಮ್ಮು ಮತ್ತು ಕಾಶ್ಮೀರದ ಭಾಗವಾದ, ಪಾಕಿಸ್ತಾನ ಆಕ್ರಮಿಸಿಕೊಂಡಿರುವ ಮೀರ್‌ಪುರಕ್ಕೆ ಬ್ರಿಟನ್ ರಾಯಭಾರಿ ಜೇನ್ ಮ್ಯಾರಿಯಟ್ ಭೇಟಿ ನೀಡಿರುವುದಕ್ಕೆ ಭಾರತ ಸರ್ಕಾರ ಶನಿವಾರ ತೀವ್ರ ಆಕ್ಷೇಪ ವ್ಯಕ್ತಪಡಿಸಿದೆ.

ಜ.10ರಂದು ರಕ್ಷಣಾ ಸಚಿವ ರಾಜನಾಥ ಸಿಂಗ್ ಅವರು ಬ್ರಿಟನ್ ಪ್ರಧಾನಿ ರಿಷಿ ಸುನಕ್ ಅವರನ್ನು ಲಂಡನ್‌ನಲ್ಲಿ ಭೇಟಿಯಾಗಿದ್ದರು. ಆ ದಿನವೇ, ಪಾಕಿಸ್ತಾನದಲ್ಲಿನ ಬ್ರಿಟನ್ ರಾಯಭಾರಿ ಜೇನ್ ಮ್ಯಾರಿಯಟ್ ಅವರು ಮೀರ್‌ಪುರಕ್ಕೆ ಭೇಟಿ ನೀಡಿರುವುದು ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರವನ್ನು ಕೆರಳಿಸಿದ್ದು, 'ಇದು ಅತ್ಯಂತ ಆಕ್ಷೇಪಾರ್ಹ ಭೇಟಿ' ಎಂದು ಕಟುವಾಗಿ ಹೇಳಿದೆ.

ಪಾಕಿಸ್ತಾನದಲ್ಲಿನ ಬ್ರಿಟನ್ ಹೈಕಮಿಷನರ್ ಮೀರ್‌ಪುರಕ್ಕೆ ಭೇಟಿ ನೀಡಿರುವುದನ್ನು ಭಾರತದ ಸಾರ್ವಭೌಮತ್ವ ಮತ್ತು ಪ್ರಾದೇಶಿಕ ಸಮಗ್ರತೆಯ ಉಲ್ಲಂಘನೆ ಎಂದೇ ಪರಿಗಣಿಸಿದೆ ಎಂದಿರುವ ವಿದೇಶಾಂಗ ಕಾರ್ಯದರ್ಶಿ ವಿನಯ್ ಮೋಹನ್ ಕ್ವಾತ್ರಾ, ಭಾರತದಲ್ಲಿನ ಬ್ರಿಟನ್ ಹೈಕಮಿಷನರ್ ಅಲೆಕ್ಸ್ ಎಲ್ಲಿಸ್ ಅವರಿಗೆ ಭಾರತದ ಆಕ್ಷೇಪವನ್ನು ತಿಳಿಸಿದರು.

'ಜಮ್ಮು ಮತ್ತು ಕಾಶ್ಮೀರ ಹಾಗೂ ಲಡಾಖ್ ಕೇಂದ್ರಾಡಳಿತ ಪ್ರದೇಶಗಳು ಭಾರತದ ಅವಿಭಾಜ್ಯ ಅಂಗ' ಎಂದು ತನ್ನ ನೆಲದ ಹಕ್ಕುಗಳನ್ನು ಪುನರುಚ್ಚರಿಸಿದೆ.

ಜೇನ್ ಮ್ಯಾರಿಯಟ್ ಅವರು ಮೀರ್‌ಪುರಕ್ಕೆ ಭೇಟಿ ನೀಡಿರುವುದನ್ನು ಕೆಲವು ಚಿತ್ರಗಳ ಸಮೇತ ಸಾಮಾಜಿಕ ಜಾಲತಾಣ 'ಎಕ್ಸ್' ವೇದಿಕೆಯಲ್ಲಿ ಬಹಿರಂಗಪಡಿಸಿದ್ದರು. 'ಬ್ರಿಟನ್ ಮತ್ತು ಪಾಕಿಸ್ತಾನದ ಜನರ ನಡುವಿನ ಬಾಂಧವ್ಯದ ಹೃದಯವಾಗಿರುವ ಮೀರ್‌ಪುರದಿಂದ ಸಲಾಮ್! ಶೇ 70ರಷ್ಟು ಬ್ರಿಟನ್–ಪಾಕಿಸ್ತಾನಿಯರ ಬೇರುಗಳು ಮೀರ್‌ಪುರದಲ್ಲಿವೆ. ಅನಿವಾಸಿಗಳ ಹಿತಾಸಕ್ತಿಗಳಿಗಾಗಿ ನಾವು ಒಟ್ಟಿಗೆ ಮಾಡುವ ಕೆಲಸವು ನಿರ್ಣಾಯಕವಾಗಿದೆ. ನಿಮ್ಮ ಆತಿಥ್ಯಕ್ಕೆ ಧನ್ಯವಾದಗಳು!' ಎಂದು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದರು.

'ಆಜಾದ್ ಕಾಶ್ಮೀರ' ಮತ್ತು ಗಿಲ್ಗಿಟ್ ಬಾಲ್ಟಿಸ್ತಾನ್ ಪ್ರದೇಶಗಳು ತನ್ನ ಕೇಂದ್ರಾಡಳಿತ ಪ್ರದೇಶವಾದ ಜಮ್ಮು ಮತ್ತು ಕಾಶ್ಮೀರದ ಭಾಗವಾಗಿದೆ. ಆದರೆ ಪಾಕಿಸ್ತಾನವು ಅಕ್ರಮವಾಗಿ ಆಕ್ರಮಿಸಿಕೊಂಡಿದೆ ಎಂದು ಭಾರತವು ವಾದಿಸುತ್ತಿದೆ.

ಪಾಕಿಸ್ತಾನದಲ್ಲಿನ ಅಮೆರಿಕ ರಾಯಭಾರಿ ಡೊನಾಲ್ಡ್ ಬ್ಲೋಮ್ ಅವರು 2022ರ ಅಕ್ಟೋಬರ್ ಮತ್ತು 2023ರ ಸೆಪ್ಟೆಂಬರ್‌ನಲ್ಲಿ ಭಾರತಕ್ಕೆ ಸೇರಿದ, ಪಾಕ್ ಆಕ್ರಮಿತ ಪ್ರದೇಶಕ್ಕೆ ಭೇಟಿ ನೀಡಿದ್ದಾಗಲೂ ಭಾರತ ತನ್ನ ತೀವ್ರ ಪ್ರತಿಭಟನೆಯನ್ನು ದಾಖಲಿಸಿತ್ತು.

ಮುಖ್ಯಾಂಶಗಳು

- ಭೇಟಿ ಚಿತ್ರವನ್ನು 'ಎಕ್ಸ್'ನಲ್ಲಿ ಹಂಚಿಕೊಂಡಿರುವ ಜೇನ್ ಮ್ಯಾರಿಯಟ್
- ಅಮೆರಿಕ ರಾಯಭಾರಿ ಪಿಒಕೆಗೆ ಭೇಟಿ ನೀಡಿದ್ದಾಗ ಪ್ರತಿಭಟಿಸಿದ್ದ ಭಾರತ

'ಬಿಕ್ಕಟ್ಟಿನ ಮಧ್ಯೆ ಚೀನಾ ಸಹಜ ಸಂಬಂಧ ನಿರೀಕ್ಷಿಸಬಾರದು'

ನಾಗ್ಪುರ (ಪಿಟಿಐ): 'ಗಡಿಯಲ್ಲಿನ ಬಿಕ್ಕಟ್ಟಿನ ನಡುವೆಯೂ ಸಂಬಂಧಗಳು ಸಹಜವಾಗಿ ಮುಂದುವರಿಯಲಿವೆ ಎನ್ನುವುದನ್ನು ನೆರೆಯ ರಾಷ್ಟ್ರ ಚೀನಾ ನಿರೀಕ್ಷಿಸಬಾರದು' ಎಂದು ವಿದೇಶಾಂಗ ಸಚಿವ ಎಸ್. ಜೈಶಂಕರ್ ಶನಿವಾರ ಹೇಳಿದ್ದಾರೆ.



ಎಸ್. ಜೈಶಂಕರ್

ಇಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ 'ಜಾಗತಿಕ ರಾಜಕಾರಣದಲ್ಲಿ ಭಾರತದ ಉದಯ' ವಿಷಯ ಕುರಿತು ಮಾತನಾಡುವಾಗ, ಸಭಿಕರಿಂದ ಎದುರಾದ ಪ್ರಶ್ನೆಗಳಿಗೆ ಈ ಉತ್ತರ ನೀಡಿದರು.

'ಕೆಲವೊಮ್ಮೆ ಕಷ್ಟಕರ ಪರಿಸ್ಥಿತಿಗಳಿಗೆ ಪರಿಹಾರಗಳು ತ್ವರಿತವಾಗಿ ಸಿಗುವುದಿಲ್ಲ. ಇಂತಹ ಸನ್ನಿವೇಶದಲ್ಲಿ ರಾಜತಾಂತ್ರಿಕತೆ ಮುಂದುವರಿಯುತ್ತದೆ' ಎಂದರು.

'ಭಾರತ ಮತ್ತು ಚೀನಾ ನಡುವಿನ ಗಡಿ ಸಂಬಂಧದ ಒಪ್ಪಂದವನ್ನು ನೆರೆಯ ರಾಷ್ಟ್ರವು 2020ರಲ್ಲಿ ಉಲ್ಲಂಘಿಸಿತು. ಅದು ಹೆಚ್ಚಿನ ಸಂಖ್ಯೆಯಲ್ಲಿ ತನ್ನ ಸೈನಿಕರನ್ನು ವಾಸ್ತವ ನಿಯಂತ್ರಣ ರೇಖೆಗೆ (ಎಲ್‌ಎಸಿ) ಜಮಾವಣೆ ಮಾಡಿತು. ಇದರಿಂದ ಗಾಲ್ವಾನ್ ಘಟನೆ ಸಂಭವಿಸಿತು' ಎಂದು ಜೈಶಂಕರ್ ಹೇಳಿದರು.

'ಗಡಿಯಲ್ಲಿನ ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿಯದ ಹೊರತು, ಉಳಿದ ಸಂಬಂಧಗಳು ಸಹಜವಾಗಿ ಮುಂದುವರಿಯುವುದನ್ನು ಚೀನಾ ನಿರೀಕ್ಷಿಸಬಾರದು. ಅದು ಅಸಾಧ್ಯ ಕೂಡ. ನೀವು ಏಕಕಾಲದಲ್ಲಿ ಹೊಡೆದಾಡಲು ಮತ್ತು ವ್ಯಾಪಾರ ಮಾಡಲು ಆಗದು ಎನ್ನುವುದನ್ನು ಚೀನಾ ವಿದೇಶಾಂಗ ಸಚಿವರಿಗೂ ಸ್ಪಷ್ಟಪಡಿಸಲಾಗಿದೆ' ಎಂದೂ ಅವರು ಹೇಳಿದರು.

ಪ್ರಧಾನಿ ಮೋದಿ ಅವರು ಲಕ್ಷದ್ವೀಪಕ್ಕೆ ನೀಡಿದ ಭೇಟಿಯ ಬಗ್ಗೆ ಮಾಲ್ದೀವ್ಸ್ ಸಚಿವರು ಆಕ್ಷೇಪಾರ್ಹ ಹೇಳಿಕೆ ನೀಡಿದ್ದರಿಂದ ಇತ್ತೀಚೆಗೆ ಉಭಯ ದೇಶಗಳ ಸಂಬಂಧದಲ್ಲಿ ಉಂಟಾದ ಬಿರುಕಿನ ಬಗ್ಗೆ ಕೇಳಿದ ಪ್ರಶ್ನೆಗೆ ಜೈಶಂಕರ್, 'ನಾವು ಏನು ಮಾಡಲು ಪ್ರಯತ್ನಿಸುತ್ತಿದ್ದೇವೆಯೋ, ಅದರಲ್ಲಿ ಕಳೆದ 10 ವರ್ಷಗಳಲ್ಲಿ ಸಾಕಷ್ಟು ಯಶಸ್ವಿಯಾಗಿದ್ದೇವೆ' ಎಂದು ಹೇಳಿದರು.

'ಅಲ್ಲಿ ರಾಜಕೀಯ ಏರಿಳಿತಗಳಿರಬಹುದು. ಆದರೆ, ಆ ರಾಷ್ಟ್ರದ ಜನತೆಗೆ ಭಾರತದ ಬಗ್ಗೆ ಒಳ್ಳೆಯ ಭಾವನೆಗಳಿವೆ. ನಮ್ಮ ದೇಶದ ಜತೆಗೆ ಉತ್ತಮ ಸಂಬಂಧ ಬೇಕೆನ್ನುವುದನ್ನು ಅವರು ಅರ್ಥ ಮಾಡಿಕೊಂಡಿದ್ದಾರೆ. ಭಾರತವು ಆ ದೇಶದಲ್ಲಿ ರಸ್ತೆಗಳ ನಿರ್ಮಾಣ, ವಿದ್ಯುತ್ ಸರಬರಾಜು ಮಾರ್ಗಗಳು, ಇಂಧನ ಪೂರೈಕೆ, ವ್ಯಾಪಾರ, ಹೂಡಿಕೆಯಲ್ಲಿ ತೊಡಗಿಸಿಕೊಂಡಿದೆ. ಇಲ್ಲಿನ ಜನರು ಅಲ್ಲಿ ರಜಾದಿನಗಳನ್ನು ಕಳೆಯುತ್ತಾರೆ' ಎಂದರು.

ಸುದ್ದಿ 2 ನಿಮಿಷ

'ಮತ್ತೆ ಟಿಆರ್‌ಎಸ್ ಆಗಲಿ'

ಹೈದರಾಬಾದ್ (ಪಿಟಿಐ): ತೆಲಂಗಾಣ ವಿಧಾನಸಭೆ ಚುನಾವಣೆಯಲ್ಲಿ ಸೋತಿರುವ ಬೆನ್ನಲ್ಲೇ, ಭಾರತ ರಾಷ್ಟ್ರ ಸಮಿತಿಯ (ಬಿಆರ್‌ಎಸ್) ಮುಖಂಡರು ಮತ್ತು ಕಾರ್ಯಕರ್ತರು ಪಕ್ಷದ ಹೆಸರನ್ನು ತೆಲಂಗಾಣ ರಾಷ್ಟ್ರ ಸಮಿತಿ (ಟಿಆರ್‌ಎಸ್) ಎಂದು ಮರುನಾಮಕರಣ ಮಾಡುವಂತೆ ಒತ್ತಾಯಿಸಿದ್ದಾರೆ.

ಪಕ್ಷದ ಹೆಸರಿನಲ್ಲಿದ್ದ 'ತೆಲಂಗಾಣ' ಅನ್ನು ತೆಗೆದು ಹಾಕಿರುವುದರಿಂದ ಪಕ್ಷವು ರಾಜ್ಯದ ಜನರಿಂದ ಬೇರ್ಪಟ್ಟಂತೆ ಮೇಲ್ನೋಟಕ್ಕೆ ಕಂಡುಬರುತ್ತಿದೆ ಎಂದು ಬಿಆರ್‌ಎಸ್ ಕಾರ್ಯಾಧ್ಯಕ್ಷ ಕೆ.ಟಿ. ರಾಮರಾವ್ ಅವರಿಗೆ ಕಾರ್ಯಕರ್ತರು ತಿಳಿಸಿದ್ದಾರೆ ಎನ್ನಲಾಗಿದೆ.

ಲೋಕಸಭೆ ಚುನಾವಣೆ ತಯಾರಿಗಾಗಿ ರಾಮರಾವ್ ಸೇರಿದಂತೆ ಬಿಆರ್‌ಎಸ್ ಪಕ್ಷದ ಹಿರಿಯ ಮುಖಂಡರು ಜನವರಿ ಮೂರರಿಂದ ಸರಣಿ ಸಭೆಗಳನ್ನು ನಡೆಸುತ್ತಿದ್ದಾರೆ. ಜೊತೆಗೆ ವಿಧಾನಸಭೆ ಚುನಾವಣೆಯಲ್ಲಿ ಪಕ್ಷದ ಸೋಲಿಗೆ ಕಾರಣಗಳು ಏನು ಎಂಬ ಬಗ್ಗೆಯೂ ಅವಲೋಕಿಸುತ್ತಿದ್ದಾರೆ.



'ಕೆಲವು ಮುಖಂಡರು ಮತ್ತು ಕಾರ್ಯಕರ್ತರು ಪಕ್ಷದ ಹೆಸರನ್ನು ಟಿಆರ್‌ಎಸ್ ಎಂದು ಬದಲಾಯಿಸುವಂತೆ ಹೇಳಿದ್ದಾರೆ' ಎಂದು ಪಕ್ಷದ ಹಿರಿಯ ಮುಖಂಡರು ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ. ಶೀಘ್ರದಲ್ಲೇ ಈ ಕುರಿತ ಸ್ಪಷ್ಟ ನಿಲುವು ಹೊರಬೀಳುವ ಸಾಧ್ಯತೆ ಇದೆ ಎನ್ನಲಾಗಿದೆ.

ಕೆಸಿಆರ್ ಅವರು 2022ರಲ್ಲಿ ಟಿಆರ್‌ಎಸ್ ಪಕ್ಷದ ಹೆಸರನ್ನು ಬಿಆರ್‌ಎಸ್ ಎಂದು ಬದಲಿಸಿದ್ದರು.

ಮಾಜಿ ರೂಪದರ್ಶಿ ದಿವ್ಯಾ ಶವ ಕಾಲುವೆಯಲ್ಲಿ ಪತ್ತೆ

ಚಂಡೀಗಢ (ಪಿಟಿಐ): ಹೋಟೆಲ್‌ವೊಂದರಲ್ಲಿ ಹತ್ಯೆಯಾಗಿದ್ದ ಮಾಜಿ ರೂಪದರ್ಶಿ ದಿವ್ಯಾ ಪಹುಜಾ ಅವರ ಮೃತದೇಹವು ಫತೇಹಾಬಾದ್ ಜಿಲ್ಲೆಯಲ್ಲಿರುವ ಕಾಲುವೆಯೊಂದರಲ್ಲಿ ಶನಿವಾರ ಪತ್ತೆಯಾಗಿದೆ.

'ಕೋಲ್ಕತ್ತ ವಿಮಾನ ನಿಲ್ದಾಣದಲ್ಲಿ ಗುರುವಾರ ಬಂಧಿತನಾಗಿದ್ದ ಆರೋಪಿ ಬಾಲ್‌ರಾಜ್ ಗಿಲ್ ನೀಡಿದ ಮಾಹಿತಿ ಆಧರಿಸಿ ಮೃತದೇಹವನ್ನು ಪತ್ತೆ ಹಚ್ಚಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

'ಹೋಟೆಲ್ ಮಾಲೀಕ ಅಭಿಜಿತ್ ಸಿಂಗ್‌ನ ಅಸಭ್ಯ ಚಿತ್ರಗಳನ್ನು ತೋರಿಸಿ, ಆತನನ್ನು ಬೆದರಿಸಿ ಹಣ ಪಡೆದುಕೊಳ್ಳುತ್ತಿದ್ದ ಪಹುಜಾ ಅವರನ್ನು ಹೋಟೆಲ್‌ಗೆ ಕರೆ ತಂದಿದ್ದ 5 ಮಂದಿ, ಕೋಣೆಯಲ್ಲಿ ಅವರಿಗೆ ಗುಂಡಿಕ್ಕಿ ಕೊಂದಿದ್ದಾರೆ' ಎಂದು ಮಾಹಿತಿ ನೀಡಿದ್ದಾರೆ. ಸಿಂಗ್ ಸೇರಿದಂತೆ ಇತರ ಆರೋಪಿಗಳು ಪಹುಜಾ ಅವರ ಮೃತದೇಹವನ್ನು ಬಿಳಿಬಣ್ಣದ ಶೀಟ್‌ನಲ್ಲಿ ಸುತ್ತಿ, ಕಾರಿನಲ್ಲಿ ತೆಗೆದುಕೊಂಡು ಹೋಗುತ್ತಿರುವುದು ಹೋಟೆಲ್‌ನ ಸಿ.ಸಿ ಟಿ.ವಿ ಕ್ಯಾಮೆರಾದ ದೃಶ್ಯಗಳಲ್ಲಿ ದಾಖಲಾಗಿದೆ. ಕಿಲೋಮೀಟರ್‌ನಷ್ಟು ದೂರ ಸಾಗಿದ ಬಳಿಕ ಸಿಂಗ್ ಕಾರನ್ನು ಬಾಲ್‌ರಾಜ್ ಗಿಲ್ ಸುಪರ್ದಿಗೆ ಒಪ್ಪಿಸಿದ್ದ. ಪಂಜಾಬ್‌ನ ಪಟಿಯಾಲಾದ ಬಸ್ ನಿಲ್ದಾಣವೊಂದರ ಬಳಿ ಕಾರು ಪತ್ತೆಯಾಗಿತ್ತು.

'ಮತ್ತೊಬ್ಬ ಆರೋಪಿ ರವಿ ಬಂಗಾ ಜೊತೆ ಸೇರಿ ಗಿಲ್, ಶವವನ್ನು ಕಾಲುವೆಗೆ ಹಾಕಿದ್ದು, ಬಂಗಾನನ್ನು ಸಹ ಬಂಧಿಸಲಾಗಿದೆ' ಎಂದು ಅಪರಾಧ ವಿಭಾಗದ ಎಸಿಪಿ ವರುಣ್ ಕುಮಾರ್ ದಹಿಯಾ ತಿಳಿಸಿದ್ದಾರೆ.

ಪ್ರತಿಷ್ಠಾಪನೆ ಸಮಾರಂಭಕ್ಕೆ ಹಾಜರಾಗುವ ಅತಿಥಿಗಳಿಗೆ ನೀಡಲು ಟ್ರಸ್ಟ್ ನಿರ್ಧಾರ

ರಾಮ ಜನ್ಮಭೂಮಿ ಮಣ್ಣು ಉಡುಗೊರೆ

ಅಯೋಧ್ಯೆ (ಪಿಟಿಐ): ರಾಮ ಮಂದಿರಕ್ಕೆ ಅಡಿಪಾಯ ಹಾಕುವ ವೇಳೆ ಅಗೆದಿದ್ದ ಮಣ್ಣನ್ನು ಪೊಟ್ಟಣಗಳಲ್ಲಿ ತುಂಬಿಸಿ ಪ್ರಾಣ ಪ್ರತಿಷ್ಠಾಪನೆ ಸಮಾರಂಭಕ್ಕೆ ಹಾಜರಾಗುವ ಅತಿಥಿಗಳಿಗೆ ಉಡುಗೊರೆಯಾಗಿ ನೀಡಲಾಗುವುದು ಎಂದು ರಾಮ ಜನ್ಮಭೂಮಿಯ ತೀರ್ಥ ಕ್ಷೇತ್ರ ಟ್ರಸ್ಟ್ ಶುಕ್ರವಾರ ತಿಳಿಸಿದೆ.

ಈ ಉಡುಗೊರೆಯನ್ನು 'ರಾಮರಾಜ್' ಎಂದು ಕರೆಯಲಾಗಿದೆ.

ಎರಡು ಪೊಟ್ಟಣಗಳಲ್ಲಿ ಉಡುಗೊರೆಗಳನ್ನು ನೀಡಲಾಗುವುದು. ಒಂದರಲ್ಲಿ ಮಣ್ಣು ಇದ್ದರೆ, ಮತ್ತೊಂದರಲ್ಲಿ ದೇಸಿ ತುಪ್ಪದಿಂದ ತಯಾರಿಸಲಾದ ವಿಶೇಷ ಮೋತಿಚೂರ್ ಲಡ್ಡು, ಪವಿತ್ರ ತುಳಸಿ ದಳ ಇರಿಸಲಾಗುವುದು. ಸರಯೂ ನದಿಯ ನೀರು ಮತ್ತು ಗೋರಖಪುರದ ಗೀತಾ ಪ್ರೆಸ್ ಮುದ್ರಿಸಿರುವ ಧಾರ್ಮಿಕ ಪುಸ್ತಗಳೂ ಉಡುಗೊರೆ ಪೊಟ್ಟಣದಲ್ಲಿ ಇರಲಿವೆ ಎಂದು ಟ್ರಸ್ಟ್‌ನ ಸದಸ್ಯರೊಬ್ಬರು ಹೇಳಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರಿಗೆ ಅಯೋಧ್ಯೆ ರಾಮ ಮಂದಿರದ 15 ಅಡಿ ಎತ್ತರದ ಚಿತ್ರವನ್ನು ಚೀಲದಲ್ಲಿ ಇರಿಸಿ ನೀಡಲಾಗುವುದು. ಅದರಲ್ಲಿ ಮಂದಿರದ ಇತರ ಚಿತ್ರಗಳೂ ಇರಲಿವೆ.

11,000ಕ್ಕೂ ಹೆಚ್ಚು ಅತಿಥಿಗಳಿಗೆ ನೆನಪಿನಲ್ಲಿ ಉಳಿಯುವಂಥ ಉಡುಗೊರೆಗಳನ್ನು ನೀಡಲು ತಯಾರಿ ಮಾಡಿಕೊಳ್ಳಲಾಗುತ್ತಿದೆ. ಆಮಂತ್ರಿತ ಗಣ್ಯ ವ್ಯಕ್ತಿಗಳು ಮತ್ತು ಅತಿಥಿಗಳಿಗೆ ಸ್ವಾಗತ ಕೋರಲು ಟ್ರಸ್ಟ್ ಸಿದ್ಧತೆ ಮಾಡಿಕೊಳ್ಳುತ್ತಿದೆ ಎಂದು ಅವರು ತಿಳಿಸಿದ್ದಾರೆ.



ಮಹಾರಾಷ್ಟ್ರದ ಉಜ್ಜೈನಿಯಿಂದ ಉತ್ತರ ಪ್ರದೇಶದ ಅಯೋಧ್ಯೆಗೆ ಕೈಗೊಂಡಿರುವ ಪಾದಯಾತ್ರೆಯು ಶನಿವಾರ ಲಖನೌ ತಲುಪಿತು. ಈ ವೇಳೆ ಭಕ್ತರು ಯಾತ್ರೆಯಲ್ಲಿ ಪಾಲ್ಗೊಂಡರು —ಪಿಟಿಐ ಚಿತ್ರ

ಸೆವೆನ್ ಸ್ಟಾರ್ ವೆಜ್ ಹೋಟೆಲ್

ಲಖನೌ: ಕೇವಲ ಸಸ್ಯಾಹಾರ ಒದಗಿಸುವ ಜಗತ್ತಿನ ಪ್ರಥಮ ಸೆವೆನ್ ಸ್ಟಾರ್ ಹೋಟೆಲ್ ಅನ್ನು ಅಯೋಧ್ಯೆಯಲ್ಲಿ ನಿರ್ಮಿಸಲಾಗುತ್ತದೆ ಎಂದು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಹೇಳಿದರು.
ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಅವರು, ಅಯೋಧ್ಯೆಯಲ್ಲಿ ಹೋಟೆಲ್ ನಿರ್ಮಿಸಲು 25 ಪ್ರಸ್ತಾವನೆಗಳು ಬಂದಿವೆ. ಅದರಲ್ಲಿ ಸೆವೆನ್ ಸ್ಟಾರ್ ಹೋಟೆಲ್ ನಿರ್ಮಿಸುವ ಪ್ರಸ್ತಾವನೆಯೂ ಸೇರಿದೆ ಎಂದರು.
ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ರಮದ ವಾರ್ಷಿಕೋತ್ಸವ ಆಚರಿಸುವ ನಿಟ್ಟಿನಲ್ಲಿ ಪ್ರತಿವರ್ಷ ಜನವರಿ 22ರಂದು ಧಾರ್ಮಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದು ಎಂದು ಹೇಳಿದರು.

- 'ರಾಮ ಜನ್ಮಭೂಮಿ ಹೋರಾಟವು ಸುಳ್ಳು ಜಾತ್ಯತೀತ ವಾದವನ್ನು ತೊಡೆದುಹಾಕಿ, ಜಾತ್ಯತೀತತೆಯ ನಿಜವಾದ ಅರ್ಥವನ್ನು ಮರುಸ್ಥಾಪಿಸಿದ್ದರ ಸಂಕೇತವಾಗಿದೆ' ಎಂದು ಎಲ್.ಕೆ. ಅಡ್ವಾಣಿ ಅವರು ಹೇಳಿದ್ದಾರೆ.
- ರಾಮ ಮೂರ್ತಿ ಪ್ರತಿಷ್ಠಾಪನೆ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವುದಿಲ್ಲ ಎಂದು ಬಹುಜನ ಸಮಾಜ ಪಕ್ಷ (ಬಿಎಸ್‌ಪಿ) ಮುಖ್ಯಸ್ಥೆ ಮಾಯಾವತಿ ಹೇಳಿದ್ದಾರೆ.
- ರಾಮ ಮೂರ್ತಿ ಪ್ರತಿಷ್ಠಾಪನೆ ಹಿನ್ನೆಲೆಯಲ್ಲಿ ಧಾರ್ಮಿಕ ಸ್ಥಳಗಳು ಮತ್ತು ಅವುಗಳ ಸುತ್ತಲಿನ ಪ್ರದೇಶಗಳನ್ನು ಸ್ವಚ್ಛಗೊಳಿಸುವ ರಾಷ್ಟ್ರವ್ಯಾಪಿ ಅಭಿಯಾನಕ್ಕೆ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರು ಭಾನುವಾರ ಚಾಲನೆ ನೀಡಲಿದ್ದಾರೆ

'ರಾಜಕೀಯಕ್ಕಾಗಿ ವಿದ್ಯಾಭ್ಯಾಸದ ಜೊತೆ ರಾಜಿ ಬೇಡ'

ನವದೆಹಲಿ (ಪಿಟಿಐ): ವಿದ್ಯಾರ್ಥಿಗಳು ರಾಜಕೀಯಕ್ಕಾಗಿ, ತಮ್ಮ ವಿದ್ಯಾಭ್ಯಾಸದ ಜೊತೆ ರಾಜಿಯಾಗ ಬಾರದು ಎಂದು ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದ (ಜೆಎನ್‌ಯು) ಕುಲಪತಿ ಶಾಂತಿಶ್ರೀ ಡಿ. ಪಂಡಿತ್ ಸಲಹೆ ನೀಡಿದ್ದಾರೆ. ಕ್ಯಾಂಪಸ್ ಒಳಗೆ ಧರಣಿ ನಡೆಸುವುದರ ವಿರುದ್ಧ ಕಠಿಣ ಕ್ರಮಕೈಗೊಂಡಿರುವುದು ವಿವಾದಕ್ಕೆ ಕಾರಣವಾಗಿರುವ ಬೆನ್ನಲ್ಲೇ ಅವರು ಈ ರೀತಿ ಹೇಳಿದ್ದಾರೆ.



ಶಾಂತಿಶ್ರೀ ಡಿ. ಪಂಡಿತ್

'ಶಿಸ್ತುಕ್ರಮವು ವಿದ್ಯಾರ್ಥಿಗಳ ಭವಿಷ್ಯದ ಮೇಲೆ ಕೆಟ್ಟ ಪರಿಣಾಮ ಬೀರಲಿದೆ. ಪ್ರತಿಭಟನೆ ನಡೆಸಬಾರದು ಎಂದು ಯಾರೂ ಹೇಳಿಲ್ಲ. ಆದರೆ, ಪ್ರತಿಭಟನೆಗಾಗಿ ವಿದ್ಯಾಭ್ಯಾಸದೊಂದಿಗೆ ರಾಜಿಯಾಗಬಾರದು' ಎಂದರು.

ದೆಹಲಿ ಅಬಕಾರಿ ನೀತಿ ಹಗರಣ

ಕೇಜ್ರಿವಾಲ್‌ಗೆ ಮತ್ತೆ ಸಮನ್ಸ್

ನವದೆಹಲಿ (ಪಿಟಿಐ): ದೆಹಲಿ ಅಬಕಾರಿ ನೀತಿ ಹಗರಣದ ಜೊತೆ ನಂಟು ಹೊಂದಿರುವ ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿ ವಿಚಾರಣೆಗೆ ಹಾಜರಾಗುವಂತೆ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರಿಗೆ ಜಾರಿ ನಿರ್ದೇಶನಾಲಯ (ಇ.ಡಿ) ನಾಲ್ಕನೇ ಬಾರಿ ಸಮನ್ಸ್ ನೀಡಿದೆ.

ಇದೇ 18ರಂದು ದೆಹಲಿಯ ಇ.ಡಿ ಮುಖ್ಯ ಕಚೇರಿಗೆ ಹಾಜರಾಗುವಂತೆ ಕೇಜ್ರಿವಾಲ್ ಅವರಿಗೆ ಶನಿವಾರ ನೀಡಿರುವ ಸಮನ್ಸ್‌ನಲ್ಲಿ ಸೂಚಿಸಲಾಗಿದೆ.

ಈ ಹಿಂದೆ ಇ.ಡಿ ಮೂರು ಬಾರಿ ಸಮನ್ಸ್ ನೀಡಿದ್ದರೂ ಕೇಜ್ರಿವಾಲ್ ಅವರು ವಿಚಾರಣೆಗೆ ಹಾಜರಾಗಲು ನಿರಾಕರಿಸಿದ್ದರು.

ಹಣ ಅಕ್ರಮ ವರ್ಗಾವಣೆ ನಿಯಂತ್ರಣ ಕಾಯ್ದೆಯ (ಪಿಎಂಎಲ್‌ಎ) ಅಡಿ ಸಮನ್ಸ್ ನೀಡಲಾಗಿದೆ ಎಂದು ಇ.ಡಿ ಮೂಲಗಳು ತಿಳಿಸಿವೆ. ಈ ಪ್ರಕರಣಕ್ಕೆ ಸಂಬಂಧಿಸಿ ಇ.ಡಿ ಸಲ್ಲಿಸಿರುವ ಆರೋಪಪಟ್ಟಿಯಲ್ಲಿ ಹಲವು ಬಾರಿ ಕೇಜ್ರಿವಾಲ್ ಅವರ ಹೆಸರು ಉಲ್ಲೇಖಿಸಲಾಗಿತ್ತು.

ಇದೇ 19 ಮತ್ತು 20 ರಂದು ಗೋವಾದಲ್ಲಿ ನಡೆಯಲಿರುವ ಪಕ್ಷದ ಕಾರ್ಯಕರ್ತರ ಜೊತೆಗಿನ ಸಂವಾದ ಕಾರ್ಯಕ್ರಮದಲ್ಲಿ ಕೇಜ್ರಿವಾಲ್ ಅವರು ಪಾಲ್ಗೊಳ್ಳುವ ನಿರೀಕ್ಷೆ ಇದೆ ಎಂದು ಪಕ್ಷದ ಗೋವಾ ಘಟಕದ ಅಧ್ಯಕ್ಷ ಅಮಿತ್ ಪಾಲೇಕರ್ ಹೇಳಿದ್ದಾರೆ.

'ಚುನಾವಣಾ ಪ್ರಚಾರದಿಂದ ದೂರವಿರಿಸಲು ಯತ್ನ': ಕೇಜ್ರಿವಾಲ್ ಅವರಿಗೆ ಇ.ಡಿ ಸಮನ್ಸ್ ನೀಡಿರುವುದಕ್ಕೆ ಪ್ರತಿಕ್ರಿಯಿಸಿರುವ ದೆಹಲಿ ಪರಿಸರ ಸಚಿವ ಗೋಪಾಲ್ ರಾಯ್, 'ಬಿಜೆಪಿಯು ಇ.ಡಿಯನ್ನು ದುರ್ಬಳಕೆ ಮಾಡಿಕೊಂಡು, ಕೇಜ್ರಿವಾಲ್ ಅವರು ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಪ್ರಚಾರ ನಡೆಸದಂತೆ ತಡೆಯಲು ಯತ್ನಿಸುತ್ತಿದೆ' ಎಂದು ಆರೋಪಿಸಿದ್ದಾರೆ.

ಕೇಜ್ರಿವಾಲ್ ಅವರು ಜನವರಿ 18ರಿಂದ ಗೋವಾ ಪ್ರವಾಸಕ್ಕೆ ತೆರಳಲಿದ್ದು, ಅದಕ್ಕೂ ಮುನ್ನ ಸಮನ್ಸ್ ನೀಡಲಾಗಿದೆ ಎಂದು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಕೇಜ್ರಿವಾಲ್ ಅವರಿಗೆ ಕಾನೂನು ಬಾಹಿರವಾಗಿ ನೋಟಿಸ್ ನೀಡುವುದನ್ನು ನಿಲ್ಲಿಸಿ ಎಂದೂ ಅವರು ಆಗ್ರಹಿಸಿದ್ದಾರೆ.

ಕೇಜ್ರಿವಾಲ್ ಅವರಿಗೆ ಸಮನ್ಸ್ ತಲುಪುವ ಮೊದಲೇ ಮಾಧ್ಯಮಗಳಿಗೆ ಸೋರಿಕೆಯಾಗಿದೆ ಎಂದು ಆರೋಪಿಸಿದ ಅವರು, ಇ.ಡಿಯು ಬಿಜೆಪಿಯ ರಾಜಕೀಯ ಅಸ್ತ್ರವಾಗುವುದನ್ನು ತಡೆಯಬೇಕು ಎಂದಿದ್ದಾರೆ.

ಕೇಜ್ರಿವಾಲ್ ಅವರು ವಿಚಾರಣೆಗೆ ಹಾಜರಾಗುತ್ತಾರಾ ಎಂದು ಸುದ್ದಿಗಾರರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಗೋಪಾಲ್ ರಾಯ್, ಕೇಜ್ರಿವಾಲ್ ಅವರು ಕಾನೂನು ಸಲಹೆಗಾರರ ಜೊತೆ ಸಮಾಲೋಚನೆ ನಡೆಸಿ ಅವರ ನಿರ್ದೇಶನದಂತೆ ನಡೆದುಕೊಳ್ಳಲಿದ್ದಾರೆ' ಎಂದು ಹೇಳಿದ್ದಾರೆ.

'ತನಿಖೆಗೆ ರಾಜಕೀಯ ಬಣ್ಣ': ಕೇಜ್ರಿವಾಲ್ ಅವರು 'ತಲೆಮರೆಸಿಕೊಂಡವರ' ಹಾಗೆ ವರ್ತಿಸುತ್ತಿದ್ದು, ಅವರ ಪಕ್ಷವು ಇ.ಡಿ ತನಿಖೆಗೆ ರಾಜಕೀಯ ಬಣ್ಣ ನೀಡುತ್ತಿದೆ ಎಂದು ದೆಹಲಿ ಬಿಜೆಪಿ ಘಟಕದ ಅಧ್ಯಕ್ಷ ವೀರೇಂದ್ರ ಸಚ್‌ದೇವ್ ಆರೋಪಿಸಿದ್ದಾರೆ.

'ರಾಷ್ಟ್ರಪತಿ ಉದ್ಘಾಟಿಸಲಿ'

ಮುಂಬೈ (ಪಿಟಿಐ): ದೇಶದ ಹೆಮ್ಮೆ ಮತ್ತು ಗೌರವದ ಪ್ರತೀಕವಾಗಿರುವ ಅಯೋಧ್ಯೆಯ ರಾಮಮಂದಿರವನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಉದ್ಘಾಟಿಸಲಿ ಎಂದು ಮಹಾರಾಷ್ಟ್ರದ ಮಾಜಿ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಒತ್ತಾಯಿಸಿದರು.



ಉದ್ಧವ್ ಠಾಕ್ರೆ

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಅಯೋಧ್ಯೆ ರಾಮ ಮಂದಿರ ಉದ್ಘಾಟನೆಯಂದು ನಾವು ರಾಷ್ಟ್ರಪತಿಗಳನ್ನು ನಾಸಿಕ್‌ನ ಕಲಾರಾಮ್ ದೇವಸ್ಥಾನಕ್ಕೆ ಆಹ್ವಾನಿಸಿದ್ದೇವೆ' ಎಂದು ತಿಳಿಸಿದ್ದಾರೆ.

'ಗುಜರಾತ್‌ನ ಸೋಮನಾಥ ದೇವಸ್ಥಾನವನ್ನು ಪುನರ್ ನಿರ್ಮಾಣ ಮಾಡಿದ ಬಳಿಕ, ಪುನರ್‌ಸ್ಥಾಪನೆ ಕಾರ್ಯಕ್ರಮವನ್ನು ದೇಶದ ಮೊದಲ ರಾಷ್ಟ್ರಪತಿ ರಾಜೇಂದ್ರ ಪ್ರಸಾದ್ ಅವರು ಉದ್ಘಾಟಿಸಿದ್ದರು. ಅದೇ ರೀತಿ ದೇಶದ ಹೆಮ್ಮೆ ಮತ್ತು ಗೌರವದ ಪ್ರತೀಕವಾಗಿರುವ ರಾಮಮಂದಿರವನ್ನು ಈಗಿನ ರಾಷ್ಟ್ರಪತಿ ದ್ರೌಪದಿ ಮುರ್ಮು ಉದ್ಘಾಟಿಸಬೇಕೆಂದು' ಆಗ್ರಹಿಸಿದರು.

'1992ರಲ್ಲಿ ಕರಸೇವೆಯಲ್ಲಿ ಭಾಗಿಯಾಗಿದ್ದ ಶಿವಸೈನಿಕರು ಕೂಡಾ ನಾಸಿಕ್‌ನ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ' ಎಂದು ತಿಳಿಸಿದ್ದಾರೆ.

'ಜನವರಿ 22ರಂದು ಶಿವಸೇನೆಯ ನಾಯಕರು ಮತ್ತು ಸೈನಿಕರು ನಾಸಿಕ್‌ನ ಕಲಾರಾಮ ದೇಗುಲಕ್ಕೆ ಭೇಟಿ ನೀಡಿ, ಗೋದಾವರಿ ತಟದಲ್ಲಿ ಮಹಾಆರತಿ ಮಾಡಲಿದ್ದೇವೆ' ಎಂದು ಉದ್ಧವ್ ಠಾಕ್ರೆ ಈ ಹಿಂದೆಯೇ ತಿಳಿಸಿದ್ದರು.

ಕಾಂಗ್ರೆಸ್‌ಗೆ ಭಯ: ಬಿಎಸ್‌ವೈ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: 'ರಾಮ ಮಂದಿರ ಲೋಕಾರ್ಪಣೆಯಿಂದ ರಾಜಕೀಯವಾಗಿ ಬಿಜೆಪಿಗೆ ಲಾಭವಾಗಬಹುದು ಎಂಬ ಭಯ ಕಾಂಗ್ರೆಸ್ ಪಕ್ಷವನ್ನು ಕಾಡುತ್ತಿದೆ' ಎಂದು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಟೀಕಿಸಿದರು.



ಯಡಿಯೂರಪ್ಪ

'ಶ್ರೀರಾಮನ ವಿಗ್ರಹದ ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ರಮದಲ್ಲಿ ಎಲ್ಲಾ ಪಕ್ಷದವರೂ ಪಾಲ್ಗೊಳ್ಳಬೇಕೆಂಬುದು ಪ್ರಧಾನಿ ಮೋದಿಯವರ ಅಪೇಕ್ಷೆ. ದೇಶದ ಇತಿಹಾಸದಲ್ಲಿ ಮೊದಲ ಬಾರಿಗೆ ಪ್ರಧಾನಿಯೊಬ್ಬರು ಉಪವಾಸ ಇದ್ದು, ಧಾರ್ಮಿಕ ಸೇವೆ ಮಾಡುತ್ತಿದ್ದಾರೆ. ಕಾಂಗ್ರೆಸ್‌ನವರಿಗೆ ಇನ್ನಾದರೂ ಸದ್ಬುದ್ಧಿ ಬರಲಿ' ಎಂದು ಶನಿವಾರ ಸುದ್ದಿಗಾರರಿಗೆ ತಿಳಿಸಿದರು.

'ಸಿದ್ದರಾಮಯ್ಯನವರು ಜನವರಿ 22ರ ನಂತರ ಅಯೋಧ್ಯೆಗೆ ಹೋಗುವ ಬದಲು ಲೋಕಾರ್ಪಣೆ ಕಾರ್ಯಕ್ರಮದಲ್ಲೇ ಭಾಗವಹಿಸಲಿ. ಅದರಿಂದ ಅವರಿಗೆ ಒಳ್ಳೆಯದಾಗುತ್ತದೆ' ಎಂದರು.

'ಸರ್ಕಾರದ ಗ್ಯಾರಂಟಿ ಯೋಜನೆಗಳ ಬಗ್ಗೆ ಟೀಕೆ ಮಾಡುವುದಿಲ್ಲ. ಒಳ್ಳೆಯ ಕೆಲಸ ಯಾರೇ ಮಾಡಿದರೂ ಸ್ವಾಗತಿಸುವೆ. ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಬಿಜೆಪಿ ನಾಯಕರ ಪ್ರವಾಸ ಆರಂಭವಾಗಿದೆ. ಶೀಘ್ರವೇ ನಾನೂ ದಿನಕ್ಕೆ ಎರಡು ಜಿಲ್ಲೆಯಂತೆ ಪ್ರವಾಸ ಮಾಡುತ್ತೇನೆ' ಎಂದರು.

'ಅಯೋಧ್ಯೆಗೆ ಭೇಟಿ ಕೊಡುತ್ತೇನೆ ಎಂದಿಲ್ಲ'

ಪ್ರಜಾವಾಣಿ ವಾರ್ತೆ

ರಾಯಚೂರು: 'ನಾನು ರಾಮನ ವಿರೋಧಿಯೂ ಅಲ್ಲ, ರಾಮಮಂದಿರ ನಿರ್ಮಾಣದ ವಿರೋಧಿಯೂ ಅಲ್ಲ. ಅಯೋಧ್ಯೆಗೆ ಭೇಟಿ ಕೊಡುತ್ತೇನೆ ಎಂದೂ ಹೇಳಿಲ್ಲ. ಆದರೆ ರಾಮಮಂದಿರ ಹೆಸರಲ್ಲಿ ಬಿಜೆಪಿ ರಾಜಕೀಯ ಮಾಡುತ್ತಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆಪಾದಿಸಿದರು.



ಸಿದ್ದರಾಮಯ್ಯ

ದೇವದುರ್ಗ ತಾಲ್ಲೂಕಿನ ತಿಂಥಣಿ ಬ್ರಿಜ್‌ನ ಕಾಗಿನೆಲೆ ಮಹಾಸಂಸ್ಥಾನ ಕನಕ ಗುರುಪೀಠದಲ್ಲಿ ಶನಿವಾರ ಆಯೋಜಿಸಿದ್ದ ಹಾಲುಮತ ಸಂಸ್ಕೃತಿ ವೈಭವ ಸಮಾವೇಶದಲ್ಲಿ ಪಾಲ್ಗೊಳ್ಳುವ ಮೊದಲು ಅವರು ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದರು.

'ಅಯೋಧ್ಯೆಯಲ್ಲಿ ರಾಮಮಂದಿರ ಉದ್ಘಾಟನೆ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವುದಿಲ್ಲ ಅಥವಾ 22ರ ನಂತರ ಅಯೋಧ್ಯೆಗೆ ಭೇಟಿ ಕೊಡುತ್ತೇನೆ ಎಂದೂ ಹೇಳಿಲ್ಲ. ಆದರೆ ಬಿಜೆಪಿ ಹರಿಬಿಟ್ಟ ಹಾಗೂ ಮಾಧ್ಯಮಗಳು ಸೃಷ್ಟಿಸಿದ ಸುದ್ದಿ ಇದು' ಎಂದು ತಿಳಿಸಿದರು.

ಗೋವಾ ಪೊಲೀಸರಿಗೆ ಹೇಳಿಕೆ ನೀಡಿದ ವೆಂಕಟರಮಣ್

'5 ವಾರಗಳಿಂದ ಮಗನ ಭೇಟಿಗೆ ಬಿಟ್ಟಿರಲಿಲ್ಲ'

ಪಣಜಿ (ಪಿಟಿಐ): ತಮ್ಮ ನಾಲ್ಕು ವರ್ಷದ ಪುತ್ರನನ್ನು ಕೊಲೆ ಮಾಡಿದ ಆರೋಪದಡಿ ಬಂಧಿತರಾಗಿರುವ ಸುಚನಾ ಸೇಠ್, ತಮ್ಮಿಂದ ದೂರ ವಾಗಿರುವ ಪತಿ ವೆಂಕಟರಮಣ್ ಅವರಿಗೆ ಕಳೆದ ಐದು ಭಾನುವಾರಗಳಿಂದಲೂ ಪುತ್ರನನ್ನು ನೋಡಲು ಅವಕಾಶ ನೀಡಿರಲಿಲ್ಲ.



ಸುಚನಾ ಸೇಠ್

ವೆಂಕಟರಮಣ್ ಅವರು ಬೆಂಗಳೂರಿನಿಂದ ಮಧ್ಯಾಹ್ನ ಗೋವಾದ ಕಲಂಗೂಟ್ ಠಾಣೆಗೆ ಬಂದು ಪೊಲೀಸರ ಎದುರು ಈ ಪ್ರಕರಣದ ತನಿಖೆಯ ಭಾಗವಾಗಿ ವಿವರವಾದ ಹೇಳಿಕೆ ನೀಡಿದರು. ಆಗ ಈ ಮಾಹಿತಿಯನ್ನು ಹಂಚಿಕೊಂಡರು ಎಂದು ಗೋವಾ ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ತನಿಖಾಧಿಕಾರಿಯ (ಐಒ) ಭೇಟಿಗೆ ಹೋಗುವ ಮುನ್ನ ವೆಂಕಟರಮಣ್ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಲು ನಿರಾಕರಿಸಿದರು.

'ಬೆಂಗಳೂರಿನ ಕೌಟುಂಬಿಕ ನ್ಯಾಯಾಲಯದಲ್ಲಿ ನನ್ನ ಮತ್ತು ಸುಚನಾ ನಡುವಿನ ವಿವಾಹ ವಿಚ್ಛೇದನ ಪ್ರಕ್ರಿಯೆಗಳು ನಡೆಯುತ್ತಿವೆ. ನ್ಯಾಯಾಲಯವು ಮಗುವನ್ನು ವಾರಕ್ಕೊಮ್ಮೆ ಭೇಟಿಯಾಗುವ ಅವಕಾಶವನ್ನು ನನಗೆ ನೀಡಿತ್ತು. ಆದರೆ, ಕಳೆದ ಐದು ಭಾನುವಾರಗಳಿಂದ ಮಗನ ಭೇಟಿಗೆ ಸುಚನಾ ಅವಕಾಶ ನೀಡಿರಲಿಲ್ಲವೆಂದು ವೆಂಕಟರಮಣ್ ಹೇಳಿಕೆ ನೀಡಿದ್ದಾರೆ' ಎಂದು ಅಧಿಕಾರಿ ತಿಳಿಸಿದ್ದಾರೆ.

ಗೋವಾದ ಕ್ಯಾಂಡೋಲಿಮ್‌ನಲ್ಲಿರುವ ಸರ್ವಿಸ್ ಅಪಾರ್ಟ್‌ಮೆಂಟ್‌ನಲ್ಲಿ ಮಗು ಕೊಲೆಯಾದಾಗ ವೆಂಕಟರಮಣ್ ಅವರು ಇಂಡೊನೇಷ್ಯಾದ ಜಕಾರ್ತದಲ್ಲಿದ್ದರು.

ಕೃತಕ ಬುದ್ಧಿಮತ್ತೆಯ ನವೋದ್ಯಮ 'ಮೈಂಡ್‌ಫುಲ್ ಎ.ಐ ಲ್ಯಾಬ್'ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾಗಿರುವ ಸುಚನಾ ಮತ್ತು ವೆಂಕಟರಮಣ್ ಅವರ ದಾಂಪತ್ಯ ಮುರಿದು ಬಿದ್ದರಿದ್ದರಿಂದ ಇಬ್ಬರೂ ಪ್ರತ್ಯೇಕವಾಗಿ ವಾಸ ಮಾಡುತ್ತಿದ್ದರು. ಇವರ ನಾಲ್ಕು ವರ್ಷದ ಮಗು, ಸುಚನಾ ಅವರ ಸುಪರ್ದಿಯಲ್ಲಿತ್ತು. ಸುಚನಾ ತನ್ನ ಮಣಿಕಟ್ಟು ಕೊಯ್ದುಕೊಂಡು ಆತ್ಮಹತ್ಯೆಗೆ ಯತ್ನಿಸುವ ಮೊದಲು ಪುತ್ರನನ್ನು ಕೊಲೆ ಮಾಡಿರುವುದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಸಂಕ್ಷಿಪ್ತ ಸುದ್ದಿ

ಜಮ್ಮು: ಸೇನಾಪಡೆಯಿಂದ ಕಾರ್ಯಾಚರಣೆ

ಜಮ್ಮು (ಪಿಟಿಐ): ಸೇನಾ ವಾಹನದ ಮೇಲೆ ಶುಕ್ರವಾರ ದಾಳಿ ನಡೆಸಿದ ಉಗ್ರರ ಪತ್ತೆಗಾಗಿ ಜಮ್ಮುವಿನ ಪೂಂಛ್ ಜಿಲ್ಲೆಯಲ್ಲಿ ಸೇನಾಪಡೆಯು ಶನಿವಾರ ಕಾರ್ಯಾಚರಣೆ ಕೈಗೊಂಡಿದೆ. ದಟ್ಟ ಅರಣ್ಯ ಪ್ರದೇಶದಲ್ಲಿ ಶ್ವಾನದಳ ಮತ್ತು ವೈಮಾನಿಕ ಸಾಧನಗಳ ಮೂಲಕ ಕಾರ್ಯಾಚರಣೆ ನಡೆಸಲಾಗುತ್ತಿದೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪೂಂಛ್‌ನ ಕೃಷ್ಣ ಘಟಿ ಬಳಿ ಸೇನಾ ವಾಹನದ ಮೇಲೆ ಶುಕ್ರವಾರ ಸಂಜೆ ನಡೆದ ದಾಳಿಯಲ್ಲಿ ಯಾವುದೇ ಅಪಾಯ ಸಂಭವಿಸಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ವದಂತಿ ತಳ್ಳಿ ಹಾಕಿದ ಸ್ಟಾಲಿನ್


ಚೆನ್ನೈ: ಉದಯನಿಧಿ ಸ್ಟಾಲಿನ್ ಅವರನ್ನು ತಮಿಳುನಾಡಿನ ಉಪಮುಖ್ಯಮಂತ್ರಿಯನ್ನಾಗಿ ಮಾಡಲಾಗುತ್ತದೆ ಎಂಬ ವದಂತಿಯನ್ನು ಡಿ.ಎಂ.ಕೆ ಅಧ್ಯಕ್ಷ, ತಮಿಳುನಾಡಿನ ಮುಖ್ಯಮಂತ್ರಿ ಎಂ.ಕೆ ಸ್ಟಾಲಿನ್ ತಳ್ಳಿಹಾಕಿದ್ದಾರೆ.

ಪಕ್ಷದ ಕಾರ್ಯಕರ್ತರಿಗೆ ಸಂಕ್ರಾಂತಿ ಹಬ್ಬದ ಶುಭಾಶಯ ಕೋರಿದ ಅವರು, 'ಯುವ ಘಟಕದ ಅಧ್ಯಕ್ಷ ಉದಯನಿಧಿ ನೇತೃತ್ವದಲ್ಲಿ ಜನವರಿ 21ರಂದು ನಡೆಯಲಿರುವ ಡಿಎಂಕೆ ಯುವ ಸಮಾವೇಶವನ್ನು ವಿರೋಧಿಸುತ್ತಿರುವವರು ಇಂತಹ ಅಪಪ್ರಚಾರ ಮಾಡುತ್ತಿದ್ದಾರೆ' ಎಂದರು.

ಇಬ್ಬರ ಬಂಧನ

ರಾಯಪುರ (ಪಿಟಿಐ): ಮಹದೇವ್ ಬೆಟ್ಟಿಂಗ್ ಆ್ಯಪ್‌ನ ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯವು ಮತ್ತೆ ಇಬ್ಬರನ್ನು ಬಂಧಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕೋಲ್ಕತ್ತದ ನಿತಿನ್ ಟಿಬ್ರೆವಾಲ್ ಹಾಗೂ ರಾಯಪುರದ ಅಮಿತ್ ಅಗರ್ವಾಲ್ ಅವರನ್ನು ಪಿಎಂಎಲ್‌ಎ ಕಾಯ್ದೆಯಡಿ ವಶಕ್ಕೆ ಪಡೆಯಲಾಗಿದ್ದು, ರಾಯಪುರದ ವಿಶೇಷ ಕೋರ್ಟ್ ಅವರನ್ನು ಜ.17ರವರೆಗೆ ಇ.ಡಿ.ವಶಕ್ಕೆ ನೀಡಿದೆ ಎಂದು ತಿಳಿಸಿದ್ದಾರೆ.



ರಾಜ್ಯ	ಕ್ರಮಿಸುವ ದೂರ (ಕಿ.ಮೀ.ಗಳಲ್ಲಿ)	ದಿನಗಳು (ಅಂದಾಜು)	ಜಿಲ್ಲೆಗಳು
ಮಣಿಪುರ	107	1	4
ನಾಗಾಲ್ಯಾಂಡ್	257	2	5
ಅಸ್ಸಾಂ	833	8	17
ಅರುಣಾಚಲ ಪ್ರದೇಶ	55	1	1
ಮೇಘಾಲಯ	5	1	1
ಪಶ್ಚಿಮ ಬಂಗಾಳ	523	5	7
ಬಿಹಾರ	425	4	7
ಜಾರ್ಖಂಡ್	804	8	13
ಒಡಿಶಾ	341	4	4
ಛತ್ತೀಸಗಢ	536	5	7
ಉತ್ತರ ಪ್ರದೇಶ	1074	11	20
ಮಧ್ಯಪ್ರದೇಶ	698	7	9
ರಾಜಸ್ಥಾನ	128	1	2
ಗುಜರಾತ್	445	5	7
ಮಹಾರಾಷ್ಟ್ರ	479	5	6

ಉದ್ಘಾಟನೆಯಲ್ಲಿ ಸಿ.ಎಂ, ಡಿಸಿಎಂ

ಬೆಂಗಳೂರು: ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ ಅವರು ಮಣಿಪುರದಿಂದ ಭಾನುವಾರ ಆರಂಭಿಸಲಿರುವ 'ಭಾರತ್ ಜೋಡೊ ನ್ಯಾಯ ಯಾತ್ರೆ'ಯ ಉದ್ಘಾಟನಾ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪಾಲ್ಗೊಳ್ಳಲಿದ್ದಾರೆ.

ಸಿದ್ದರಾಮಯ್ಯ ಮತ್ತು ಶಿವಕುಮಾರ್ ಭಾನುವಾರ ಬೆಳಿಗ್ಗೆ ನಗರದ ಎಚ್‌ಎಎಲ್ ವಿಮಾನ ನಿಲ್ದಾಣದಿಂದ ಪ್ರತ್ಯೇಕ ವಿಶೇಷ ವಿಮಾನಗಳಲ್ಲಿ ಮಣಿಪುರದ ರಾಜಧಾನಿ ಇಂಫಾಲ್‌ಗೆ ತೆರಳುವರು. ಅಲ್ಲಿಂದ ಪಾದಯಾತ್ರೆ ಆರಂಭವಾಗಲಿರುವ ಥೌಬಾಲ್‌ಗೆ ತೆರಳಿ, ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಂಡ ಬಳಿಕ ಪ್ರತ್ಯೇಕವಾಗಿಯೇ ನಗರಕ್ಕೆ ಹಿಂದಿರುಗುವರು.

ಇಂದಿನಿಂದ ಭಾರತ್ ಜೋಡೊ ನ್ಯಾಯ ಯಾತ್ರೆ

ಒಂದನೇ ಪುಟದಿಂದ

ರಾಹುಲ್ ಅವರು ಹಿಂದೆ ಪ್ರತಿನಿಧಿಸುತ್ತಿದ್ದ ಲೋಕಸಭಾ ಕ್ಷೇತ್ರ ಅಮೇಠಿ, ಸೋನಿಯಾ ಅವರ ರಾಯ್ ಬರೇಲಿ, ಪ್ರಧಾನಿ ಮೋದಿ ಅವರ ವಾರಾಣಸಿ ಮತ್ತು ಸಿಂಧಿಯಾ ಅವರ ಭದ್ರ ಕೋಟೆ ಗುನಾ ಮೂಲಕ ಯಾತ್ರೆಯು ಹಾದು ಅಂತಿಮವಾಗಿ ಮಾರ್ಚ್ 20ರಂದು ಮುಂಬೈನಲ್ಲಿ ಮುಕ್ತಾಯವಾಗಲಿದೆ.

ಜನಾಂಗೀಯ ಹಿಂಸಾಚಾರ ಪೀಡಿತ ಮಣಿಪುರವನ್ನು ಆರಂಭದ ಸ್ಥಳವಾಗಿ ಆಯ್ಕೆ ಮಾಡುವ ಮೂಲಕ, ಯಾತ್ರೆಯು ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ನ್ಯಾಯದ ವಿಷಯಗಳನ್ನು ಪ್ರಸ್ತಾಪಿಸಲಿದೆ ಎಂಬುದನ್ನು ಸೂಚ್ಯವಾಗಿ ತಿಳಿಸಲಾಗಿದೆ.

ಈಚಿನ ಚುನಾವಣೆಯಲ್ಲಿ ಪಕ್ಷವು ಪರಾಭವಗೊಂಡ ರಾಜಸ್ಥಾನ, ಮಧ್ಯಪ್ರದೇಶ ಮತ್ತು ಛತ್ತೀಸಗಢ ಈ ಮೂರು ರಾಜ್ಯಗಳಲ್ಲಿ ಯಾತ್ರೆ ಸಂಚರಿಸಲಿದೆ. ಭಾರತ್ ಜೋಡೊ ಯಾತ್ರೆ ಹಾದು ಹೋಗಿದ್ದ ರಾಜಸ್ಥಾನ, ಮಧ್ಯಪ್ರದೇಶ ಮತ್ತು ಮಹಾರಾಷ್ಟ್ರ ರಾಜ್ಯಗಳಲ್ಲಿ ಎರಡನೇ ಬಾರಿಗೆ ಸಂಚರಿಸಲಿದೆ.

ರಣಜಿ ಟ್ರೋಫಿ ಕ್ರಿಕೆಟ್ • ಗುಜರಾತ್ ವಿರುದ್ಧ ಕರ್ನಾಟಕಕ್ಕೆ ಮುನ್ನಡೆ

ಮಯಂಕ್ ಬಿರುಸಿನ ಶತಕ


ಮಯಂಕ್ ಅಗರವಾಲ್

ಅಹಮದಾಬಾದ್: ಮೊದಲ ಪಂದ್ಯದ ವೈಫಲ್ಯವನ್ನು ಸರಿದೂಗಿಸುವಂತೆ ಆಡಿದ ಕರ್ನಾಟಕ ತಂಡದ ನಾಯಕ ಮಯಂಕ್ ಅಗರವಾಲ್ ಬಿರುಸಿನ ಶತಕ (109) ಬಾರಿಸಿದರು. ಗುಜರಾತ್ ವಿರುದ್ಧ ರಣಜಿ ಟ್ರೋಫಿ 'ಸಿ' ಗುಂಪಿನ ಪಂದ್ಯದ ಎರಡನೇ ದಿನವಾದ ಶನಿವಾರ ಬ್ಯಾಟರ್‌ಗಳ ಉತ್ತಮ ಪ್ರದರ್ಶನದ ನೆರವಿನಿಂದ ಕರ್ನಾಟಕ ಮೊದಲ ಇನಿಂಗ್ಸ್ ಮುನ್ನಡೆ ಪಡೆಯುವಲ್ಲಿ ಯಶಸ್ವಿಯಾಯಿತು.

ಗುಜರಾತ್ ತಂಡದ 264 ರನ್‌ಗಳಿಗೆ ಉತ್ತರವಾಗಿ ದಿನದಾಟ ಮುಗಿದಾಗ ಕರ್ನಾಟಕ 5 ವಿಕೆಟ್‌ಗೆ 328 ರನ್ ಗಳಿಸಿದೆ. ಈಗಾಗಲೇ 64 ರನ್ ಮುನ್ನಡೆ ಹೊಂದಿರುವ ಕರ್ನಾಟಕ ನಾಲ್ಕು ವಿಕೆಟ್‌ಗಳನ್ನು ಹೊಂದಿದ್ದು, ಒತ್ತಡ ಹೇರುವ ಸ್ಥಿತಿಯಲ್ಲಿದೆ. ಪಂಜಾಬ್ ವಿರುದ್ಧ ಎರಡೂ ಸರದಿಗಳಲ್ಲಿ ರನ್ ಖಾತೆ ತೆರೆಯುವ ಮೊದಲೇ ನಿರ್ಗಮಿಸಿದ್ದ ಮಯಂಕ್, ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಆತಿಥೇಯರ ದುರ್ಬಲ ದಾಳಿಯನ್ನು ದಂಡಿಸಿ ಮೊದಲ ದರ್ಜೆ ಕ್ರಿಕೆಟ್‌ನಲ್ಲಿ 16ನೇ ಶತಕ ದಾಖಲಿಸಿದರು. 124 ಎಸೆತಗಳ ಅವರ ಇನಿಂಗ್ಸ್‌ನಲ್ಲಿ ಒಂದು ಸಿಕ್ಸರ್, 17 ಬೌಂಡರಿಗಳಿದ್ದವು.

ಅನುಭವಿ ಮನೀಷ್ ಪಾಂಡೆ (ಬ್ಯಾಟಿಂಗ್ 56, 94 ಎ, 4x4, 6x2) ಜೊತೆ ಮೊದಲ ರಣಜಿ ಪಂದ್ಯ ಆಡುತ್ತಿರುವ ವಿಕೆಟ್ ಕೀಪರ್ ಸುಜಯ್ ಸತೇರಿ (ಬ್ಯಾಟಿಂಗ್ 24, 35ಎ) ಅವರು ಭಾನುವಾರ ಆಟ ಮುಂದು ವರಿಸಲಿದ್ದು, ಕರ್ನಾಟಕ ಮುನ್ನಡೆ ಉಬ್ಬಿಸುವ ಗುರಿಯಲ್ಲಿದೆ.

ರವಿಕುಮಾರ್ ಸಮರ್ಥ್ (60, 108ಎ, 4x7) ಜೊತೆ ಮೊದಲ ವಿಕೆಟ್‌ಗೆ ಮಯಂಕ್ 172 ರನ್ ಸೇರಿಸಿ ತಂಡಕ್ಕೆ ಭದ್ರ ಬುನಾದಿ ಒದಗಿಸಿದರು. ಲಂಚ್ ವೇಳೆಗೆ ಕರ್ನಾಟಕ 147 ರನ್ ಗಳಿಸಿದ್ದು, ದೊಡ್ಡ ಮೊತ್ತದ ಸೂಚನೆ ನೀಡಿತು. ಆದರೆ 172ರ ಮೊತ್ತಕ್ಕೆ ಆರಂಭ ಆಟಗಾರರಿಬ್ಬರೂ ನಿರ್ಗಮಿಸಿದರು. 39ನೇ ಓವರ್‌ನಲ್ಲಿ ಸಮರ್ಥ್, ಎಡಗೈ ಸ್ಪಿನ್ನರ್ ಸಿದ್ಧಾರ್ಥ ದೇಸಾಯಿ ಅವರ ಬೌಲಿಂಗ್‌ನಲ್ಲಿ ಬೌಲ್ಡ್ ಆದರು. ಆರು ಎಸೆತಗಳ ತರುವಾಯ ನಾಯಕ ಚಿಂತನ್ ಗಜ ಬೌಲಿಂಗ್‌ನಲ್ಲಿ ಮಯಂಕ್ ಅವರು ವಿಕೆಟ್ ಕೀಪರ್ ಹೆಟ್ ಪಟೇಲ್‌ಗೆ ಕ್ಯಾಚಿತ್ತರು.

ದೇವದತ್ತ ಪಡಿಕ್ಕಲ್ (42) ಮತ್ತು ನಿಕಿನ್ ಜೋಸ್ ನಡುವಣ ಮೂರನೇ ವಿಕೆಟ್‌ಗೆ 65 ರನ್‌ಗಳು ಬಂದವು. ಪಡಿಕ್ಕಲ್, ಆಫ್ ಸ್ಪಿನ್ನರ್ ರಿಂಕೇಶ್ ವಘೇಲಾ ಎಸೆತವನ್ನು ಕಟ್ ಮಾಡುವ ಯತ್ನದಲ್ಲಿ ಚೆಂಡನ್ನು ವಿಕೆಟ್‌ಗೆ ಎಳೆದುಕೊಂಡರು.

ಗುಜರಾತ್ ಕಡೆ ವೇಗದ ಬೌಲರ್ ಚಿಂತನ್ ಗಜ (43ಕ್ಕೆ2) ಬಿಟ್ಟರೆ ಉಳಿದ ಬೌಲರ್‌ಗಳು ಪರಿಣಾಮಕಾರಿಯಾಗಿರಲಿಲ್ಲ.

ಸ್ಕೋರ್ ಕಾರ್ಡ್

ಒಂದನೇ ಇನಿಂಗ್ಸ್: ಗುಜರಾತ್ 264 (88 ಓವರ್) ಕರ್ನಾಟಕ 5ಕ್ಕೆ 328 (90 ಓವರ್)

ಸಮರ್ಥ್ ಬಿ ದೇಸಾಯಿ 60
ಮಯಂಕ್ ಸಿ ಹೆಟ್ ಪಟೇಲ್ ಬಿ ಗಜ 109
ಪಡಿಕ್ಕಲ್ ಬಿ ವಘೇಲಾ 42
ನಿಕಿನ್ ರನ್‌ಔಟ್ (ಹಿಂಗ್ರೇಜಿಯಾ) 22
ಪಾಂಡೆ ಬ್ಯಾಟಿಂಗ್ 56
ಶುಭಾಂಗ್ ಎಲ್‌ಬಿಡಬ್ಲ್ಯು ಬಿ ಗಜ 11
ಸುಜಯ್ ಔಟಾಗದೇ 24
ಇತರೆ: 4 (ಬೈ 1, ನೋಬಾಲ್ 2, ವೈಡ್ 1)
ವಿಕೆಟ್ ಪತನ: 1–172 (ರವಿಕುಮಾರ್ ಸಮರ್ಥ್, 38.2), 2–172 (ಮಯಂಕ್ ಅಗರವಾಲ್, 39.1), 3–237 (ದೇವದತ್ತ ಪಡಿಕ್ಕಲ್, 58.5), 4–238 (ನಿಕಿನ್ ಜೋಸ್, 60.1), 5–298 (ಶುಭಾಂಗ್ ಹೆಗ್ಡೆ, 81.2).
ಬೌಲಿಂಗ್: ಚಿಂತನ್ ಗಜ 16–3–43–2, ಅರ್ಜಾನ್ ನಾಗ್ವಸ್ವಾಲ್ಲಾ 14–3–60–0, ಸಿದ್ಧಾರ್ಥ ದೇಸಾಯಿ 31–6–111–1, ರಿಪಲ್ ಪಟೇಲ್ 3–0–13–0, ರಿಂಕೇಶ್ ವಘೇಲಾ 24–4–90–1, ಮನನ್ ಹಿಂಗ್ರೇಜಿಯಾ 2–0–10–0

ವಿಜಯವೀರ್‌ಗೆ ಬೆಳ್ಳಿ, ಒಲಿಂಪಿಕ್ಸ್‌ಗೆ ಅರ್ಹತೆ



ಜಕಾರ್ತಾ (ಪಿಟಿಐ): ಭಾರತದ ವಿಜಯವೀರ್ ಸಿಧು ಏಷ್ಯನ್ ಒಲಿಂಪಿಕ್ಸ್ ಕ್ವಾಲಿಫೈಯರ್ಸ್‌ನ ಪುರುಷರ 25 ಮೀಟರ್ ರ್‍ಯಾಪಿಡ್ ಫೈರ್ ಸ್ಪರ್ಧೆಯಲ್ಲಿ ಬೆಳ್ಳಿ ಪದಕ ಗೆದ್ದರು. ಜೊತೆಗೆ ಪ್ಯಾರಿಸ್ ಒಲಿಂಪಿಕ್ಸ್ ಕೋಟಾ ಸ್ಥಾನ ಗಿಟ್ಟಿಸಿದ ದೇಶದ 17ನೇ ಶೂಟರ್ ಎನಿಸಿದರು.

ಹಿಂದಿನ ಟೋಕಿಯೊ ಒಲಿಂಪಿಕ್ಸ್‌ಗೆ ಭಾರತ 15 ಸ್ಪರ್ಧಿಗಳ ಶೂಟಿಂಗ್ ತಂಡವನ್ನು ಕಳುಹಿಸಿದ್ದು ಇದುವರೆಗಿನ ದಾಖಲೆಯಾಗಿತ್ತು. ಈ ಬಾರಿ 17 ಮಂದಿ ಇದುವರೆಗೆ ಅರ್ಹತೆ ಪಡೆದಿದ್ದಾರೆ.


ಏಷ್ಯನ್ ಕ್ರೀಡೆಗಳಲ್ಲಿ ಕಂಚಿನ ಪದಕ ಗೆದ್ದಿದ್ದ ವಿಜಯವೀರ್, 577 ಅಂಕಗಳೊಂದಿಗೆ 4ನೇ ಸ್ಥಾನದೊಂದಿಗೆ ಫೈನಲ್‌ಗೆ ಅರ್ಹತೆ ಪಡೆದರು. ಇದೇ ಸ್ಪರ್ಧೆಯಲ್ಲಿ ಅನೀಶ್ ಭಾನವಾಲಾ ಈ ಹಿಂದೆಯೇ ಅರ್ಹತೆ ಪಡೆದಿದ್ದಾರೆ.


ಶನಿವಾರ ಅಂತಿಮ ಸುತ್ತಿಗೆ ಅರ್ಹತೆ ಪಡೆದ ಆರು ಸ್ಪರ್ಧಿಗಳಲ್ಲಿ ನಾಲ್ವರು ಕೋಟಾ ಸ್ಥಾನಗಳಿಗೆ ಅರ್ಹರಾಗಿದ್ದರು. ಚಂಡೀಗಢ ಮೂಲದ ಈ ಸ್ಪರ್ಧಿ ಬೆಳ್ಳಿ ಗೆದ್ದರೆ, ಕಜಕಿಸ್ತಾನದ ನಿಕಿತಾ ಚಿರ್ಯುಕಿನ್ ಚಿನ್ನ ಗೆದ್ದರು.

ಕೂಚ್ ಬಿಹಾರ್ ಟ್ರೋಫಿ: ಮುನ್ನಡೆಯತ್ತ ಕರ್ನಾಟಕ

ಪ್ರಖರ್, ಹರ್ಷಿಲ್ ಶತಕದ ಸೊಬಗು

ಪ್ರಜಾವಾಣಿ ವಾರ್ತೆ


ಪ್ರಖರ್ ಚತುರ್ವೇದಿ


ಹರ್ಷಿಲ್ ಧರ್ಮಾನಿ

ಶಿವಮೊಗ್ಗ: ಆರಂಭ ಆಟಗಾರ ಪ್ರಖರ್ ಚತುರ್ವೇದಿ (ಔಟಾಗದೆ 110; 187ಎಸೆತ, 4x14) ಹಾಗೂ ಮೂರನೇ ಕ್ರಮಾಂಕದ ಬ್ಯಾಟ್ಸ್‌ಮನ್ ಹರ್ಷಿಲ್ ಧರ್ಮಾನಿ (ಔಟಾಗದೆ 102; 135ಎ, 4x10, 6x4) ಶನಿವಾರ ಇಲ್ಲಿನ ನವುಲೆಯ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ಶತಕ ಗಳಿಸಿ ಸಂಭ್ರಮಿಸಿದರು.

ಮುರಿಯದ ಎರಡನೇ ವಿಕೆಟ್ ಪಾಲುದಾರಿಕೆಯಲ್ಲಿ ಇವರು ಕಲೆ ಹಾಕಿರುವ 172 ರನ್‌ಗಳ ಬಲದಿಂದ ಕರ್ನಾಟಕ ತಂಡವು ಕೂಚ್ ಬಿಹಾರ್ ಟ್ರೋಫಿ 19ವರ್ಷದೊಳಗಿನವರ ಕ್ರಿಕೆಟ್ ಟೂರ್ನಿಯ ಫೈನಲ್‌ನಲ್ಲಿ ಮುಂಬೈ ವಿರುದ್ಧ ಇನಿಂಗ್ಸ್ ಮುನ್ನಡೆಯತ್ತ ದಾಪುಗಾಲಿಟ್ಟಿದೆ. ಆತಿಥೇಯ ತಂಡ ಎರಡನೇ ದಿನದಾಟದ ಅಂತ್ಯಕ್ಕೆ 64 ಓವರ್‌ಗಳಲ್ಲಿ ಒಂದು ವಿಕೆಟ್‌ಗೆ 281ರನ್ ಕಲೆಹಾಕಿದೆ. ಇದಕ್ಕೆ ಮೊದಲು ಮುಂಬೈ ತಂಡ ಮೊದಲ ಇನಿಂಗ್ಸ್‌ನಲ್ಲಿ 113.5 ಓವರ್‌ಗಳಲ್ಲಿ 380ರನ್ ದಾಖಲಿಸಿತ್ತು.

ಕರ್ನಾಟಕದ ಪರ ಇನಿಂಗ್ಸ್ ಆರಂಭಿಸಿದ ಪ್ರಖರ್ ಹಾಗೂ ಕಾರ್ತಿಕ್ ಎಸ್.ಯು (50; 67ಎ, 4x4, 6x3) ತಂಡಕ್ಕೆ ಭದ್ರ ಅಡಿಪಾಯ ಹಾಕಿಕೊಟ್ಟರು. ಮುಂಬೈ ಬೌಲರ್‌ಗಳನ್ನು ಸಮರ್ಥವಾಗಿ ಎದುರಿಸಿದ ಇವರು ಮೊದಲ ವಿಕೆಟ್ ಜೊತೆಯಾಟದಲ್ಲಿ 144 ಎಸೆತಗಳಲ್ಲಿ 109 ರನ್‌ಗಳನ್ನು ಕಲೆಹಾಕಿದರು. 24ನೇ ಓವರ್ ಬೌಲ್ ಮಾಡಿದ ಪ್ರೇಮ್ ದೇವ್‌ಕರ್ ಮೂರನೇ ಎಸೆತದಲ್ಲಿ ಕಾರ್ತಿಕ್ ವಿಕೆಟ್ ಕೆಡವಿದರು.

ನಂತರ ಪ್ರಖರ್ ಹಾಗೂ ಹರ್ಷಿಲ್ ಬೌಂಡರಿ, ಸಿಕ್ಸರ್‌ಗಳ ಮೂಲಕ ಸೊಗಸಾದ ಇನಿಂಗ್ಸ್ ಕಟ್ಟಿದರು. ಈ ಜೊತೆಯಾಟ ಮುರಿಯಲು ಮುಂಬೈ ತಂಡದ ನಾಯಕ ಬೌಲಿಂಗ್‌ನಲ್ಲಿ ಹಲವು ಬದಲಾವಣೆಗಳನ್ನು ಮಾಡಿದರು. ಆದರೆ ಫಲ ನೀಡಲಿಲ್ಲ.

ಇದಕ್ಕೂ ಮುನ್ನ 6 ವಿಕೆಟ್‌ಗೆ 328ರನ್‌ಗಳಿಂದ ಶನಿವಾರ ಮೊದಲ ಇನಿಂಗ್ಸ್ ಮುಂದುವರಿಸಿದ ಮುಂಬೈ ತಂಡವು ಈ ಮೊತ್ತಕ್ಕೆ 52ರನ್ ಸೇರಿಸಿ ಆಲೌಟ್ ಆಯಿತು. ಆಯುಷ್ ಸಚಿನ್ ವರ್ತಕ್ (73; 98ಎ, 4x8 6x2) ಮತ್ತು ವಿಕೆಟ್ ಕೀಪರ್ ಪ್ರತೀಕ್ ಯಾದವ್ (30; 86ಎ, 4x5) ತಂಡದ ಮೊತ್ತ ಹೆಚ್ಚಿಸಲು ನೆರವಾದರು. ಕರ್ನಾಟಕದ ಪರ ಹಾರ್ದಿಕ್ ರಾಜ್ 80ರನ್ ನೀಡಿ 4 ವಿಕೆಟ್ ಉರುಳಿಸಿದರು.

ಪ್ರತಿಭಾನ್ವಿತ ಆಟಗಾರರಿಗೆ ವೇದಿಕೆ

ಭಾರತ– ಅಫ್ಗಾನಿಸ್ತಾನ ಎರಡನೇ ಟಿ20 ಪಂದ್ಯ ಇಂದು • ಮರಳಿದ ವಿರಾಟ್


ಭಾರತ ತಂಡದ ವಿರಾಟ್ ಕೊಹ್ಲಿ ಮತ್ತು ನಾಯಕ ರೋಹಿತ್ ಶರ್ಮಾ ಶನಿವಾರ ಬ್ಯಾಟಿಂಗ್ ಅಭ್ಯಾಸ ನಡೆಸಿದರು –ಪಿಟಿಐ ಚಿತ್ರ

ಇಂದೋರ್ (ಪಿಟಿಐ): ಅಫ್ಗಾನಿಸ್ತಾನ ವಿರುದ್ಧ ಸರಣಿ ಜಯ ಭಾರತದ ಪಾಲಿಗೆ ದೊಡ್ಡ ಕ್ರಿಕೆಟ್ ಸಾಧನೆಯಾಗಿ ದಾಖಲಾಗದು. ಆದರೆ, ಕೆಲವು ಯುವ ಪ್ರತಿಭಾನ್ವಿತ ಆಟಗಾರರು ವಿಶ್ವಕಪ್ ದೃಷ್ಟಿಯಲ್ಲಿಟ್ಟುಕೊಂಡು ಈ ಸರಣಿಯನ್ನು ವೇದಿಕೆಯನ್ನಾಗಿ ಬಳಸಲು ಕಾತರದಿಂದ ಇದ್ದಾರೆ. ಮೂರು ಪಂದ್ಯಗಳ ಸರಣಿಯ ಎರಡನೇ ಪಂದ್ಯ ಭಾನುವಾರ ಇಲ್ಲಿ ನಡೆಯಲಿದೆ.

ಮೊಹಾಲಿಯಲ್ಲಿ ಮೊದಲ ಪಂದ್ಯ ಗೆದ್ದ ಭಾರತ 1–0 ಮುನ್ನಡೆ ಪಡೆದಿದೆ. ವಿಕೆಟ್ ಕೀಪರ್ ಜಿತೇಶ್ ಶರ್ಮಾ, ಸ್ಪಿನ್ನರ್‌ಗಳಾದ ವಾಷಿಂಗ್ಟನ್ ಸುಂದರ್, ಅಕ್ಷರ್ ಪಟೇಲ್ ಅವರು ಆಯ್ಕೆಗಾರರ ಗಮನ ಸೆಳೆದು ಈ ವರ್ಷ ನಡೆಯಲಿರುವ ಟಿ20 ವಿಶ್ವಕಪ್ ತಂಡದಲ್ಲಿ ಸ್ಥಾನ ಪಡೆಯಲು ಪ್ರಯತ್ನಿಸುವುದಂತೂ ಖಚಿತ.

ಜೂನ್‌ನಲ್ಲಿ ನಡೆಯುವ ವಿಶ್ವಕಪ್‌ಗೆ ಮೊದಲು ಈ ಸರಣಿ ಬಿಟ್ಟರೆ, ಭಾರತ ತಂಡಕ್ಕೆ ಯಾವುದೇ ಟಿ20 ಸರಣಿ ಇಲ್ಲದ ಕಾರಣ ಉಳಿದ ಸರಣಿಯ ಎರಡು ಟಿ20 ಪಂದ್ಯಗಳು ಇಂಥ ಆಟಗಾರರ ಪಾಲಿಗೆ ಮಹತ್ವದ್ದು.

ಕಳೆದ ವರ್ಷ ಆಸ್ಟ್ರೇಲಿಯಾ ವಿರುದ್ಧ ಟಿ20 ಸರಣಿಯ ನಾಲ್ಕನೇ ಪಂದ್ಯದಲ್ಲಿ ಅವಕಾಶ ಪಡೆದ ನಂತರ ಜಿತೇಶ್ ಶರ್ಮಾ, ಇಶಾನ್ ಕಿಶನ್ ಅವರನ್ನು ಹಿಂದಕ್ಕೆ ಹಾಕಿದ್ದು ವಿಕೆಟ್ ಕೀಪರ್ ಸ್ಥಾನಕ್ಕೆ ಮುಂಚೂಣಿಯಲ್ಲಿದ್ದಾರೆ. ಕೆಲ ಇನಿಂಗ್ಸ್‌ಗಳಲ್ಲಿ ಕೆಳಕ್ರಮಾಂಕದಲ್ಲಿ 30ರ ಆಜೂಬಾಜಿನಲ್ಲಿ ರನ್‌ಗಳನ್ನು ಹೊಡೆದರೂ, ದೊಡ್ಡ ಇನಿಂಗ್ಸ್ ಆಡಿ ತಮ್ಮ ಸ್ಥಾನ ಗಟ್ಟಿಗೊಳಿಸುವ ಇರಾದೆಯಲ್ಲಿದ್ದಾರೆ. 30 ವರ್ಷದ ಅವರಿಗೆ ಇದಕ್ಕಿಂತ ಒಳ್ಳೆಯ ಅವಕಾಶ ಸಿಗಲಿಕ್ಕಿಲ್ಲ.

ತಿಲಕ್ ವರ್ಮಾ ಅವರದೂ ಇದೇ ಸ್ಥಿತಿ. ವೆಸ್ಟ್ ಇಂಡೀಸ್ ವಿರುದ್ಧ ಕೆರಿಬಿಯನ್‌ನಲ್ಲಿ 39, 51 ಮತ್ತು ಅಜೇಯ 49 ರನ್ ಹೊಡೆದು ಭರ್ಜರಿ ಆರಂಭ ಪಡೆದರೂ, ನಂತರ ಅದೇ ಲಯ ಕಾಯ್ದುಕೊಳ್ಳಲಿಲ್ಲ. 21 ವರ್ಷದ ಆಟಗಾರ ನಂತರದ 13 ಇನಿಂಗ್ಸ್‌ಗಳಲ್ಲಿ ಒಂದು ಅರ್ಧ ಶತಕ ಮಾತ್ರ ಗಳಿಸಿದ್ದಾರೆ.

ಆದರೆ, ವಿರಾಟ್ ಕೊಹ್ಲಿ ತಂಡಕ್ಕೆ ಮರಳಿರುವುದರಿಂದ ವರ್ಮಾ ಅವರಿಗೆ ಸ್ಥಾನ ಸಿಗುವುದು ಅನುಮಾನ.

ಗಾಯಾಳಾಗಿ ವಿಶ್ವಕಪ್ ತಂಡದಿಂದ ಹೊರಬಿದ್ದಿದ್ದ ಅಕ್ಷರ್ ಪಟೇಲ್ ತಂಡಕ್ಕೆ ಮರಳುವ ಯತ್ನದಲ್ಲಿದ್ದಾರೆ. ಇಂಗ್ಲೆಂಡ್ ವಿರುದ್ಧ ಟೆಸ್ಟ್ ಸರಣಿಗೆ ಶುಕ್ರವಾರ ರಾತ್ರಿ ಪ್ರಕಟಿಸಿದ ಭಾರತ ತಂಡದಲ್ಲಿ ಅವರು ಸ್ಥಾನ ಪಡೆದಿದ್ದಾರೆ. ಮೊಹಾಲಿಯಲ್ಲಿ ಅವರು ಉತ್ತಮ ಪ್ರದರ್ಶನ ನೀಡಿ ತಮ್ಮ ಆಯ್ಕೆ ಸಮರ್ಥಿಸಿದ್ದಾರೆ. ವಾಷಿಂಗ್ಟನ್ ಸುಂದರ್ ತಂಡಕ್ಕೆ ಮರಳಿದರೂ ಉತ್ತಮ ಪ್ರದರ್ಶನ ನೀಡಿಲ್ಲ.

ಆದರೆ ಅಫ್ಗಾನಿಸ್ತಾನ ತಂಡವನ್ನು ಸುಲಭವಾಗಿ ಕಡೆಗಣಿಸಲಾಗದು. ಅನಿರೀಕ್ಷಿತವಾಗಿ ಉತ್ತಮ ಪ್ರದರ್ಶನ ನೀಡುವ ಸಾಮರ್ಥ್ಯ ಹೊಂದಿದೆ. ಯುವ ಆಟಗಾರ ರಹಮಾನುಲ್ಲಾ ಗುರ್ಬಾಝ್, ಅಜ್ಮತ್‌ಉಲ್ಲಾ ಒಮರ್‌ಝೈ ಮತ್ತು ಅನುಭವಿ ಮೊಹಮ್ಮದ್ ನಬಿ ಯಾವುದೇ ಬೌಲಿಂಗ್ ದಾಳಿ ಎದುರಿಸುವ ತಾಕತ್ತಿರುವವರು.

ಪಂದ್ಯ ಆರಂಭ: ರಾತ್ರಿ 7
ನೇರ ಪ್ರಸಾರ: ಸ್ಪೋರ್ಟ್ಸ್ 18 ಮತ್ತು ಜಿಯೊ ಸಿನಿಮಾ

ಪಾಟೀದಾರ್ ಶತಕ: ಇಂಗ್ಲೆಂಡ್ ಲಯನ್ಸ್ ವಿರುದ್ಧದ ಪಂದ್ಯ ಡ್ರಾ

ಅಹಮದಾಬಾದ್ (ಪಿಟಿಐ): ಭಾರತ 'ಎ' ಮತ್ತು ಇಂಗ್ಲೆಂಡ್ ಲಯನ್ಸ್ ನಡುವಿನ ಎರಡು ದಿನಗಳ ಅಭ್ಯಾಸ ಪಂದ್ಯವು ಡ್ರಾನಲ್ಲಿ ಮುಕ್ತಾಯಗೊಂಡಿದೆ. ಆದರೆ, ಈ ಪಂದ್ಯದಲ್ಲಿ ಭಾರತದ ಆರಂಭಿಕ ಬ್ಯಾಟರ್ ರಜತ್ ಪಾಟೀದಾರ್ ಶತಕ ದಾಖಲಿಸಿದರೆ, ಸರ್ಫರಾಜ್ ಖಾನ್ ಕೇವಲ ನಾಲ್ಕು ರನ್‌ಗಳಿಂದ ಶತಕದಿಂದ ವಂಚಿತರಾದರು.

ಮೊದಲ ದಿನ ಒಂದು ವಿಕೆಟ್‌ಗೆ 123 ರನ್ ಗಳಿಸಿದ್ದ ಭಾರತ 'ಎ' ತಂಡವು ಶನಿವಾರ ದಿನದ ಆಟ ಆರಂಭಿಸಿತು. ದಿನವಿಡೀ ಆತಿಥೇಯ ತಂಡದ ಬ್ಯಾಟರ್‌ಗಳು ಪ್ರವಾಸಿ ತಂಡದ ಬೌಲರ್‌ಗಳನ್ನು ದಂಡಿಸಿದರು. ಹೀಗಾಗಿ, ರಜತ್ (111; 141ಎ, 4x18, 6x1) ಮತ್ತು ಸರ್ಫರಾಜ್ (96; 110, 11x4, 6x1) ಅವರ ಬ್ಯಾಟಿಂಗ್ ಬಲದಿಂದ ದಿನದಾಟದ ಅಂತ್ಯಕ್ಕೆ ಮೊದಲ ಇನಿಂಗ್ಸ್‌ನಲ್ಲಿ 91 ಓವರ್‌ಗಳಲ್ಲಿ 8 ವಿಕೆಟ್‌ಗೆ 462 ರನ್ ಗಳಿಸಿ, 229 ರನ್‌ಗಳ ಮುನ್ನಡೆ ಪಡೆಯಿತು.

ಮೊದಲ ದಿನ ಲಯನ್ಸ್ ತಂಡವು ಮೊದಲ ಇನಿಂಗ್ಸ್‌ನಲ್ಲಿ 51.1 ಓವರ್‌ಗಳಲ್ಲಿ 233 ರನ್‌ಗಳಿಗೆ ಆಲೌಟ್ ಆಗಿತ್ತು.

ಉಭಯ ತಂಡಗಳು ಇಲ್ಲಿ ಬುಧವಾರ ಆರಂಭವಾಗುವ ಟೆಸ್ಟ್ ಸರಣಿಯ (ನಾಲ್ಕು ದಿನಗಳ) ಮೂರು ಅನೌಪಚಾರಿಕ ಪಂದ್ಯಗಳಲ್ಲಿ ಮತ್ತೆ ಮುಖಾಮುಖಿಯಾಗಲಿವೆ.

ಪಿಇಟಿ ಮಂಡ್ಯ ಓಪನ್ ಐಟಿಎಫ್ ಟೆನಿಸ್ ಟೂರ್ನಿ

ಮನೀಷ್–ಪರೀಕ್ಷಿತ್‌ಗೆ ಡಬಲ್ಸ್ ಪ್ರಶಸ್ತಿ

ಪ್ರಜಾವಾಣಿ ವಾರ್ತೆ



ಡಬಲ್ಸ್ ಪ್ರಶಸ್ತಿ ಗೆದ್ದುಕೊಂಡ ಭಾರತದ ಮನೀಷ್ ಸುರೇಶ್ ಕುಮಾರ್ ಹಾಗೂ ಪರೀಕ್ಷಿತ್ ಸೊಮಾನಿ (ಬಲಗಡೆ). ಕೊರಿಯಾದ ವೂಬಿನ್ ಶಿನ್ ಹಾಗೂ ಭಾರತದ ಕರಣ್ ಸಿಂಗ್ ಜೋಡಿ ರನ್ನರ್ಸ್ ಅಪ್ ಸ್ಥಾನ ಪಡೆಯಿತು.

ಮಂಡ್ಯ: ಭಾರತದ ಮನೀಷ್ ಸುರೇಶ್ ಕುಮಾರ್ ಮತ್ತು ಪರೀಕ್ಷಿತ್ ಸೊಮಾನಿ ಜೋಡಿ ಕೊರಿಯಾದ ವೂಬಿನ್ ಶಿನ್ ಹಾಗೂ ಭಾರತದ ಕರಣ್ ಸಿಂಗ್ ಅವರನ್ನು ಸೋಲಿಸಿ ಶನಿವಾರ ಇಲ್ಲಿ ನಡೆದ ಪಿಇಟಿ ಮಂಡ್ಯ ಓಪನ್ ಐಟಿಎಫ್ ಟೆನಿಸ್ ಟೂರ್ನಿಯಲ್ಲಿ ಪುರುಷರ ಡಬಲ್ಸ್ ಪ್ರಶಸ್ತಿ ಗೆದ್ದುಕೊಂಡಿತು.

ಆದರೆ ಪುರುಷರ ಸಿಂಗಲ್ಸ್ ಸೆಮಿಫೈನಲ್‌ನಲ್ಲಿ ಭಾರತದ ಸವಾಲು ಅಂತ್ಯಗೊಂಡಿತು. ಭಾನುವಾರ ನಡೆಯುವ ಫೈನಲ್‌ನಲ್ಲಿ ನೆದರ್ಲೆಂಡ್ಸ್‌ನ ಜೆಲ್ಲೆ ಸೆಲ್ಸ್ ಅವರು ಇಸ್ರೇಲ್‌ನ ಒರೆಲ್ ಕಿಮ್ಹಿ ಅವರನ್ನು ಎದುರಿಸಲಿದ್ದಾರೆ.

ಡಬಲಸ್ ಫೈನಲ್‌ನಲ್ಲಿ ಉತ್ತಮ ಆಟ ಪ್ರದರ್ಶಿಸಿದ ಮನೀಷ್– ಪರೀಕ್ಷಿತ್ 4–6, 6–1, 10–8 ರಿಂದ ಗೆದ್ದು ಕಿರೀಟ ಮುಡಿಗೇರಿಸಿಕೊಂಡರು. ವೂಬಿನ್ ಶಿನ್– ಕರಣ್ ಸಿಂಗ್ ರನ್ನರ್ಸ್ ಅಪ್ ಆದರು. ಈ ಹಿಂದೆ ಎರಡು ಟೂರ್ನಿಗಳಲ್ಲಿ ಫೈನಲ್‌ನಲ್ಲಿ ಸೋತಿದ್ದ ಭಾರತದ ಜೋಡಿ ಇಲ್ಲಿ ಸೆಟ್ ಹಿನ್ನಡೆಯಿಂದ ಚೇತರಿಸಿಕೊಂಡು ಗೆಲುವಿನೊಡನೆ ಸಂಭ್ರಮಿಸಿತು.

ಸಿಂಗಲ್ಸ್‌ನಲ್ಲಿ ಯುವ ಪ್ರತಿಭೆ ಕರಣ್ ಸಿಂಗ್ ಯಶಸ್ಸಿನ ಓಟ ಸೆಮಿಫೈನಲ್‌ನಲ್ಲಿ ಅಂತ್ಯಗೊಂಡಿತು. ನೆದರ್ಲೆಂಡ್ಸ್‌ನ ಜೆಲ್ಲೆ ಸೆಲ್ಸ್ 6–1, 6–4 ರಿಂದ ಕರಣ್ ಅವರನ್ನು 70 ನಿಮಿಷಗಳಲ್ಲಿ ಸೋಲಿಸಿದರು. ಇನ್ನೊಂದು ಸೆಮಿಫೈನಲ್‌ನಲ್ಲಿ ಒರೆಲ್ ಕಿಮ್ಹಿ 2–6, 7–5, 6–4 ರಿಂದ ಸಿದ್ಧಾರ್ಥ ವಿಶ್ವಕರ್ಮ ಅವರನ್ನು ಸೋಲಿಸಲು 2 ಗಂಟೆ 29 ನಿಮಿಷ ತೆಗೆದುಕೊಂಡರು.

ಗ್ರ್ಯಾಂಡ್‌ಮಾಸ್ಟರ್ಸ್ ಓಪನ್ ಚೆಸ್: 40 ಜಿಎಂ ಆಟಗಾರರ ನಿರೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 20 ದೇಶಗಳ 40ಕ್ಕೂ ಹೆಚ್ಚು ಗ್ರ್ಯಾಂಡ್‌ಮಾಸ್ಟರ್‌ಗಳು ಸೇರಿದಂತೆ ಸುಮಾರು 1,500 ಮಂದಿ ಆಟಗಾರರು ಕಂಠೀರವ ಒಳಾಂಗಣ ಕ್ರೀಡಾಂಗಣದಲ್ಲಿ ಇದೇ ತಿಂಗಳ 18 ರಿಂದ 26ರವರೆಗೆ ನಡೆಯಲಿರುವ ಮೊದಲ ಬೆಂಗಳೂರು ಅಂತರ ರಾಷ್ಟ್ರೀಯ ಗ್ರ್ಯಾಂಡ್‌ಮಾಸ್ಟರ್ಸ್ ಓಪನ್ ಚೆಸ್ ಟೂರ್ನಿಯಲ್ಲಿ ಪಾಲ್ಗೊಳ್ಳಲಿದ್ದಾರೆ.

ರಾಜ್ಯ ಸರ್ಕಾರ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಕರ್ನಾಟಕ ಒಲಿಂಪಿಕ್ ಸಂಸ್ಥೆ ಸಹಯೋಗದಲ್ಲಿ ಬೆಂಗಳೂರು ನಗರ ಜಿಲ್ಲಾ ಚೆಸ್ ಸಂಸ್ಥೆಯ (ಬಿಯುಡಿಸಿಎ) ಆಶ್ರಯದಲ್ಲಿ ಈ ಟೂರ್ನಿ ನಡೆಯುತ್ತಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಚೆಸ್ ದಿಗ್ಗಜ ವಿಶ್ವನಾಥನ್ ಆನಂದ್ ಜೊತೆ ಟೂರ್ನಿಯನ್ನು ಉದ್ಘಾಟಿಸಲಿದ್ದಾರೆ ಎಂದು ಟೂರ್ನಿಯ ಮಹಾಪೋಷಕ ಹಾಗೂ ಕರ್ನಾಟಕ ಒಲಿಂಪಿಕ್ ಸಂಸ್ಥೆ ಅಧ್ಯಕ್ಷ ಕೆ.ಗೋವಿಂದರಾಜ್ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಇದುವರೆಗೆ 1,400 ಮಂದಿ ನೋಂದಾಯಿಸಿಕೊಂಡಿದ್ದಾರೆ. ಟೂರ್ನಿಯು ಹತ್ತು ಸುತ್ತುಗಳನ್ನು ಹೊಂದಿದೆ. ಕೇರಳದ ಗೋಪಕುಮಾರ್ ಅವರು ಚೀಫ್ ಅರ್ಬಿಟರ್ (ಮುಖ್ಯ ತೀರ್ಪುಗಾರ) ಆಗಿದ್ದಾರೆ. ಟೂರ್ನಿಯು ಒಟ್ಟು ₹ 50 ಲಕ್ಷ ಬಹುಮಾನ ನಿಧಿ ಹೊಂದಿದೆ. ಚಾಂಪಿಯನ್ ಆಟಗಾರ ಟ್ರೋಫಿಯ ಜೊತೆ ₹4.50 ಲಕ್ಷ ಬಹುಮಾನ ಪಡೆಯಲಿದ್ದಾರೆ. ರನ್ನರ್ ಅಪ್ ಆಟಗಾರ ಟ್ರೋಫಿ ಜೊತೆ ₹3.50 ಲಕ್ಷ ಬಹುಮಾನ ಪಡೆಯಲಿದ್ದಾರೆ.

ಮೂರು ವಿಭಾಗಗಳಲ್ಲಿ (ರೇಟಿಂಗ್ ಆಧಾರದಲ್ಲಿ) ಈ ಟೂರ್ನಿಯು ನಡೆಯಲಿದೆ. ಮೂರೂ ವಿಭಾಗಗಳಲ್ಲಿ ಪ್ರತ್ಯೇಕ ಬಹುಮಾನಗಳಿರುತ್ತವೆ. 22ರಂದು ಬ್ಲಿಟ್ಜ್ (ವೇಗದ) ಟೂರ್ನಿಯನ್ನೂ ವ್ಯವಸ್ಥೆ ಮಾಡಲಾಗಿದ್ದು, ಇದರಲ್ಲಿ ಎಲ್ಲ ವಯೋವರ್ಗದ ಆಟಗಾರರು ಭಾಗವಹಿಸಬಹುದು.

ಗ್ರ್ಯಾಂಡ್‌ಮಾಸ್ಟರ್‌ಗಳಾದ ಅಭಿಜಿತ್ ಗುಪ್ತಾ ಅಗ್ರ ಶ್ರೇಯಾಂಕ ಗಳಿಸಿದ್ದು, ರಾಷ್ಟ್ರೀಯ ಚಾಂಪಿಯನ್ ಎಸ್.ಪಿ.ಸೇತುರಾಮನ್ ಅವರು ನಂತರದ ಶ್ರೇಯಾಂಕ ಹೊಂದಿದ್ದಾರೆ.

ಕರ್ನಾಟಕ ರಾಜ್ಯ ಚೆಸ್ ಸಂಸ್ಥೆ ಅಧ್ಯಕ್ಷ ಡಿ.ಪಿ.ಅನಂತ, ಗೌರವ ಕಾರ್ಯದರ್ಶಿ ಅರವಿಂದ ಶಾಸ್ತ್ರಿ, ರಾಜ್ಯದ ಮೊದಲ ಗ್ರ್ಯಾಂಡ್‌ಮಾಸ್ಟರ್ ಎಂ.ಎಸ್.ತೇಜ ಕುಮಾರ್, ಬಿಯುಡಿಸಿಎ ಅಧ್ಯಕ್ಷೆ ಎಂ.ಯು. ಸೌಮ್ಯಾ ಉಪಸ್ಥಿತರಿದ್ದರು.

ಎಎಫ್‌ಸಿ ಕಪ್: ಆಸ್ಟ್ರೇಲಿಯಾಕ್ಕೆ ಮಣಿದ ಭಾರತ

ಅಲ್ ರಯ್ಯಾನ್ (ಪಿಟಿಐ): ಹೋರಾಟ ತೋರಿದರೂ ಭಾರತ ತಂಡ, ಎಎಫ್‌ಸಿ ಏಷ್ಯನ್ ಕಪ್ ಫುಟ್‌ಬಾಲ್ ಟೂರ್ನಿಯ 'ಬಿ' ಗುಂಪಿನ ಮೊದಲ ಪಂದ್ಯದಲ್ಲಿ ಶನಿವಾರ ಆಸ್ಟ್ರೇಲಿಯಾ ಎದುರು 0–2ರಿಂದ ಸೋಲನುಭವಿಸಿತು.

ಅಹ್ಮದ್ ಬಿನ್ ಅಲಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಆಸ್ಟ್ರೇಲಿಯಾ ಪರ ಜಾಕ್ಸನ್ ಇರ್ವಿನ್ (50ನೇ ನಿ) ಮತ್ತು ಜೋರ್ಡಾನ್ ಬ್ರದರ್ಸ್ (73ನೇ ನಿ) ಗೋಲು ಗಳಿಸಿದರು. ಮೊದಲ 50 ನಿಮಿಷ ಬಲಿಷ್ಠ ಆಸ್ಟ್ರೇಲಿಯಾಕ್ಕೆ ಭಾರತದ ಆಟಗಾರರು ಗೋಲು ನಿರಾಕರಿಸಿದರು. ಸುನಿಲ್ ಚೆಟ್ರಿ ನೇತೃತ್ವದ ತಂಡ ಮೊದಲಾರ್ಧ ಮತ್ತು ದ್ವಿತೀಯಾರ್ಧದ ಐದು ನಿಮಿಷಗಳ ಬಳಿಕ ಅತ್ಯುತ್ತಮ ರಕ್ಷಣಾತ್ಮಕ ಆಟವಾಡಿತು.

ಮೊದಲ 45 ನಿಮಿಷಗಳ ಕಾಲ ನಾಯಕ ಸುನಿಲ್ ಸೇರಿದಂತೆ ಎಲ್ಲಾ ಆಟಗಾರರು ರಕ್ಷಣಾತ್ಮಕ ಆಟವಾಡಿದರು. ಭಾರತದ ಆಟಗಾರರು ಗೋಲು ಗಳಿಸಲು ಯತ್ನಿಸದ ಕಾರಣ ಆಸ್ಟ್ರೇಲಿಯಾ ತಂಡದ ನಾಯಕ, ಗೋಲ್ ಕೀಪರ್ ಮ್ಯಾಥ್ಯು ರಯಾನ್ ಅವರು ಮೈದಾನದ ಮಧ್ಯದ ರೇಖೆ ಬಳಿ ನಿಂತು ಮೊದಲಾರ್ಧದ ಹೆಚ್ಚಿನ ಸಮಯ ತಂಡದ ಆಟಗಾರರನ್ನು ಹುರಿದುಂಬಿಸಿದರು. 16ನೇ ನಿಮಿಷದಲ್ಲಿ ಗೋಲು ಗಳಿಸಲು ಭಾರತಕ್ಕೆ ಒಂದು ಸುವರ್ಣಾವಕಾಶ ಸಿಕ್ಕಿತು. ಆದರೆ ಚೆಟ್ರಿ ಅದನ್ನು ತಪ್ಪಿಸಿಕೊಂಡರು.

ಭಾರತ ತನ್ನ ಗುಂಪಿನ ಎರಡನೇ ಪಂದ್ಯವನ್ನು ಇದೇ 18 ರಂದು ಉಜ್ಬೇಕಿಸ್ತಾನ ಎದುರು ಆಡಲಿದೆ. ಆರು ಗುಂಪಿನಲ್ಲಿ ಮೊದಲ ಎರಡು ಸ್ಥಾನ ಪಡೆಯುವ ತಂಡಗಳು ಮತ್ತು ಉತ್ತಮ ಪ್ರದರ್ಶನ ನೀಡಿ ಮೂರನೇ ಸ್ಥಾನ ಗಳಿಸಿದ ನಾಲ್ಕು ತಂಡಗಳು 16ರ ಘಟ್ಟಕ್ಕೆ ಪ್ರವೇಶಿಸಲಿವೆ.

ಹಾಕಿ: ಭಾರತದ ವನಿತೆಯರಿಗೆ ಸೋಲು



ಭಾರತ ತಂಡದ ದೀಪಿಕಾ ಮತ್ತು ಅಮೆರಿಕದ ಆಟಗಾರ್ತಿಯ ನಡುವೆ ಪೈಪೋಟಿ –ಪಿಟಿಐ ಚಿತ್ರ

ರಾಂಚಿ (ಪಿಟಿಐ): ಅಮೆರಿಕ ತಂಡವು ಎಫ್‌ಐಎಚ್ ಮಹಿಳಾ ಒಲಿಂಪಿಕ್ ಹಾಕಿ ಅರ್ಹತಾ ಟೂರ್ನಿಯ ಮೊದಲ ಪಂದ್ಯದಲ್ಲಿ ಶನಿವಾರ 1–0 ರಿಂದ ಆತಿಥೇಯ ಭಾರತ ತಂಡವನ್ನು ಸೋಲಿಸಿತು.

ವಿಶ್ವ ಕ್ರಮಾಂಕದಲ್ಲಿ ಆರನೇ ಸ್ಥಾನದಲ್ಲಿರುವ ಭಾರತ ತಂಡಕ್ಕೆ ಏಳು ಪೆನಾಲ್ಟಿ ಕಾರ್ನರ್‌ಗಳು ಸೇರಿದಂತೆ ಗೋಲು ಗಳಿಸುವ ಹಲವು ಅವಕಾಶಗಳು ದೊರಕಿದ್ದವು. ಆದರೆ, ಅಮೆರಿಕ ತಂಡದ ರಕ್ಷಣಾ ಕೋಟೆಯನ್ನು ಭೇದಿಸುವಲ್ಲಿ ವಿಫಲವಾಯಿತು.

16ನೇ ನಿಮಿಷದಲ್ಲಿ ಅಬಿಗೈಲ್ ಟ್ಯಾಮರ್ ಗೋಲು ಹೊಡೆದು 'ಬಿ' ಗುಂಪಿನ ಈ ಪಂದ್ಯದಲ್ಲಿ ಅಮೆರಿಕ ಗೆಲುವಿಗೆ ಕಾರಣರಾದರು. ಮುಂದಿನ ಪಂದ್ಯಗಳಲ್ಲಿ ಬಲಿಷ್ಠ ತಂಡಗಳ ಎದುರಿಸಲಿರುವ ಭಾರತಕ್ಕೆ ಈ ಸೋಲು ಪ್ಯಾರಿಸ್ ಒಲಿಂಪಿಕ್ಸ್ ಹಾದಿಯಲ್ಲಿ ಹಿನ್ನಡೆ ಉಂಟುಮಾಡಿತು. ಈ ಟೂರ್ನಿಯಲ್ಲಿ ಅಗ್ರ ಮೂರು ಸ್ಥಾನ ಗಳಿಸುವ ತಂಡಗಳಿಗೆ ಒಲಿಂಪಿಕ್ಸ್‌ಗೆ ಟಿಕೆಟ್ ದೊರೆಯಲಿದೆ. ಏಳು ನಿಮಿಷಗಳ ಅಂತರದಲ್ಲಿ ಅಮೆರಿಕ ಸತತ ಮೂರು ಪೆನಾಲ್ಟಿ ಕಾರ್ನರ್‌ಗಳ ಅವಕಾಶ ಗಳಿಸಿತು. ಆದರೆ ಎಲ್ಲವನ್ನೂ ವ್ಯರ್ಥ ಮಾಡಿತು. ಅಂತಿಮವಾಗಿ ಟ್ಯಾಮರ್ ಗೋಲು ಗಳಿಸಿದರು.

ಭಾರತ ಭಾನುವಾರ ನ್ಯೂಜಿಲೆಂಡ್ ವಿರುದ್ಧ ಸೆಣಸಲಿದ್ದು, ಅಮೆರಿಕ ಇಟಲಿ ವಿರುದ್ಧ ಸೆಣಸಲಿದೆ.

ದಿನದ ಇತರ ಪಂದ್ಯಗಳಲ್ಲಿ ನ್ಯೂಜಿಲೆಂಡ್ 3–0 ರಿಂದ ಇಟಲಿ ವಿರುದ್ಧ, ಜಪಾನ್ 2–0 ಗೋಲುಗಳಿಂದ ಝೆಕ್ ರಿಪಬ್ಲಿಕ್ ವಿರುದ್ಧ, ಜರ್ಮನಿ 3–0 ಯಿಂದ ಇಟಲಿ ವಿರುದ್ಧ ಗೆಲುವು ಸಾಧಿಸಿದವು.

ಮಲೇಷ್ಯಾ ಓಪನ್ ಬ್ಯಾಡ್ಮಿಂಟನ್: ಸಾತ್ವಿಕ್–ಚಿರಾಗ್ ಜೋಡಿ ಫೈನಲ್‌ಗೆ

ಕ್ವಾಲಾಲಂಪುರ (ಪಿಟಿಐ): ವಿಶ್ವ ಚಾಂಪಿಯನ್ ಜೋಡಿಯಾದ ಸಿಯೊ ಸಿಯುಂಗ್ ಜೆ ಮತ್ತು ಕಾಂಗ್ ಮಿನ್ ಹ್ಯುಕ್ ಅವರನ್ನು ನೇರ ಗೇಮ್‌ಗಳಿಂದ ಹಿಮ್ಮೆಟ್ಟಿಸಿದ ಭಾರತದ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರು ಮಲೇಷ್ಯಾ ಓಪನ್ ಸೂಪರ್ 1000 ಬ್ಯಾಡ್ಮಿಂಟನ್ ಟೂರ್ನಿಯ ಪುರುಷರ ಡಬಲ್ಸ್‌ನಲ್ಲಿ ಶನಿವಾರ ಫೈನಲ್‌ಗೆ ಲಗ್ಗೆ ಇಟ್ಟರು.

ವಿಶ್ವ ಕ್ರಮಾಂಕದಲ್ಲಿ ಎರಡನೇ ಸ್ಥಾನದಲ್ಲಿರುವ ಸಾತ್ವಿಕ್–ಚಿರಾಗ್ ಜೋಡಿ 21–18, 22–20 ರಿಂದ ಕೊರಿಯಾದ ಕಾಂಗ್–ಸಿಯೊ ಜೋಡಿಯನ್ನು ಸೋಲಿಸಲು ಕೇವಲ 47 ನಿಮಿಷ ತೆಗೆದುಕೊಂಡಿತು. ಕೊರಿಯಾ ಆಟಗಾರರು ವಿಶ್ವ ಕ್ರಮಾಂಕದಲ್ಲಿ ಮೂರನೇ ಸ್ಥಾನದಲ್ಲಿದ್ದಾರೆ.

ಏಷ್ಯನ್ ಗೇಮ್ಸ್ ಚಾಂಪಿಯನ್ನರಾದ ಭಾರತದ ಆಟಗಾರರು ಶುಕ್ರವಾರ ಚೀನಾದ ರೆನ್ ಷಿಯಾಂಗ್ ಯು ಮತ್ತು ಹ ಜಿ ಟಿಂಗ್ ಅವರನ್ನು ಸೋಲಿಸಿ ಸೆಮಿಫೈನಲ್ ಪ್ರವೇಶಿಸಿದ್ದರು.

ಪ್ರೊ ಕಬಡ್ಡಿ ಲೀಗ್: ಪುಣೇರಿ ತಂಡದ ಕೋಚ್ ಬಿ.ಸಿ. ರಮೇಶ್

'ಈಗಲೇ ಫೇವರಿಟ್ ಎನ್ನಲಾರೆ...'

• ನಾಗೇಶ್ ಶೆಣೈ


ಬಿ.ಸಿ. ರಮೇಶ್

ಬೆಂಗಳೂರು: ಪ್ರೊ ಕಬಡ್ಡಿ ಲೀಗ್‌ನ ಅರ್ಧದಷ್ಟು ಪಂದ್ಯಗಳು ಶುಕ್ರವಾರ ಮುಕ್ತಾಯಗೊಂಡಿವೆ. ಕಳೆದ ಬಾರಿ ಎರಡನೇ ಸ್ಥಾನ ಗಳಿಸಿದ್ದ ಪುಣೇರಿ ಪಲ್ಟನ್ ತಂಡ ಸೀಸನ್ 10ರಲ್ಲಿ ಅಮೋಘ ಪ್ರದರ್ಶನ ನೀಡಿದೆ. ಆಡಿದ 11 ಪಂದ್ಯಗಳಲ್ಲಿ ಹತ್ತನ್ನು ಗೆದ್ದು ಪುಣೆಯ ತಂಡ ಮೊದಲ ಬಾರಿ ಚಾಂಪಿಯನ್ ಆಗುವ ನಿಟ್ಟಿನಲ್ಲಿ ದಾಪುಗಾಲನ್ನು ಇಟ್ಟಿದೆ.

ತಂಡದಲ್ಲಿ ಹೊಂದಾಣಿಕೆ, ಆಟಗಾರರ ಆಲ್‌ರೌಂಡ್ ಪ್ರದರ್ಶನ, ರೈಡಿಂಗ್, ಟ್ಯಾಕ್ಲಿಂಗ್‌ನಲ್ಲಿ ಸಮರ್ಥ ಆಟಗಾರರು ಇರುವುದರಿಂದ ಈ ತಂಡ ಹೆಚ್ಚಿನ ಪಂದ್ಯಗಳನ್ನು ಸುಲಭವಾಗಿ ಗೆದ್ದುಕೊಂಡಿದೆ. ಲೀಗ್‌ನಲ್ಲೇ ಹೆಚ್ಚು ಟ್ಯಾಕ್ಲಿಂಗ್ ಪಾಯಿಂಟ್ಸ್, ಹೆಚ್ಚು ಆಲೌಟ್ ಪಾಯಿಂಟ್ಸ್ ಗಳಿಸಿರುವುದು ಪುಣೇರಿ ತಂಡದ ಹೆಗ್ಗಳಿಕೆ.

'ನಿಜ, ಇದುವರೆಗಿನ ನಮ್ಮ ತಂಡದ ಪ್ರದರ್ಶನ ಚೆನ್ನಾಗಿದೆ. ಆದರೆ ಈಗಲೇ ನಾವು ಫೇವರಿಟ್ ಎನ್ನುವುದಿಲ್ಲ. ಆಡಲು ಇನ್ನೂ 11 ಪಂದ್ಯಗಳಿವೆ. ಮುಂದಿನ 7–8 ಪಂದ್ಯಗಳು ಮಹತ್ವದ್ದು' ಎನ್ನುತ್ತಾರೆ ತಂಡದ ಕೋಚ್, ಕನ್ನಡಿಗ ಬಿ.ಸಿ.ರಮೇಶ್. ಜೈಪುರದಿಂದ 'ಪ್ರಜಾವಾಣಿ'ಗೆ ನೀಡಿದ ದೂರವಾಣಿ ಸಂದರ್ಶನದಲ್ಲಿ ಅವರು ತಂಡದ ಇದುವರೆಗಿನ ಪಯಣದ ಮಾಹಿತಿ ನೀಡಿದರು.

'ನಾಯಕ ಅಸ್ಲಂ ಇನಾಮದಾರ್, ಮೋಹಿತ್ ಗೋಯತ್, ಪಂಕಜ್ ಮೋಹಿತೆ ಸೇರಿದಂತೆ ತಂಡದಲ್ಲಿ ಆರು ಪರಿಣತ ರೈಡರ್‌ಗಳಿದ್ದಾರೆ. ರಕ್ಷಣೆ (ಕಾರ್ನರ್ ಮತ್ತು ಕವರ್) ಆಟಗಾರರು ಚೆನ್ನಾಗಿದ್ದು, ರೈಡಿಂಗ್‌ನಲ್ಲೂ ಪಾಯಿಂಟ್ಸ್ ಗಳಿಸುತ್ತಿದ್ದಾರೆ. ರೈಡರ್‌ಗಳು ಟ್ಯಾಕ್ಲಿಂಗ್ ನಿಭಾಯಿಸುತ್ತಾರೆ. ಮೊಹಮ್ಮದ್‌ರೇಝಾ ಶಾಡ್ಲುಯಿ ಚಿಯಾನೆ ಅವರು ಪ್ರಮುಖ ರಕ್ಷಣೆ ಆಟಗಾರ. ಆದರೆ ರೈಡಿಂಗ್ ಅವಕಾಶ ಸಿಕ್ಕಾಗ ಅದನ್ನು ಸಮರ್ಥವಾಗಿ ಬಳಸಿದ್ದಾರೆ. ಏಷ್ಯನ್ ಗೇಮ್ಸ್‌ನಲ್ಲಿ ಅವರ ಈ ಸಾಮರ್ಥ್ಯ ಗಮನಿಸಿದ್ದೆ' ಎಂದರು. ಯುವ ಆಟಗಾರ ಮೋಹಿತ್ ಆಲ್‌ರೌಂಡರ್ ಆಗಿ ರೂಪುಗೊಳ್ಳುತ್ತಿದ್ದಾರೆ. ಆ್ಯಂಕಲ್ ಹೋಲ್ಡ್ ಕೌಶಲದ ಜೊತೆಗೆ 'ಚೇಸಿಂಗ್' ಪರಿಣತಿಯನ್ನೂ ತೋರಿಸಿದ್ದಾರೆ.

ಪಿಕೆಎಲ್ ಬಿಡ್‌ನಲ್ಲಿ ಇರಾನ್‌ನ ಮೊಹಮ್ಮದ್‌ರೇಝಾ ಅವರು ₹2.35 ಕೋಟಿ ಮೊತ್ತಕ್ಕೆ ಪುಣೇರಿ ಪಾಲಾಗಿದ್ದರು. ವಿದೇಶಿ ಆಟಗಾರನೊಬ್ಬ ಗಳಿಸಿದ ದಾಖಲೆ ಮೊತ್ತ ಇದು. ಈ ಋತುವಿನಲ್ಲಿ ಟ್ಯಾಕ್ಲಿಂಗ್ ವಿಭಾಗದಲ್ಲಿ ಅವರೇ 43 ಪಾಯಿಂಟ್‌ಗಳೊಂದಿಗೆ ಮುಂಚೂಣಿಯಲ್ಲಿದ್ದಾರೆ. ಇದೇ ತಂಡದ ಗೌರವ್ ಖತ್ರಿ ಅವರು 37 ಪಾಯಿಂಟ್‌ಗಳೊಂದಿಗೆ ಜಂಟಿ ಎರಡನೇ ಸ್ಥಾನದಲ್ಲಿದ್ದಾರೆ.

'ಲೀಗ್‌ಗೆ ಮೊದಲು ಒಂದು ತಿಂಗಳ ಶಿಬಿರ ನಡೆಸಿದ್ದೆವು. ಪಂದ್ಯದಲ್ಲಿ ಎದುರಾಗಬಹುದಾದ ಸನ್ನಿವೇಶಗಳನ್ನು ಕಲ್ಪಿಸಿಕೊಂಡು ಅಭ್ಯಾಸ ಮಾಡುತ್ತಿದ್ದೆವು. ವಾರಕ್ಕೆ ಎರಡು ದಿನ ಪಂದ್ಯಗಳನ್ನು ನಡೆಸಿದ್ದೆವು. ಹುಡುಗರು ಗಮನವಿಟ್ಟು ಆಡಲು ಶುರು ಮಾಡಿದರು' ಎಂದು ರಮೇಶ್ ವಿವರಿಸಿದರು.

ಅಂತರರಾಷ್ಟ್ರೀಯ ಆಟಗಾರ ರಮೇಶ್ ಪ್ರಕಾರ ಲೀಗ್‌ನಲ್ಲಿ ಪ್ರಬಲ ಸವಾಲು ನೀಡಬಲ್ಲ ಇನ್ನೊಂದು ತಂಡವೆಂದರೆ, ಹಾಲಿ ಚಾಂಪಿಯನ್ ಜೈಪುರ ಪಿಂಕ್ ಪ್ಯಾಂಥರ್ಸ್. ಸದ್ಯ ಈ ತಂಡ ಲೀಗ್‌ನಲ್ಲಿ ಎರಡನೇ ಸ್ಥಾನದಲ್ಲಿದೆ.

ಏಳನೇ ಋತುವಿನಲ್ಲಿ (2019) ಬೆಂಗಾಲ್ ವಾರಿಯರ್ಸ್ ರಮೇಶ್ ತರಬೇತಿಯಡಿ ಚಾಂಪಿಯನ್ ಆಗಿತ್ತು. ಅದಕ್ಕೆ ಹಿಂದಿನ ವರ್ಷ, ಬೆಂಗಳೂರು ತಂಡ ಪಿಕೆಎಲ್ ಗೆದ್ದ ಸಂದರ್ಭದಲ್ಲಿ ಸಹಾಯಕ ಕೋಚ್ ಆಗಿದ್ದರು.

ಪುಣೇರಿ ಪಲ್ಟನ್ ಗೆಲುವಿನ ಓಟಕ್ಕೆ ತಡೆಯೊಡ್ಡಿದ ಪಿಂಕ್ ಪ್ಯಾಂಥರ್ಸ್

ಜೈಪುರ (ಪಿಟಿಐ): ಅರ್ಜುನ್ ದೇಶ್ವಾಲ್ ಅವರ ಅಮೋಘ ರೈಡಿಂಗ್ (16 ಪಾಯಿಂಟ್ಸ್) ನೆರವಿನಿಂದ ಹಾಲಿ ಚಾಂಪಿಯನ್ ಜೈಪುರ ಪಿಂಕ್ ಪ್ಯಾಂಥರ್ಸ್ ತಂಡ ಪ್ರೊ ಕಬಡ್ಡಿ ಲೀಗ್‌ನಲ್ಲಿ ಶನಿವಾರ ಹೋರಾಟದ ನಂತರ 36–34 ಪಾಯಿಂಟ್‌ಗಳಿಂದ ಪುಣೇರಿ ಪಲ್ಟನ್ ತಂಡಕ್ಕೆ ಸೋಲುಣಿಸಿತು.

ಮೊದಲಾರ್ಧದಲ್ಲಿ 9 ಪಾಯಿಂಟ್‌ಗಳ ಹಿನ್ನಡೆಯಲ್ಲಿದ್ದ ಪಿಂಕ್ ಪ್ಯಾಂಥರ್ಸ್, ಉತ್ತರಾರ್ಧದಲ್ಲಿ ಹೋರಾಟ ತೋರಿ ಪುಣೇರಿ ಪಲ್ಟನ್ ವಿಜಯದ ಓಟಕ್ಕೆ ತಡೆ ಒಡ್ಡಿದರು. ಈ ಗೆಲುವಿನೊಂದಿಗೆ ಪ್ಯಾಂಥರ್ಸ್ ತಂಡ ಎರಡನೇ ಸ್ಥಾನಕ್ಕೇರಿತು. ಪುಣೇರಿ ಅಗ್ರಸ್ಥಾನದಲ್ಲಿ ಮುಂದುವರಿದಿದೆ.

ಇಲ್ಲಿನ ಸವಾಯಿ ಮಾನ್‌ಸಿಂಗ್ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಪ್ಯಾಂಥರ್ಸ್ ಪರ ಅರ್ಜುನ್ ದೇಶ್ವಾಲ್ ಮತ್ತು ಸುನಿಲ್ ಕುಮಾರ್ ಮಿಂಚಿದರು. ತಂಡವು ರೈಡಿಂಗ್‌ನಿಂದ 20 ಮತ್ತು ಟ್ಯಾಕಲ್‌ನಿಂದ 10 ಪಾಯಿಂಟ್ಸ್ ಸಂಗ್ರಹಿಸಿತು. ಪುಣೇರಿ ಪರ ಅಸ್ಲಾಂ ಇನಾಮದಾರ್ (8) ಮತ್ತು ಪಂಕಜ್ ಮೋಹಿತೆ (4) ಅಂಕ ಸಂಪಾದಿಸಿದರು.

ಬೆಂಗಾಲ್ ವಾರಿಯರ್ಸ್‌ಗೆ ಜಯ: ಮತ್ತೊಂದು ಪಂದ್ಯದಲ್ಲಿ ಬೆಂಗಾಲ್ ವಾರಿಯರ್ಸ್ ತಂಡವು 41–37 ರಿಂದ ಯು.ಪಿ.ಯೋಧಾಸ್ ತಂಡವನ್ನು ಸೋಲಿಸಿತು. ಯೋಧಾಸ್ ಪರ ಪ್ರದೀಪ್ ನರ್ವಾಲ್ 16 ಅಂಕಗಳೊಂದಿಗೆ ಸೂಪರ್ ಟೆನ್ ಸಾಧನೆ ಮಾಡಿದರು. ವಾರಿಯರ್ಸ್ ಪರ ಮಣಿಂದರ್ ಸಿಂಗ್ (13), ನಿತಿನ್ ಕುಮಾರ್ (10) ಅಂಕ ಕಲೆ ಹಾಕಿದರು.

ಗಾಜಾ: ಯುದ್ಧ ತೀವ್ರಗೊಳಿಸಿದ ಇಸ್ರೇಲ್


ದಕ್ಷಿಣ ಗಾಜಾಪಟ್ಟಿಯ ರಫಾನಗರದಲ್ಲಿ ಇಸ್ರೇಲ್ ಪಡೆಗಳ ದಾಳಿಗೆ ನೆಲಸಮವಾಗಿರುವ ಮನೆಗಳ ಅವಶೇಷಗಳ ನಡುವೆ ಅಗತ್ಯ ವಸ್ತುಗಳಿಗಾಗಿ ಶನಿವಾರ ಹುಡುಕಾಟ ನಡೆಸಿದ ಜನ –ಎಎಫ್‌ಪಿ ಚಿತ್ರ

ದೋಹಾ/ಗಾಜಾ (ರಾಯಿಟರ್ಸ್): ಇಸ್ರೇಲ್ ಮತ್ತು ಹಮಾಸ್ ಬಂಡುಕೋರರ ನಡುವಿನ ಯುದ್ಧವು 100ನೇ ದಿನದತ್ತ ಸಾಗುತ್ತಿದ್ದು, ಇಸ್ರೇಲ್ ಪಡೆಗಳು ಕಾರ್ಯಾಚರಣೆ ತೀವ್ರಗೊಳಿಸಿವೆ.

ದಕ್ಷಿಣ ರಫಾ ನಗರದ ಮನೆಯೊಂದರ ಮೇಲೆ ಇಸ್ರೇಲ್ ಪಡೆಗಳು ನಡೆಸಿದ ವಾಯು ದಾಳಿಯಲ್ಲಿ 10 ಮಂದಿ ಮೃತಪಟ್ಟಿದ್ದಾರೆ ಎಂದು ಗಾಜಾದ ಆರೋಗ್ಯ ಸಚಿವಾಲಯ ಶನಿವಾರ ಹೇಳಿದೆ. ಈ ಮನೆಯಲ್ಲಿ ವಲಸೆ ಬಂದಿದ್ದ ಎರಡು ಕುಟುಂಬಗಳು ನೆಲೆಸಿದ್ದವು ಎಂದು ತಿಳಿಸಿದೆ.

ಬಂಡುಕೋರರನ್ನು ಗುರಿಯಾಗಿಸಿ ದಾಳಿ ನಡೆಸಿದ್ದೇವೆ. ನಾಗರಿಕರಿಗೆ ಹಾನಿಯುಂಟಾಗದಂತೆ ಜಾಗ್ರತೆ ವಹಿಸಿದ್ದೇವೆ ಎಂದು ಇಸ್ರೇಲ್‌ನ ಸೇನಾಪಡೆಯ ಮೂಲಗಳು ಹೇಳಿವೆ.

ಮಧ್ಯ ಗಾಜಾಪಟ್ಟಿಯ ಖಾನ್ ಯೂನಿಸ್ ನಗರದ ದಕ್ಷಿಣ ಪ್ರದೇಶದಲ್ಲಿ ಹಲವು ಮಂದಿ ಬಂಡುಕೋರರನ್ನು ಹತ್ಯೆ ಮಾಡಿರುವುದಾಗಿಯೂ ವಿವರಿಸಿವೆ.

ಖಾನ್ ಯೂನಿಸ್ ನಗರದಲ್ಲಿ ಇಸ್ರೇಲ್‌ನ ಹೆಲಿಕಾಪ್ಟರ್ ಅನ್ನು ಹೊಡೆದುರುಳಿಸಿದ್ದಾಗಿ ಹಮಾಸ್ ಹೇಳಿದೆ.

ಮಧ್ಯ ಗಾಜಾಪಟ್ಟಿಯ ನಿರಾಶ್ರಿತರ ಶಿಬಿರಗಳಿರುವ ಅಲ್-ಬುರೇಜ್, ಅಲ್-ನುಸ್ಸೆರಾತ್ ಮತ್ತು ಅಲ್-ಮಘಾಜಿ ಪ್ರದೇಶದಲ್ಲಿ ಇಸ್ರೇಲ್ ಪಡೆಗಳು ಕಾರ್ಯಾಚರಣೆಯನ್ನು ತೀವ್ರಗೊಳಿಸಿವೆ.

24 ಗಂಟೆಗಳಲ್ಲಿ ಇಸ್ರೇಲ್ ದಾಳಿಗೆ 135 ಪ್ಯಾಲೆಸ್ಟೀನಿಯರು ಮೃತಪಟ್ಟಿದ್ದು, 312 ಮಂದಿ ಗಾಯಗೊಂಡಿದ್ದಾರೆ ಎಂದು ಗಾಜಾದ ಆರೋಗ್ಯ ಸಚಿವಾಲಯದ ಅಧಿಕಾರಿಗಳು ತಿಳಿಸಿದ್ದಾರೆ.

ಇದುವರೆಗೆ 8 ಸಾವಿರ ಮಂದಿ ಬಂಡುಕೋರರನ್ನು ಹತ್ಯೆ ಮಾಡಿರುವುದಾಗಿ ಇಸ್ರೇಲ್ ಹೇಳಿದೆ.

ಪ್ಯಾಲೆಸ್ಟೀನಿಯದ ಮೂವರ ಹತ್ಯೆ

ಜೆರುಸಲೇಂ (ರಾಯಿಟರ್ಸ್): ತನ್ನ ವಶದಲ್ಲಿರುವ ವೆಸ್ಟ್ ಬ್ಯಾಂಕ್ ಜನವಸತಿ ಪ್ರದೇಶಕ್ಕೆ ನುಗ್ಗಲು ಯತ್ನಿಸಿದ ಮೂವರು ಶಸ್ತ್ರಸಜ್ಜಿತ ಪ್ಯಾಲೆಸ್ಟೀನಿಯರನ್ನು ತಮ್ಮ ಪಡೆಗಳು ಹತ್ಯೆ ಮಾಡಿವೆ ಎಂದು ಇಸ್ರೇಲ್ ಸೇನೆ ತಿಳಿಸಿದೆ.

ಹತ್ಯೆಗೊಳಗಾದವರ ಪೈಕಿ ಇಬ್ಬರಿಗೆ 16 ವರ್ಷ, ಮತ್ತೊಬ್ಬರಿಗೆ 19 ವರ್ಷ ವಯಸ್ಸಾಗಿತ್ತು ಎಂದು ಪ್ಯಾಲೆಸ್ಟೀನ್‌ನ ಅಧಿಕೃತ ಸುದ್ದಿ ಸಂಸ್ಥೆ ವಾಫಾ ತಿಳಿಸಿದೆ. ಪ್ಯಾಲೆಸ್ಟೀನ್‌ನ ಹೀಬ್ರಾನ್ ನಗರದ ಸನಿಹದಲ್ಲಿರುವ ಅಡೋರಾ ಜನವಸತಿ ಪ್ರದೇಶದ ಬೇಲಿಯನ್ನು ಭೇದಿಸಿ ದಾಳಿಕೋರರು ಮುನ್ನುಗ್ಗಲು ಯತ್ನಿಸಿದರು ಎಂದು ಇಸ್ರೇಲ್ ತಿಳಿಸಿದೆ.

'ರಾಷ್ಟ್ರೀಯ ರಸ್ತೆ ಸುರಕ್ಷತಾ ಮಾಸ' ಕಾರ್ಯಕ್ರಮದಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್

6 ಸಾವಿರಕ್ಕೂ ಹೆಚ್ಚು ಡಿ.ಎಲ್ ಅಮಾನತು

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ರಸ್ತೆ ನಿಯಮ ಪಾಲನೆಗೆ ಡಿಸಿಎಂ ಡಿಕೆಶಿ ಕಿವಿಮಾತು
- ವಿದ್ಯಾರ್ಥಿಗಳಲ್ಲೂ ಅರಿವು ಮೂಡಿಸಲು ಸಲಹೆ

ಬೆಂಗಳೂರು: ಸಂಚಾರ ನಿಯಮ ಉಲ್ಲಂಘನೆ ಮಾಡಿದ್ದಕ್ಕಾಗಿ 3 ವರ್ಷಗಳಲ್ಲಿ 6 ಸಾವಿರಕ್ಕೂ ಹೆಚ್ಚು ಚಾಲನಾ ಪರವಾನಗಿಗಳನ್ನು ಅಮಾನತು ಮಾಡಲಾಗಿದೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ಪೊಲೀಸ್ ಇಲಾಖೆ ಶನಿವಾರ ನಗರದಲ್ಲಿ ಆಯೋಜಿಸಿದ್ದ 'ರಾಷ್ಟ್ರೀಯ ರಸ್ತೆ ಸುರಕ್ಷತಾ ಮಾಸ' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಜೀವನದಲ್ಲಿ ಧೈರ್ಯ ಇರಬೇಕು. ಆದರೆ, ಭಂಡತನ ಇರಬಾರದು. ಜೀವ ಅಮೂಲ್ಯವಾದುದು. ಒಮ್ಮೆ ಹೋದ ಜೀವ ಮತ್ತೆ ಬರುವುದಿಲ್ಲ. ಕಾನೂನು ಪಾಲನೆ, ಶಿಸ್ತು, ಸಂಯಮ ಸೇರಿದಂತೆ ರಸ್ತೆ ನಿಯಮಗಳ ಬಗ್ಗೆ ಮಕ್ಕಳಲ್ಲಿ ಅರಿವು ಮೂಡಿಸಲು 'ಮೊಳಕೆಯಲ್ಲೇ ತಿದ್ದಿರಿ' ಕೈಪಿಡಿಯನ್ನು ಬಿಡುಗಡೆ ಮಾಡಲಾಗಿದೆ' ಎಂದು ಅವರು ಹೇಳಿದರು.

ಗೃಹಸಚಿವ ಡಾ.ಜಿ.ಪರಮೇಶ್ವರ ಅವರು, ದೇಶದ ಇತರೆ ಪ್ರಮುಖ ನಗರಗಳಿಗೆ ಹೋಲಿಸಿದರೆ ಬೆಂಗಳೂರಿನಲ್ಲಿ ವಾಹನ ದಟ್ಟಣೆ ಕಡಿಮೆಯಾಗಿದೆ. ಕಮಾಂಡ್ ಕಂಟ್ರೋಲ್ ಸೆಂಟರ್‌ನ ಆಧುನಿಕ ತಂತ್ರಜ್ಞಾನದಿಂದ ವಾಹನ ದಟ್ಟಣೆ ಸಮಸ್ಯೆ ನಿಯಂತ್ರಿಸಲಾಗುತ್ತಿದೆ. ಜನರು ಮತ್ತಷ್ಟು ಸುರಕ್ಷಿತವಾಗಿ ಸಂಚರಿಸುವ ದೃಷ್ಟಿಯಿಂದ ಹೊಸ ತಂತ್ರಜ್ಞಾನ ಬಳಸಲಾಗುವುದು ಎಂದರು.

ಬೆಂಗಳೂರಿನಲ್ಲಿ 1 ಕೋಟಿಗೂ ಹೆಚ್ಚು ವಾಹನಗಳಿವೆ. 2023ರಲ್ಲಿ ರಸ್ತೆ ಅಪಘಾತದಲ್ಲಿಯೇ 900 ಜನರು ಮೃತಪಟ್ಟಿದ್ದಾರೆ. ಇದನ್ನು ನಿಯಂತ್ರಿಸಲು ವಿದ್ಯಾರ್ಥಿಗಳಿಗೆ, ಜನರಿಗೆ ಟ್ರಾಫಿಕ್ ನಿಯಮಗಳ ಕುರಿತು ಜಾಗೃತಿ ಮೂಡಿಸಲಾಗುತ್ತಿದೆ ಎಂದು ಹೇಳಿದರು.



ಆರ್ಟಿಫಿಶಿಯಲ್ ಇಂಟಲಿಜೆನ್ಸ್ ಮೂಲಕ ಟ್ರಾಫಿಕ್ ನಿಯಂತ್ರಿಸುವ 'ಬೆಂಗಳೂರು ಟ್ರಾಫಿಕ್ ಎಂಜಿನ್'ಗೆ ಚಾಲನೆ ನೀಡಲಾಯಿತು. ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್, ಸಚಿವ ಜಿ.ಪರಮೇಶ್ವರ, ರಾಮಲಿಂಗಾರೆಡ್ಡಿ ಇದ್ದರು


ರಾಷ್ಟ್ರೀಯ ರಸ್ತೆ ಸುರಕ್ಷತಾ ತಿಂಗಳು' ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ರಸ್ತೆ ಸುರಕ್ಷತಾ ಅಭಿಯಾನ ಫಲಕವನ್ನು ಹಿಡಿದು ಅರಿವು ಮೂಡಿಸಿದರು
—ಪ್ರಜಾವಾಣಿ ಚಿತ್ರ: ಎಂ.ಎಸ್ ಮಂಜುನಾಥ್

'ಹೈಕೋರ್ಟ್ ಆದೇಶದಂತೆ ಬೀದಿಬದಿ ವ್ಯಾಪಾರಿಗಳ ತೆರವು'

ಪಾದಚಾರಿಗಳ ಅನುಕೂಲ, ಸುಗಮ ಸಂಚಾರಕ್ಕಾಗಿ ಹೈಕೋರ್ಟ್ ಆದೇಶದಂತೆ ಬೀದಿಬದಿ ವ್ಯಾಪಾರಿಗಳ ತೆರವು ಮಾಡಲಾಗಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವ ಕುಮಾರ್ ಸುದ್ದಿಗಾರರಿಗೆ ತಿಳಿಸಿದರು. 'ಪಾದ ಚಾರಿ ಮಾರ್ಗ ಇರುವುದು ಜನ ಓಡಾಡಲು. ಬೀದಿಬದಿ ವ್ಯಾಪಾರಿಗಳ ನೋಂದಣಿ ಮಾಡಿಸಿ, ರಸ್ತೆಯ ಒಂದು ಕಡೆ ತಳ್ಳುಗಾಡಿಯಲ್ಲಿ ವ್ಯಾಪಾರಕ್ಕೆ ಅವಕಾಶ ನೀಡಲಾಗುವುದು. ಆರ್ಥಿಕ ನೆರವಿಗೂ ಸಿದ್ಧ' ಎಂದರು.

ದಟ್ಟಣೆ ನಿವಾರಣೆಗೆ ಸಂಚಾರ ಪೊಲೀಸರಿಂದ 'ಅಸ್ತ್ರಂ' ಯೋಜನೆ

ನಗರದಲ್ಲಿ ವಾಹನ ದಟ್ಟಣೆ ನಿವಾರಣೆ ಹಾಗೂ ಭವಿಷ್ಯದಲ್ಲಿ ಸಂಚಾರ ವ್ಯವಸ್ಥೆ ಸುಧಾರಿಸಲು ನಗರ ಸಂಚಾರ ಪೊಲೀಸರು 'ಅಸ್ತ್ರಂ' ಎಂಬ ಯೋಜನೆ ರೂಪಿಸಿದ್ದಾರೆ. ಇದು 'ಸ್ಮಾರ್ಟ್ ಎಂಜಿನ್' ವ್ಯವಸ್ಥೆಯಾಗಿದೆ.

ಕೃತಕ ಬುದ್ಧಿಮತ್ತೆ ಅಡಿ ಯಾವ ಭಾಗದಲ್ಲಿ ದಟ್ಟಣೆಯಿದೆ ಎಂದು ಗುರುತಿಸಿ, 'ಸ್ಮಾರ್ಟ್ ಎಂಜಿನ್', ಸಂಚಾರ ನಿರ್ವಹಣಾ ಕೇಂದ್ರಕ್ಕೆ ಮಾಹಿತಿ ರವಾನಿಸಲಿದೆ. ಇದನ್ನು ಆಧರಿಸಿ ದಟ್ಟಣೆ ತೆರವಿಗೆ ಕ್ರಮಕೈಗೊಳ್ಳಲಾಗುತ್ತದೆ

'ಯಾವ ಸಮಯದಲ್ಲಿ ದಟ್ಟಣೆ ಇರುತ್ತದೆ ಎಂಬುದನ್ನು ಸಂಚಾರ ಠಾಣೆಯ ಸಿಬ್ಬಂದಿಗೆ 15 ನಿಮಿಷಕ್ಕೊಮ್ಮೆ ಎಚ್ಚರಿಕೆ ಸಂದೇಶ ಬರಲಿದೆ. ಇದನ್ನು ಈ ಅಟೆಂಡೆನ್ಸ್ ಆ್ಯಪ್ ಜತೆಗೆ ಸಂಯೋಜಿಸಲಿದ್ದು, ನಿರ್ದಿಷ್ಟ ಜಂಕ್ಷನ್‌ನಲ್ಲಿರುವ ಸಂಚಾರ ಪೊಲೀಸರಿಗೆ ಮಾಹಿತಿ ಲಭ್ಯವಾಗಲಿದೆ. ಇದನ್ನು ಆಧರಿಸಿ ವಾಹನಗಳ ಸುಗಮ ಸಂಚಾರಕ್ಕೆ ವ್ಯವಸ್ಥೆ ಮಾಡಲು ಸಾಧ್ಯವಾಗಲಿದೆ' ಎಂದು ಪೊಲೀಸರು ಹೇಳಿದರು.

ಪ್ರಮುಖ ಜಂಕ್ಷನ್‌ಗಳಲ್ಲಿ ವಾಹನಗಳ ಸಾಲು, ವಾಹನಗಳ ಸಂಖ್ಯೆ, ವಾಹನಗಳ ಮಾದರಿ, ಮುಂದಿನ ದಿನಗಳಲ್ಲಿ ಉಂಟಾಗಬಹುದಾದ ದಟ್ಟಣೆ ಮಾಹಿತಿಯೂ ಸಿಗಲಿದೆ. ರಸ್ತೆಗಳಲ್ಲಿ ನಡೆಯುವ ದುರಂತಗಳ ಬಗ್ಗೆಯೂ ರಸ್ತೆ ಬಳಕೆದಾರರಿಗೆ ಬಿಟಿಟಿ ಮೂಲಕ ತಲುಪಲಿದೆ ಎಂದು ತಿಳಿಸಿದರು.

ಆಂಬುಲೆನ್ಸ್ ಆ್ಯಪ್: ಸಂಚಾರ ನಿರ್ವಹಣಾ ಕೇಂದ್ರದಲ್ಲಿ ನೋಂದಣಿಯಾದ ಆಂಬುಲೆನ್ಸ್‌ಗಳ ಸುಗಮ ಸಂಚಾರಕ್ಕೆ ವ್ಯವಸ್ಥೆ ಮಾಡಲಾಗುವುದು. ಪ್ರಯಾಣ ಆರಂಭ, ತಲುಪಬೇಕಾದ ಸ್ಥಳದ ವಿವರ ತಿಳಿಸಿದರೆ ಆಂಬುಲೆನ್ಸ್ ಸಂಚಾರಕ್ಕೆ ಅವಕಾಶ ಕಲ್ಪಿಸಲಾಗುವುದು. 120 ಸೆಕೆಂಡ್‌ಗಳಿಗೆ ಮೀರಿ ಆಂಬುಲೆನ್ಸ್ ದಟ್ಟಣೆ ಅವಧಿಯಲ್ಲಿ ಸಿಲುಕಿಕೊಂಡಿದ್ದರೆ ಆಗ ಎಸ್‌ಒಎಸ್ ಬಟನ್ ಸಕ್ರಿಯವಾಗಿ ಸಂಚಾರ ದಟ್ಟಣೆ ನಿರ್ವಹಣಾ ಕೇಂದ್ರಕ್ಕೆ ಮಾಹಿತಿ ಕಳುಹಿಸಲಿದೆ ಎಂದು ಪೊಲೀಸರು ಹೇಳಿದರು.

ನಗರ ಸಂಚಾರ ಪೊಲೀಸರು ಈಗಾಗಲೇ 10 ಕಡೆ ಡ್ರೋನ್ ಕ್ಯಾಮೆರಾ ಬಳಸುತ್ತಿದ್ದು, ಬೆಳಿಗ್ಗೆ ಮತ್ತು ಸಂಜೆಯ ದಟ್ಟಣೆ ಅವಧಿಯಲ್ಲಿ ಸಂಚಾರ ನಿರ್ವಹಣೆ ಮಾಡಲಾಗುತ್ತಿದೆ. ಡ್ರೋನ್ ಸೆರೆಹಿಡಿಯುವ ದೃಶ್ಯಗಳು ಸಂಚಾರ ನಿರ್ವಹಣಾ ಕೇಂದ್ರದಲ್ಲಿ ನೇರ ಪ್ರಸಾರವಾಗುತ್ತಿವೆ. ರಸ್ತೆಗಳಲ್ಲಿ ಅಪಘಾತ ಅಥವಾ ಇತರೆ ಘಟನೆಗಳ ಸ್ಥಳಕ್ಕೆ ಪೊಲೀಸರು ತಕ್ಷಣ ಹೋಗಲು ಇದರಿಂದ ನೆರವಾಗುತ್ತಿದೆ ಎಂದು ಪೊಲೀಸರು ಹೇಳಿದರು.

ಸುದ್ದಿ 2 ನಿಮಿಷ

ಸರ್ಕಾರಿ ಶಾಲೆ ವಿದ್ಯಾರ್ಥಿಗಳಿಗೆ ಯಕ್ಷಗಾನ ಪರಿಚಯ

ಬೆಂಗಳೂರು: ಜೆ.ಪಿ ನಗರದ ಪುಟ್ಟೇನಹಳ್ಳಿ ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆಯಲ್ಲಿ ಕರ್ನಾಟಕ ಮಹಿಳಾ ಯಕ್ಷಗಾನ ತಂಡದವರು ಯಕ್ಷಗಾನವನ್ನು ಶಾಲಾ ಮಕ್ಕಳಿಗೆ ಪರಿಚಯಿಸುವ ಕಾರ್ಯಕ್ರಮ ಆಯೋಜಿಸಿದ್ದರು.

ತಂಡದ ಮುಖ್ಯಸ್ಥೆ ಕೆ.ಗೌರಿ ಅವರು ಯಕ್ಷಗಾನದ ವೇಷ ಭೂಷಣಗಳ ಪರಿಚಯ, ಕಥಾ ಪ್ರಸಂಗಗಳ ಆಯ್ಕೆ ವಿಧಾನ, ಭಾಗವತಿಕೆ, ಬಳಸುವ ವಾದನಗಳು ಹೀಗೆ ಯಕ್ಷರಂಗದ ಮಾಹಿತಿಯನ್ನು ವಿದ್ಯಾರ್ಥಿಗಳಿಗೆ ನೀಡಿದರು. ವಿದ್ಯಾರ್ಥಿಗಳು, ಶಿಕ್ಷಕರ ಪ್ರಶ್ನೆಗಳಿಗೆ ಗೌರಿ ಮತ್ತು ತಂಡದವರು ಉತ್ತರಿಸಿದರು. ನಂತರ 'ಕೃಷ್ಣ ಲೀಲೆ, ಕಂಸ ವಧೆ' ಯಕ್ಷಗಾನ ಪ್ರದರ್ಶಿಸಿದರು. ಗೌರಿ, ಆಶಾ ರಾಘವೇಂದ್ರ, ಸುಮಾ ಅನಿಲ್ ಕುಮಾರ್ ಮತ್ತು ಕುಮಾರಿ ಧೃತಿ ಅಮ್ಮೆಂಬಳ ಮುಮ್ಮೇಳದಲ್ಲಿದ್ದರು. ಭಾಗವತರಾಗಿ ಶಂಕರ ಬಾಳಕುದ್ರು, ಮದ್ದಲೆಯಲ್ಲಿ ಗೌತಮ್ ಸಾಸ್ತಾನ್ ಮತ್ತು ಚೆಂಡೆಯಲ್ಲಿ ಸುಬ್ರಹ್ಮಣ್ಯ ಅವರು ಭಾಗವಹಿಸಿದ್ದರು. ಮುಖ್ಯ ಶಿಕ್ಷಕ ವೆಂಕಟೇಶ್ ಮೂರ್ತಿ ನೇತೃತ್ವದಲ್ಲಿ ಶಾಲೆಯ ಶಿಕ್ಷಕರು ಪಾಲ್ಗೊಂಡಿದ್ದರು.

ಗಿರಿಜಾ ಕಲ್ಯಾಣೋತ್ಸವಕ್ಕೆ ಶಿವಗಂಗೆ ಕ್ಷೇತ್ರ ಸಜ್ಜು



ದಾಬಸ್ ಪೇಟೆ: ಮಕರ ಸಂಕ್ರಮಣದ ದಿನ ನಡೆಯುವ ಗಿರಿಜಾ ಕಲ್ಯಾಣೋತ್ಸವಕ್ಕೆ ನೆಲಮಂಗಲ ತಾಲ್ಲೂಕಿನ ಶಿವಗಂಗೆ ಸಿಂಗಾರಗೊಂಡಿದೆ. ಸೋಮವಾರ ಬೆಳಿಗ್ಗೆ 8.27ಕ್ಕೆ ಗಿರಿಯ ಮೇಲಿನ ಕುಕದ್ಗಿರಿ ಶಿಖರದಲ್ಲಿ 'ಗಂಗೋತ್ಪತ್ತಿ' ಆಗಲಿದೆ.

'ಬೆಳಿಗ್ಗೆ 10.30ರವರೆಗೆ ನಡೆಯುವ ಮಕರ ಲಗ್ನದಲ್ಲಿ ಹೊನ್ನಾದೇವಿಯನ್ನು ಗಂಗಾಧರೇಶ್ವರ ಸ್ವಾಮಿಗೆ ಧಾರೆ ಎರೆಯಲಾಗುತ್ತದೆ. ಇದನ್ನು 'ಗಿರಿಜಾ ಕಲ್ಯಾಣ ಮಹೋತ್ಸವ' ಎಂದು ಕರೆಯಲಾಗುತ್ತದೆ' ಎಂದು ದೇವಸ್ಥಾನ ಸಮಿತಿಯವರು ತಿಳಿಸಿದ್ದಾರೆ.

ಕೆ–ರೈಡ್‌ಗೆ ನೈರುತ್ಯ ರೈಲ್ವೆಯಿಂದ 193 ಎಕರೆ ಭೂಮಿ: ಪ್ರಕ್ರಿಯೆ ವಿಳಂಬ

ಕಾರಿಡಾರ್–4: ಹಸ್ತಾಂತರವಾಗದ ಜಮೀನು

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ಬೆಂಗಳೂರು ಉಪನಗರ ರೈಲು ಯೋಜನೆಯ ಕಾರಿಡಾರ್–4ಕ್ಕೆ ಟೆಂಡರ್ ಆಗಿದೆ. 30 ತಿಂಗಳಲ್ಲಿ ಕಾಮಗಾರಿ ಪೂರ್ಣಗೊಳಿಸಲು ಗಡುವು ನಿಗದಿಪಡಿಸಲಾಗಿದೆ. ಆದರೆ, ಜಮೀನು ಇನ್ನೂ ಹಸ್ತಾಂತರವಾಗಿಲ್ಲ.

ಹೀಲಲಿಗೆಯಿಂದ ರಾಜಾನುಕುಂಟೆಗೆ (ಕನಕ ಮಾರ್ಗ) ಸಂಪರ್ಕಿಸುವ ಈ ಕಾರಿಡಾರ್ 9 ಕಿ.ಮೀ. ಎತ್ತರಿಸಿದ ಮಾರ್ಗ ಮತ್ತು 38 ಕಿ.ಮೀ. ನೆಲಮಟ್ಟದ ಮಾರ್ಗ ಒಳಗೊಂಡಿದೆ. ನೈರುತ್ಯ ರೈಲ್ವೆಯಿಂದ ಕರ್ನಾಟಕ ರೈಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಕಂಪನಿಗೆ (ಕೆ-ರೈಡ್) 193 ಎಕರೆ ಭೂಮಿ ಹಸ್ತಾಂತರವಾಗಬೇಕಿತ್ತು. ಈ ಪ್ರಕ್ರಿಯೆ ವಿಳಂಬದಿಂದ ಟೆಂಡರ್ ಕಾರ್ಯ ತಡವಾಗಿತ್ತು.

'ಷರತ್ತಿನ ಪ್ರಕಾರ, 2023ರ ಡಿಸೆಂಬರ್ ಅಂತ್ಯದ ಒಳಗೆ ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಬೇಕಿತ್ತು. ನಂತರದ ಎರಡು ವಾರಗಳಲ್ಲಿ ಹಸ್ತಾಂತರ ಮಾಡಲಾಗುವುದು ಎಂದು ನೈರುತ್ಯ ರೈಲ್ವೆ ಅಧಿಕಾರಿಗಳು ಭರವಸೆ ನೀಡಿದ್ದರು. ಅದರಂತೆ ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಲಾಗಿದೆ. ಎರಡು ವಾರ ಕಳೆದರೂ ಭೂಮಿ ಹಸ್ತಾಂತರವಾಗಿಲ್ಲ' ಎಂದು ಕೆ-ರೈಡ್ ಅಧಿಕಾರಿಗಳು ತಿಳಿಸಿದ್ದಾರೆ.



ಬೆಂಗಳೂರು ಉಪನಗರ ರೈಲು ಯೋಜನೆಯ ಕಾರಿಡಾರ್–2ರಲ್ಲಿ ಕಾಮಗಾರಿ ನಡೆಯುತ್ತಿರುವುದು

ಈ ಮಾರ್ಗದಲ್ಲಿ ರಾಜಾನಕುಂಟೆ, ಮುದ್ದನಹಳ್ಳಿ, ಯಲಹಂಕ (ಎಲಿವೇಟೆಡ್ ಇಂಟರ್‌ಚೇಂಜ್), ಜಕ್ಕೂರು, ಹೆಗಡೆ ನಗರ, ಥಣಿಸಂದ್ರ, ಹೆಣ್ಣೂರು, ಹೊರಮಾವು, ಚನ್ನಸಂದ್ರ, ಬೆನ್ನಿಗಾನಹಳ್ಳಿ (ಇಂಟರ್‌ಚೇಂಜ್), ಕಗ್ಗದಾಸಪುರ, ಮಾರತ್ತಹಳ್ಳಿ (ಎಲಿವೇಟೆಡ್), ಬೆಳ್ಳಂದೂರು ರಸ್ತೆ, ಕಾರ್ಮೆಲರಾಂ, ಅಂಬೇಡ್ಕರ್ ನಗರ, ಹುಸ್ಕೂರು, ಸಿಂಗೇನ ಅಗ್ರಹಾರ, ಬೊಮ್ಮಸಂದ್ರ ಮತ್ತು ಹೀಲಲಿಗೆಯಲ್ಲಿ ನಿಲ್ದಾಣಗಳು ನಿರ್ಮಾಣಗೊಳ್ಳಲಿವೆ. ನಿಲ್ದಾಣ ನಿರ್ಮಾಣಕ್ಕೆ ಪ್ರತ್ಯೇಕ ಪ್ಯಾಕೇಜ್ ಮಾಡಲಾಗಿದೆ.

ಎಲ್ ಆ್ಯಂಡ್ ಟಿ ಕಂಪನಿ ₹1040.51 ಕೋಟಿಗೆ ಗುತ್ತಿಗೆ ಪಡೆದಿದ್ದು, 30 ತಿಂಗಳಲ್ಲಿ ಕಾಮಗಾರಿ ಪೂರ್ಣಗೊಳಿಸಬೇಕಿದೆ. ಆದರೆ, ಕಾಮಗಾರಿಗೆ ಶೇ 85ರಷ್ಟು ಜಮೀನು ರೈಲ್ವೆ ಹಳಿಗಳಿಗೆ ಹೊಂದಿಕೊಂಡಿದ್ದಾಗಿದೆ. ನೈರುತ್ಯ ರೈಲ್ವೆ ಭೂಮಿ ಹಸ್ತಾಂತರಿಸಬೇಕು. ಉಳಿದ ಶೇ 15ರಷ್ಟು (34 ಎಕರೆ) ಜಮೀನು ಖಾಸಗಿಯಾಗಿದ್ದು, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಮತ್ತು ಕೆ-ರೈಡ್ ಸ್ವಾಧೀನ ಪಡಿಸಿಕೊಳ್ಳಬೇಕಿದೆ.

'ನಾಲ್ಕು ಕಾರಿಡಾರ್‌ಗಳಲ್ಲಿ 2ನೇ ಕಾರಿಡಾರ್ (ಚಿಕ್ಕಬಾಣಾವರ–ಬೈಯಪ್ಪನಹಳ್ಳಿ) ಕಾಮಗಾರಿ ಮಾತ್ರ ನಡೆಯುತ್ತಿದೆ. ಇತ್ತೀಚೆಗೆ ಸ್ವಲ್ಪ ವೇಗ ಪಡೆದಿದ್ದರೂ ನಿರೀಕ್ಷಿತ ಮಟ್ಟದಲ್ಲಿ ಇಲ್ಲ. ತಿಂಗಳಿಗೆ ಶೇ 5ರಷ್ಟು ಕಾಮಗಾರಿಯಾದರೂ ಪೂರ್ಣಗೊಳಿಸಬೇಕು. ಕಾರಿಡಾರ್–2 ಟೆಂಡರ್ ಪಡೆದಿರುವ ಎಲ್ ಆ್ಯಂಡ್ ಟಿ ಕಂಪನಿಯೇ ಕಾರಿಡಾರ್–4 ಅನ್ನೂ ಪಡೆದಿದೆ. ಅವರು 2026ರ ಜೂನ್ ಒಳಗೆ ಕಾಮಗಾರಿ ಪೂರ್ಣಗೊಳಿಸಬೇಕು. ಜಮೀನು ಹಸ್ತಾಂತರಕ್ಕೆ ನೈರುತ್ಯ ರೈಲ್ವೆ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು' ಎಂದು ರೈಲ್ವೆ ಹೋರಾಟಗಾರ, ಸಿಟಿಜನ್ಸ್ ಫಾರ್ ಸಿಟಿಜನ್ಸ್ ಸಂಘಟನೆಯ ಸಂಸ್ಥಾಪಕ ರಾಜಕುಮಾರ್ ದುಗರ್ ಆಗ್ರಹಿಸಿದರು.

ಪರಿಶೀಲನೆ ನಡೆಯುತ್ತಿದೆ...



'ಕಾರಿಡಾರ್–4 ನಿರ್ಮಾಣಕ್ಕೆ ಕೆ-ರೈಡ್ ಹೆಚ್ಚುವರಿ ಜಮೀನಿನ ಪ್ರಸ್ತಾವನೆ ಇಟ್ಟಿದೆ. ಮತ್ತೆ ಅಲೈನ್‌ಮೆಂಟ್ ಮಾಡಿ ವರದಿ ಸಲ್ಲಿಸಲು ಸೂಚಿಸಲಾಗಿತ್ತು. ವರದಿ ನೀಡಿದ್ದು, ಪರಿಶೀಲನೆ ನಡೆದಿದೆ. ಶೀಘ್ರದಲ್ಲಿ ನೈರುತ್ಯ ರೈಲ್ವೆಯಿಂದ ಕೆ-ರೈಡ್‌ಗೆ ಜಮೀನು ಹಸ್ತಾಂತರಿಸಲಾಗುವುದು' ಎಂದು ಬೆಂಗಳೂರು ವಿಭಾಗದ ಹೆಚ್ಚುವರಿ ವಿಭಾಗೀಯ ರೈಲ್ವೆ ವ್ಯವಸ್ಥಾಪಕಿ ಕುಸುಮಾ ಹರಿಪ್ರಸಾದ್ 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

ಕುಮಾರಸ್ವಾಮಿಯೇ ಗೆಲ್ಲಲ್ಲ, ಕಾರ್ಯಕರ್ತರು ಗೆಲ್ತಾರಾ?: ಉದಯ್

ಮದ್ದೂರು: 'ಮಂಡ್ಯ ಲೋಕಸಭಾ ಕ್ಷೇತ್ರದಲ್ಲಿ ಎಚ್.ಡಿ.ಕುಮಾರಸ್ವಾಮಿಯವರೇ ಗೆಲ್ಲೋದಿಲ್ಲ, ಇನ್ನು ಜೆಡಿಎಸ್ ಕಾರ್ಯಕರ್ತರು ಹೇಗೆ ಗೆಲ್ತಾರೆ?' ಎಂದು ಶಾಸಕ ಉದಯ್ ವ್ಯಂಗ್ಯವಾಡಿದರು.

ಪಟ್ಟಣದ ಪಶು ಇಲಾಖೆಯ ಆವರಣದಲ್ಲಿ ಶನಿವಾರ ಫಲಾನುಭವಿಗಳಿಗೆ ಮೇವು ಕತ್ತರಿಸುವ ಯಂತ್ರಗಳನ್ನು ವಿತರಿಸಿದ ಬಳಿಕ ಸುದ್ದಿಗಾರರ ಜೊತೆಗೆ ಮಾತನಾಡಿದರು.

'ಕ್ಷೇತ್ರದಲ್ಲಿ ಎಚ್‌ಡಿಕೆ ಅವರಲ್ಲದಿದ್ದರೆ ಅಮಿತ್ ಶಾ ಬೇಕಾದರೂ ಬಂದು ಸ್ಪರ್ಧಿಸಲಿ, ಚಿಂತೆಯಿಲ್ಲ. ಏಕೆಂದರೆ 5 ಗ್ಯಾರಂಟಿಗಳನ್ನು ಸರ್ಕಾರ ಜಾರಿಗೆ ತಂದಿದೆ. ಜನ ಒಪ್ಪಿಕೊಂಡಿದ್ದಾರೆ. ಅವರ ಆಶೀರ್ವಾದ ಕಾಂಗ್ರೆಸ್ ಪರವಾಗಿದೆ' ಎಂದರು.

'ಮಂಡ್ಯ ಕ್ಷೇತ್ರಕ್ಕೆ ಪಕ್ಷದ ಅಭ್ಯರ್ಥಿ ಯಾರು ಎಂಬುದನ್ನು ಹೈಕಮಾಂಡ್ ತೀರ್ಮಾನಿಸುತ್ತದೆ' ಎಂದರು.

ಇಂದು, ನಾಳೆ ಸಂಕ್ರಾಂತಿ ಸಂಗೀತ ಉತ್ಸವ

ಬೆಂಗಳೂರು: ಸಂಗೀತ ವಿದ್ವಾಂಸ ಆರ್.ಕೆ.ಶ್ರೀಕಂಠನ್ ಅವರ 104ನೇ ಜನ್ಮ ವಾರ್ಷಿಕೋತ್ಸವದ ಪ್ರಯುಕ್ತ ವಿದ್ವಾನ್ ಆರ್.ಕೆ. ಶ್ರೀಕಂಠನ್ ಟ್ರಸ್ಟ್ ಇದೇ ಭಾನುವಾರ ಮತ್ತು ಸೋಮವಾರ ಮಲ್ಲೇಶ್ವರದ ಸೇವಾ ಸದನದಲ್ಲಿ 28ನೇ ವಾರ್ಷಿಕ ಸಂಕ್ರಾಂತಿ ಸಂಗೀತ ಉತ್ಸವ ಹಮ್ಮಿಕೊಂಡಿದೆ.

ಭಾನುವಾರ ಸಂಜೆ 5 ಗಂಟೆಗೆ ಸಭಾ ಕಾರ್ಯಕ್ರಮ ನಡೆಯಲಿದೆ. ಮೃದಂಗ ವಿದ್ವಾನ್ ತಿರುಚಿ ಶಂಕರನ್ ಅವರಿಗೆ 'ಶ್ರೀಕಂಠಶಂಕರ' ಹಾಗೂ ಕೆ.ಜಿ. ಸುಬ್ರಾಯ ಶರ್ಮಾ ಅವರಿಗೆ 'ಶಂಕರಾದ್ವೈತ ತತ್ವಜ್ಞ' ಬಿರುದು ಹಾಗೂ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ.

ಎರಡೂ ಪ್ರಶಸ್ತಿಗಳು ತಲಾ ₹ 50 ಸಾವಿರ ನಗದು ಹಾಗೂ ಬೆಳ್ಳಿ ದೀಪ ಒಳಗೊಂಡಿವೆ. ಹರಿಹರಪುರದ ಸ್ವಯಂಪ್ರಕಾಶ ಸಚ್ಚಿದಾನಂದ ಸರಸ್ವತಿ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಮುಖ್ಯ ಅತಿಥಿಯಾಗಿ ಶಿಕ್ಷಣ ತಜ್ಞ ಗುರುರಾಜ ಕರಜಗಿ ಭಾಗವಹಿಸುವರು. ಸಂಜೆ 7.15ರಿಂದ ರುದ್ರಪಟ್ಟಣಂ ಎಸ್. ರಮಾಕಾಂತ್ ಸಂಗಡಿಗರಿಂದ ಸಂಗೀತ ಕಛೇರಿ ನಡೆಯಲಿದೆ ಎಂದು ಟ್ರಸ್ಟ್ ತಿಳಿಸಿದೆ. ಸೋಮವಾರ ಬೆಳಿಗ್ಗೆ 9.30ರಿಂದ ರಾಜೀವ್ ರಾಮಕೃಷ್ಣ ಸಂಗಡಿಗರು, 11.15ರಿಂದ ಯಜ್ಞೇಶ್ವರ ಶಾಸ್ತ್ರಿ ಸಂಗಡಿಗರು, ಸಂಜೆ 5ರಿಂದ ಭಾರ್ಗವಿ ವೆಂಕಟರಾಮ್ ಸಂಗಡಿಗರು, ಸಂಜೆ 7ರಿಂದ ಸಂಪಗೋಡು ವಿಘ್ನರಾಜ್ ಸಂಗಡಿಗರಿಂದ ಸಂಗೀತ ಕಛೇರಿ ನಡೆಯಲಿದೆ ಎಂದು ಹೇಳಿದೆ.

ಶ್ಯಾಮಣ್ಣಗೆ 'ಸಿದ್ಧರಾಮೇಶ್ವರ ಪ್ರಶಸ್ತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರವು 'ಕಾಯಕಯೋಗಿ ಶ್ರೀ ಸಿದ್ಧರಾಮೇಶ್ವರ' ಅವರ ಹೆಸರಿನಲ್ಲಿ ಪ್ರಶಸ್ತಿ ಸ್ಥಾಪಿಸಿದ್ದು, ಈ ಸಾಲಿನ ಪ್ರಶಸ್ತಿಗೆ ಮಂಡ್ಯದ ರಂಗ ಕಲಾವಿದ ಪಿ.ಎಸ್. ಶ್ಯಾಮಣ್ಣ ಅವರನ್ನು ಆಯ್ಕೆ ಮಾಡಲಾಗಿದೆ.

ಈ ಪ್ರಶಸ್ತಿಯು ₹ 5 ಲಕ್ಷ ನಗದು ಒಳಗೊಂಡಿದೆ. ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ ಅವರ ಅಧ್ಯಕ್ಷತೆಯ ಸಮಿತಿಯು ಪ್ರಶಸ್ತಿಗೆ ಆಯ್ಕೆ ಮಾಡಿದೆ.


ಶ್ಯಾಮಣ್ಣ

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಇದೇ 15ರಂದು ಸಂಜೆ 5 ಗಂಟೆಗೆ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ 'ಕಾಯಕಯೋಗಿ ಸಿದ್ಧರಾಮೇಶ್ವರ ಜಯಂತಿ'ಯನ್ನು ಹಮ್ಮಿಕೊಂಡಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ ತಿಳಿಸಿದ್ದಾರೆ.

ಬೇರೆ ಧರ್ಮ ಗೌರವಿಸುವವರು ನಿಜವಾದ ಹಿಂದೂ: ಮಧು

ಮಂಗಳೂರು: 'ನಾನು ಹಿಂದೂ. ಆದರೆ, ಹಿಂದೂ ಎಂದು ಹೇಳಿಕೊಂಡು ಹೋಗಲಾರೆ. ನಿಜವಾದ ಹಿಂದೂಗಳು ಮಾತ್ರ ಬೇರೆ ಧರ್ಮಗಳನ್ನು ಗೌರವಿಸುತ್ತಾರೆ. ಹಿಂದುತ್ವವನ್ನು ಮತ ಬ್ಯಾಂಕ್‌ಗೆ ಬಳಸುವುದು ಬಿಜೆಪಿಗರ ಕೆಲಸ' ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ನನಗೆ ಅವಕಾಶ ಸಿಕ್ಕಾಗ ಅಯೋಧ್ಯೆಗೆ ಹೋಗುತ್ತೇನೆ. ಮಸೀದಿ, ಚರ್ಚ್, ಬೋಧ್‌ಗಯಾಕ್ಕೂ ಹೋಗುತ್ತೇನೆ. ಆದರೆ, ಬಂಗಾರಪ್ಪ ಮಗನಾಗಿ, ಕಾಂಗ್ರೆಸ್ ಕಾರ್ಯಕರ್ತನಾಗಿ ದೇವರ ಹೆಸರಲ್ಲಿ ರಾಜಕೀಯ ಮಾಡಲಾರೆ' ಎಂದರು.

ಯುವಜನರ ನಾಯಕತ್ವ ಸಮ್ಮೇಳನ • ಐಡಿಯಾಥಾನ್ ವಿಜೇತರಿಗೆ ಪ್ರಶಸ್ತಿ

'ಐಡಿಯಾಥಾನ್ ಸಲಹೆ' ಅನುಷ್ಠಾನ: ಡಿಸಿಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯುವಜನರ ನಾಯಕತ್ವ ಸಮ್ಮೇಳನ ಹಾಗೂ ಐಡಿಯಾಥಾನ್‌ನ ಸ್ಪರ್ಧೆಯಲ್ಲಿ ವ್ಯಕ್ತವಾಗಿರುವ ಸಲಹೆಗಳನ್ನು ಅನುಷ್ಠಾನಗೊಳಿಸಲು ಒತ್ತು ನೀಡಲಾಗುವುದು ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇಲ್ಲಿ ತಿಳಿಸಿದರು.

'ಐಡಿಯಾಥಾನ್' ಸ್ಪರ್ಧೆಯ ವಿಜೇತರಿಗೆ ಶನಿವಾರ ಬಹುಮಾನ ವಿತರಿಸಿ ಅವರು ಮಾತನಾಡಿದರು.

'ಆಂಬುಲೆನ್ಸ್‌ಗಳ ಸುಗಮ ಸಂಚಾರಕ್ಕೆ ಟ್ರಾಫಿಕ್ ಸಿಗ್ನಲ್ ಜೊತೆ ವೈರ್‌ಲೆಸ್ ಸಂಪರ್ಕ, ಹೂವು– ಆಹಾರ ತ್ಯಾಜ್ಯಗಳ ವಿಲೇವಾರಿ, ಮಹಿಳೆಯರಿಗಾಗಿ ಸಾರ್ವಜನಿಕ ಸ್ಥಳಗಳಲ್ಲಿ ಪಿಂಕ್ ಬೂತ್ ಸ್ಥಾಪನೆ' ಸೇರಿ ಹಲವು ಸಲಹೆಗಳು ಬಂದಿವೆ' ಎಂದು ತಿಳಿಸಿದರು.

'ಬ್ರ್ಯಾಂಡ್ ಬೆಂಗಳೂರು ಯೋಜನೆ ಮೂಲಕ ನಗರದ ಸಮಸ್ಯೆಗಳಿಗೆ ಶಾಲಾ ಮಕ್ಕಳು ಐಡಿಯಾಥಾನ್ ಸ್ಪರ್ಧೆ ಮೂಲಕ ಸಲಹೆಗಳನ್ನು ನೀಡಿದ್ದಾರೆ. ಶಾಲಾ ಮಟ್ಟದಲ್ಲಿ ಇಂತಹ ಸ್ಪರ್ಧೆ ಏರ್ಪಡಿಸಲು ಬಿಬಿಎಂಪಿ ಆಯುಕ್ತರಿಗೆ ಸಲಹೆ ನೀಡುತ್ತೇನೆ. ಹೆಚ್ಚು ಆಲೋಚನೆಗಳು ಬಂದರೆ ನಮ್ಮ ನಗರ ಹೆಚ್ಚು ಸುಧಾರಣೆ, ಅಭಿವೃದ್ಧಿ ಆಗಲಿದೆ' ಎಂದು ಹೇಳಿದರು. 'ನಗರದ ನಿಜವಾದ ಸಂಪತ್ತು, ಶಕ್ತಿ ಎಂದರೆ ಇಲ್ಲಿನ ಹವಾಮಾನ, ಸಂಸ್ಕೃತಿ, ಮಾನವ ಸಂಪನ್ಮೂಲ.ನಾವು ಹಲವು ಕ್ಷೇತ್ರಗಳಲ್ಲಿ ವಿಫಲವಾಗಿದ್ದೇವೆ. ಕಸ ವಿಲೇವಾರಿ ಜತೆ ಮಾಫಿಯಾಗಳಿವೆ. ಬೆಂಗಳೂರಿನಲ್ಲಿ ಸಂಚಾರ ದಟ್ಟಣೆ ಹೆಚ್ಚಾಗಿದೆ. 54 ಲಕ್ಷ ವಾಹನಗಳು ನಿತ್ಯ ರಸ್ತೆಗಿಳಿಯುತ್ತವೆ. ಇದಕ್ಕೆ ತಕ್ಕಂತೆ ರಸ್ತೆ ವಿಸ್ತರಣೆ ಸದ್ಯದ ಸ್ಥಿತಿಯಲ್ಲಿ ಅಸಾಧ್ಯ. ಅನೇಕರ ಜತೆ ಚರ್ಚೆ ನಂತರ ಸುರಂಗ ಮಾರ್ಗವೊಂದೇ ಪರಿಹಾರ ಎಂಬ ತೀರ್ಮಾನಕ್ಕೆ ಬರಲಾಗಿದೆ. ದುಬಾರಿ ಆದರೂ ಮಾಡಬೇಕಿದೆ' ಎಂದು ಮಾಹಿತಿ ನೀಡಿದರು.

'ನಗರದ ಸಮಸ್ಯೆ, ಸವಾಲುಗಳ ಬಗ್ಗೆ ಚರ್ಚೆ ಜೊತೆಗೆ ಸಕಾರಾತ್ಮಕ ಬದಲಾವಣೆಗೆ ಯುವಕರ ಚಿಂತನೆ, ಪರಿಕಲ್ಪನೆಗಳ ಅನ್ವೇಷಣೆ ಉದ್ದೇಶವನ್ನು ಐಡಿಯಾಥಾನ್ ಹೊಂದಿದೆ' ಎಂದು ಡಿಕೆಶಿ ಪುತ್ರಿ ಐಶ್ವರ್ಯ ಡಿಕೆಎಸ್ ಹೆಗ್ಡೆ ತಿಳಿಸಿದರು.

'ಮಕ್ಕಳು ಪ್ರತಿವಾರ ಸಾಮಾಜಿಕ ಚಟುವಟಿಕೆಯಲ್ಲಿ ಭಾಗವಹಿಸಬೇಕು. ಪ್ರತಿ ಎಲೆ ಔಷಧ ಗುಣ ಹೊಂದಿರುವಂತೆ ಪ್ರತಿ ಅಕ್ಷರ ಜ್ಞಾನ ಹೊಂದಿರುತ್ತದೆ. ಅಂತೆಯೇ ಪ್ರತಿ ಮಗುವಿನಲ್ಲೂ ಹೊಸ ಆಲೋಚನೆಗಳು ಇರುತ್ತವೆ' ಎಂದು ಲೇಖಕಿ ಸುಧಾಮೂರ್ತಿ ಹೇಳಿದರು.

'ಮನೆ ಸ್ವಚ್ಛವಾಗಿ ಇಟ್ಟುಕೊಂಡಂತೆ ರಸ್ತೆಯನ್ನು ಏಕೆ ಸ್ವಚ್ಛ ಇಟ್ಟುಕೊಂಡಿಲ್ಲ? ಪ್ರತಿಯೊಬ್ಬರಲ್ಲೂ ನಮ್ಮ ರಸ್ತೆ, ನಮ್ಮ ಬೀದಿ, ನಮ್ಮ ನಗರ ಎಂಬ ಭಾವನೆ ಬರಬೇಕು' ಎಂದು ನಟ ರಮೇಶ್ ಅರವಿಂದ ಸಲಹೆ ಮಾಡಿದರು.

'ಬೆಂಗಳೂರಿಗೆ ಉದ್ಯಾನನಗರಿ ಎಂಬ ಹಿರಿಮೆ ಬಂದದ್ದು ಲಾಲ್‌ಬಾಗ್, ಕಬ್ಬನ್ ಪಾರ್ಕ್‌ನಿಂದಷ್ಟೇ ಅಲ್ಲ. ಹಿಂದೆ ನಗರದ ಎಲ್ಲರ ಮನೆ ಮುಂದೆ ಉದ್ಯಾನವಿತ್ತು. ಕ್ರಮೇಣ ಮರೆಯಾದವು. ಬೆಂಗಳೂರು ಸಿಲಿಕಾನ್ ವ್ಯಾಲಿ, ಐ.ಟಿ ರಾಜಧಾನಿಯಾಯಿತು' ಎಂದರು.


'ಐಡಿಯಾಥಾನ್ ಸ್ಪರ್ಧೆ'ಯಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿಗಳೊಂದಿಗೆ ಡಿ.ಕೆ. ಶಿವಕುಮಾರ್ ಅವರ ಪುತ್ರಿ ಐಶ್ವರ್ಯ ಡಿಕೆಎಸ್ ಹೆಗ್ಡೆ, ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಲೇಖಕಿ ಸುಧಾಮೂರ್ತಿ

ನ್ಯಾಷನಲ್ ಹಿಲ್ ವ್ಯೂ, ಪ್ರೆಸಿಡೆನ್ಸಿ ಶಾಲೆಗೆ ಪ್ರಶಸ್ತಿ

ಬನಶಂಕರಿಯ ನ್ಯಾಷನಲ್ ಹಿಲ್ ವ್ಯೂ ಶಾಲೆ ಹಾಗೂ ಕಸ್ತೂರಿ ನಗರದ ಪ್ರೆಸಿಡೆನ್ಸಿ ಶಾಲೆಗಳು 'ಬ್ರ್ಯಾಂಡ್ 'ಬೆಂಗಳೂರು ಐಡಿಯಾಥಾನ್' ಸ್ಪರ್ಧೆಯಲ್ಲಿ ಪ್ರಶಸ್ತಿ ಪಡೆದವು. ಪ್ರಶಸ್ತಿ ವಿಜೇತ ವಿದ್ಯಾರ್ಥಿಗಳಿಗೆ ಹಾರ್ವರ್ಡ್ ವಿಶ್ವವಿದ್ಯಾಲಯದಲ್ಲಿ 40 ಗಂಟೆಗಳ ಅನ್ವೇಷಣೆ ಮತ್ತು ವ್ಯಾಪಾರೋದ್ಯಮ ಕುರಿತ ಕಾರ್ಯಕ್ರಮಕ್ಕೆ ಸ್ಕಾಲರ್ ಶಿಪ್ ನೀಡಲಾಗುವುದು ಎಂದು ಪ್ರಕಟಿಸಲಾಯಿತು. ಲೇಖಕಿ ಸುಧಾಮೂರ್ತಿ, ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಡಾ.ಅನೂಪ್ ನಾಯಕ್, ಜಿ.ಬಾಲಸುಬ್ರಮಣಿಯನ್, ರಮೇಶ್ ಜೂಡ್ ಥಾಮಸ್ ಅವರು ತೀರ್ಪುಗಾರರಾಗಿದ್ದರು.

ನಗರದಲ್ಲಿ ಇಂದು

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ಸಿಪಿಆರ್, ಫಸ್ಟ್ ಏಡ್ ತರಬೇತಿ ಕಾರ್ಯಾಗಾರ: ಅತಿಥಿಗಳು: ದಿನೇಶ್ ಗುಂಡೂರಾವ್, ಡಾ.ಶರಣಪ್ರಕಾಶ ಪಾಟೀಲ, ಬಿ. ದಯಾನಂದ್, ಆಯೋಜನೆ: ಸರ್ಜಿಕಲ್ ಸೊಸೈಟಿ ಆಫ್ ಬೆಂಗಳೂರು, ಸ್ಥಳ: ಕಂಠೀರವ ಒಳಾಂಗಣ ಕ್ರೀಡಾಂಗಣ, ಕಸ್ತೂರಬಾ ರಸ್ತೆ, ಬೆಳಿಗ್ಗೆ 9

ಪಿ.ಎಸ್. ರಂಗನಾಥ್ ಸಂಪಾದಿಸಿದ 'ಅರಬ್ಬರ ನಾಡಿನಲ್ಲಿ ಕನ್ನಡಿಗರು' ಪುಸ್ತಕ ಬಿಡುಗಡೆ: ಸಾನ್ನಿಧ್ಯ: ವೀರೇಶಾನಂದ ಸರಸ್ವತಿ ಸ್ವಾಮೀಜಿ, ಪುಸ್ತಕ ಬಿಡುಗಡೆ: ಮಹೇಶ ಜೋಶಿ, ಅಧ್ಯಕ್ಷತೆ: ಮಲ್ಲೇಪುರಂ ಜಿ. ವೆಂಕಟೇಶ್, ಉದ್ಘಾಟನೆ: ಆರತಿ ಕೃಷ್ಣ, ಅತಿಥಿಗಳು: ವಿಶ್ವೇಶ್ವರ ಭಟ್, ರವಿ ಹೆಗ್ಡೆ, ಕೆ.ಜಿ.ಲಕ್ಷ್ಮೀನಾರಾಯಣಪ್ಪ, ಆಯೋಜನೆ: ಛಾಯಾ ಸಾಹಿತ್ಯ ಪ್ರಕಾಶನ, ಸ್ಥಳ: ಕನ್ನಡ ಸಾಹಿತ್ಯ ಪರಿಷತ್ತಿನ ಸಭಾಂಗಣ, ಚಾಮರಾಜಪೇಟೆ, ಬೆಳಿಗ್ಗೆ 10

ವಚನ ಸಂಕ್ರಾಂತಿ, ನಿಜಯೋಗಿ ಸಿದ್ಧರಾಮರ ಜಯಂತಿ: ಉದ್ಘಾಟನೆ: ಎಸ್.ಟಿ.ಸೋಮಶೇಖರ್, ಅಧ್ಯಕ್ಷತೆ: ಎಸ್.ಪಿನಾಕಪಾಣಿ, ಅತಿಥಿಗಳು: ಎಸ್.ಎಂ.ಹಂಪಯ್ಯ, ಎಚ್.ಕುಸುಮ, ಪಂಪನಗೌಡ ಮೇಲ್ಸೀಮೆ, 'ನಿಜಯೋಗಿ ಸಿದ್ಧರಾಮ' ಕುರಿತು ಉಪನ್ಯಾಸ: ಕೆ.ಆರ್. ಸೌಮ್ಯಗೌಡ, ಆಯೋಜನೆ: ವಚನ ಜ್ಯೋತಿ ಬಳಗ, ಸ್ಥಳ: ರಂಗಹನುಮಯ್ಯ ಬಯಲು ಮಂಟಪ, ಕೆಂಚನಪುರ ಕ್ರಾಸ್, ಬೆಳಿಗ್ಗೆ 10

ಕಣ್ಣಿನ ಪೊರೆ ಶಸ್ತ್ರಚಿಕಿತ್ಸೆಗಾಗಿ ಪರೀಕ್ಷಾ ಶಿಬಿರ: ಆಯೋಜನೆ ಮತ್ತು ಸ್ಥಳ: ಉದಯಭಾನು ಕಲಾಸಂಘ, ಕೆಂಪೇಗೌಡನಗರ, ಬೆಳಿಗ್ಗೆ 10ರಿಂದ

ನೃತ್ಯ ತರಂಗ–2024: ಉದ್ಘಾಟನೆ: ಶ್ರೀರಂಜಿತ ಸಿ., ಅತಿಥಿ: ನಾಗೇಶ್ ಜಿ.ಎಸ್., ಆಯೋಜನೆ: ನೃತ್ಯ ಗಂಗೋತ್ರಿ, ಸ್ಥಳ: ಸೇವಾ ಸದನ, ಮಲ್ಲೇಶ್ವರ, ಬೆಳಿಗ್ಗೆ 10

ಸಂಕ್ರಾಂತಿ ಕವಿಗೋಷ್ಠಿ, ಗೀತಗಾಯನ, ಪ್ರಶಸ್ತಿ ಪ್ರದಾನ: ಭಾಗ್ಯಲಕ್ಷ್ಮಿ ಮಗ್ಗೆ, ಉದ್ಘಾಟನೆ: ವಿ.ರೇಣುಕಾಪ್ರಸನ್ನ, ಅಧ್ಯಕ್ಷತೆ: ಬಿ. ಶೃಂಗೇಶ್ವರ್, ಉಪಸ್ಥಿತಿ: ನಾಗೇಶ್ ಡಿ. ಪಾಟಕ್, ಕುವರ ಯಲ್ಲಪ್ಪ, ಪ್ರಶಸ್ತಿ ಪುರಸ್ಕೃತರು: ಎಚ್.ಎಸ್. ಲಕ್ಷ್ಮೀನಾರಾಯಣ ಭಟ್ಟ, ನಿಡಸಾಲೆ ಪುಟ್ಟಸ್ವಾಮಯ್ಯ, ಹೆಮ್ಮಂಡಹಳ್ಳಿ ಜಿ.ಮುನಿಸ್ವಾಮಿ, ವಿ.ಮಲ್ಲಿಕಾರ್ಜುನಯ್ಯ, ಸುಮ ಬೆಳಗೆರೆ, ಜಯಶಂಕರ ಪ್ರಕಾಶ್, ಆಯೋಜನೆ: ಸಮ್ಮಿಲನ, ಸ್ಥಳ: ಕೆನ್ ಕಲಾಶಾಲೆ, ಶೇಷಾದ್ರಿಪುರ, ಬೆಳಿಗ್ಗೆ 10.30

ಸಂಕ್ರಾಂತಿ ಸಂಭ್ರಮಾಚರಣೆ: ಉದ್ಘಾಟನೆ: ಬಿ.ಪ್ರಸನ್ನಯ್ಯ, ಸನ್ಮಾನಿತರು: ಡಿ.ಸುಧಾಕರ, ಸನ್ಮಾನಿಸುವವರು: ಡಿ. ಸುರೇಂದ್ರ ಕುಮಾರ್, ಅಧ್ಯಕ್ಷತೆ: ಸುಭಾಷ ಜಿನಗೌಡ, 'ಆದರ್ಶ ಜೈನ ಸಮಾಜ ರತ್ನ' ಪ್ರಶಸ್ತಿ ಪ್ರದಾನ: ಡಿ. ಸುರೇಂದ್ರ ಕುಮಾರ್, ಪುರಸ್ಕೃತರು: ಎಸ್. ಜಿತೇಂದ್ರ ಕುಮಾರ್, ಆಯೋಜನೆ: ಉತ್ತರ ಕರ್ನಾಟಕ ಜೈನ ಬಾಂಧವರು, ಸ್ಥಳ: ಕರ್ನಾಟಕ ಜೈನ ಭವನ, ಕೆ.ಆರ್. ರಸ್ತೆ, ಶಂಕರಪುರ, ಬೆಳಿಗ್ಗೆ 10.30

ಎಸ್ಸೆಸ್ಸೆಲ್ಸಿ ತರಬೇತಿ ತರಗತಿಗಳ ಸಮಾರೋಪ: ಅತಿಥಿಗಳು: ಬೈರತಿ ಸುರೇಶ್, ರಾಜಶೇಖರ್ ರಾವ್, ಎಂ.ಆರ್. ನರಸಿಂಹಮೂರ್ತಿ, ಆಯೋಜನೆ: ಕಬೀರ್ ಟ್ರಸ್ಟ್, ಸ್ಥಳ: ಪಟೇಲ್ಸ್ ಇನ್, ಆರ್.ಟಿ. ನಗರ, ಬೆಳಿಗ್ಗೆ 10.30

ಬಾಲ್ಕ್ ಸಂಕಲ್ಪ–2024: ಅಧ್ಯಕ್ಷತೆ: ಎಂ.ವಿ.ರಾಜೀವ್ ಗೌಡ, ಉಪಸ್ಥಿತಿ: ಪ್ರದೀಪ್ ಈಶ್ವರ್, ಅತಿಥಿಗಳು: ಭವ್ಯ, ಪ್ರಕಾಶ್ ಎಚ್.ಕೆ., ಮಂಜುನಾಥ್ ಅದ್ದೆ, ಚಕ್ರವರ್ತಿ ಚಂದ್ರಚೂಡ್, ಗಿರಿಧರ್ ಗೌಡ, ಸುಧೀಂದ್ರ ಎಂ.ಜಿ., ಅಮರೇಶ್, ಸುದೇಶ್ ನಾಯಕ್, ಆಯೋಜನೆ: ಭಾರತೀಯ ಅಕಾಡೆಮಿ ಆಫ್ ಲಿಂಗ್ವಿಸ್ಟಿಕ್ಸ್ ಆ್ಯಂಡ್ ಕಮ್ಯುನಿಕೇಷನ್, ಸ್ಥಳ: ತಿಮ್ಮಕ್ಕ ಪಟೇಲ್ ವೆಂಕಟಪ್ಪ ಮಂಟಪ, ಸುಂಕದಕಟ್ಟೆ, ಬೆಳಿಗ್ಗೆ 11

ಮಲೆನಾಡಿಗರ ಕ್ರೀಡಾಕೂಟ: ಆಯೋಜನೆ: ಮಲೆನಾಡು ಮಿತ್ರ ವೃಂದ, ಸ್ಥಳ: ಎಚ್‌ಎಂಟಿ ಆಟದ ಮೈದಾನ, ಜಾಲಹಳ್ಳಿ, ಮಧ್ಯಾಹ್ನ 12

'ವಾಲಿಮೋಕ್ಷ' ತಾಳಮದ್ದಳೆ: ಹಿಮ್ಮೇಳ: ಭಾಗವತರು: ಬಾಲಕೃಷ್ಣ ಹಿಲ್ಲೋಡಿ, ಗಜಾನನ ಹೆಗಡೆ ಕಲ್ಲಬ್ಬೆ, ನಂದನ್ ಹೆಗಡೆ ದಂಟಕಲ್, ಮದ್ದಳೆ: ರಘು ಶರ್ಮ ಹೊನ್ನೇಕುಡಿಗೆ, ನಾರಾಯಣ ಮೂರ್ತಿ ಹೊಸಬಾಳೆ, ಚಂಡೆ: ಭಾವನ ಹೆಗಡೆ ಮಳಗೀಮನೆ, ಮುಮ್ಮೇಳ: ರವಿ ಐತುಮನೆ, ಆದಿತ್ಯ ಹಲ್ಕೋಡು, ಕೃಷ್ಣ ಕುಮಾರ್ ನೆಗಳಗುಳಿ, ಚಂದನ್ ಕಲಾಹಂಸ, ಕಾರ್ತಿಕ್ ದಂಟಕಲ್, ಆಯೋಜನೆ: ನಿರ್ಮಾಣ್ ಯಕ್ಷ ಬಳಗ, ಸ್ಥಳ: ರಾಮಾಶ್ರಮ, ಗಿರಿನಗರ, ಸಂಜೆ 4

ಆನಂದ ಮಹೋತ್ಸವ: ಉಪಸ್ಥಿತಿ: ಸಿದ್ಧೇಶ್ವರ ಬ್ರಹ್ಮರಿಷಿ ಗುರುದೇವ, ಆಯೋಜನೆ: ವಿಶ್ವ ಧರ್ಮ ಚೇತನ ಮಂಚ, ಸ್ಥಳ: ದಿ ರಾಯಲ್ ಸನೆಟ್, ಅರಮನೆ ಮೈದಾನ, ಬಳ್ಳಾರಿ ರಸ್ತೆ, ಸಂಜೆ 4

ಲಲಿತಾ ನಮನ: ಅತಿಥಿಗಳು: ಮನು ಬಳಿಗಾರ್, ಗಾಯನ: ಸಂಜಯ್ ಬ್ಯಾನರ್ಜಿ, ತಬಲಾ: ರವೀಂದ್ರ ಯಾವಗಲ್, ಹಾರ್ಮೋನಿಯಂ: ಸತೀಶ ಭಟ್ಟ, ಗಾಯನ: ಎಂ.ವೆಂಕಟೇಶ ಕುಮಾರ್, ತಬಲಾ: ಕೇಶವ ಜೋಶಿ, ಆಯೋಜನೆ: ಸಪ್ತಕ, ಸ್ಥಳ: ಹವ್ಯಕ ಸಭಾಭವನ, ಮಲ್ಲೇಶ್ವರ, ಸಂಜೆ 5

ಸಂಕ್ರಾಂತಿ ಸಂಭ್ರಮ: ಉದ್ಘಾಟನೆ:ದಿನೇಶ್ ಗುಂಡೂರಾವ್, ಅತಿಥಿಗಳು: ಡಾ.ಸಿ.ಎನ್. ಅಶ್ವತ್ಥನಾರಾಯಣ, ಸೂರ್ಯಪ್ರಸಾದ್, ವಿಕ್ರಮ ವಿಶ್ವನಾಥ್, ಆರತಿ ಎಚ್.ಎನ್., ವೀಣೆ: ಸುಮಾ ಸುಧೀಂದ್ರ, ಕೊಳಲು: ವಿ.ಕೆ. ರಾಮನ್, ಮೃದಂಗ: ಬಿ.ಸಿ. ಮಂಜುನಾಥ್, ಡ್ರಮ್ಸ್: ಕಾರ್ತಿಕ ಮಣಿ, ಆಯೋಜನೆ: ಎ.ಐ.ಎಂ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಸಂಜೆ 6

'ಶರೀಫ' ನಾಟಕ ಪ್ರದರ್ಶನ: ರಚನೆ: ಮಂಜುನಾಥ ಬೆಳಕೆರೆ, ನಿರ್ವಹಣೆ: ನಯನ ಸೂಡ, ಪ್ರಸಾದನ: ಜಯರಾಜ್ ಹುಸ್ಕೂರು, ಬೆಳಕು: ಎಂ.ಜಿ. ನವೀನ್, ಸಂಗೀತ, ನಿರ್ದೇಶನ: ರಾಜಗುರು ಹೊಸಕೋಟೆ, ಆಯೋಜನೆ: ರಂಗಪಯಣ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 7

ಕಬ್ಬು, ಗೆಣಸು ಹಾಗೂ ಅವರೆಕಾಯಿ ರಾಶಿ • ಮಾರುಕಟ್ಟೆಗಳಲ್ಲಿ ಗ್ರಾಹಕರ ಸಂದಣಿ

ಸಂಕ್ರಾಂತಿ ಹಬ್ಬ: ಖರೀದಿ ಭರಾಟೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಕ್ರಾಂತಿ ಹಬ್ಬದ ಆಚರಣೆಗೆ ನಗರ ಸಜ್ಜಾಗಿದೆ. ಇಲ್ಲಿನ ವಿವಿಧ ಮಾರುಕಟ್ಟೆಗಳಲ್ಲಿ ಸಂಕ್ರಾಂತಿ ಹಬ್ಬಕ್ಕಾಗಿ ಕಬ್ಬು, ಗೆಣಸು ಹಾಗೂ ಅವರೆಕಾಯಿ ಖರೀದಿ ಭರಾಟೆ ಜೋರಾಗಿದೆ.

ಸಂಕ್ರಾಂತಿ ಹಬ್ಬ ಸೋಮವಾರವಿದ್ದು, ಎರಡು ದಿನ ಮೊದಲೇ ನಗರದ ಕೆ.ಆರ್.ಮಾರುಕಟ್ಟೆಯಲ್ಲಿ ಕಪ್ಪು, ಕೆಂಪು ಬಣ್ಣದ ಕಬ್ಬುಗಳ ರಾಶಿ ಬಂದಿದೆ. ಕಬ್ಬಿನ ಜಲ್ಲೆ ತಲಾ ₹60ರಂತೆ ಮಾರಾಟ ಆಗುತ್ತಿದೆ. ನಗರದ ಪ್ರಮುಖ ಬಡಾವಣೆಗಳಲ್ಲೂ ಕಬ್ಬು, ಕಡಲೆಕಾಯಿ, ಅವರೆಕಾಯಿ, ಗೆಣಸು ರಾಶಿ ಹಾಕಲಾಗಿದ್ದು, ಮಾರುಕಟ್ಟೆ ಕಳೆಗಟ್ಟಿದೆ.

ಕಡಲೆಕಾಯಿ ಮತ್ತಷ್ಟು ತುಟ್ಟಿಯಾಗಿದೆ. ಗುಣಮಟ್ಟದ ಕಡಲೆಕಾಯಿ ಕೆ.ಜಿ.ಗೆ ₹80 ಮತ್ತು ₹100ರಂತೆ ಮಾರಾಟವಾಗುತ್ತಿದೆ. ಗಾಂಧಿ ಬಜಾರ್, ಮಲ್ಲೇಶ್ವರ, ಜಯನಗರ, ಯಶವಂತಪುರ, ರಾಜಾಜಿನಗರ, ಮಡಿವಾಳ, ಚಾಮರಾಜಪೇಟೆ, ಚಿಕ್ಕಪೇಟೆಗಳಲ್ಲಿ ರಸ್ತೆಬದಿ ಹೆಚ್ಚುವರಿ ಮಳಿಗೆಗಳು ಆರಂಭವಾಗಿವೆ. ಎಳ್ಳು ಬೆಲ್ಲ ಮಿಶ್ರಿತ ಪೊಟ್ಟಣಗಳು, ಸಕ್ಕರೆ ಹಾಗೂ ಬೆಲ್ಲದ ಅಚ್ಚುಗಳನ್ನೂ ಮಾರಲಾಗುತ್ತಿದೆ.

ಎಳ್ಳು ಬೆಲ್ಲ ಮಿಶ್ರಿತ ಪೊಟ್ಟಣಗಳು ವಿವಿಧ ಗಾತ್ರಗಳಲ್ಲಿ ಲಭ್ಯ ಇವೆ. ಸಣ್ಣ ಪೊಟ್ಟಣದ ದರ ₹50. ಮಳಿಗೆಗಳಲ್ಲಿ ಒಂದು ಕೆ.ಜಿ.ಯ ಎಳ್ಳುಬೆಲ್ಲ ಮಿಶ್ರಿತ ಪೊಟ್ಟಣದ ದರ ₹ 320ರಿಂದ ₹ 350 ಇದೆ. ಅರ್ಧ ಕೆ.ಜಿ ಸಕ್ಕರೆ ಅಚ್ಚು ₹150ರಂತೆ ಮಾರಾಟವಾಗುತ್ತಿದೆ.

‘ಸಂಕ್ರಾಂತಿ ಹಬ್ಬಕ್ಕೆ ಹೂವಿನ ದರ ಗಳು ಏರಿಕೆ ಕಂಡಿದೆ. ಪ್ರತಿ ಕೆ.ಜಿ. ಕನಕಾಂಬರ ₹ 1,000, ಮಲ್ಲಿಗೆ ₹ 1,400, ಚೆಂಡು ₹60, ಸೇವಂತಿಗೆ ₹ 150, ಗುಲಾಬಿ ₹ 200 ಮತ್ತು ಸುಗಂಧ ರಾಜ ₹ 120 ರಂತೆ ಮಾರಾಟವಾಗುತ್ತಿವೆ’ ಎಂದು ಕೆ.ಆರ್.ಮಾರುಕಟ್ಟೆಯ ಹೂವಿನ ವರ್ತಕ ಸುಹಾಸ್ ತಿಳಿಸಿದರು.



ಸಂಕ್ರಾಂತಿ ಹಬ್ಬದ ಅಂಗವಾಗಿ ನಗರದ ಗಾಂಧಿಬಜಾರ್‌ನಲ್ಲಿ ಮಹಿಳೆಯರು ಎಳ್ಳು, ಬೆಲ್ಲ, ಸಕ್ಕರೆ ಅಚ್ಚುಗಳನ್ನು ಖರೀದಿಸಿದರು –ಪ್ರಜಾವಾಣಿ ಚಿತ್ರ

ಕೆ.ಆರ್. ಮಾರುಕಟ್ಟೆಯ ದರಗಳು ದರ ಪ್ರತಿ ಕೆಜಿಗೆ (₹ಗಳಲ್ಲಿ)

	ಕಳೆದ ವಾರ	ಈ ವಾರ
ಮಲ್ಲಿಗೆ	600	1,400
ಕನಕಾಂಬರ	400	1,000
ಗುಲಾಬಿ	150	200
ಸೇವಂತಿಗೆ	100	150
ಸುಗಂಧ ರಾಜ	70	120
ಹಣ್ಣುಗಳ ದರ ಪ್ರತಿ ಕೆ.ಜಿಗೆ		
ದ್ರಾಕ್ಷಿ	60	80
ಸೇಬು	120	100
ದಾಳಿಂಬೆ	80	60
ಏಲಕ್ಕಿ ಬಾಳೆ	70	50
ಬಾಳೆ	40	30

	ಕಳೆದ ವಾರ	ಈ ವಾರ
ತರಕಾರಿ ದರಗಳು ಪ್ರತಿ ಕೆಜಿಗೆ		
ಬಟಾಣಿ	100	60
ಕ್ಯಾರೆಟ್	50	40
ಕ್ಯಾಪ್ಸಿಕಮ್	40	60
ಈರುಳ್ಳಿ	30	25
ಬೀನ್ಸ್	60	80
ಟೊಮೆಟೊ	20	30
ಆಲೂಗಡ್ಡೆ	20	30
ಹೀರೇಕಾಯಿ	40	50
ಸೌತೆಕಾಯಿ	30	20
ಹಾಗಲ ಕಾಯಿ	40	50

	ಕಳೆದ ವಾರ	ಈ ವಾರ
ಬದನೆಕಾಯಿ	30	40
ಮೆಣಸಿನ ಕಾಯಿ	80	60
ಬೀಟ್‌ರೂಟ್	30	40
ಬೆಳ್ಳುಳ್ಳಿ	160	260
ಶುಂಠಿ	150	120
ಗೆಣಸು	30	40
ಪ್ರತಿ ಕಟ್ಟಿಗೆ		
ಕೊತ್ತಂಬರಿ	20	20
ಪುದೀನಾ	10	10
ಪಾಲಕ್	10	20
ಸಬ್ಬಕ್ಕಿ	15	20
ಮೆಂತೆ	10	20

ಸಂಕ್ರಾಂತಿ ವಿಶೇಷ

ಬಾಳೆಕಂಬ ಜೋಡಿಗೆ	50
ಮಾವಿನ ತೋರಣ	20
ಕಬ್ಬು ಜೋಡಿಗೆ	120

ಡಿಜಿಟಲ್ ದಿಗ್ಬಂಧನದ ಆರೋಪ

ಕೊರಿಯರ್ ಹೆಸರಲ್ಲಿ ಪತ್ರಕರ್ತೆಗೆ ಕರೆ– ₹1.2 ಕೋಟಿ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಫೆಡೆಕ್ಸ್ ಕೊರಿಯರ್ ಹೆಸರಿನಲ್ಲಿ ವಾಟ್ಸ್‌ಆ್ಯಪ್ ಕರೆ ಮಾಡಿ ವಂಚಿಸುತ್ತಿರುವ ಪ್ರಕರಣಗಳು ಹೆಚ್ಚುತ್ತಿದ್ದು, 70 ವರ್ಷದ ಪತ್ರಕರ್ತೆಯೊಬ್ಬರಿಗೆ ಕರೆ ಮಾಡಿದ್ದ ವಂಚಕರು ₹1.2 ಕೋಟಿ ವಂಚಿಸಿದ್ದಾರೆ. ಈ ಪ್ರಕರಣವನ್ನು ಎಸ್‌ಐಟಿ ಘಟಕದ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

‘ಆರೋಪಿಗಳು ಸ್ಪಷ್ಟವಾಗಿ ಇಂಗ್ಲಿಷ್‌ನಲ್ಲಿ ಮಾತನಾಡಿ ನಂಬಿಕೆ ಬರುವಂತೆ ಮಾಡಿದ್ದರು. ಎಂಟು ದಿನ ಡಿಜಿಟಲ್ ದಿಗ್ಬಂಧನದಲ್ಲಿ ಇರಿಸಿ ಹಣ ವಂಚಿಸಿದ್ದಾರೆ. ಅಲ್ಲದೇ ಭಯದ ವಾತಾವರಣ ಸೃಷ್ಟಿಸಿ ಹೊರಗಿನ ಸಂಪರ್ಕ ಕಡಿತವಾಗುವಂತೆ ಮಾಡಿದ್ದರು’ ಎಂದು ‘ಪ್ರಜಾವಾಣಿ’ಗೆ ಹಣ ಕಳೆದುಕೊಂಡ (ಹೆಸರು ಬದಲಾವಣೆ ಮಾಡಲಾಗಿದೆ) ಪತ್ರಕರ್ತೆ ರಮ್ಯಾ ತಿಳಿಸಿದ್ದಾರೆ.

ಇದುವರೆಗೂ ಮುಂಬೈ ಪೊಲೀಸರ ಸೋಗಿನಲ್ಲಿ ವಾಟ್ಸ್‌ಆ್ಯಪ್ ಕರೆ ಮಾಡಿ ತಮ್ಮ ಹೆಸರಿನಲ್ಲಿ ಥೈವಾನ್‌ಗೆ ಮಾದಕ ವಸ್ತು ಪೂರೈಕೆ ಆಗುತ್ತಿದೆ. ಕೊರಿಯರ್ ತಡೆಹಿಡಿಯಲಾಗಿದೆ. ಮುಂಬೈ ಅಪರಾಧ ದಳದ ಪೊಲೀಸರಿಗೆ ತಿಳಿಸಲಾಗುವುದು ಎಂದು ಬೆದರಿಕೆ ಹಾಕಿ ಹಣ ಪಡೆದು ವಂಚಿಸುತ್ತಿದ್ದರು. ಇದೀಗ ವಂಚನೆಗೆ ಮತ್ತೊಂದು ಮಾರ್ಗ ಕಂಡುಕೊಂಡಿದ್ದಾರೆ.

ಎಂಟು ದಿನ ಬೆಳಿಗ್ಗೆ 9ರಿಂದ ಮುಂಜಾನೆ 2ರ ವರೆಗೆ (ಡಿಸೆಂಬರ್ 15ರಿಂದ 23ರ ವರೆಗೆ) ಕರೆ ಮಾಡಲು ಸಾಧ್ಯವಾಗದೆ ವಾಟ್ಸ್‌ಆ್ಯಪ್ ಕರೆಯಲ್ಲಿ ಇರುತ್ತಿದ್ದೆ ಎಂದು ಅವರು ಹೇಳಿದ್ದಾರೆ.

‘ಆರಂಭದಲ್ಲಿ ನನ್ನ ಮೊಬೈಲ್ ಕೆಟ್ಟಿದೆ ಎಂದು ಭಾವಿಸಿದ್ದೆ. ಬೇರೆ ಕಡೆ ತೆರಳಿದರೂ ಅವರಿಗೆ ತಿಳಿಯುತ್ತಿತ್ತು, ನನ್ನನ್ನು ವೀಕ್ಷಿಸುತ್ತಿದ್ದರು. ನಾನು ಚೆನ್ನಾಗಿದ್ದೇನೆಂದು ಅವರಿಗೆ ತಿಳಿಸಬೇಕಿತ್ತು. ಬಹಳಷ್ಟು ತೊಂದರೆ ನೀಡಿದರು’ ಎಂದು ಹೇಳಿದರು. ಪೊಲೀಸರಿಗೂ ಮಾಹಿತಿ ನೀಡದಂತೆ ಬೆದರಿಕೆ ಹಾಕಿದ್ದರು ಎನ್ನುತ್ತಾರೆ ಅವರು.

ರಮ್ಯಾ ಅವರು ಎಂಟು ದಿನಗಳಲ್ಲಿ ಒಮ್ಮೆ ಮಾತ್ರ ಹೊರಗೆ ತೆರಳಿ ಆರ್‌ಟಿಜಿಎಸ್ ಮೂಲಕ ವಂಚಕರಿಗೆ ಹಣ ವರ್ಗಾವಣೆ ಮಾಡಿದ್ದಾರೆ.

‘ಬ್ಯಾಂಕ್‌ಗೆ ತೆರಳಿ ಒಂದೇ ಬಾರಿಗೆ ₹48 ಲಕ್ಷವನ್ನು ವಂಚಕರಿಗೆ ವರ್ಗಾವಣೆ ಮಾಡುತ್ತಿದ್ದಾಗ ಅನುಮಾನಗೊಂಡ ಬ್ಯಾಂಕ್ ವ್ಯವಸ್ಥಾಪಕ, ಹಣ ವರ್ಗಾವಣೆಯ ಬಗ್ಗೆ ಪ್ರಶ್ನಿಸಿದರು. ಆಗ ತುರ್ತು ಕಾರಣ ನೀಡಿದ್ದೆ’ ಎಂದು ಹೇಳಿದರು. ಹೀಗೆ ರಮ್ಯಾ ಅವರು ಹಂತ ಹಂತವಾಗಿ ಹಣ ಕಳೆದುಕೊಂಡಿದ್ದಾರೆ.

‘ರಮ್ಯಾ ಅವರನ್ನು ವಂಚಕರು ಹೆದರಿಸಿದ್ದರು. ಕರೆಯನ್ನು ಕಡಿತಗೊಳಿಸದಂತೆ ಬೆದರಿಕೆ ಹಾಕಿದ್ದರು. ಆ ಭಯದ ಲಾಭ ಪಡೆದು ವಂಚಿಸಿದ್ದಾರೆ. ಡಿಜಿಟಲ್ ದಿಗ್ಬಂಧನದಲ್ಲಿ ಇರಿಸಿರಲಿಲ್ಲ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ಡಿಸೆಂಬರ್ 15ರಂದು ಅನಾಮಧೇಯ ಸಂಖ್ಯೆಯಿಂದ ಕರೆ ಬಂದಿತ್ತು. ಕರೆ ಸ್ವೀಕರಿಸಿದಾಗ ಅಂಧೇರಿ ಪೊಲೀಸ್ ಅಧಿಕಾರಿಗಳೆಂದು ಪರಿಚಯಿಸಿಕೊಂಡಿದ್ದರು. ನನ್ನ ಮೊಬೈಲ್ ಸಂಖ್ಯೆ ತಿಳಿಸಿ ಆಧಾರ್ ಸಂಖ್ಯೆಯನ್ನೂ ಹೇಳಿದ್ದರು. ತಮ್ಮ ಹೆಸರಿನಲ್ಲಿ ನಿಷೇಧಿತ ವಸ್ತು ಸಾಗಣೆ ಆಗುತ್ತಿರುವ ಮಾಹಿತಿ ನೀಡಿ ಬೆದರಿಸಿದ್ದರು ಎಂದು ಹೇಳಿದರು.


ಸಂಕ್ರಾಂತಿ ಹಬ್ಬದ ಸಂದರ್ಭದಲ್ಲೂ ಮಾರಾಟಕ್ಕೆ ಬಿಬಿಎಂಪಿ ಅಧಿಕಾರಿಗಳು ಅಡ್ಡಿಪಡಿಸುತ್ತಿದ್ದಾರೆ ಎಂದು ಆರೋಪಿಸಿ ಬೀದಿ ಬದಿ ವ್ಯಾಪಾರಿಗಳು ಜಯನಗರ 4ನೇ ಹಂತದಲ್ಲಿ ಶನಿವಾರ ಪ್ರತಿಭಟನೆ ನಡೆಸಿದರು –ಪ್ರಜಾವಾಣಿ ಚಿತ್ರ

‘ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಕುಸಿತ’

ಪ್ರಜಾವಾಣಿ ವಾರ್ತೆ


ಬಸವರಾಜ ಬೊಮ್ಮಾಯಿ

ಬೆಂಗಳೂರು: ರಾಜ್ಯದಲ್ಲಿ ಕಾಂಗ್ರೆಸ್ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ಕಾನೂನು ಸುವ್ಯವಸ್ಥೆ ಕುಸಿದಿದೆ. ಅಪರಾಧ ಕೃತ್ಯ ಎಸಗಿದವರನ್ನು ಧರ್ಮದ ಆಧಾರದಲ್ಲಿ ವಿಂಗಡಿಸಿ ನೋಡುವ ಕೆಟ್ಟ ಪ್ರವೃತ್ತಿ ಆರಂಭವಾಗಿದ್ದು, ರಾಜ್ಯವು ಅಪಾಯದಲ್ಲಿದೆ ಎಂದು ಬಿಜೆಪಿ ಶಾಸಕ ಬಸವರಾಜ ಬೊಮ್ಮಾಯಿ ಆರೋಪಿಸಿದರು.

ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಬೆಳಗಾವಿಯಲ್ಲಿ ವಿಧಾನಮಂಡಲದ ಅಧಿವೇಶನ ನಡೆಯುತ್ತಿರುವಾಗಲೇ ಮಹಿಳೆಯೊಬ್ಬರ ಮೇಲೆ ಹಲ್ಲೆ ನಡೆಸಿ, ಬೆತ್ತಲೆ ಮೆರವಣಿಗೆ ನಡೆಸಲಾಗಿತ್ತು. ಈಗ ಹಾನಗಲ್ ತಾಲ್ಲೂಕಿನ ಅಕ್ಕಿಆಲೂರಿನಲ್ಲಿ ಸಾಮೂಹಿಕ ಅತ್ಯಾಚಾರ ಪ್ರಕರಣವನ್ನು ಮುಚ್ಚಿಹಾಕಲು ಸರ್ಕಾರವೇ ಪ್ರಯತ್ನ ಮಾಡಿತ್ತು’ ಎಂದು ದೂರಿದರು.

ಕಾಂಗ್ರೆಸ್ ಅಧಿಕಾರಕ್ಕೆ ಬಂದ ನಂತರ ರಾಜ್ಯದಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯ ಪ್ರಕರಣಗಳ ಸಂಖ್ಯೆ ಹೆಚ್ಚಾಗುತ್ತಿದೆ. ಬೆಂಗಳೂರಿನಲ್ಲೇ ಇಂತಹ ಪ್ರಕರಣಗಳ ಸಂಖ್ಯೆ ಶೇಕಡ 30ರಷ್ಟು ಏರಿಕೆಯಾಗಿದೆ. ಪೊಲೀಸರು ಮೂಕಪ್ರೇಕ್ಷಕರಂತೆ ಕುಳಿತಿದ್ದಾರೆ. ನಿಷ್ಪಕ್ಷಪಾತವಾಗಿ ಕೆಲಸ ಮಾಡುವ ಪೊಲೀಸ್ ಅಧಿಕಾರಿಗಳಿಗೆ ಸರ್ಕಾರವೇ ತೊಂದರೆ ಕೊಡುತ್ತಿದೆ ಎಂದು ಆಪಾದಿಸಿದರು.

‘ಹಾನಗಲ್ ತಾಲ್ಲೂಕಿನಲ್ಲಿ ನಡೆದಿರುವ ಸಾಮೂಹಿಕ ಅತ್ಯಾಚಾರ ಪ್ರಕರಣವನ್ನು ಮುಚ್ಚಿಹಾಕುವ ಪ್ರಯತ್ನ ದೊಡ್ಡ ಮಟ್ಟದಲ್ಲಿ ನಡೆದಿತ್ತು. ನಾನು ಮಧ್ಯ ಪ್ರವೇಶಿಸಿ ಪ್ರಶ್ನಿಸಿದ ಬಳಿಕ ಪೊಲೀಸರು ಸರಿಯಾದ ದಿಕ್ಕಿನಲ್ಲಿ ತನಿಖೆ ನಡೆಸಿದರು. ಈಗಲೂ ಮೂವರು ಆರೋಪಿಗಳ ಬಂಧನ ಮಾತ್ರ ಆಗಿದೆ. ಇನ್ನೂ ಹಲವರ ಬಂಧನ ಆಗಬೇಕಿದೆ. ಪೊಲೀಸ್ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎನ್ನುತ್ತಾ ಗೃಹ ಸಚಿವರು ಕಣ್ಣೊರೆಸುವ ತಂತ್ರ ಮಾಡುತ್ತಿದ್ದಾರೆ’ ಎಂದು ದೂರಿದರು.

ಒಂದೊಂದು ಕೋಮಿಗೆ ಒಂದೊಂದು ನೀತಿ ಅನುಸರಿಸುತ್ತಿರುವುದರ ಹಿಂದೆ ಯಾರ ಚಿತಾವಣೆ ಇದೆ? ಸಾಮೂಹಿಕ ಅತ್ಯಾಚಾರಕ್ಕೆ ಒಳಗಾದ ಮಹಿಳೆ ಕೂಡ ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದವರೇ ಆಗಿದ್ದಾರೆ. ಕಾಂಗ್ರೆಸ್ ಸರ್ಕಾರವು ಈ ರೀತಿಯ ಧೋರಣೆಯನ್ನು ತಕ್ಷಣ ಕೈಬಿಡಬೇಕು ಎಂದು ಆಗ್ರಹಿಸಿದರು.

ರಾಜ್ಯದಲ್ಲಿ ನಡೆದಿರುವ ಸಾಮೂಹಿಕ ಅತ್ಯಾಚಾರ ಪ್ರಕರಣಗಳ ತನಿಖೆಗೆ ವಿಶೇಷ ತನಿಖಾ ತಂಡ (ಎಸ್‌ಐಟಿ) ರಚಿಸಬೇಕು. ಈ ವಿಚಾರದಲ್ಲಿ ಬಿಜೆಪಿಯು ಕಾನೂನು ಹೋರಾಟವನ್ನೂ ನಡೆಸಲಿದೆ ಎಂದು ಬೊಮ್ಮಾಯಿ ತಿಳಿಸಿದರು.

ಮಾಜಿ ಸಚಿವ ಗೋವಿಂದ ಕಾರಜೋಳ, ಶಾಸಕರಾದ ಡಾ.ಸಿ.ಎನ್.ಅಶ್ವತ್ಥ ನಾರಾಯಣ, ಎಸ್. ಆರ್. ವಿಶ್ವನಾಥ್, ಬಿಜೆಪಿ ರಾಜ್ಯ ಘಟಕದ ಮುಖ್ಯ ವಕ್ತಾರ ಅಶ್ವತ್ಥ ನಾರಾಯಣ, ವಕ್ತಾರ ವೆಂಕಟೇಶ್ ದೊಡ್ಡೇರಿ ಪತ್ರಿಕಾಗೋಷ್ಠಿಯಲ್ಲಿದ್ದರು.

ಬಿಜೆಪಿ ನಿಯೋಗ ಇಂದು ಹಾವೇರಿಗೆ

ಬೆಂಗಳೂರು: ಹಾವೇರಿ ಜಿಲ್ಲೆಯ ಹಾನಗಲ್‌ನಲ್ಲಿ ಮಹಿಳೆಯೊಬ್ಬರ ಮೇಲಿನ ಸಾಮೂಹಿಕ ಅತ್ಯಾಚಾರ ಪ್ರಕರಣದ ಕುರಿತು ಮಾಹಿತಿ ಸಂಗ್ರಹಿಸಲು ಬಿಜೆಪಿ ಮಹಿಳಾ ಮೋರ್ಚಾದ ನಿಯೋಗ ಭಾನುವಾರ ಹಾವೇರಿಗೆ ಭೇಟಿ ನೀಡಲಿದೆ ಎಂದು ಮೋರ್ಚಾದ ರಾಜ್ಯ ಘಟಕದ ಅಧ್ಯಕ್ಷೆ ಮಂಜುಳಾ ಶನಿವಾರ ತಿಳಿಸಿದರು.

ಪತ್ರಿಕಾ ಗೋಷ್ಠಿಯಲ್ಲಿ ಅವರು, ‘ಅಲ್ಪಸಂಖ್ಯಾತ ಸಮುದಾಯದ ಹೆಣ್ಣುಮಗಳ ಮೇಲೆ ಕೃತ್ಯ ನಡೆದಿದೆ. ಪೊಲೀಸ್ ಠಾಣೆಯಲ್ಲಿ ಸಂತ್ರಸ್ತ ಮಹಿಳೆಗೆ ನ್ಯಾಯ ದೊರಕಿಲ್ಲ. ಹಾವೇರಿಗೆ ತೆರಳಿ ವಾಸ್ತವಿಕ ಘಟನೆಗಳ ಮಾಹಿತಿ ಸಂಗ್ರಹಿಸಿ, ಹೋರಾಟ ಮಾಡುತ್ತೇವೆ. ಈ ಹಿಂದೆ ಮಹಿಳೆಯೊಬ್ಬರನ್ನು ವಿವಸ್ತ್ರಗೊಳಿಸಿ ಹಲ್ಲೆ ನಡೆಸಲಾಗಿತ್ತು. ಆರೋಪಿಗಳು ಸಚಿವರ ಬೆಂಬಲಿಗರು ಎಂದು ಬಂಧಿಸಿರಲಿಲ್ಲ. ಬಿಜೆಪಿ ಹೋರಾಟ ಕ್ಕಿಳಿದ ಬಳಿಕ ಪೊಲೀಸರು ಕ್ರಮ ಕೈ ಗೊಂಡರು. ಹಾನಗಲ್‌ನ ಸಾಮೂ ಹಿಕ ಅತ್ಯಾಚಾರ ಪ್ರಕರಣ ದಲ್ಲೂ ಪೊಲೀಸರು ಸರಿಯಾದ ಕ್ರಮ ಜರುಗಿಸಿಲ್ಲ ಎಂದು ದೂರಿದರು.

ತೈವಾನ್ ಅಧ್ಯಕ್ಷರಾಗಿ ಲಾಯ್ ಚಿಂಗ್ ಟೆ

ತೈಪೆ (ಎಎಫ್‌ಪಿ): ಚೀನಾದ ತೀವ್ರ ವಿರೋಧದ ನಡುವೆ ತೈವಾನ್ ನೂತನ ಅಧ್ಯಕ್ಷರಾಗಿ ಡೆಮಾಕ್ರಟಿಕ್ ಪ್ರೋಗ್ರೆಸ್ಸಿವ್ ಪಕ್ಷದ ಲಾಯ್ ಚಿಂಗ್ ಟೆ ಶನಿವಾರ ಆಯ್ಕೆಯಾಗಿದ್ದಾರೆ.

ಅಂತಿಮ ಮತ ಎಣಿಕೆಯ ನಂತರ ಕೇಂದ್ರ ಚುನಾವಣಾ ಆಯೋಗವು ಲಾಯ್ ಚಿಂಗ್ ಟೆ ಶೇ 40.1 ಮತ ಗಳಿಸಿ ವಿಜಯ ಸಾಧಿಸಿದ್ದಾರೆ ಎಂದು ಘೋಷಿಸಿತು. ಅವರ ಪ್ರತಿಸ್ಪರ್ಧಿ ಹೌ ಯು–ಇ ಶೇ 33.5ರಷ್ಟು ಮತಗಳನ್ನು ಪಡೆದಿದ್ದಾರೆ.

ಲಾಯ್, ಚೀನಾ ಬೆದರಿಕೆ ಮತ್ತು ಎಚ್ಚರಿಕೆಗಳನ್ನು ಬದಿಗೊತ್ತಿ ‘ತೈವಾನ್ ಪ್ರಜಾಪ್ರಭುತ್ವದಲ್ಲಿ ಹೊಸ ಅಧ್ಯಾಯ ಬರೆದದ್ದಕ್ಕಾಗಿ‘ ಜನರಿಗೆ ಧನ್ಯವಾದ ತಿಳಿಸಿದರು.

ತಾವು ತೈವಾನ್‌ನಲ್ಲಿ ಶಾಂತಿ ಮತ್ತು ಸ್ಥಿರತೆ ಕಾಪಾಡುವುದಾಗಿ ಮತ್ತು ಚೀನಾದ ಬೆದರಿಕೆಗಳಿಂದ ತೈವಾನ್ ಅನ್ನು ಪಾರು ಮಾಡುವುದಾಗಿ ಪ್ರತಿಜ್ಞೆ ಮಾಡಿದರು.

ಪಿಂಚಣಿ ಏರಿಕೆಗೆ ಆಗ್ರಹ: ನಿವೃತ್ತ ನೌಕರರ ಪ್ರತಿಭಟನೆ

ಬೆಂಗಳೂರು: ಕೆಎಸ್‌ಆರ್‌ಟಿಸಿ ಮತ್ತು ಬಿಎಂಟಿಸಿ ನಿವೃತ್ತ ಇಪಿಎಸ್-95 ಸದಸ್ಯರ ಸಂಘ ಮತ್ತು ಇತರೆ ಸಂಘಟನೆಗಳ ವತಿಯಿಂದ ಕೇಂದ್ರ ಪ್ರಾದೇಶಿಕ ಭವಿಷ್ಯನಿಧಿ ಕಚೇರಿ ಎದುರು ಪ್ರತಿಭಟನಾ ಸಭೆ ನಡೆಸಲಾಯಿತು.

‘ಕೇಂದ್ರಸರ್ಕಾರ ಕೆಲವೇ ದಿನಗಳಲ್ಲಿ ಕನಿಷ್ಠ ಪಿಂಚಣಿ ಸಹಿತ ತುಟ್ಟಿಭತ್ಯೆ ಮತ್ತು ವೈದ್ಯಕೀಯ ಸವಲತ್ತುಗಳ ಬಗ್ಗೆ ತೀರ್ಮಾನಿಸಲಾಗುವುದು ಎಂದು ಭರವಸೆ ನೀಡಿತ್ತು. ಭರವಸೆ ನೀಡಿ 25 ದಿನ ಕಳೆದರೂ ಈಡೇರಿಲ್ಲ, ಹಾಗಾಗಿ ದೇಶದ ಎಲ್ಲ ಜಿಲ್ಲೆ ಮತ್ತು ತಾಲ್ಲೂಕುಗಳಲ್ಲಿ ಇಪಿಎಫ್‌ಒ ಕಚೇರಿಗಳ ಮುಂದೆ ಪ್ರತಿಭಟನೆ ನಡೆಸಿ ಭವಿಷ್ಯನಿಧಿ ಆಯುಕ್ತರ ಮೂಲಕ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಲಾಯಿತು ಎಂದು ತಿಳಿಸಿದರು.

ಕೇಂದ್ರ ಸರ್ಕಾರ ಬಜೆಟ್ ಅಧಿವೇಶನದೊಳಗೆ ಸಮಸ್ಯೆ ಇತ್ಯರ್ಥಗೊಳಿಸದಿದ್ದರೆ ಮುಂದೆ ಹೋರಾಟ ತೀವ್ರಗೊಳಿಸಲಾಗುವುದು ಎಂದು ರಮಾಕಾಂತ ನರಗುಂದ, ಸ್ವಾಮಿ, ನಂಜುಂಡೇಗೌಡ, ಶಂಕರ್ ಕುಮಾರ್, ಸುಬ್ಬಣ್ಣ ಎಚ್ಚರಿಸಿದರು.

‘ನಿರುದ್ಯೋಗ ನಿವಾರಣೆಗೆ ಕಾಲ್‌ಸೆಂಟರ್’

ಚಿಕ್ಕಬಳ್ಳಾಪುರ: ಎಂ.ಎಸ್. ರಾಮಯ್ಯ ಯೂತ್ ಫೌಂಡೇಶನ್‌ನಿಂದ ನಗರದ ಸಂತ ಜೋಸೆಫರ ಶಾಲೆ ಆವರಣದಲ್ಲಿ ಶನಿವಾರ ನಡೆದ ಬೃಹತ್ ಉದ್ಯೋಗ ಮತ್ತು ಸಾಲ ಮೇಳ ನಡೆಯಿತು. 114 ಕ್ಕೂ ಅಧಿಕ ಕಂಪೆನಿಗಳು ಭಾಗವಹಿಸಿದ್ದವು. ಸ್ಥಳದಲ್ಲಿಯೇ 1,500ಕ್ಕೂ ಹೆಚ್ಚು ಮಂದಿಗೆ ಉದ್ಯೋಗದ ಅವಕಾಶಗಳನ್ನು ನೀಡಲಾಯಿತು.

ಶೇ 60 ಮಂದಿಗೆ ಉದ್ಯೋಗ ಮತ್ತು ಶೇ 40 ರಷ್ಟು ಅಭ್ಯರ್ಥಿಗಳಿಗೆ ಸಾಲ ಸೌಲಭ್ಯ ಕಲ್ಪಿಸಲಾಗಿದೆ. ಚಿಕ್ಕಬಳ್ಳಾಪುರ, ಬಾಗೇಪಲ್ಲಿ ಮತ್ತು ಗೌರಿಬಿದನೂರು ವಿಧಾನಸಭಾ ಕ್ಷೇತ್ರದ ಒಟ್ಟು 7,500 ಮಂದಿ ಮೇಳದಲ್ಲಿ ಭಾಗವಹಿಸಿದ್ದರು.

ವಿವಿಧ ಬಹುರಾಷ್ಟ್ರೀಯ ಕಂಪನಿಗಳು, ರಾಷ್ಟ್ರೀಯ ಬ್ಯಾಂಕ್‌ಗಳು ಮೇಳದಲ್ಲಿ ಪಾಲ್ಗೊಂಡಿದ್ದವು. ಎಂ.ಎಸ್. ರಾಮಯ್ಯ ಫೌಂಡೇಶನ್ ಸಂಸ್ಥಾಪಕ ಅಧ್ಯಕ್ಷ, ಯುವ ಕಾಂಗ್ರೆಸ್ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಎಂ.ಎಸ್. ರಕ್ಷಾ ರಾಮಯ್ಯ ಇದ್ದರು.



ಪಿಟೀಲು ನಾದ ಸಂಗೀತದ ಅನುಸಂಧಾನ 13



ಹಾವೇರಿಯ ಹಾನಗಲ್ ಗ್ರಾಮದಲ್ಲಿ ನಡೆದ ಕೊಬ್ಬರಿ ಹೋರಿ ಹಬ್ಬದ ಝಲಕ್ ಪ್ರಜಾವಾಣಿ ಚಿತ್ರಗಳು: ನಾಗೇಶ ಬಡಿಗೇರ

ಚಳಿ ತೀಡಿಕೊಂಡ ಎಳೆಬಿಸಿಲಿನ ಸಂಕ್ರಾಂತಿ ಆಚರಣೆಯಲ್ಲಿ ಮನುಷ್ಯ–ಪ್ರಾಣಿ–ಪ್ರಕೃತಿಯ ಕೊಂಡಿಯೊಂದು ಇರುವುದು ಸ್ಪಷ್ಟ. ಈ ಸಾಂಸ್ಕೃತಿಕ ವಿವರಗಳಲ್ಲಿ ಅಡಕವಾಗಿರುವ ತತ್ತ್ವ ಬದುಕಿನ ಪಾಠವನ್ನೂ ಹೇಳುತ್ತದೆ.

ಹೋರಿ ಹೀಗೆ ಮುನ್ನುಗ್ಗಿದರೆ ಹಿಡಿಯಬಲ್ಲ ಶೂರ ಯಾರು?



ಸತ್ಯ ವಾಕ್ಯಕೆ ತಪ್ಪಿ ನಡೆದರೆ...

ಕೃಷ್ಣಮೂರ್ತಿ ಹನೂರು

ಕಾಲದ ನಿರಂತರತೆಗೂ ಜೀವ ಜಗತ್ತಿನ ಆಯಾ ಸಾಂದರ್ಭಿಕ ಬದುಕಿಗೂ ಬಿಡಿಸಲಾಗದ ಆಂತರಂಗಿಕ ಸಂಬಂಧವಿದ್ದು, ಅದರಲ್ಲಿ ಪ್ರಾಕೃತಿಕ ಬದಲಾವಣೆಯೂ ಸೇರಿಕೊಂಡಿದೆ. ಈ ಹೊತ್ತಿನ ಚಳಿಗಾಲದಲ್ಲಿ ಜೀವಜಾಲದ ಚಟುವಟಿಕೆ ತುಸು ನಿಧಾನ. ಹೀಗಾಗಿ ಮಾರ್ಗಳಿ ಮಾಸದಲ್ಲಿ ಗಿಡ ನೆಡುವ ಪ್ರಕ್ರಿಯೆ ನಡೆಯುವುದಿಲ್ಲ. ನವೆಂಬರ್, ಡಿಸೆಂಬರ್ ತಿಂಗಳಲ್ಲಿ ತೆನೆ ಹೊತ್ತ ಪೈರಿನ ಹಸಿರು ಕುಂದುತ್ತ ಅದೆಲ್ಲ ಧಾನ್ಯದ ರೂಪಾಗುತ್ತ, ಅದು ರೈತರ ಸಂತೋಷಕ್ಕೆ ಕಾರಣವಾಗುತ್ತದೆ. ಇದು ವಸಂತಪೂರ್ವದ ಸುಗ್ಗಿ ಕಾಲ. ಶಿಷ್ಟ ಕವಿಗಳು, ಜನಪದರು ತಮ್ಮ ಸುತ್ತಿನ ಚರಾಚರಕ್ಕೆಲ್ಲ ನಾಮಧೇಯ, ರೂಪ ಕೊಟ್ಟು ಮಾತನಾಡಿಸಿದಂತೆ ಕಾಲಪುರುಷನಿಗೂ ಜೀವ ಕೊಟ್ಟಿರುತ್ತಾರೆ. ಅದರಂತೆ ವಸಂತನು ಕಾಲದ ಸುಂದರಾಂಗ. ಋತುಮಾನಗಳಲ್ಲಿ ಆತನದೇ ಮೇಲುಗೈ.

ಸಂಕ್ರಾಂತಿ ಸಂಭ್ರಮ

ಈ ವಸಂತನ ಆಗಮನದ ಪೂರ್ವಕಾಲವೆಂದರೆ ಚಳಿಗಾಲ. ಮಳೆರಾಯನ ನಂತರದವನು. ಮಳೆ ನಿಂತು ಪ್ರಕೃತಿ ಹೆಚ್ಚು ಚೈತನ್ಯಪೂರ್ಣ ಎನ್ನಿಸುವುದು ಈ ಸಂದರ್ಭದಲ್ಲೇ. ಈ ಸಂಕ್ರಾಂತಿಯ ದಿನಗಳು ಎಂಥವೆಂದರೆ, ನಡು ಮಧ್ಯಾಹ್ನವೂ ಬೆಳಗಿನಂತೆಯೇ ತೋರುತ್ತದೆ. ಏರು ಬಿಸಿಲಿನಲ್ಲಿಯೂ ಸಣ್ಣದಾಗಿ ಮೈ ಮುಟ್ಟುವ ಚಳಿ ಹಿತವಾಗಿರುತ್ತದೆ. ವಸಂತ ಪೂರ್ವದ ಈ ಸಂಧಿ ಕಾಲದ ಸೌಂದರ್ಯವನ್ನು ನೋಡ ಬಯಸುವವರು ಯಾವುದಾದರೂ ದಟ್ಟ ಕಾನನದ ನಡುವೆ ಮಧ್ಯಾಹ್ನವೋ, ಸಂಜೆಯೋ ನಿಂತರೆ ಹಿಡಿದಿಡಲಾಗದ, ವರ್ಣಿಸಲಾಗದ ಹಿತಕರ ಅನುಭವವಾಗುತ್ತ ಇಡೀ ಪ್ರಕೃತಿಯ ತುಂಬೆಲ್ಲ ಬೆಳ್ಳಿಯ ರೇಖೆಗಳು ಅಲೆ ಅಲೆಯಾಗಿ ಹೊಳೆದು ಅದು ಆಕಾಶ ಭೂಮಿಯ ನಡುವೆ ತೇಲಾಡುವಂತೆ ತೋರುತ್ತದೆ.

ಮೇಲಿನಂಥ ಕಾಲವನ್ನು ಪರ್ವ ಕಾಲ, ಸಂಕ್ರಮಣ ಕಾಲವೆಂದು ಕರೆಯಲಾಗಿದೆ. ಸೂರ್ಯನು ಒಂದು ರಾಶಿಯಿಂದ ಇನ್ನೊಂದು ರಾಶಿಗೆ ಚಲಿಸುವ ಈ ಸಮಯವನ್ನು ಉತ್ತರಾಯಣ ಪುಣ್ಯ ಕಾಲವೆನ್ನಲಾಗಿದೆ. ದೈವದ ನೆಲೆಯ ತೀರ್ಥಯಾತ್ರೆಗೆ ಹೋಗುವವರ ಸಂಖ್ಯೆ ಇದೇ ಕಾಲದಲ್ಲಿ ಹೆಚ್ಚು. ಅದೂ ಜನಪದರಲ್ಲಿ ಈ ಬಗೆಯ ಮಾಘ ಮಾಸದ ಯಾತ್ರೆ ಅಧಿಕ. ಯಾಕೆಂದರೆ ಸಂಕ್ರಾಂತಿಯ ಹೊತ್ತಿಗೆ ಹೊಲಗದ್ದೆಗಳು ಹೊತ್ತ ಫಲವನ್ನು ಇಳಿಸಿಕೊಂಡು ಮುಂದಿನ ಫಲವತ್ತತೆಗೆ ಸಿದ್ಧವಾಗುವಲ್ಲಿ ನೆಲ ಬೀಳು ಬಿದ್ದಿರುತ್ತದೆ. ಈ ಸಮಯದಲ್ಲಿ ಭೂಮಿತಾಯಿ ಬಹಿಷ್ಠೆಯಾಗಿರುವಳೆಂದೇ ತಿಳಿದು ಜನ ಮಾಗಿ ಯಾತ್ರೆ ಕೈಗೊಳ್ಳುತ್ತಾರೆ. ಇಂಥ ಕಾಲವು ಪ್ರಕೃತಿಯ ವರ್ಣಮಯ ಸ್ವರ್ಗಸದೃಶ ಸುಂದರಕಾಲವೋ ಅಥವಾ ಅದನ್ನೇ ಮನುಷ್ಯ ಇನ್ನೊಂದು ಅರ್ಥದಲ್ಲಿ, ಸತ್ತರೆ ಪರಲೋಕದಲ್ಲೂ ಇಂಥದೇ ಸಂತಸದ ನೆಲೆ ಸಿಗುತ್ತದೆ ಎಂದುಕೊಂಡನೋ ಗಮನಿಸಬೇಕು!

ಜೀವಜಗತ್ತು ಪ್ರಕೃತಿ ಸಂಬಂಧದ ಹಿನ್ನೆಲೆಯಲ್ಲಿ ದೀರ್ಘಕಾಲ ಬದುಕಿ ಜೀವನಾಂತ್ಯ ಕಾಣುವುದಕ್ಕೂ ಒಂದು ಸರಿಯಾದ ಸಮಯ ಹುಡುಕುತ್ತಾ ಆ ಬಯಕೆಯನ್ನು ಈ ಉತ್ತರಾಯಣ ಪುಣ್ಯಕಾಲದಲ್ಲಿ ಕಂಡುಕೊಂಡನೇ? ಇದೇನೇ ಇರಲಿ ಸೂರ್ಯನು ಕಕ್ಷೆ ಬದಲಿಸುವ ಉತ್ತರಾಯಣ ಕಾಲ ನೋಡುವ ಕಂಗಳ, ಅನುಭವಿಸುವ ಮನಸಿನ ಪುಣ್ಯಕಾಲವೇ ಸರಿ.


ಪುಣ್ಯಕೋಟಿಯ ಸತ್ಯಸಂಧತೆ

ಜನಪದರ ನಡುವಣ ದನ-ಕರುಗಳ ಪಾರಮ್ಯವು ಈ ನೆಲದ ಆರಾಧನೆಗಷ್ಟೇ ನಿಲ್ಲದೆ ಅದು ಲೋಕ ಪರಿಪಾಲಕ ಶಿವನ ವೃಷಭ ವಾಹನವೂ ಆಗಿ, ಇತ್ತ ಭಾಗವತ ಸಂಪ್ರದಾಯದಲ್ಲಿ ಕೃಷ್ಣನ ಸನಿಹ ಹಾಲು ಕರೆಯುವ ಗೋ ಮಾತೆಯೂ ಆಗಿ ನಿಂತಿರುತ್ತದೆ. ಇದೆಲ್ಲದರೊಂದಿಗೆ ಲೋಕ ಸಮಸ್ತರನ್ನೂ ಅವರ ಅವಸಾನದ ನಂತರ ಬಾಲದ ಮೂಲಕವೇ ಸ್ವರ್ಗಕ್ಕೆ ದಾಟಿಸುವ ಮುಕ್ತಿ ಪ್ರದಾಯಕ ಜೀವವೂ ಆಗಿರುವ ವಿವರಗಳನ್ನು ಪುರಾಣ ಕಥೆಗಳು ಬಿತ್ತರಿಸುತ್ತವೆ. ಕೊನೆಗೆ ಇದರ ಶ್ರೇಷ್ಠತೆಯ ತುದಿ ಎಂದರೆ ಲೋಕದ ದೈವಗಳೂ ಗೋವಿನ ಅಂಗೋಪಾಂಗಗಳಲ್ಲಿಯೇ ನೆಲೆಸಿವೆಯೆಂದು ತಿಳಿಯಲಾಗಿದೆ. ಈ ಬಗೆಯ ಭಕ್ತಿಯೂ, ಗೋವುಗಳ ಆರಾಧನೆಯ ಭಾವವೂ ಇದೀಗ ದ್ವಂದ್ವ ನಿಲುವುಗಳಿಗೆ ಸಿಕ್ಕು ಅದು ರಾಜಕೀಯ ಪಕ್ಷಗಳ ಆಹಾರವಾಗಿರುತ್ತದೆ. ಈ ಚರ್ಚೆ, ವಾದ–ಪ್ರತಿವಾದ ವರ್ತಮಾನದ್ದಾದರೂ ಭಾರತೀಯ ಜನಪದರು ಗೋವೃಂದವನ್ನು ದೀಪಾವಳಿಯ ಕಾಲದಲ್ಲೋ, ಸಂಕ್ರಾಂತಿ ವೇಳೆಯಲ್ಲೋ ತತ್ಸಂಬಂಧ ಅನೇಕ ಆಚರಣೆಗಳನ್ನು ರೂಢಿಸಿಕೊಂಡಿರುವುದುಂಟು. ಇದೇ ಸಂಕ್ರಾಂತಿಯ ಸಮಯಕ್ಕೆ ಗೋವಿನ ಕಥೆಯೂ ಸೇರಿಕೊಂಡು ದನ–ಕರುಗಳಿಗೆ ಪುಣ್ಯಕೋಟಿಯ ಸತ್ಯಸಂಧತೆಯೂ ಪ್ರಾಪ್ತವಾಗಿಬಿಟ್ಟಿರುತ್ತದೆ. ಗೋವಿನ ಕಥೆಗೂ ಸಂಕ್ರಾಂತಿಗೂ ಸಂಬಂಧವಿರುವುದು ದಕ್ಷಿಣ ಕರ್ನಾಟಕದಲ್ಲಿ. ಬ್ರಹ್ಮಪುರಾಣ ಮೂಲದ ಈ ಸ್ವಾರಸ್ಯ, ಕುತೂಹಲ ಕರ ಗೋವಿನ ಕಥೆ ಕರ್ನಾಟಕದಾದ್ಯಂತ ಕಳೆದ ಶತಮಾನದಲ್ಲಿ ಪ್ರಚಾರಕ್ಕೆ ಬಂದು ಅದು ಸಂಕ್ರಾಂತಿಗೆ ಸೇರಿಕೊಂಡಿದೆ. ಹಬ್ಬಗಳ ಮೋಜಿಗೆ ಬೇಟೆಯಾಟ ಸೇರಿ ಅದು ಆಹಾರವೆಂದಾದರೆ, ಗೋವಿನ ಕಥೆಯಂಥವು ಅಂತರಂಗದ ನಿಯಮ ನೀತಿಗೆ ಎಂದಾಯಿತು.

ಒಮ್ಮೊಮ್ಮೆ ನಂಬಿಕೆ ಆಚರಣೆಗಳು ಮೇಲು ಪದರದಲ್ಲಿ ಬೆಳೆದುಕೊಂಡು ಬಂದವು ಸರಿ. ಆದರೆ ದನ-ಕರುಗಳ ಕೊಟ್ಟಿಗೆಯಲ್ಲಿ ಸಂಕ್ರಾಂತಿಯಂದು ಗೋವಿನ ಸಮೇತ ಕೊಳಲೂದುತ್ತಿರುವ ಪ್ರಕೃತಿ ಮೈಬಣ್ಣದ ಕೃಷ್ಣನ ಪಟದ ಮುಂದೆ ಓದುವ ಗೋವಿನ ಕತೆಯ 'ಸತ್ಯವಾಕ್ಯಕೆ ತಪ್ಪಿ ನಡೆದರೆ ಮೆಚ್ಚನಾ ಪರಮಾತ್ಮನು' ಎಂಬ ವಾಕ್ಯವಿದೆಯಲ್ಲ, ಅದು ದೊಡ್ಡದು. ಕೇಳಿಸಿಕೊಳ್ಳಬೇಕಾದುದು, ಪಾಲಿಸಬೇಕಾದುದು. ಒಂದು ಹಸು ಮನುಷ್ಯಕೋಟಿಗೆ ನೀಡಿದ ಸಾರ್ವಕಾಲಿಕ ಸಂದೇಶ.

ಆದಿಮ ಕ್ರಮದ ಬೇಟೆ ಆಟ

ಸಂಕ್ರಾಂತಿಯ ಹಿಂಚುಮುಂಚಿನ ಚಳಿ ಬಿಸಿಲ ವಾತಾವರಣವನ್ನು ಅನುಭವಿಸುತ್ತ ಪ್ರಾಣಿಗಳೂ ತಂತಮ್ಮ ಬೇಟೆಯ ಆತುರವನ್ನು ಮರೆತು ಗಿಡಮರಗಳೆಡೆ ಅವಿತು ಕುಳಿತಿರುವಲ್ಲಿ ಇತ್ತ ಗ್ರಾಮೀಣರು ಕತ್ತಿ, ಕಠಾರಿ, ಭರ್ಜಿ ಹಿಡಿದು ಅತ್ಯುತ್ಸಾಹದಿಂದ ತಮ್ಮ ಬೇಟೆಗೆ ಹೊರಡುವುದಿದೆ. ಪ್ರಾಕೃತಿಕ ಹಬ್ಬಗಳು ಎಂದು ಆಚರಣೆಗೆ ಬಂದವೋ ಅಂದಿನಿಂದಲೂ ಈ ಬೇಟೆಯ ಮೋಜು ಪಳೆಯುಳಿಕೆಯಾಗಿ ಉಳಿದುಕೊಂಡಿದೆ. ಬೇಟೆ ದೊರೆಯದಿದ್ದರೆ ಒಂದು ಮೊಲವನ್ನಾದರೂ ಹೊಡೆದ ಗಂಡಸರು ಕಲ್ಲುಗುಡ್ಡಗಳತ್ತಣಿಂದ ಕೊಂಬು ಕಹಳೆ ಊದಿಸಿ ವೀರಾವೇಶದಿಂದ ಊರ ದಿಡ್ಡಿ ಬಾಗಿಲ ಕಡೆ ಬರುತ್ತ, ಹೆಂಗಸರಿಂದ ಮಂಗಳಾರತಿ ಎತ್ತಿಸಿಕೊಳ್ಳುವುದುಂಟು. ಅರಣ್ಯದ ಸರಹದ್ದಿನಲ್ಲಿರುವವರಾದರೆ ಹಂದಿ ಬೇಟೆ ಸಿಕ್ಕಿಬಿಡಬಹುದು. ಬೇಟೆ ಯಾವ ತೆರನದೇ ಆಗಲಿ ಅದರ ಉತ್ಸಾಹ ಎಲ್ಲಕ್ಕಿಂತ ಮಿಗಿಲಾದುದು. ಈ ಬಗೆಯ ಊರಾಚೆಯ ಬೇಟೆ ಸಂಕ್ರಾಂತಿ, ಯುಗಾದಿಯ ಬಿಡುವಿನ ಕಾಲದಲ್ಲಿ ಆಗುವುದಿದೆ. ಇತಿಹಾಸದ ಈ ಆದಿಮ ಕ್ರಮದ ಆಟವನ್ನು ಮನುಷ್ಯ ಮರೆಯುವುದಾದರೂ ಹೇಗೆ? ಪಶುಗಳನ್ನು ಪಳಗಿಸಿ, ತಮ್ಮ ನೆಲೆಗಳನ್ನು ಸ್ಥಾಪಿಸಿ ವ್ಯವಸಾಯ ಬದುಕನ್ನು ರೂಢಿಸಿಕೊಂಡಾಕ್ಷಣಕ್ಕೆ ಆದಿಮ ಆಹಾರ ಸಂಪಾದನೆಯ ಕ್ರಮವನ್ನು ಬಿಡಲಾಗುವುದೇ? ಹಾಗಾಗಿ ಈ ಹಬ್ಬದ ಹಿಂಚುಮುಂಚು ಬೇಟೆಯ ಮನರಂಜನೆ ಹೇಗೋ ಉಳಿದುಕೊಂಡಿದೆ. ಇದು ರಾಜ ಮಹಾರಾಜರ ಯಾವೊತ್ತಿನ ಹವ್ಯಾಸವೂ ಆಗಿದ್ದಿತೆಂಬುದು ಹಳೆಯ ಕಾವ್ಯ ಕಥನಗಳಲ್ಲಿ ಇನ್ನಿಲ್ಲದಂತೆ ವರ್ಣಿತವಾಗಿದೆ. ಅಷ್ಟೇ ಅಲ್ಲ, ಬೇಟೆಗೆ ಹೋದ ಮಹಾರಾಜರ ಬದುಕಿನಲ್ಲಿ ಅನೇಕ ಆಕಸ್ಮಿಕಗಳೂ ಆ ಹೊತ್ತಿನಲ್ಲಿಯೇ ಜರುಗಿ ಹೋದದ್ದುಂಟು. ಇದು ಜೀವಜಗತ್ತಿನ ಲಾಗಾಯ್ತಿನ ಆಹಾರ ಸಂಪಾದನೆ ಮತ್ತು ಆರಾಧನೆಗೆ ಸಂಬಂಧಪಟ್ಟ ಸಂಗತಿ. ಆದರೆ, ಕಾಲ ಚಕ್ರದಂತೆ ಕೆಲವು ಜೀವರಾಶಿಗಳು ಮನುಷ್ಯನ ಆಹಾರವಾಗಿಯೂ ಮತ್ತೆ ಕೆಲವು ವ್ಯವಸಾಯ ಬದುಕಿಗೆ ನೆರವು ಒದಗಿಸುವಂಥವಾಗಿಯೂ ಅದರಲ್ಲಿ ದನ–ಕರುಗಳನ್ನು ಕಣ್ಣೆದುರಿನ ದೈವವೆಂದು ಜನ ಪೂಜಿಸಿಕೊಂಡು, ಎಳ್ಳು–ಬೆಲ್ಲದ ಸಿಹಿ ಹಂಚಿಕೊಂಡು ಬಂದದ್ದಿದೆ. ಇದು ಸಂಕ್ರಾಂತಿ ಹಬ್ಬದ ಮುಖ್ಯ ಆಚರಣೆ. ದನ–ಕರುಗಳ ಆರಾಧನೆ ದಕ್ಷಿಣ ಕರ್ನಾಟಕದಲ್ಲಿ ಈ ಹೊತ್ತಿನಲ್ಲಾದರೆ, ಉತ್ತರ ಕರ್ನಾಟಕದ ಅಲ್ಲಲ್ಲಿ ದೀಪಾವಳಿ ಹಿಂದೆ ಮುಂದೆ ನಡೆಯುತ್ತ, ಅಲ್ಲಿ ಇನ್ನೂ ಹಲವಾರು ಆಚರಣೆಗಳು ಮತ್ತು ಹಂತಿ ಹಾಡುಗಳ ಹೇಳಿಕೆ–ಕೇಳಿಕೆ ಇರುತ್ತದೆ.



ಹೋರಿ ಬೆದರಿಸುವ ಸ್ಪರ್ಧೆಯಲ್ಲಿ ಭಾಗವಹಿಸಿದ್ದ ನೂರಾರು ಯುವಕರು



ರಾಸು ಸೊಗಸು

ಎಂ.ಎನ್.ಯೋಗೇಶ್

ಚುಮುಚುಮು ಚಳಿಯ ನಡುವೆ ರಾಸುಗಳಿಗೆ ಬಿಸಿನೀರಿನ ಸ್ನಾನ, ಕೊಂಬು, ಹೆಗಲಿಗೆ ಎಣ್ಣೆಯ ಲೇಪನ, ಮೈತುಂಬ ಬಣ್ಣದ ಮಿಂಚು, ರೇಷ್ಮೆ ವಸ್ತ್ರದ ಹೊದಿಕೆ, ಕಾಲಿಗೆ ಗೆಜ್ಜೆ, ಕೊರಳಿಗೆ ಗಂಟೆ, ಹೂವಿನ ದಂಡೆ, ಹಣ್ಣುಗಳ ಹಾರ, ಕಿವಿಯ ಸುತ್ತಲೂ ಕುಚ್ಚು, ಕೊಂಬಿನ ತುದಿಗೆ ಬೆಳ್ಳಿಯ ಕಳಶ, ಹಣೆಗೆ ಬಾಸಿಂಗ, ಕಣ್ಣಿಗೆ ಕಾಡಿಗೆ...

ಸಂಕ್ರಾಂತಿ ಬಂತೆಂದರೆ ಮಂಡ್ಯ ಭಾಗದ ರೈತರು ತಮ್ಮ ಪ್ರೀತಿಯ ಬಸವನಿಗೆ ಶೃಂಗಾರ ಮಾಡುವುದರಲ್ಲೇ ಸುಖ ಕಾಣುತ್ತಾರೆ. ಬ್ಯೂಟಿ ಪಾರ್ಲರ್‌ನಲ್ಲಿ ವಧುವಿಗೆ ಮೇಕಪ್ ಮಾಡಿಸಿದಂತೆ ರೈತರು ತಮ್ಮ ರಾಸುಗಳಿಗೆ ಅಲಂಕಾರ ಮಾಡುತ್ತಾರೆ. ಕೊಂಚ ಬಣ್ಣ ಮಾಸಿದ ಎತ್ತುಗಳಿಗೆ ಪೌಡರ್ ಲೇಪಿಸಿ, ಪರಿಮಳಕ್ಕಾಗಿ ಸುಗಂಧ ದ್ರವ್ಯ ಸಿಂಪಡಿಸುವವರೂ ಇದ್ದಾರೆ.

ಏನೇ ಕಷ್ಟ ಇದ್ದರೂ ರೈತರು ಸಂಕ್ರಾಂತಿ ದಿನ ಎತ್ತುಗಳ ಮೈತೊಳೆದು, ಅಲಂಕಾರ ಮಾಡಿ, ಕಿಚ್ಚು ಹಾಯಿಸುವುದನ್ನು ಮರೆಯುವುದಿಲ್ಲ. ಕೆಲವರು ಕೊಂಬಿಗೆ ಚಿನ್ನದ ಕಳಶವನ್ನೇ ಹಾಕಿದರೆ ಹಲವರು ಹೂವು, ವಸ್ತ್ರಗಳಿಂದ ಶೃಂಗರಿಸುತ್ತಾರೆ.

ಹಬ್ಬಕ್ಕೆ ವಾರ ಇರುವಂತೆಯೇ ಮಂಡ್ಯದ ಪೇಟೆಬೀದಿಯಲ್ಲಿ ರೈತರೇ ತುಂಬಿ ತುಳುಕುತ್ತಾರೆ. ಎರಡು ದಿನ ಮೊದಲು ರಸ್ತೆಯಲ್ಲಿ ವಾಹನ ಸಂಚಾರ ಸ್ಥಗಿತಗೊಳ್ಳುತ್ತದೆ. ಕಾಲಿಡುವುದಕ್ಕೂ ಜಾಗ ಸಿಗದಷ್ಟು ರೈತರು ಸೇರುತ್ತಾರೆ. ರಾಸುಗಳ ಅಲಂಕಾರಕ್ಕೆ ಬೇಕಾದ ಸಾಮಗ್ರಿ ಖರೀದಿಸಲು ಮುಗಿಬೀಳುತ್ತಾರೆ. ಪ್ರತಿ ಅಂಗಡಿಯಲ್ಲೂ ಹಗ್ಗ, ಮೂಗುದಾರ, ಬಣ್ಣದ ದಾರ, ಮಿಂಚು, ದಂಡೆ, ಗಂಟೆ ಮುಂತಾದ ವಸ್ತುಗಳನ್ನು ಮಾರಾಟ ಮಾಡಲಾಗುತ್ತದೆ.

ಮಂಡ್ಯ ಮಾತ್ರವಲ್ಲದೆ ಹಳೇ ಮೈಸೂರು ಭಾಗದಲ್ಲಿ ಸಂಕ್ರಾಂತಿಯನ್ನು ರಾಸುಗಳ ಜೊತೆಯಲ್ಲೇ ಆಚರಿಸುತ್ತಾರೆ. ಹಬ್ಬದ ದಿನ ರಾಸುಗಳಿಗೆ ಹಾಕುವ ಒಂದೊಂದು ದಾರವೂ ಹೊಸದೇ ಆಗಿರುತ್ತದೆ. ವರ್ಷಪೂರ್ತಿ ದುಡಿದು ದಣಿದ ಬಸವನಿಗೆ ಅದೊಂದು ದಿನ ಮರೆಯದೇ ಸೇವೆ ಮಾಡುತ್ತಾರೆ. ಸಿಹಿ ತಿಂಡಿ, ಬೆಣ್ಣೆ, ತುಪ್ಪ ತಿನ್ನಿಸಿ ಸಂಭ್ರಮಿಸುತ್ತಾರೆ. ಕೆಲ ರೈತರು ಜೋಡೆತ್ತುಗಳಿಗಾಗಿ ಮಂಟಪ ನಿರ್ಮಿಸಿ, ಜಗಮಗಿಸುವ ದೀಪಾಲಂಕಾರ ಮಾಡಿಸುತ್ತಾರೆ, ಬ್ಯಾಂಡ್ ಸೆಟ್‌ನೊಂದಿಗೆ ಮೆರವಣಿಗೆ ಮಾಡುತ್ತಾರೆ.

'ಸುಗ್ಗಿಯಲ್ಲಿ ಧಾನ್ಯದ ರಾಶಿಯನ್ನು ಮನೆ ತುಂಬಿಸಿಕೊಳ್ಳುವ ರೈತರು ತಮ್ಮ ಜಾನುವಾರುಗಳನ್ನು ಪೂಜಿಸುತ್ತಾರೆ. ರಾಸುಗಳಿಗೆ ಮೊದಲ ನೈವೇದ್ಯ ಅರ್ಪಿಸಿ ನಂತರ ತಾವು ಹಬ್ಬದೂಟ ಸೇವಿಸುತ್ತಾರೆ. ವರ್ಷದ ಕೇಡು ಕಳೆಯಲಿ, ರೋಗ–ರುಜಿನಗಳು ಬಾರದಿರಲಿ ಎಂಬ ಉದ್ದೇಶದಿಂದ ಕಿಚ್ಚು ಹಾಯಿಸುತ್ತಾರೆ'–ಪ್ರಗತಿಪರ ರೈತ ಹನಿಯಂಬಾಡಿ ಸೋಮಶೇಖರ್ ಇದರ ಉದ್ದೇಶವನ್ನು ಹಂಚಿಕೊಂಡಿದ್ದು ಹೀಗೆ.

ಅಂಬಾ ಎಂದೊಡನೆ: ಮಂಡ್ಯ, ಗಾಂಧಿನಗರದ 'ಎತ್ತಿನ ಶಿವಪ್ಪ' ಬೆಳಿಗ್ಗೆ ಹಾಸಿಗೆಯಿಂದ ಮೇಲೇಳಲು ತಮ್ಮ ಕೊಟ್ಟಿಗೆಯಲ್ಲಿ 'ಅಂಬಾ ' ಶಬ್ದ ಕೇಳಬೇಕು. ಎದ್ದಕೂಡಲೇ ರಾಸುಗಳ ಮುಖದರ್ಶನ ಮಾಡಿ, ಕೊರಳು ಸವರಿದಾಗಲೇ ಅಂದಿನ ದಿನ ಆರಂಭವಾಗುತ್ತದೆ. ಎತ್ತು ಸಾಕಣೆಯಲ್ಲಿ ಹೆಸರುವಾಸಿಯಾಗಿರುವ ಇವರು 2011ರ ಅಖಿಲ ಭಾರತ ಸಾಕು ಪ್ರಾಣಿಗಳ ಪ್ರದರ್ಶನದಲ್ಲಿ ಬಹುಮಾನ ಪಡೆದಿದ್ದಾರೆ.

14ನೇ ಪುಟಕ್ಕೆ...

ಬ್ಯಾಂಡ್‌ಸೆಟ್‌ನೊಂದಿಗೆ ರಾಸುಗಳ ಮೆರವಣಿಗೆ



ಶುಚಿಯೂಟಕ್ಕೆ ಬರ್ತಾರೆ ಸಾರವಾಡಕ್ಕೆ



ಖಾನಾವಳಿಯಲ್ಲಿ ಅನಸೂಯಾ ಮಲ್ಲಪ್ಪ ಹಿಟ್ನಳ್ಳಿ

ಸುಭಾಸ ಯಾದವಾಡ

ಸಿಹಿ ಊಟ.. ಸೋವಿ ಊಟ.. ಆರೋಗ್ಯಕರವಾದ ಊಟ.. ಹೊಟ್ಟೆ ತುಂಬಾ ಊಟ.. ಎಂಬೆಲ್ಲ ಕಾರಣಕ್ಕಾಗಿ ಜನ ದೂರದೂರುಗಳಿಂದ ಸಾರವಾಡಕ್ಕೆ ಬರುತ್ತಾರೆ. ಅಲ್ಲಿನ ಶ್ರೀ ವೀರಭದ್ರೇಶ್ವರ ಲಿಂಗಾಯತ ಖಾನಾವಳಿಗೆ(ಅಜ್ಜಿ ಖಾನಾವಳಿ) ಮುಗಿಬೀಳುತ್ತಾರೆ. ಸಮಾಧಾನದಿಂದ ಉಂಡು ತೃಪ್ತರಾಗಿ ಮರಳುತ್ತಾರೆ. ಅಲ್ಲಿಂದ ಹೊರಡುವಾಗ ಮತ್ತೆ ಮತ್ತೆ ಬರಬೇಕು ಎಂದುಕೊಳ್ಳುತ್ತಾರೆ.

ಅಜ್ಜಿ ಖಾನಾವಳಿ ಎಂದೇ ಹೆಸರಾದ 'ಶ್ರೀ ವೀರಭದ್ರೇಶ್ವರ ಲಿಂಗಾಯತ ಖಾನಾವಳಿ'ಯು ಸಾರವಾಡದ ಹೆಸರನ್ನು ಹಲವೆಡೆ ವ್ಯಾಪಿಸುವಂತೆ ಮಾಡಿದೆ. ಹೇಗೆ ಗೊತ್ತೇ?

ವಿಜಯಪುರ ಜಿಲ್ಲೆಯ, ಬಬಲೇಶ್ವರ ತಾಲ್ಲೂಕಿನಲ್ಲಿರುವ ಒಂದು ಸಣ್ಣ ಊರು ಸಾರವಾಡ. ವಿಜಯಪುರ-ಜಮಖಂಡಿ ಮುಖ್ಯ ರಸ್ತೆಯಲ್ಲಿರುವ, ಡೋಣಿಸಾಲಿನ, ಫಲವತ್ತಾದ ಎರೆಮಣ್ಣಿನ, ಸಮೃದ್ಧ ಊರು. ಕರ್ನಾಟಕದ ಪಂಜಾಬ್ ಎಂದು ಈ ಹಿಂದೆ ಕರೆಯಿಸಿಕೊಳ್ಳುತ್ತಿದ್ದ ವಿಜಯಪುರ ಜಿಲ್ಲೆಯಲ್ಲಿ ಐದು ನದಿಗಳಿದ್ದವು. ಬಾಗಲಕೋಟೆ ಕೂಡ ಜಿಲ್ಲೆಯಾದ ನಂತರ ಈಗ ಮೂರು ನದಿಗಳು ಈ ಜಿಲ್ಲೆಯಲ್ಲಿ ಉಳಿದಿವೆ. ಅವುಗಳಲ್ಲಿ ಡೋಣಿ ನದಿಯೂ ಒಂದು. ಅದರ ಇಕ್ಕೆಲಗಳಲ್ಲಿ ಬೆಳೆಯುವ ಬಿಳಿ ಜೋಳಕ್ಕೆ ತನ್ನದೇ ಆದ ಸ್ವಾದ-ಸತ್ವ-ಬೆಲೆ ಇದೆ.

ಸಾರವಾಡದ ಚಿಕ್ಕಪ್ಪಯ್ಯ ಎಂಬ ಕಾರಣಿಕ ಪುರುಷ ಮುಂದೆ ಏನೆಲ್ಲ ಆಗುವುದು ಎಂಬುದನ್ನು, ಬಹಳ ಹಿಂದೆಯೇ ಸಾರಿ ಹೋದದ್ದರಿಂದ, ಈ ಊರಿಗೆ ಸಾರವಾಡ ಎಂಬ ಹೆಸರು ಬಂದಿದೆ ಎನ್ನುವುದು ಪ್ರತೀತಿ. ಇದು ಸಣ್ಣ ಊರಾದರೂ ಬಹು ದೊಡ್ಡ ಪರಂಪರೆ ಇದೆ. ಸಜ್ಜನ ರಾಜಕಾರಣಿ ಎಂದು ಹೆಸರುವಾಸಿಯಾದ, ದಿವಂಗತ ಸಂಸದ ಬಿ.ಕೆ.ಗುಡದಿನ್ನಿ ಹುಟ್ಟಿದ ಊರು. ಇಲ್ಲಿನ ಪ್ರತಿ ಮನೆಯಲ್ಲೂ ರಂಗ ಕಲಾವಿದರಿದ್ದಾರೆ. ಗುಡದಿನ್ನಿಯವರೂ ಒಂದು ಕಾಲದಲ್ಲಿ, ನಾಟಕದ ಅಡ್ಡೆ ಏರಲು ಬಣ್ಣ ಹಚ್ಚಿದವರೇ. ಅದೆಲ್ಲ ಹಳೆಯದಾಯಿತು, ಅಲ್ಲಿ ಈಗೇನಿದೆ ಹೇಳಿ ಎಂದರೆ, ಗುಡದಿನ್ನಿಯವರ ತಮ್ಮನ ಮಗಳಾದ ಅನಸೂಯಾ ಮಲ್ಲಪ್ಪ ಹಿಟ್ನಳ್ಳಿ, ಎಂಬ ದಿಟ್ಟ ಸುಶಿಕ್ಷಿತ ಮಹಿಳೆ ಸ್ಥಾಪಿಸಿ ನಡೆಸುತ್ತಿರುವ ಶ್ರೀ ವೀರಭದ್ರೇಶ್ವರ ಖಾನಾವಳಿ ಎಂದು ಹೇಳಬೇಕಾಗುತ್ತದೆ.

13ನೇ ಪುಟಕ್ಕೆ...

ಪಿಟೀಲು ನಾದ ಸಂಗೀತದ ಅನುಸಂಧಾನ

ದಕ್ಷಿಣ ಕನ್ನಡದ ವಿಠಲ ರಾಮಮೂರ್ತಿ ಅಮೆರಿಕದ ಅರಿಜೋನಾದಲ್ಲಿ ಪಿಟೀಲು ವಾದನದ ಮೂಲಕ ಮೋಡಿ ಮಾಡಿದ್ದರು. ಅಲ್ಲಿ ಅವರ ಹೆಸರಿನಲ್ಲಿಯೇ ಒಂದು ದಿನ ಸಂಗೀತ ಸಂಭ್ರಮ ಆಯೋಜಿಸುವ ಘೋಷಣೆ ಹೊರಬಿತ್ತು...

ಸಾಧನೆ



ವಿಠಲ ರಾಮಮೂರ್ತಿ

ಉಮಾ ಅನಂತ್

ಧೀರ ಶಂಕರಾಭರಣ, ಕರ್ನಾಟಕ ಶಾಸ್ತ್ರೀಯ ಸಂಗೀತದ 29ನೇ ಮೇಳಕರ್ತ ರಾಗ. ಈ ಭಕ್ತಿ ಪ್ರಧಾನ ರಾಗದಲ್ಲಿ ತ್ಯಾಗರಾಜರ ಕೃತಿ 'ರಾಮ ನಿನ್ನು ವಿನಾ' ಬಹು ಜನಪ್ರಿಯ. ಕೇಳಲು ಅತ್ಯಂತ ಆಪ್ಯಾಯಮಾನವಾದ ಈ ಕೀರ್ತನೆಯನ್ನು ದಕ್ಷಿಣ ಕನ್ನಡ ಜಿಲ್ಲೆ ನಿಡ್ಲೆ ಸಮೀಪದ ಕರುಂಬಿತ್ತಿಲ್ ವಿಠಲ ರಾಮಮೂರ್ತಿ ಅವರು ಪಿಟೀಲಿನಲ್ಲಿ ಪ್ರಸ್ತುತಪಡಿಸಿದರು; ಅದು ಕಳೆದ ವರ್ಷ ಅಮೆರಿಕದ ಅರಿಜೋನಾ ರಾಜ್ಯದ ಪ್ರತಿಷ್ಠಿತ ವೇದಿಕೆಯೊಂದರಲ್ಲಿ. ಸುದೀರ್ಘವಾದ ಆಲಾಪ, ಕೃತಿಯ ಸೊಗಸಾದ ನಿರೂಪಣೆ, ಅದ್ಭುತ ಸ್ವರಪ್ರಸ್ತಾರ, ಪಿಟೀಲು ತನಿಯಲ್ಲಿ ಮಾದಕತೆ, ಮತ್ತೆ ಮತ್ತೆ ಕೇಳಬೇಕೆನಿಸುವ ಚಿಟ್ಟೆಸ್ವರ ನುಡಿಸಿ ಕಛೇರಿ ಸಂಪನ್ನಗೊಂಡಾಗ ಕೇಳುಗರು ಭಾವಪರವಶರಾದರು.

ಈ ಕಛೇರಿ ವಿಠಲ ರಾಮಮೂರ್ತಿ ಅವರನ್ನು ಜಾಗತಿಕ ಮಟ್ಟದಲ್ಲಿ ಮತ್ತಷ್ಟು ಮೇಲಕ್ಕೇರುವಂತೆ ಮಾಡಿದ್ದಲ್ಲದೆ ಅರಿಜೋನಾದಲ್ಲಿ ನವೆಂಬರ್ 5 ಅನ್ನು 'ವಿಠಲ ರಾಮಮೂರ್ತಿ ದಿನ' ಎಂದು ಆಚರಿಸಲು ಘೋಷಿಸಲಾಯಿತು. ಕಲಾವಿದರೊಬ್ಬರಿಗೆ ಜೀವಮಾನದಲ್ಲಿ ಸಿಗುವ ಇಂಥ ಮನ್ನಣೆ ಬಹಳ ಅಪರೂಪದ್ದು.

ಮೊಳೆತು ಹೆಮ್ಮರವಾದ ಹಳ್ಳಿಯ ಸಿರಿ!

ಅರವತ್ತರ ದಶಕದ ಆರಂಭದ ದಿನಗಳವು. ಪ್ರಕೃತಿಯ ಐಸಿರಿ ನಡುವೆ ನಿರ್ಮಲವಾಗಿ ಹರಿಯುವ ಎರಡು ನದಿಗಳ ನಡುವಿನ ನಡುಗಡ್ಡೆಯಂಥ ಭಾಗದಲ್ಲಿ ಒಂದು ಸಣ್ಣ ಮನೆ. ಬೆಳ್ತಂಗಡಿ ತಾಲ್ಲೂಕಿನ ನಿಡ್ಲೆ ಸಮೀಪದ 'ಕರುಂಬಿತ್ತಿಲ್' ಎಂಬ ಮನೆಯಲ್ಲಿ ಸಂಗೀತ ಅಂದೇ ನಾದದಲೆಯ ಕಂಪನ್ನು ಹರಡಲಾರಂಭಿಸಿತ್ತು. ಪುಟ್ಟ ಬಾಲಕ ವಿಠಲ, ತನ್ನ ತಾಯಿಯ, ಅಜ್ಜನ ಸಂಗೀತ ನಾದಕ್ಕೆ ಮರುಳಾಗಿದ್ದ. ಮಗನನ್ನು ದೊಡ್ಡ ಸಂಗೀತಗಾರನನ್ನಾಗಿ ರೂಪಿಸಬೇಕು ಎಂಬ ತುಡಿತ ಹೆತ್ತಮ್ಮನಿಗೆ. ಕರ್ನಾಟಕ ಶಾಸ್ತ್ರೀಯ ಸಂಗೀತದ ಸರಳೆ, ಜಂಟಿಸರಳೆ, ದಾಟುವರಸೆ, ಅಲಂಕಾರಗಳನ್ನು ಉರು ಹೊಡೆಯಲಾರಂಭಿಸಿದ್ದೇ ತಡ, ಬಾಲಕ ವಿಠಲ ತಾಳಬದ್ಧವಾಗಿ ಹಾಡಲಾರಂಭಿಸಿದಾಗ ತಾಯಿಗೆ ಎಲ್ಲಿಲ್ಲದ ಪುಳಕ. ತನ್ನ ಕನಸು ನನಸಾಗುವುದರಲ್ಲಿ ಸಂಶಯವೇ ಇಲ್ಲ ಎಂಬ ಭಾವ ಈ ಹೆಂಗರುಳಿಗೆ. ಹಳ್ಳಿಯಲ್ಲಿ ಹೆಚ್ಚಿನ ಸಂಗೀತಾಭ್ಯಾಸಕ್ಕೆ ಅವಕಾಶವಿಲ್ಲದ ಕಾರಣ ವಿಠಲ, ತನ್ನ ಮಾವನ ಮುಖಾಂತರ ಶಿವಮೊಗ್ಗಕ್ಕೆ ಹೋಗಬೇಕಾಯಿತು. ಅಲ್ಲಿ ಹೊಸಹಳ್ಳಿ ವೆಂಕಟ್ರಾಮ್ ಅವರಿಂದ ಪಿಟೀಲು ತಾಲೀಮು ಶುರು. ಪಿಟೀಲಿನ ಎಳೆಎಳೆಯಲ್ಲೂ ಸಂಗೀತದ ರಾಗಾಲಾಪ, ಸ್ವರಪ್ರಸ್ತಾರ, ಚಿಟ್ಟೆಸ್ವರಗಳು ಮಾರ್ದನಿಸಿದ್ದು ನೋಡಿ ಗುರುಗಳಿಗೇ ಅಚ್ಚರಿ. ಇಂಥ ಪ್ರತಿಭೆಗೆ ಹೆಚ್ಚಿನ ಸಂಗೀತ ಮಾರ್ಗದರ್ಶನ ಬೇಕು ಎಂದೆನಿಸಿ ಈತನನ್ನು ದಿಗ್ಗಜರಾದ ಆರ್.ಆರ್. ಕೇಶವಮೂರ್ತಿ, ಟಿ. ರುಕ್ಮಿಣಿ ಅವರ ಬಳಿ ಸಂಗೀತದ ತಾಲೀಮಿಗೆ ಒಡ್ಡಿಕೊಳ್ಳುವಂತೆ ಮಾಡಿದರು.

1987ರಲ್ಲಿ ಒಮ್ಮೆ ಪಿಟೀಲು ವಿದ್ವಾಂಸ ಲಾಲ್‌ಗುಡಿ ಜಯರಾಮನ್ ಶಿವಮೊಗ್ಗಕ್ಕೆ ಬಂದಿದ್ದರು. ಅಲ್ಲಿ ನಡೆದ ಸಂಗೀತ ಸ್ಪರ್ಧೆಯಲ್ಲಿ ವಿಠಲ ಪಿಟೀಲು ನುಡಿಸಿದ್ದನ್ನು ಈ ವಿದ್ವಾಂಸರು ನೋಡಿ, ಕೇಳಿ ಬಹುಮಾನವನ್ನೂ ನೀಡಿ, ತಮ್ಮ ಶಿಷ್ಯನಾಗಿಸಿಕೊಂಡರು. ನಂತರದ ಪಿಟೀಲು ವಾದನ, ಕಲಿಕೆ ಎಲ್ಲವೂ ಚೆನ್ನೈಗೆ ಸ್ಥಳಾಂತರ. ವಿಠಲ ಅಂತರರಾಷ್ಟ್ರೀಯ ಮಟ್ಟದ ವಯೊಲಿನ್ ವಾದಕ, ಬೋಧಕ, ಸಂಪನ್ಮೂಲ ವ್ಯಕ್ತಿಯಾಗಿ ರೂಪುಗೊಂಡದ್ದೇ ಇಲ್ಲಿ.

ಘಟಾನುಘಟಿ ಕಲಾವಿದರಾದ ಎಂ. ಬಾಲಮುರಳಿಕೃಷ್ಣ, ನೈವೇಲಿ ಸಂತಾನಗೋಪಾಲನ್, ವಿಜಯಶಿವ, ಒ.ಎಸ್. ತ್ಯಾಗರಾಜನ್, ಟಿ.ಎನ್. ಶೇಷಗೋಪಾಲನ್, ಆರ್.ಕೆ. ಶ್ರೀಕಂಠನ್ ಮುಂತಾದವರ ಗಾಯನಕ್ಕೆ ಪಿಟೀಲು ಪಕ್ಕವಾದ್ಯ ನುಡಿಸಿದ್ದಲ್ಲದೆ ಈಗಿನ ಕಲಾವಿದರಾದ ಸುಧಾ ರಘುನಾಥನ್, ಟಿ.ಎಂ. ಕೃಷ್ಣನ್, ಸಂಜಯ್ ಸುಬ್ರಹ್ಮಣ್ಯ, ಬಾಂಬೆ ಜಯಶ್ರೀ ಮುಂತಾದವರಿಗೂ ಪಿಟೀಲು ಸಹಕಾರ ನೀಡಿದ್ದಾರೆ. ಅಮೆರಿಕ, ಇಂಗ್ಲೆಂಡ್, ಸಿಂಗಪುರ, ಮಲೇಷ್ಯಾಗಳಲ್ಲೂ ಇವರ ಪಿಟೀಲು ನಾದ ಅನುರಣಿಸಿದೆ.

ಗುರು–ಶಿಷ್ಯ ಸಂಬಂಧ

'ಸಂಗೀತದಲ್ಲಿ ಗುರು ಶಿಷ್ಯ ಪರಂಪರೆ ಪರಿಕಲ್ಪನೆ ಬಗ್ಗೆ ನನಗೆ ಅಪಾರ ನಂಬಿಕೆ. ಇದೇ ಪರಂಪರೆಯಲ್ಲಿ ಸಾವಿರಾರು ವಿದ್ಯಾರ್ಥಿಗಳಿಗೆ ಸಂಗೀತ ಕಲಿಸಿಕೊಡುತ್ತಿದ್ದೇನೆ. ದೇಶ ವಿದೇಶಗಳಲ್ಲಿ ಇವರ ಹಲವಾರು ವಿದ್ಯಾರ್ಥಿಗಳು ಇಂದು ಸಂಗೀತ ಕ್ಷೇತ್ರದಲ್ಲಿ ಮಿಂಚುತ್ತಿದ್ದಾರೆ. ಯೂರೋಪ್, ಅಮೆರಿಕದಿಂದ ಬಂದ ವಿದ್ಯಾರ್ಥಿಗಳು ಕೂಡ ಪಿಟೀಲಿನಲ್ಲಿ ಸಾಧನೆ ತೋರುತ್ತಿರುವುದು ಹೆಮ್ಮೆಯ ಸಂಗತಿ' ಎಂದು ಹೇಳುತ್ತಾರೆ ಈ ಸಾಧಕ.

'ನಮ್ಮ ಊರಿಗೆ ಏನಾದರೂ ಮಾಡಬೇಕು ಎಂಬ ಉದ್ದೇಶದಿಂದ ತಂಗಿ ರಾಜರಾಜೇಶ್ವರಿ ಅವರೊಡಗೂಡಿ ನಿಡ್ಲೆ ಸಮೀಪದ ಕರುಂಬಿತ್ತಿಲ್‌ನಲ್ಲಿ ಸಂಗೀತ ಶಿಬಿರವನ್ನು 20ಕ್ಕೂ ಹೆಚ್ಚು ವರ್ಷಗಳಿಂದ ಏರ್ಪಡಿಸುತ್ತಾ ಬಂದಿದ್ದೇನೆ. ಈಗ 250ಕ್ಕೂ ಹೆಚ್ಚು ಸಂಗೀತ ವಿದ್ಯಾರ್ಥಿಗಳು ಈ ಶಿಬಿರದಲ್ಲಿ ಭಾಗವಹಿಸುತ್ತಾರೆ. ಹಲವಾರು ಕಲಾವಿದರು ಇಲ್ಲಿ ಸಂಗೀತ ಪ್ರಾತ್ಯಕ್ಷಿಕೆ, ಕಛೇರಿ ನಡೆಸಿಕೊಟ್ಟಿದ್ದಾರೆ. ಹಳ್ಳಿಯ ಸಂಗೀತದ ಕಂಪು ಎಲ್ಲೆಡೆ ಆವರಿಸುತ್ತಿದೆ' ಎನ್ನುತ್ತಾರೆ ಅವರು.

ಮೈಸೂರಿನ ನಾದಬ್ರಹ್ಮ ಸಂಗೀತ ಸಭಾ ಹಾಗೂ ಪಿಟೀಲು ಚೌಡಯ್ಯ ಸಂಸ್ಮರಣ ವೇದಿಕೆ ಇದೇ ಜನವರಿ 19ರಂದು ವಿಠಲ ರಾಮಮೂರ್ತಿ ಅವರಿಗೆ 'ಧನುರ್ವೈಣಿಕ ಬ್ರಹ್ಮ' ಬಿರುದು ನೀಡಿ ಸನ್ಮಾನಿಸಲಿರುವುದು ಹೆಮ್ಮೆಯ ಸಂಗತಿ. ❖

ಸಂಗೀತದ ಪೋಷಣೆ

ಸ್ವರ ಲಯ ಸಾಧನಾ ಸಂಗೀತ ಸಂಸ್ಥೆಯು ಕಳೆದ ಮೂರು ವರ್ಷಗಳಿಂದ ಸಂಕ್ರಾಂತಿಯಂದು ಸಾಧಕರನ್ನು ಸನ್ಮಾನಿಸುವ, ಖ್ಯಾತ ಕಲಾವಿದರಿಂದ ಸಂಗೀತ ಕಛೇರಿ ಆಯೋಜಿಸುವ ಹಾಗೂ ಸಂಸ್ಥೆಯಲ್ಲಿ ಕಲಿಯುವ ಸಂಗೀತ ವಿದ್ಯಾರ್ಥಿಗಳಿಗೆ ಪ್ರತಿಭೆ ಅನಾವರಣಕ್ಕೆ ವೇದಿಕೆ ಒದಗಿಸುವ ಮೂಲಕ ಶಾಸ್ತ್ರೀಯ ಸಂಗೀತವನ್ನು ಉಳಿಸಿ ಬೆಳೆಸುವ ಕಾರ್ಯವನ್ನು ಮಾಡುತ್ತಾ ಬಂದಿದೆ ಎನ್ನುತ್ತಾರೆ ಸಂಸ್ಥೆಯ ರೂವಾರಿ ವಿದ್ವಾನ್ ವಿಶ್ವಾಸ್‌ಕೃಷ್ಣ.

ಸ್ವರ ಸಂಕ್ರಾಂತಿ ಕಾರ್ಯಕ್ರಮದ ಸಮಾರಂಭದಲ್ಲಿ ಸಾಧಕರಾದ ವಿದ್ವಾನ್ ನಾಗೇಶ್ ಎ. ಬಪ್ಪನಾಡು, ವಿದುಷಿ ಪ್ರತಿಭಾ ಸಾಮಗ, ವಿದ್ವಾನ್ ನಾರಾಯಣ ಶರ್ಮ ಯು.ಜಿ. ಇವರನ್ನೂ ಪುರಸ್ಕರಿಸಲಾಗುತ್ತದೆ.

ಸ್ವರ ಸಂಕ್ರಾಂತಿ

ಮಂಗಳೂರಿನ ಸ್ವರಲಯ ಸಾಧನಾ ಪ್ರತಿಷ್ಠಾನ ಜನವರಿ 15ರಂದು ಮಂಗಳೂರಿನ ಟೌನ್ ಹಾಲ್‌ನಲ್ಲಿ 'ಸ್ವರ ಸಂಕ್ರಾಂತಿ' ಉತ್ಸವ ಆಯೋಜಿಸಿದೆ. ಇದೇ ವೇಳೆ ಪಿಟೀಲಿನಲ್ಲಿ ವಿದ್ವಾನ್ ವಿಠಲ ರಾಮಮೂರ್ತಿ ಅವರಿಗೆ 'ಸ್ವರರತ್ನ ಪ್ರಶಸ್ತಿ' ನೀಡಿ ಸನ್ಮಾನಿಸಲಿದೆ. ಪಿಟೀಲು ವಿದ್ವಾಂಸರಾದ ಗಣೇಶ್-ಕುಮರೇಶ್ ಸಹೋದರರ ಜುಗಲ್‌ಬಂದಿ ನಡೆಯಲಿದೆ. ಮೃದಂಗದಲ್ಲಿ ಅನಂತ ಆರ್.ಕೃಷ್ಣನ್ ಹಾಗೂ ಖಂಜೀರದಲ್ಲಿ ಸುಂದರ್ ಕುಮಾರ್ ಸಹಕರಿಸುವರು.

ಋಚಿಯೂಟಕ್ಕೆ ಬರ್ತಾರೆ ಸಾರವಾಡಕ್ಕೆ

12ನೇ ಪುಟದಿಂದ...

ಸಾರವಾಡ ಸುಮಾರು ಐದಾರು ಸಾವಿರ ಜನಸಂಖ್ಯೆಯ ಸಣ್ಣ ಊರಾಗಿದೆ. ಅಲ್ಲಿ ಎಕ್ಸ್‌ಪ್ರೆಸ್ ಬಸ್ಸುಗಳ ಅಧಿಕೃತ ನಿಲುಗಡೆ ಇಲ್ಲ. ಆದರೂ ಬಹುತೇಕ ಬಸ್ಸುಗಳು ಅಲ್ಲಿ ನಿಂತೇ ಹೋಗುತ್ತವೆ. ಅದಕ್ಕೆ ಕಾರಣ ಅನಸೂಯಾ ಅಮ್ಮನವರ ಖಾನಾವಳಿಯ ಊಟದ ಆಕರ್ಷಣೆ. ಜನ ಇಲ್ಲಿ ಬರೀ ಉಂಡು ಹೋಗುವದಿಲ್ಲ; ಅದರ ರುಚಿಯನ್ನು ತಮ್ಮವರಿಗಾಗಿ ತೋರಿಸಲು, ಒಂದಿಷ್ಟು ಆಹಾರ ಪದಾರ್ಥಗಳನ್ನು ಕೊಂಡು-ಕಟ್ಟಿಸಿಕೊಂಡು ಹೋಗುತ್ತಾರೆ.

ವಿವಾಹ, ಹುಟ್ಟುಹಬ್ಬ, ಮುಂಜಿ ಮುಂತಾದ ವಿಶೇಷ ಕಾರ್ಯಕ್ರಮಗಳಿದ್ದರೆ, ಅವುಗಳಿಗಾಗಿ ಹೇಳಿದ ಅಡುಗೆಯನ್ನು ರುಚಿಕಟ್ಟಾಗಿ ಸಿದ್ಧಪಡಿಸಿಕೊಂಡು, ಹೇಳಿದ ಸ್ಥಳಕ್ಕೆ ತಂದು ಅಚ್ಚುಕಟ್ಟಾಗಿ ಬಡಿಸಿ ಹೋಗುವುದು ಈ ಖಾನಾವಳಿಯ ಇನ್ನೊಂದು ವಿಶೇಷ.

ಇಲ್ಲಿ ಮನೆಯವರು ಊಟ ಬಡಿಸುವಾಗ, ಇಷ್ಟೇ ಚಪಾತಿ/ರೊಟ್ಟಿ/ಅನ್ನ ಎಂದು ಲೆಕ್ಕ ಹಾಕುವುದಿಲ್ಲ. ಅನಸೂಯಾ ಅವರ ಖಾನಾವಳಿಯಲ್ಲೂ ಲೆಕ್ಕ ಹಾಕುವ ಪದ್ಧತಿ ಇಲ್ಲ. ಒಬ್ಬರು ಹೊಟ್ಟೆ ತುಂಬುವವರೆಗೆ ಎಷ್ಟು ಬೇಕಾದರೂ ಊಟ ಮಾಡಬಹುದು. ಹೆಚ್ಚು ಉಂಡರೆ ಹೆಚ್ಚು ಬೆಲೆ ಕೊಡಬೇಕಾಗಿಲ್ಲ. ಎಷ್ಟೇ ಊಟ ಮಾಡಿದರೂ, ಒಬ್ಬರ ಒಂದು ಊಟದ ಬೆಲೆ ಕೇವಲ 50 ರೂಪಾಯಿ.

ಊಟದಲ್ಲಿ ಒಂದು ಕಾಯಿಪಲ್ಲೆ, ಒಂದು ಕಾಳು ಪಲ್ಲೆ, ಮೊಸರು, ಚಟ್ನಿಪುಡಿ, ಉಪ್ಪಿನಕಾಯಿ... ಎಲ್ಲವೂ ಇರುತ್ತವೆ. ಮೂರು ಪ್ರಕಾರದ ರೊಟ್ಟಿಗಳು; ಬಿಸಿ ಬಿಳಿಜೋಳದ ರೊಟ್ಟಿ, ಕಟಿಯಾದ ಕಡಕ್ ರೊಟ್ಟಿ, ಸಜ್ಜೆ ರೊಟ್ಟಿ ಹಾಗೂ ಚಪಾತಿ, ಅನ್ನ-ಸಾರು ಕೂಡ ಸೇರಿಸುತ್ತವೆ. ಯಾವುದಕ್ಕೂ ಮಿತಿ ಇಲ್ಲ. ಇಲ್ಲಿ ಊಟ ಮಾಡುವವನ ಸಾಮರ್ಥ್ಯಕ್ಕಿಂತ ನೀಡುವವರ ಧಾರಾಳತನ ದೊಡ್ಡದು. ಇದರ ಜೊತೆಗೆ ಶೇಂಗಾ ಹೋಳಿಗೆ ಮುಂತಾದ ಸಿಹಿ ಕಜ್ಜಾಯಗಳೂ ಇರುತ್ತವೆ. ಅವು ಬೇಕಾದರೆ ಹೆಚ್ಚಿನ ಬೆಲೆ ನೀಡಬೇಕಾಗುತ್ತದೆ.

'ಇದೇನೂ ನಮ್ಮ ಕುಟುಂಬಕ್ಕೆ ಹೊಸ ಉದ್ದಿಮೆ-ವ್ಯವಹಾರ ಅಲ್ಲ. 1971ರಲ್ಲಿಯೇ ನಮ್ಮ ಹಿರಿಯರು, ಉಪಾಹಾರ ಗೃಹ ನಡೆಸಲು ಪರವಾನಗಿ ಪಡೆದಿದ್ದರು. ನಮ್ಮದು ಅದನ್ನು ಮುಂದುವರೆಸುತ್ತಿರುವ ಮೂರನೆಯ ತಲೆಮಾರು. ಈ ಮಧ್ಯ 20 ವರ್ಷ ನಮ್ಮ ವ್ಯವಹಾರ ನಿಂತಿತ್ತು. 2003ರಲ್ಲಿ ಮತ್ತೆ ನಾವು ಚಹಾದ ಅಂಗಡಿಯನ್ನು ಶುರುಮಾಡಿದೆವು. ಆಗ ನಾವು ಅದಕ್ಕೆ ಹಾಕಿದ ಬಂಡವಾಳ ಕೇವಲ 17 ರೂಪಾಯಿ. ಯಾಕೋ ನಮಗೆ ಹೋಟೆಲ್ ಉದ್ಯಮ ಸರಿ ಎನಿಸಲಿಲ್ಲ. ಆಮೇಲೆ ಖಾನಾವಳಿಯನ್ನು ಶುರುಮಾಡಿದೆವು. ನಿತ್ಯ ಬೆಳಿಗ್ಗೆ ಎಂಟು ಗಂಟೆಗೆ ನಮ್ಮಲ್ಲಿ ಊಟ ಪ್ರಾರಂಭವಾಗುತ್ತದೆ. ರಾತ್ರಿ 12ರವರೆಗೆ ನಡೆಯುತ್ತಲೇ ಇರುತ್ತದೆ. ಈಗ ಪ್ರತಿನಿತ್ಯ ಸುಮಾರು 500ರಿಂದ 600 ಜನರು ಊಟ ಮಾಡುತ್ತಾರೆ. ಅದಲ್ಲದೇ ಸುಮಾರು 400ರಿಂದ 500 ಊಟಗಳ ಪಾರ್ಸಲ್ ಕಟ್ಟಿಕೊಡುತ್ತೇವೆ' ಎಂದು ಅನಸೂಯಾಬಾಯಿ ಮುಚ್ಚುಮರೆಯಿಲ್ಲದೆ ವಹಿವಾಟಿನ ಲೆಕ್ಕ ಬಿಚ್ಚಿಟ್ಟರು.

ಹದಿನೈದು ಹೆಣ್ಣುಮಕ್ಕಳು ಮುಂಜಾನೆ 6ರಿಂದ ಸಂಜೆ 6ರ ವರೆಗೆ ಇಲ್ಲಿ ಅಡುಗೆ ಮಾಡುತ್ತಾರೆ. ನಾಲ್ವರು ಗಂಡುಮಕ್ಕಳು ಊಟ ಬಡಿಸುತ್ತಾರೆ. ಅಡುಗೆ ಸಿದ್ಧಪಡಿಸಲು ಕಟ್ಟಿಗೆಗಳನ್ನೇ ಬಳಸುತ್ತಾರೆ. ನಿತ್ಯ ಮೂವರು ಗಂಡಸರು ದಿನವಿಡೀ ಕಟ್ಟಿಗೆ ಒಡೆಯುತ್ತಾರೆ. ದಿನವೊಂದಕ್ಕೆ ಗಂಡಸರಿಗೆ ₹ 600 ಹಾಗೂ ಹೆಂಗಸರಿಗೆ ₹500 ಸಂಬಳ ಕೊಡುತ್ತಾರೆ.

'ಎಲ್ಲ ಕೆಲಸಗಾರರನ್ನು ನಾವು ಮನೆ ಮಕ್ಕಳಂತೆಯೇ ನೋಡಿಕೊಳ್ಳುತ್ತೇವೆ. ಅವರೂ ಹಾಗೆಯೇ ಮನೆ ಮಕ್ಕಳಂತೆಯೇ ಕೆಲಸ ಮಾಡುತ್ತಾರೆ' ಎಂಬ ಅನಸೂಯಾಬಾಯಿ ಅವರ ಉತ್ಸಾಹದ ನುಡಿಯೇ ಇಲ್ಲಿನವರ ಒಗ್ಗಟ್ಟಿಗೆ ಕನ್ನಡಿ ಹಿಡಿಯುತ್ತದೆ.

ಅರವತ್ತೆಂಟು ವರ್ಷ ವಯಸ್ಸಿನ ಅನಸೂಯಾ ಅವರದ್ದು ಬಾಲ್ಯವಿವಾಹ. ಮದ್ಯವ್ಯಸನಿ ಗಂಡ ಇದ್ದಂಥ ಪರಿಸ್ಥಿತಿಯಲ್ಲೂ ಅವರು ಮೆಟ್ರಿಕ್ ಪರೀಕ್ಷೆ ಕಟ್ಟಿ ಪಾಸಾಗಿದ್ದರು. ಆಗ ಅವರಿಗೆ ಮೂರು ಕಡೆಯಿಂದ ನೌಕರಿ ಮಾಡುವ ಅವಕಾಶಗಳು ಬಂದಿದ್ದವು. ಮನೆಯವರ ನಿರಾಕರಣೆಯಿಂದ ನೌಕರಿಗೆ ಹೋಗಲು ಆಗಿರಲಿಲ್ಲ. ಮುಂದೆ ಶಿಕ್ಷಣ ಮುಂದುವರೆಸಲೂ ಸಾಧ್ಯ ಆಗಿರಲಿಲ್ಲ. ಒಂದು ವೇಳೆ ಅವಕಾಶ ಸಿಕ್ಕಿದ್ದಿದ್ದರೆ ತಾವು ಜಿಲ್ಲಾಧಿಕಾರಿಯಾಗುತ್ತಿದ್ದುದಾಗಿ ಅನಸೂಯಾ ಹೇಳುವಾಗ ಅವರ ಕಣ್ಣಲ್ಲಿನ ಮಿಂಚನ್ನು ನೋಡಬೇಕು. ಅದಕ್ಕಾಗಿ ಈಗ ಅವರಿಗೆ ಯಾವ ಹಳಹಳಿಕೆಯೂ ಇಲ್ಲ. 'ಈಗ ಹೊಟ್ಟೆತುಂಬ ಊಟ ಹಾಕುವ ಹಾಗೂ ಉಂಡ ಜನರ ಮುಖದ ಮೇಲಿನ ಸಂತೃಪ್ತಿಯನ್ನು ನೋಡುವ ಭಾಗ್ಯ ನನ್ನದಾಗಿದೆ' ಎನ್ನುತ್ತಾರೆ.



ಖಾನಾವಳಿಯಲ್ಲಿ ಗ್ರಾಹಕರು

ಅನಸೂಯಾ ಈಗ ಕೋಟ್ಯಂತರ ರೂಪಾಯಿ ಮೌಲ್ಯದ ಆಸ್ತಿಯ ಒಡೆಯರೇನೂ ಅಲ್ಲ. ಆದರೂ ಅವರು ಈವರೆಗೆ ಖಾನಾವಳಿ ನಡೆಸಲು ಖರೀದಿಸಿದ ದಿನಸಿ ಸಾಮಾನುಗಳ ಮೊತ್ತವೇ ₹70 ಕೋಟಿಯಷ್ಟಾಗಿದೆ ಎಂದು, ಅದರ ಲೆಕ್ಕ ಇಟ್ಟಿರುವ ಸಾರವಾಡದ ಕಿರಾಣಿ ವ್ಯಾಪಾರಿ ಹೇಳುವುದನ್ನು ಕೇಳಿದರೆ ಹುಬ್ಬೇರೀತು.

ಪ್ರತಿದಿನ ಸುಮಾರು 5 ಸಾವಿರ ರೊಟ್ಟಿ, ಒಂದು ಕ್ವಿಂಟಲ್ ಗೋಧಿ, ಅರ್ಧ ಕ್ವಿಂಟಲ್ ಅಕ್ಕಿ ಹಾಗೂ 40-45 ಲೀಟರ್ ಮೊಸರು ಖರ್ಚಾಗುತ್ತದೆ. ಮೊದಮೊದಲು ಒಂದು ಹಿಂದೆ ಊಟಕ್ಕೆ ₹12 ರೂಪಾಯಿ ತೆಗೆದುಕೊಳ್ಳುತ್ತಿದ್ದರು. ಮುಂದೆ ಅದು 20, 30, 40 ರೂಪಾಯಿ ಆಗಿ, ಈಗ ₹50ಕ್ಕೆ ಬಂದಿದೆ.



ಸಮಾರಂಭಗಳಿಗೆ ಐದಾರು ಸಾವಿರ ಜನರಿಗೆ ಅಡುಗೆ ಮಾಡಿ ಕಳುಹಿಸಲು ಬೇಕಾಗುವ ಸಿಬ್ಬಂದಿ, ಪರಿಕರಗಳನ್ನು ಕೂಡ ಅನಸೂಯಾ ಒಟ್ಟುಗೂಡಿಸಿಕೊಂಡಿದ್ದಾರೆ. ಇದಕ್ಕಾಗಿ ವಾಹನದ ಅವಶ್ಯಕತೆ ಇರುತ್ತದೆ. ಅದರ ವೆಚ್ಚವನ್ನು ಕಾರ್ಯಕ್ರಮ ಮಾಡುವವರು ಭರಿಸಬೇಕಾಗುತ್ತದೆ. ❖



ಮಡಿಕೇರಿಯ ಕೆ.ಎನ್.ಶಿವಪ್ರಸಾದ್ ಭಟ್ ಅವರ ಬಳಿ ಇರುವ ನೋಟುಗಳ ಸಂಗ್ರಹ

ನೋಟು, ನಾಣ್ಯ ಸಂಗ್ರಹದ ಮೂರನೇ ತಲೆಮಾರು

ಕೆ.ಎಸ್.ಗಿರೀಶ

ಹವ್ಯಾಸ

> **“ ಕೆ.ಎನ್.ಶಿವಪ್ರಸಾದ್ ಭಟ್ ಅವರ ಬಳಿ ವಿದೇಶಿ ನೋಟುಗಳ ಅತ್ಯುತ್ತಮ ಸಂಗ್ರಹ ಇದೆ. ನಮ್ಮ ವಸ್ತು ಸಂಗ್ರಹಾಲಯದಲ್ಲಿ ಅದರ ಪ್ರದರ್ಶನ ಇರಿಸಿದ್ದೆವು. ಇಂತಹ ಉತ್ತಮ ಹವ್ಯಾಸವನ್ನು ಎಲ್ಲರೂ ಬೆಳೆಸಿಕೊಳ್ಳಬೇಕು. ”**
> **ಬಿ.ಪಿ.ರೇಖಾ,** ಸರ್ಕಾರಿ ವಸ್ತು ಸಂಗ್ರಹಾಲಯದ ಕ್ಯೂರೇಟರ್.

ವೃತ್ತಿಯಲ್ಲಿ ಪತ್ರಿಕಾ ವಿತರಕ. ಪ್ರವೃತ್ತಿಯಲ್ಲಿ ವಿದೇಶಿ ನೋಟು ಸಂಗ್ರಾಹಕ. ಈಚೆಗೆ ಮಡಿಕೇರಿಯ ಸರ್ಕಾರಿ ವಸ್ತುಸಂಗ್ರಹಾಲಯದಲ್ಲಿ ನಡೆದ ಪ್ರಾಚೀನ ನಾಣ್ಯಗಳು, ವಿದೇಶಿ ನೋಟುಗಳ ಮತ್ತು ಅಂಚೆ ಚೀಟಿಗಳ ಪ್ರದರ್ಶನವು ಇವರ ಅಪರೂಪದ ಪ್ರತಿಭೆಯನ್ನು ಅನಾವರಣಗೊಳಿಸಿತು.

ಮಡಿಕೇರಿಯ ಹಿಲ್‌ರೋಡ್ ನಿವಾಸಿಯಾಗಿರುವ ಕೆ.ಎನ್.ಶಿವಪ್ರಸಾದ್ ಭಟ್ ಅವರು ಪತ್ರಿಕಾ ವಿತರಕರಾಗಿ ಹಾಗೂ ತಮ್ಮ ಪತ್ನಿಯೊಡಗೂಡಿ ನಡೆಸುವ ಪುಟ್ಟದಾದ 'ಗೌರಿಕೃಪ' ಮೆಸ್‌ನಿಂದ ಮಾತ್ರವೇ ಚಿರಪರಿಚಿತರಾಗಿದ್ದರು. ಆದರೆ, ಈ ಪ್ರದರ್ಶನಕ್ಕೆ ಬಂದ ಸಾರ್ವಜನಿಕರು, ಇವರ ಸ್ನೇಹಿತರು, ಪತ್ರಕರ್ತರು ಮಾತ್ರವಲ್ಲ; ವಿದೇಶಿ ಪ್ರವಾಸಿಗರೂ ಇವರ ಬಳಿ ಇದ್ದ ನೋಟುಗಳನ್ನು ಕಂಡು ಒಂದರೆಕ್ಷಣ ಅವಾಕ್ಕಾದರು. ಏಕೆಂದರೆ, ಇವರ ಬಳಿ ಇದ್ದುದು ಕೇವಲ ಹತ್ತಾರು ದೇಶಗಳ ನೋಟುಗಳಲ್ಲ, ಬರೋಬರಿ 185 ದೇಶಗಳ ನೋಟುಗಳು ಹಾಗೂ 60 ದೇಶಗಳ ನಾಣ್ಯಗಳು; ಅದೂ ಮೂರು ತಲೆಮಾರಿನವು!



ಕೆ.ಎನ್.ಶಿವಪ್ರಸಾದ್ ಭಟ್

ನೋಟು ಹಾಗೂ ನಾಣ್ಯ ಸಂಗ್ರಹದಲ್ಲಿ ಇವರದು ಮೂರನೇ ತಲೆಮಾರು. ಇವರ ತಾತ ಈಶ್ವರ ಭಟ್ ಹಾಗೂ ತಂದೆ ಕೆ.ನಾರಾಯಣ ಭಟ್ ಅವರೂ ನಾಣ್ಯ ಹಾಗೂ ಹಳೆಯ ನೋಟುಗಳನ್ನು ಸಂಗ್ರಹ ಮಾಡುತ್ತಿದ್ದರು. ಅವರ ಹವ್ಯಾಸವನ್ನು ಮುಂದುವರಿಸಿದ ಶಿವಪ್ರಸಾದ್ ಭಟ್ ಒಂದೊಂದೇ ದೇಶಗಳ ನೋಟುಗಳನ್ನು ತಮ್ಮ ಸಂಗ್ರಹದ ಭಂಡಾರಕ್ಕೆ ಸೇರ್ಪಡೆಗೊಳಿಸುತ್ತಿದ್ದಾರೆ. ಮೆಸ್‌ನಲ್ಲಿ ಊಟಕ್ಕೆ ಬರುವ ವಿದೇಶಿ ಪ್ರವಾಸಿಗರಿಗೆ ತಮ್ಮ ಸಂಗ್ರಹ ತೋರಿಸಿದರೆ ಸಾಕು, ಅವರು ತಮ್ಮ ದೇಶದ ನೋಟುಗಳನ್ನು ನೀಡಿ ಪ್ರೋತ್ಸಾಹಿಸುವುದೂ ಉಂಟು.

ತಮ್ಮ ಪಾಡಿಗೆ ತಾವು ವಿದೇಶಿ ನೋಟುಗಳನ್ನು ಹಾಗೂ ನಾಣ್ಯಗಳನ್ನು ಸಂಗ್ರಹಿಸಿಕೊಂಡು ಇರುತ್ತಿದ್ದ ಶಿವಪ್ರಸಾದ್ ಭಟ್ ಅವರು ಸಾರ್ವಜನಿಕವಾಗಿ ಪ್ರದರ್ಶನ ಏರ್ಪಡಿಸಿದ್ದು ತೀರಾ ಕಡಿಮೆ. ಮೂರು ವರ್ಷಗಳ ಹಿಂದೆ ಬ್ರಾಹ್ಮಣರ ಸಂಘದ ವತಿಯಿಂದ ಲಕ್ಷ್ಮೀನರಸಿಂಹ ಕಲ್ಯಾಣಮಂಟಪದಲ್ಲಿ ನಡೆದ ಸಭೆಯೊಂದರಲ್ಲಿ ಪ್ರದರ್ಶನ ಏರ್ಪಡಿಸಿದ್ದರು. ಕೆಲಕಾಲದ ಹಿಂದೆ ಬಾಲಭವನದಲ್ಲಿ ಮಕ್ಕಳಿಗೆ ತಮ್ಮಲ್ಲಿರುವ ಸಂಗ್ರಹದ ಆಲ್ಬಂ ತೋರಿಸಿದ್ದು ಬಿಟ್ಟರೆ ಹೆಚ್ಚಿನ ಪ್ರದರ್ಶನ ನೀಡಿಲ್ಲ.

ಇವರ ತಂದೆ ಕೆ. ನಾರಾಯಣ ಭಟ್ ಅವರು ಹಿಲ್‌ರೋಡ್‌ನಲ್ಲಿ 'ಗೌರಿಕೃಪ' ಮೆಸ್ ನಡೆಸುತ್ತಿದ್ದರು. 23 ವರ್ಷಗಳ ಹಿಂದೆ ಅವರು ನಿಧನರಾದರು. ಬಳಿಕ ಅವರ ಪತ್ನಿ ಕೆ.ಎಸ್.ವಿದ್ಯಾಸರಸ್ವತಿ ಅವರು ಮೆಸ್‌ನ ಉಸ್ತುವಾರಿ ವಹಿಸಿಕೊಂಡರು. ಶಿವಪ್ರಸಾದ್ ಭಟ್ ಅವರು ಬೆಳಿಗ್ಗೆ ಪತ್ರಿಕಾ ವಿತರಣಾ ಕಾರ್ಯ ಮುಗಿದ ಬಳಿಕ ಮೆಸ್‌ನ ಕಾರ್ಯಚಟುವಟಿಕೆಗಳಲ್ಲಿ ಭಾಗಿಯಾಗುತ್ತಾರೆ. ನೋಡುವುದಕ್ಕೆ ಈ ಮೆಸ್ ಚಿಕ್ಕದಾಗಿದ್ದರೂ ಮಜ್ಜಿಗೆಹುಳಿಗೆ ಮಡಿಕೇರಿಯಲ್ಲಿ ಜನಪ್ರಿಯ.

ಇವರ ಬಳಿ ಪಾಕಿಸ್ತಾನ, ಶ್ರೀಲಂಕಾ, ಇರಾನ್, ಇರಾಕ್, ಬಾಂಗ್ಲಾದೇಶ, ನೇಪಾಳ, ಬರ್ಮಾ, ಬ್ರೆಜಿಲ್, ಇಂಗ್ಲೆಂಡ್, ಅಮೆರಿಕ, ಆಸ್ಟ್ರೇಲಿಯಾ, ವೆಸ್ಟ್‌ಇಂಡೀಸ್, ನಿಕರ ಗುವಾ, ತಾಂಜಾನಿಯಾ, ಕೆನಡಾ, ಗಯಾನ ಸೇರಿದಂತೆ ವಿವಿಧ ದೇಶಗಳ ನೋಟುಗಳಿವೆ. ಸರ್ಕಾರಿ ವಸ್ತುಸಂಗ್ರಹಾಲಯದಲ್ಲಿ ಏರ್ಪಡಿಸಿದ್ದ ಪ್ರದರ್ಶನದ ವೇಳೆ ಭೇಟಿ ನೀಡಿದ ವಿದೇಶ ಪ್ರವಾಸಿಗರೂ ಇವರ ಸಂಗ್ರಹ ಕಂಡು ಚಕಿತಗೊಂಡರು. ತಮ್ಮ ದೇಶದಲ್ಲಿ ಹತ್ತಾರು ದಶಕಗಳ ಹಿಂದೆ ಇಂತಹ ನೋಟುಗಳಿದ್ದವೇ ಎಂದು ವಿಸ್ಮಿತರಾದರು.

'ಈ ಹವ್ಯಾಸ ನನಗೆ ಪರಂಪರೆಯಿಂದ ಬಂದಿದ್ದು. ನಮ್ಮ ತಾತ ಈಶ್ವರ ಭಟ್ ಹಾಗೂ ತಂದೆ ಕೆ. ನಾರಾಯಣ ಭಟ್ ಅವರ ನಾಣ್ಯ ಹಾಗೂ ಹಳೆಯ ನೋಟುಗಳ ಸಂಗ್ರಹ ಕಾರ್ಯ ಮುಂದುವರಿಸಿರುವೆ. ಇನ್ನು ಮುಂದೆ ಶಾಲಾ ಕಾಲೇಜುಗಳಲ್ಲಿ ಪ್ರದರ್ಶನ ಏರ್ಪಡಿಸಿ ಮಕ್ಕಳು ಒಳ್ಳೆಯ ಹವ್ಯಾಸ ಬೆಳೆಸಿಕೊಳ್ಳಲು ತಿಳಿಹೇಳುವ ಉದ್ದೇಶ ಹೊಂದಿದ್ದೇನೆ' ಎನ್ನುತ್ತಾ ಶಿವಪ್ರಸಾದ್ ಭಟ್ ತಮ್ಮ ಎಂದಿನ ಕೆಲಸದಲ್ಲಿ ನಿರತರಾದರು. ❖

ಮುನ್ನೋಟ 14-01-2024 ರಿಂದ 20-01-2024

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — **ಅಶ್ವಿನಿ, ಭರಣಿ, ಕೃತ್ತಿಕಾ 1**
ನಾನೇ ಬುದ್ಧಿವಂತನೆಂಬ ಮನೋಭಾವ ನಿಮ್ಮಲ್ಲಿ ಇರುತ್ತದೆ, ಇದನ್ನು ಮನಸ್ಸಿನಿಂದ ತೆಗೆದು ಹಾಕಿರಿ. ಧನ ಆದಾಯವು ಅಗತ್ಯವನ್ನು ಪೂರೈಸುತ್ತದೆ. ನಿಮ್ಮ ನಡವಳಿಕೆಗಳಿಂದ ಹಿರಿಯರ ಮನಸ್ಸನ್ನು ಗೆಲ್ಲುವ ಪ್ರಯತ್ನ ಮಾಡುವಿರಿ. ಕೃಷಿ ಭೂಮಿಯನ್ನು ಖರೀದಿ ಮಾಡಬಹುದು. ಪಶು ಸಾಕಾಣಿಕೆ ಮಾಡುವವರಿಗೆ ಆದಾಯ ಹೆಚ್ಚುತ್ತದೆ. ವಿದ್ಯಾರ್ಥಿಗಳಿಗೆ ಹೆಚ್ಚಿನ ಯಶಸ್ಸು ಸಿಗುತ್ತದೆ.

ವೃಷಭ — **ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2**
ಮನಸ್ಸಿನಲ್ಲಿ ಸ್ಥಿರತೆ ಇರುತ್ತದೆ. ಸಂಸಾರದಲ್ಲಿ ಹಿರಿಯರ ಕೋಪವನ್ನು ಕಾಣಬಹುದು. ಸಂಗಾತಿಯ ಆರೋಗ್ಯದಲ್ಲಿ ಸ್ವಲ್ಪ ವ್ಯತ್ಯಾಸಗಳಾಗಬಹುದು. ತಂದೆಯಿಂದ ಸಾಂಪ್ರದಾಯಿಕ ಕೃಷಿಯ ಬಗೆಗಿನ ತಿಳಿವಳಿಕೆಯನ್ನು ಪಡೆಯಬಹುದು. ವಾಹನ ದುರಸ್ತಿ ಮಾಡುವವರಿಗೆ ಹೆಚ್ಚು ಸಂಪಾದನೆ ಆಗುತ್ತದೆ. ಕ್ರೀಡಾಪಟುಗಳಿಗೆ ಸರ್ಕಾರದಿಂದ ಸಿಗುತ್ತಿದ್ದ ಪ್ರೋತ್ಸಾಹ ಸ್ವಲ್ಪ ಕಡಿಮೆ ಆಗುತ್ತದೆ.

ಮಿಥುನ — **ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3**
ನಿಮ್ಮ ಬಗ್ಗೆ ನಿಮಗೆ ಒಂದು ರೀತಿ ಹೆಮ್ಮೆ ಇರುತ್ತದೆ. ಧನ ಆದಾಯವು ಸಾಮಾನ್ಯ ಗತಿಯಲ್ಲಿರುತ್ತದೆ. ನಿಮ್ಮೆಲ್ಲಾ ಕಾರ್ಯಗಳಿಗೆ ಸಂಗಾತಿಯ ಸಹಕಾರ ದೊರೆಯುತ್ತದೆ. ಆಸ್ತಿ ಕೊಳ್ಳುವ ವಿಚಾರದಲ್ಲಿ ಮುಂದುವರೆಯುವುದು ಬೇಡ. ವಿದ್ಯಾರ್ಥಿಗಳಿಗೆ ಮಧ್ಯಮ ಫಲಿತಾಂಶವಿರುತ್ತದೆ. ಕೃಷಿಯೊಂದಿಗೆ ಪಶು ಸಾಕಾಣಿಕೆ ಲಾಭವನ್ನು ತರುತ್ತದೆ. ವಾಹನಗಳನ್ನು ರಿಪೇರಿ ಮಾಡುವವರಿಗೆ ಹೆಚ್ಚು ಸಂಪಾದನೆಯಾಗುತ್ತದೆ.

ಕಟಕ — **ಪುನರ್ವಸು 4 ಪುಷ್ಯ, ಆಶ್ಲೇಷ**
ಮನಸ್ಸಿನಲ್ಲಿ ಬಹಳಷ್ಟು ದ್ವಂದ್ವಗಳಿರುತ್ತವೆ. ನಿರ್ಧಾರಿತ ಕೆಲಸಗಳನ್ನು ಕೈಗೊಳ್ಳಲು ಹಿಂಜರಿಯುವಿರಿ. ಸರ್ಕಾರಿ ಸಹಾಯಧನ ಬರುವುದು ನಿಧಾನವಾಗಬಹುದು. ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಹೆಚ್ಚಿನ ಯಶಸ್ಸು ಲಭಿಸುತ್ತದೆ. ಬಂಧುಗಳಿಗೆ ಸಾಲ ಕೊಟ್ಟರೆ ವಾಪಸ್ಸು ಬರುವುದಿಲ್ಲ. ಸಂಗಾತಿಯ ವ್ಯತಿರಿಕ್ತ ನಡವಳಿಕೆಗಳು ನಿಮಗೆ ಜಿಗುಪ್ಸೆ ಹುಟ್ಟಿಸುತ್ತದೆ.

ಸಿಂಹ — **ಮಘಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1**
ಆತ್ಮಗೌರವ ಸ್ವಲ್ಪ ಜಾಸ್ತಿ ಇರುತ್ತದೆ. ನಿಮ್ಮ ನಡವಳಿಕೆಯಲ್ಲಿ ನಿಮ್ಮ ಸಂಗಾತಿಯ ಛಾಯೆ ಎದ್ದು ಕಾಣುತ್ತದೆ. ಆಸ್ತಿ ಖರೀದಿಗಾಗಿ ಈಗ ಹಣ ಒಟ್ಟು ಮಾಡಬಹುದು. ಗಣಿತ ವಿದ್ಯಾರ್ಥಿಗಳಿಗೆ ಹೆಚ್ಚಿನ ಯಶಸ್ಸು ಇರುತ್ತದೆ. ಸಂಗಾತಿಗೆ ಮೂಳೆ ನೋವು ಕಾಣಿಸಬಹುದು. ವಿದೇಶದಲ್ಲಿ ಕೆಲಸಮಾಡುತ್ತಿರುವವರಿಗೆ ಕೆಲಸದ ಬಗ್ಗೆ ಅನುಮಾನ ಉಂಟಾಗಬಹುದು.

ಕನ್ಯಾ — **ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2**
ದೈವ ಭಕ್ತಿ ಬಹಳ ಜಾಸ್ತಿ ಆಗುತ್ತದೆ. ನಿಮ್ಮ ಚಟುವಟಿಕೆಗಳಿಂದ ಹಣ ಸಂಪಾದನೆ ಮಾಡಬಹುದು. ಸ್ವಯಂ ಉದ್ಯೋಗ ಮಾಡುವವರಿಗೆ ಹೆಚ್ಚಿನ ಹಣ ಸಂಪಾದನೆ ಮಾಡುವ ಯೋಗವಿದೆ. ನಿಮ್ಮ ಚಟುವಟಿಕೆಗಳಲ್ಲಿ ಚುರುಕುತನವನ್ನು ಕಾಣಬಹುದು. ಮಹಿಳೆಯರಿಂದ ನಿಮಗೆ ಹೆಚ್ಚಿನ ಸಹಕಾರಗಳು ದೊರೆಯುತ್ತವೆ. ಸ್ಥಿರಾಸ್ತಿ ಮಾಡಿಕೊಳ್ಳಲು ಕಾಲ ಪಕ್ವವಾಗಿದೆ.

ತುಲಾ — **ಚಿತ್ತಾ 3,4 ಸ್ವಾತಿ, ವಿಶಾಖಾ 1,2,3**
ನಿಮ್ಮಲ್ಲಿ ಅತಿಯಾದ ಆತ್ಮಗೌರವ ಇರುತ್ತದೆ, ಇದು ನಿಮ್ಮಿಂದ ಕೆಲವರನ್ನು ದೂರ ಮಾಡಬಹುದು. ಬೇರೆಯವರನ್ನು ಮಟ್ಟಹಾಕಲು ನೀವು ಬಳಸುವ ತಂತ್ರಗಳು ಅವರಿಗೆ ತಿಳಿದು ಅದನ್ನು ಅವರೇ ನಿಮ್ಮ ಮೇಲೆ ಪ್ರಯೋಗ ಮಾಡುವರು. ಕೃಷಿ ಭೂಮಿಯನ್ನು ಖರೀದಿ ಮಾಡುವ ಯೋಗವಿದೆ. ಕೃಷಿಕರಿಗೆ ಆದಾಯ ಹೆಚ್ಚುತ್ತದೆ. ಆಹಾರ ವ್ಯತ್ಯಾಸಗಳಿಂದ ಅನಾರೋಗ್ಯ ಉಂಟಾಗಬಹುದು.

ವೃಶ್ಚಿಕ — **ವಿಶಾಖಾ 4 ಅನೂರಾಧ, ಜ್ಯೇಷ್ಠ**
ವ್ಯಾಪಾರ ವ್ಯವಹಾರಗಳಲ್ಲಿ ಸಾಕಷ್ಟು ಹಿಡಿತ ಸಾಧಿಸುವಿರಿ. ಅದಿರು ಉತ್ಪಾದಕರಿಗೆ ಹೆಚ್ಚಿನ ಬೇಡಿಕೆ ಬರುತ್ತದೆ. ಧನ ಆದಾಯವು ನಿರೀಕ್ಷಿತ ಮಟ್ಟಕ್ಕೆ ಇರುತ್ತದೆ. ಕೃಷಿಯಿಂದ ಆದಾಯ ಬರುವ ಸಾಧ್ಯತೆ ಇದೆ. ಆಹಾರ ವಸ್ತುಗಳನ್ನು ತಯಾರಿಸುವವರಿಗೆ ಆದಾಯವು ಹೆಚ್ಚುತ್ತದೆ. ಶತ್ರುಗಳನ್ನು ಮಣಿಸಲು ಹೊಸ ತಂತ್ರಗಳನ್ನು ಹೂಡುವಿರಿ. ಕೆಲವು ರಾಜಕಾರಣಿಗಳಿಗೆ ಮನಸ್ಸಿನಲ್ಲಿ ಇದ್ದ ಗೊಂದಲಗಳು ದೂರವಾಗುತ್ತವೆ.


ಧನುಸ್ಸು — **ಮೂಲಾ, ಪೂರ್ವಾಷಾಢ, ಉತ್ತರಾಷಾಢ 1**
ಸರ್ಕಾರಿ ಉದ್ಯೋಗದಲ್ಲಿರುವವರಿಗೆ ಗೌರವ ಹೆಚ್ಚುತ್ತದೆ. ಹೆಚ್ಚು ಬುದ್ಧಿವಂತಿಕೆಯಿಂದ ನಿಮ್ಮ ಕೆಲಸ ಕಾರ್ಯಗಳನ್ನು ಸಾಧಿಸಿಕೊಳ್ಳುವಿರಿ. ಸಾಂಪ್ರದಾಯಿಕ ಕೃಷಿಯಲ್ಲಿ ಹೆಚ್ಚು ಆಸಕ್ತಿ ಮೂಡುತ್ತದೆ. ತಾಯಿಯ ಜೊತೆಯಲ್ಲಿ ವಾಗ್ವಾದಗಳಾಗಬಹುದು. ವಿದ್ಯಾರ್ಥಿಗಳಿಗೆ ಅವರ ಶ್ರಮಕ್ಕಿಂತ ಹೆಚ್ಚಿನ ಯಶಸ್ಸು ದೊರೆತು ಸಂತಸವಾಗುತ್ತದೆ. ಸಂಗಾತಿ ಆರೋಗ್ಯದ ಬಗ್ಗೆ ಗಮನವಿರಲಿ.

ಮಕರ — **ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2**
ನಯವಾಗಿ ಮಾತನಾಡಿ ಜನರ ಮನಸ್ಸನ್ನು ಗೆಲ್ಲುವಿರಿ. ಕೆಲವೊಂದು ನಿಧಾನ ನಿರ್ಧಾರಗಳು ಕೆಲವು ಕೆಲಸಗಳನ್ನು ನಿಲ್ಲಿಸುವಂತೆ ಮಾಡುತ್ತವೆ. ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶ ಇರುತ್ತದೆ. ನರ ದೌರ್ಬಲ್ಯ ಅಥವಾ ಕಣ್ಣಿನತೊಂದರೆ ಇರುವವರು ಈಗ ಹೆಚ್ಚು ಎಚ್ಚರ ವಹಿಸಿರಿ. ಸಂಗಾತಿಯಿಂದ ಧನಸಹಾಯವನ್ನು ನಿರೀಕ್ಷೆ ಮಾಡಬಹುದು. ಹಿರಿಯರಿಗಾಗಿ ಹಣ ಖರ್ಚು ಮಾಡುವಿರಿ.

ಕುಂಭ — **ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3**
ಮನಸ್ಸಿನಲ್ಲಿ ಒಂದು ರೀತಿಯ ಪ್ರಶಾಂತತೆ ಇರುತ್ತದೆ. ವಿದೇಶಿ ಕಂಪನಿಗಳಲ್ಲಿ ಕೆಲಸ ಮಾಡುವವರಿಗೆ ವೇತನ ಹೆಚ್ಚಳವಾಗಬಹುದು. ಹಿರಿಯರಿಗೆ ಅವರ ನಡವಳಿಕೆಯಿಂದ ಗೌರವ ಬರು ತ್ತದೆ. ಕೆಲವರಿಗೆ ವೃತ್ತಿಯಲ್ಲಿ ಹಿರಿಯ ಮಹಿಳಾ ಅಧಿಕಾರಿಗಳು ಸಹಾಯ ಮಾಡುವರು. ಅದಿರನ್ನು ಬಳಸಿ ಕಚ್ಚಾ ಲೋಹವನ್ನು ತಯಾರಿಸುವವರಿಗೆ ಬೇಡಿಕೆ ಹೆಚ್ಚುತ್ತದೆ. ಲೆಕ್ಕಪರಿಶೋಧಕರಿಗೆ ಹೆಚ್ಚು ಕೆಲಸ ದೊರೆಯುತ್ತದೆ.

ಮೀನ — **ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ**
ಅತ್ಯಂತ ಕೋಪವನ್ನು ಪ್ರದರ್ಶಿಸುವಿರಿ. ಹಣದ ಒಳಹರಿವು ನಿಮ್ಮ ಅಗತ್ಯವನ್ನು ಪೂರೈಸುವಷ್ಟು ಇರುತ್ತದೆ. ಬಣ್ಣದ ಮಾತುಗಳನ್ನು ಆಡಿ ಜನರಿಂದ ಕೆಲಸ ತೆಗೆಯುವಿರಿ. ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವವರಿಗೆ ಅವರ ಸಂಸ್ಥೆಯ ಮೂಲಕ ನಿವೇಶನ ಪಡೆಯುವ ಯೋಗವಿದೆ. ಸರ್ಕಾರಿ ಉದ್ಯೋಗಿಗಳಿಗೆ ಸ್ವಲ್ಪಮಟ್ಟಿನ ಹಿನ್ನಡೆ ಇರುತ್ತದೆ. ಹರಿತವಾದ ಆಯುಧಗಳನ್ನು ಉಪಯೋಗಿಸುವಾಗ ಎಚ್ಚರ ಇರಲಿ.

ಪದಬಂಧ 2824



ಮೇಲಿನಿಂದ ಕೆಳಕ್ಕೆ
1. ಸೂರ್ಯನ ಮಕರ ಪ್ರವೇಶ ತರುವ ಹಬ್ಬ 3
2. ನೋವನ್ನು ಇಲ್ಲದಂತೆ ಮಾಡುವವ 4
3. ಚೌಕಗಳಲ್ಲಿ ಸೆರೆಯಾಗಿರುವ ಶಬ್ದಗಳನ್ನು ಬಿಡಿಸುವ ವಾರದಾಟವನ್ನು ಪ್ರೀತಿಸುವವ 6
4. ಸರದಂತೆ ಸರಾಗ ಸುಲಭ 3
7. ಪದಬಂಧ ಬಿಡಿಸಲು ಬಿಡುವಿನ ಈ ದಿನ 4
10. ರಾಮ ರಹೀಮರನ್ನು ಏಕವಾಗಿ ಕಂಡ ದೋಹೆಗಳ ಶ್ರೇಷ್ಠ 5
12. ರಾಮನಿಗೆ ನೆರವಾದ ಕೋತಿಗಳ ದಂಡು 6
14. ಅಚಲವಾದ ಕೊಡುಗೈ ಕುಂಜ 4
16. ಪೊಲೀಸ್ ದಾಖಲೆಗಳ ಪ್ರಕಾರ ನಡೆದ “ಅಧ್ಯಾಯ” ಕೆಳಗಿಂದ ಮೇಲೆ 4
17. ರಘುವಂಶದ ರಾಮನ ಹೆಸರು 3
19. ನೀರಿನ ಅಪಾರ ಸಂಗ್ರಹ ಸಾಗರಕ್ಕೊಂದು ಹೆಸರು 3

ಎಡದಿಂದ ಬಲಕ್ಕೆ
1. ಹನುಮನೆತ್ತಿದ ಜೀವ ಕೊಡುವ ಪರ್ವತ 4
3. ಕೆಣಕಿ ನಗುವ ರೀತಿ ಇದು 4
5. ಕೋರ್ಟಿನಲ್ಲಿ ಮಂಡಿಸುವ ತರ್ಕ ವಿತರ್ಕ 5
6. ಅಂಗೀಕರಿಸದೆ ಪಕ್ಕಕ್ಕೆ ನೂಕುವಿಕೆ 4
8. ವ್ಯಾಪಾರಕ್ಕೆ ಹಾಕುವ ಹಣ 4
9. ಮದುವೆ ಹೆಣ್ಣಿನ ನೆಂಟ 5
11. ರಾಮಮಂದಿರ ನಿರ್ಮಾಣಕ್ಕೆ ಚಾಚಿದ ಹಸ್ತಕೈಂಕರ್ಯ 4
13. ಏನೂ ಬದಲಾವಣೆಯಿಲ್ಲ ಎಲ್ಲವೂ ಇದ್ದಹಾಗೆ ಇದೆ 4
15. ಗೋವಿಂದ ನಾಮಕ್ಕೆ ಬರುವ ಲಕ್ಷ್ಮೀ ಪತಿ 5
17. ಸೀತಾಪತಿಯ ನಾಮದಲ್ಲಿ ತುಂಬಿರುವ ಮಾದಕ ದ್ರವ್ಯ 4
18. ಬೆಳದಿಂಗಳನ್ನು ಹುಟ್ಟಿಸುವ ಚಂದ್ರ 4
20. ಚಕಾರವೆತ್ತಲು ಸಾಧ್ಯವಾಗದ ಈ ನೋಡುಗ ಮೌನಕ್ಕೆ ಶರಣು 5
21. ಬಟ್ಟೆಗಳ ಮೇಲೆ ಅತಿಯಾದ ಪ್ರೀತಿ 4
22. ಹಲವರ ಬದಲಾಗಿ ಭಾಗವಹಿಸುವವ ಸಿರಿವಂತ 4

ಪದಬಂಧ ಉತ್ತರ -2823

ಮೇಲಿಂದ ಕೆಳಕ್ಕೆ
1.ಪುಣ್ಯದಿನ 2.ಮಧುರವಾಣಿ 3.ರಾಕ್ಷಸಜನ 4.ರಥಬೀದಿ 5.ವಿಷ 7.ಲಬ 9.ಹುಲಿಯುಗುರು 12.ಸರಳಜೀವಿ 15.ದೃಢನಿರ್ಧಾರ 16.ಗುರುಪೂರ್ಣಿಮಾ 17.ಮುಳ್ಳುದಾರಿ 18.ಗಜ 20.ಜೀನಿ 21.ಕಡುಕೋಪ

ಎಡದಿಂದ ಬಲಕ್ಕೆ
1.ಪುರುಷೋತ್ತಮ 3.ರಾಮಮಂದಿರ 5.ವಿಚಾರ 6.ಸಕಲ 8.ನಹುಷ 10.ವಾರಿಜ 11.ಬಸದಿ 13.ಯುಗಾದಿ 14.ವಿರಳ 17.ಮುರುಗ 19.ಢಮರು 20.ಜೀವಿಕ 22.ಜನನಿ 23.ಪೂತನಿ 24.ರಿಸಾಲುದಾರ 25.ಮಾನವರೂಪ

ಜೋಹಾನ್ಸ್‌ಬರ್ಗ್‌ನಲ್ಲಿ ಪಾಟೀಲರ ಅನುಭವ

ನ್ಯಾಯಮೂರ್ತಿ ಶಿವರಾಜ ವಿ. ಪಾಟೀಲ ಅವರ ಆತ್ಮಕಥನ 'ಕಳೆದ ಕಾಲ ನಡೆದ ದೂರ' ಜನವರಿ 21ರಂದು ಬೆಳಿಗ್ಗೆ 10.30ಕ್ಕೆ ಬೆಂಗಳೂರಿನ ಚೌಡಯ್ಯ ಸ್ಮಾರಕ ಭವನದಲ್ಲಿ ಬಿಡುಗಡೆಯಾಗಲಿದೆ. ಅವರ ಬಾಲ್ಯಕಾಲದಿಂದ ಬದುಕಿನಲ್ಲಿ ಏಣಿ ಹತ್ತುತ್ತಾ, ಅಲ್ಲಲ್ಲಿ ನಿಂತು ಆಯಾ ಕಾಲವನ್ನು ಮರುಕಾಣಿಸಿದಂತಹ ಲೇಖನಗಳು ಇದರಲ್ಲಿ ಇವೆ. ಅಂತಹ ಒಂದು ಲೇಖನದ ಓದು ಇಲ್ಲಿದೆ...

ಹೊಸತು

ಸುಪ್ರೀಂ ಕೋರ್ಟ್ ನ್ಯಾಯಾಧೀಶನಾಗಿರುವಾಗಲೇ ದಕ್ಷಿಣ ಆಫ್ರಿಕಾಗೆ ಹೋಗುವ ಅವಕಾಶ ನನಗೆ ಒದಗಿಬಂತು. ಆ ದೇಶದ ಸ್ವಾತಂತ್ರ್ಯದ ದಶಮಾನೋತ್ಸವದ ಆಚರಣೆಯ ಸಂದರ್ಭದಲ್ಲಿ 2004ರ ಮಾರ್ಚ್ 18ರಿಂದ 22ರವರೆಗೆ ಜಗತ್ತಿನ ಅನೇಕ ದೇಶಗಳ ಸುಪ್ರೀಂ ಕೋರ್ಟ್‌ಗಳ ಮುಖ್ಯ ನ್ಯಾಯಮೂರ್ತಿಗಳ ಸಮಾವೇಶ ಅಲ್ಲಿ ಏರ್ಪಾಡಾಗಿತ್ತು. ನಮ್ಮ ಸುಪ್ರೀಂ ಕೋರ್ಟ್‌ನಿಂದ ಮುಖ್ಯ ನ್ಯಾಯಮೂರ್ತಿಗಳ ಪರವಾಗಿ ಪಾಲ್ಗೊಳ್ಳುವ ಅವಕಾಶ ನನಗೆ ಸಿಕ್ಕಿತ್ತು. ಸಮಾವೇಶದಲ್ಲಿ ನಡೆದ ವಿಚಾರ ಸಂಕಿರಣದ ಒಂದು ಗೋಷ್ಠಿಯ ಅಧ್ಯಕ್ಷತೆಯನ್ನು ನಾನು ವಹಿಸಿದ್ದೆ. ಭಾರತ ಸಂವಿಧಾನದಲ್ಲಿನ ಸಾಮಾಜಿಕ ದೃಷ್ಟಿಕೋನ ಮತ್ತು ಸಾಮಾಜಿಕ ನ್ಯಾಯವನ್ನು ಇತರ ದೇಶಗಳ ಸಂವಿಧಾನಗಳ ಜೊತೆ ತುಲನೆ ಮಾಡುವ ಗೋಷ್ಠಿ ಅದಾಗಿತ್ತು. ಆಗ ದಕ್ಷಿಣ ಆಫ್ರಿಕಾದ ಮುಖ್ಯ ನ್ಯಾಯಾಧೀಶರಾಗಿದ್ದವರು ಜಸ್ಟೀಸ್ ಜಾಕಲ್ಸನ್ ಎಂಬುವವರು. ಅವರು ಬಿಳಿಯರು, ಅಂದರೆ ಆಂಗ್ಲರು. ಆಗಿನ ಅಧ್ಯಕ್ಷ ನೆಲ್ಸನ್ ಮಂಡೇಲಾ ಅವರು ಮನಸ್ಸು ಮಾಡಿದ್ದರೆ ಕರಿಯರಲ್ಲೇ ಮುಖ್ಯ ನ್ಯಾಯಾಧೀಶರ ಹುದ್ದೆಗೆ ಆಯ್ಕೆ ಮಾಡಬಹುದಾಗಿತ್ತು. ಅವರು ನಿಷ್ಪಕ್ಷಪಾತವಾಗಿ ಆಯ್ಕೆ ಮಾಡಿದ್ದು ಜಾಕಲ್ಸನ್ ಅವರಂತಹ ಪ್ರಾಮಾಣಿಕ ಮತ್ತು ಸಮರ್ಥ ಬ್ರಿಟಿಷ್ ನ್ಯಾಯಾಧೀಶರನ್ನು.

ಆ ಸಮಾವೇಶದ ಕೊನೆಯಲ್ಲಿ ಮಾಧ್ಯಮಗೋಷ್ಠಿಯೊಂದನ್ನು ಹಮ್ಮಿಕೊಂಡಿದ್ದರು. ಒಬ್ಬ ವರದಿಗಾರ 'ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಬಹುಮತ ಪಡೆದ ಆಡಳಿತಾರೂಢ ರಾಜಕೀಯ ಪಕ್ಷ ಸಂವಿಧಾನದ ಯಾವುದೇ ಭಾಗ (ಮೂಲಭೂತ ಹಕ್ಕುಗಳನ್ನು ಒಳಗೊಂಡು) ತಿದ್ದುಪಡಿ ಮಾಡಬಹುದೇ?' ಎಂದು ಪ್ರಶ್ನಿಸಿದ. ಮಾಧ್ಯಮಗೋಷ್ಠಿಯಲ್ಲಿ ಹಾಜರಿದ್ದ ಬಹುತೇಕ ಮುಖ್ಯ ನ್ಯಾಯಾಧೀಶರು, 'ಸರಿಯಾದ ಕ್ರಮದಲ್ಲಿ ಮತ್ತು ನಿಗದಿತ ಬಹುಮತವಿದ್ದರೆ ಮೂಲಭೂತ ಹಕ್ಕುಗಳನ್ನೂ ಕೂಡ ತಿದ್ದುಪಡಿ ಮಾಡಬಹುದು' ಎಂದು ಉತ್ತರಿಸಿದರು.


ಕೊನೆಯಲ್ಲಿ ನಾನು, 'ನಮ್ಮ ದೇಶದ ಸಂವಿಧಾನದ ವಿಧಿ 368ರ ಪ್ರಕಾರ, ಸಂವಿಧಾನದ ಯಾವುದೇ ವಿಧಿಯ ತಿದ್ದುಪಡಿ ಮಾಡಲು ಅವಕಾಶವಿದೆ' ಎಂದು ಪ್ರತಿಕ್ರಿಯಿಸಿ, ಆದರೆ ವಿಷಯಗಳ ಆಧಾರದ ಮೇಲೆ ಸರಿಯಾದ ಕ್ರಮವನ್ನು ಜರುಗಿಸಿ, ಅವಶ್ಯಕತೆ ಇದ್ದ ಬಹುಮತದ ಆಧಾರದ ಮೇಲೆ ಅಂತಹ ತಿದ್ದುಪಡಿಗಳನ್ನು ಮಾಡಬಹುದು ಎಂದು ಪ್ರತಿಕ್ರಿಯಿಸಿದೆ.

ನಾನು ಮುಂದುವರಿದು ಹೇಳಿದೆ. ನಮ್ಮ ದೇಶದ ಸುಪ್ರೀಂ ಕೋರ್ಟಿನ ಕೇಶವಾನಂದ ಭಾರತಿ V/s ಕೇರಳ ರಾಜ್ಯದ ಕೇಸಿನಲ್ಲಿ ಬಹಳ ಮಹತ್ವದ, ಅರ್ಥಪೂರ್ಣವಾದ ಮತ್ತು ಪ್ರಜಾಪ್ರಭುತ್ವದ ಮೌಲ್ಯಗಳನ್ನು ಎತ್ತಿಹಿಡಿಯುವ ದೃಷ್ಟಿಯಿಂದ ಸಂವಿಧಾನದ ಯಾವುದೇ ವಿಧಿಗೆ ಆರ್ಟಿಕಲ್ 368ರ ಮೇರೆಗೆ ತಿದ್ದುಪಡಿ ತರಬಹುದು. ಆದರೆ, ಅದರ ಮೂಲ ಗುಣಲಕ್ಷಣಗಳಿಗೆ ಧಕ್ಕೆಯಾಗದಂತಿರಬೇಕು ಎಂದು, ತೀರ್ಪನ್ನು ನೀಡಿದೆ. ಹೀಗಾಗಿ, ಸಂವಿಧಾನ ಪೀಠದ ಮಹತ್ವದ ಪ್ರಕರಣಗಳ ಪೈಕಿ ಇಡೀ ದೇಶದ ಗಮನ, ಕುತೂಹಲ ಸೆಳೆದಿದ್ದ ಪ್ರಕರಣವಿದು. ದಕ್ಷಿಣ ಆಫ್ರಿಕಾದ ಆ ಮಾಧ್ಯಮಗೋಷ್ಠಿಯಲ್ಲಿ ನಾನು ಈ ತೀರ್ಪಿನ ಬಗ್ಗೆ ವಿವರಿಸಿ, 'ದೇಶದ ನಾಗರಿಕರು ಆಸ್ತಿ ಹೊಂದುವುದು ಮೂಲಭೂತ ಹಕ್ಕು ಹೌದೋ ಅಲ್ಲವೋ ಎಂಬುದು ಈ ಕೇಸಿನ ಮುಖ್ಯ ವಸ್ತುವಾಗಿತ್ತು. ಅಲ್ಲದೆ, ಅದು ಮೂಲಭೂತ ಹಕ್ಕುಗಳ ಮಾನ್ಯತೆ ಬಗ್ಗೆ ವಿಸ್ತೃತ ಚರ್ಚೆಗೆ ನಾಂದಿಯಾದ ಕೇಸೂ ಹೌದು. ನಮ್ಮ ದೇಶದ ನ್ಯಾಯಾಂಗ ವ್ಯವಸ್ಥೆ ಮತ್ತು ಭಾರತ ಸಂವಿಧಾನದ ಕುರಿತಾದ ಮಹತ್ವದ ಮೈಲಿಗಲ್ಲಿನಂತಹ ತೀರ್ಪು ಈ ಪ್ರಕರಣದಲ್ಲಿ ಪ್ರಕಟವಾಗಿದೆ. ಈ ತೀರ್ಪಿನಿಂದಾಗಿ ಸಂವಿಧಾನದ ಮೂಲಭೂತ ಗುಣಲಕ್ಷಣಗಳನ್ನು ಕಾಪಾಡಿಕೊಂಡು ಬರಲು ಸಾಧ್ಯವಾಗಿದೆ' ಎಂದು ಹೇಳಿದಾಗ, ನಮ್ಮ ಸುಪ್ರೀಂ ಕೋರ್ಟ್‌ನ ಬಗ್ಗೆ ಆ ಮಾಧ್ಯಮಗೋಷ್ಠಿಯಲ್ಲಿ ಎಲ್ಲರಿಂದಲೂ ಮೆಚ್ಚುಗೆಯು ವ್ಯಕ್ತವಾಯಿತು.

ಸಾಮಾನ್ಯವಾಗಿ, ಸಂವಿಧಾನಪೀಠದಲ್ಲಿ ಐವರು ನ್ಯಾಯಾಧೀಶರಿದ್ದರೆ, ಈ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್‌ನ ಎಲ್ಲ 13 ಮಂದಿ ನ್ಯಾಯಾಧೀಶರನ್ನೊಳಗೊಂಡ ಸಂವಿಧಾನ ಪೀಠ ಈ ವಿಚಾರಣೆಯನ್ನು ಕೈಗೊಂಡಿದ್ದು ದೇಶದ ಸುಪ್ರೀಂ ಕೋರ್ಟ್ ಮತ್ತು ನ್ಯಾಯಾಂಗ ವ್ಯವಸ್ಥೆಯಲ್ಲಿಯೇ ಒಂದು ದಾಖಲೆಯಾಯಿತು. ಈ ಪೀಠದ ಮುಂದೆಯೇ 68 ದಿನಗಳ ವಾದ- ಪ್ರತಿವಾದಗಳು ನಡೆದಿದ್ದವು. 1972ರ ಅಕ್ಟೋಬರ್ 31ರಂದು ಆರಂಭವಾದ ಈ ಪ್ರಕರಣದ ತೀರ್ಪು ಸುಪ್ರೀಂ ಕೋರ್ಟ್‌ನಲ್ಲಿ ಪ್ರಕಟವಾದದ್ದು 1973ರ ಮಾರ್ಚ್ 23ರಂದು. 700 ಪುಟಗಳ ತೀರ್ಪು ಇದು. ಮೂಲಭೂತ ಹಕ್ಕುಗಳ ಕೇಸು ಎಂದೇ ಗುರುತಿಸಿಕೊಂಡ ಈ ಪ್ರಕರಣದ ತೀರ್ಪನ್ನು ಇಂದಿಗೂ 'ಕೇಶವಾನಂದ ಭಾರತಿ ತೀರ್ಪು' ಎಂದೇ ಹೇಳಲಾಗುತ್ತದೆ. ದೇಶದ ಪ್ರಭಾವಿ ಮತ್ತು ಹೆಸರಾಂತ ವಕೀಲರಾಗಿದ್ದ ನಾನಾ ಭಾಯ್ ಪಾಲ್ಕಿವಾಲಾ (ನಾನಿ ಪಾಲ್ಕಿವಾಲಾ) ಅವರು, ಫಾಲಿ ನಾರಿಮನ್, ಸೋಲಿ ಸೊರಾಬ್ಜಿ ಹಾಗೂ ಇತರ ಹಿರಿಯ ನ್ಯಾಯವಾದಿಗಳ ಸಹಕಾರದೊಂದಿಗೆ ಈ ಪ್ರಕರಣದಲ್ಲಿ ವಾದ ಮಂಡಿಸಿದ್ದರು.

ಅಲ್ಲಿನ ಮಾಧ್ಯಮ ಪ್ರತಿನಿಧಿಗಳು ಕೇಳಿದ ಎರಡನೇ ಪ್ರಶ್ನೆ ಏನೆಂದರೆ, 'ಮರಣದಂಡನೆ ಶಿಕ್ಷೆ ಇರಬೇಕೇ? ಇರಬಾರದೇ?' ಎಂಬುದು. ಇದಕ್ಕೂ ಒಬ್ಬೊಬ್ಬರು ಒಂದೊಂದು ರೀತಿ ಪ್ರತಿಕ್ರಿಯಿಸಿದರು. ನನ್ನ ಸರದಿ ಬಂತು. 'ನಮ್ಮ ದೇಶದಲ್ಲಿ ಭಾರತೀಯ ದಂಡಸಂಹಿತೆ(ಇಂಡಿಯನ್ ಪೀನಲ್ ಕೋಡ್) ಪ್ರಕಾರ ಮರಣದಂಡನೆ ಶಿಕ್ಷೆ ಕೊಡಬಹುದು ಎಂದೇ ಇದೆ. ಆದರೆ, ಈ ಬಗ್ಗೆ ಜನರಲ್ಲಿ ಎರಡು ಭಿನ್ನ ದೃಷ್ಟಿಕೋನಗಳಿವೆ- 'ಮರಣದಂಡನೆ ವಿಧಿಸುವುದು ಮಾನವ ಹಕ್ಕುಗಳ ಉಲ್ಲಂಘನೆ ಮತ್ತು ಮರಣದಂಡನೆಯಂತಹ ಕಠಿಣ ಶಿಕ್ಷೆ ಇಲ್ಲದೇ ಇದ್ದರೆ ದೇಶದ ಮತ್ತು ಸಮಾಜದ ಸುರಕ್ಷತೆಗೆ ಧಕ್ಕೆಯುಂಟಾಗಬಹುದು.' ಆದ್ದರಿಂದ, ಪ್ರಕರಣದ ತೀವ್ರತೆ ಮತ್ತು ಕ್ರೌರ್ಯವನ್ನು ಗಮನದಲ್ಲಿಟ್ಟುಕೊಂಡು, ವಿರಳಾತಿ ವಿರಳ ಪ್ರಕರಣಗಳಲ್ಲಿ ನಮ್ಮ ಸುಪ್ರೀಂ ಕೋರ್ಟ್ ಮರಣದಂಡನೆ ಶಿಕ್ಷೆಯನ್ನು ಕೊಡಬಹುದು' ಎಂದು ಹೇಳಿ ಸಮತೋಲನ ಕಾಪಾಡಿದೆ.

2001ರ ಡಿಸೆಂಬರ್ 13ರಂದು ನಮ್ಮ ಸಂಸತ್ತಿನ ಮೇಲೆ ನಡೆದ ಉಗ್ರರ ದಾಳಿ, ಪ್ರಧಾನಿ ರಾಜೀವ್ ಗಾಂಧಿಯವರನ್ನು ಮಾನವಬಾಂಬ್ ಸ್ಫೋಟದ ಮೂಲಕ ಹತ್ಯೆಗೈದ ಪ್ರಕರಣ, ಒಂದು ಇಡೀ ಕುಟುಂಬದವರನ್ನು ಹಾಡಹಗಲಲ್ಲೇ ರುಂಡ ಕತ್ತರಿಸಿ ಕೊಲೆ ಮಾಡಿದ ಪ್ರಕರಣ-ಇಂತಹ ಪ್ರಕರಣಗಳಲ್ಲಿ ಅಪರಾಧಿಗಳಿಗೆ ಮರಣದಂಡನೆ ವಿಧಿಸಬೇಕಾಗುತ್ತದೆ. ಮರಣದಂಡನೆಯಂತಹ ಕಠಿಣ ಶಿಕ್ಷೆ ದುಷ್ಕೃತ್ಯ ಎಸಗುವ ಜನರಲ್ಲಿ ಭಯ ಹುಟ್ಟಿಸುತ್ತದೆ. ಆದರೂ ದುಷ್ಕೃತ್ಯಗಳು ನಡೆಯುತ್ತಲೇ ಇವೆ. ಒಂದು ವೇಳೆ ಮರಣದಂಡನೆ ಶಿಕ್ಷೆಯನ್ನು ತೆಗೆದುಹಾಕಿದರೆ ಪರಿಸ್ಥಿತಿ ಹೇಗಿರಬಹುದು ಎಂದು ಯೋಚಿಸಿ, ಭಯೋತ್ಪಾದನೆ ಮತ್ತು ಆತಂಕವಾದಿಗಳಿಂದ ದುಷ್ಕೃತ್ಯಗಳು ನಡೆಯುತ್ತಿರುವ ಈ ಸಮಯದಲ್ಲಿ ಮರಣದಂಡನೆ ಶಿಕ್ಷೆಯನ್ನು ತೆಗೆದುಹಾಕುವುದು ದೇಶದ ಸುರಕ್ಷತೆಯ ದೃಷ್ಟಿಯಿಂದ ಸರಿಯಾಗುವುದಿಲ್ಲ.



ಮುಂದೆ ಸರಿಯಾದ ಸಮಯ ಬಂದಾಗ ನಮ್ಮ ದೇಶದಲ್ಲಿಯೂ ಮರಣದಂಡನೆ ಶಿಕ್ಷೆಯನ್ನು ತೆಗೆದುಹಾಕಬಹುದು' ಎಂದು ಉತ್ತರಿಸಿದೆ.

ಮಾಧ್ಯಮಗೋಷ್ಠಿ ಮುಗಿಸಿ ನಾವು ಮುಂದಿನ ಕಾರ್ಯಕ್ರಮಕ್ಕೆ ತೆರಳುತ್ತಿದ್ದಾಗ, ದಕ್ಷಿಣ ಆಫ್ರಿಕಾದ ನ್ಯಾಯಾಧೀಶರೊಬ್ಬರು 'ಮಿಸ್ಟರ್ ಪಾಟೀಲ, ನೀವು ನಮ್ಮ ದೇಶಕ್ಕೆ ಗಾಂಧೀಜಿಯವರನ್ನು ಕಳಿಸಿಕೊಟ್ಟಿರಿ. ನಾವು ನಿಮ್ಮ ದೇಶಕ್ಕೆ ಮಹಾತ್ಮರನ್ನು ಮರಳಿ ಕಳುಹಿಸಿಕೊಟ್ಟೆವು' ಎಂದು ಹೇಳಿದರು. ನಾನು, 'ಹೌದು, ಆದರೆ ಗಾಂಧೀಜಿ ಮತ್ತು ಮಹಾತ್ಮ ಇಬ್ಬರೂ ಭಾರತೀಯರೇ ಎಂಬುದು ಅಭಿಮಾನದ ವಿಷಯ' ಎಂದು ಉತ್ತರಿಸಿದೆ!

ಸ್ಫೋಟಕಗುಣದ ಕಾಡುವ ಕಥಾಜಗತ್ತು


ಗೌರಿ

ವಿಮರ್ಶೆ

ಬಾಬುರಾವ್ ಬಾಗುಲ್ ಅವರ 'ವೆನ್ ಐ ಹಿಡ್ ಮೈ ಕ್ಯಾಸ್ಟ್' ಎಂಬ ಕೃತಿ, 'ಬೀದಿ ಹೆಣ್ಣು' ಎಂಬ ಹೆಸರಿನಲ್ಲಿ ಹತ್ತು ನಿಗಿನಿಗಿ ಕೆಂಡದುಂಡೆಗಳನ್ನು ಹೊತ್ತು ಕನ್ನಡಕ್ಕೆ ಬಂದಿದೆ.

ಈ ಕಥೆಗಳಿಗೆ ಸ್ಫೋಟಕ ಗುಣವಿದೆ. ಅವು ಕುದಿಯುತ್ತಿರುವ ಅಧೋಲೋಕದ ಹಸಿಹಸಿ ತುಣುಕುಗಳನ್ನು ಸಿಡಿಸುತ್ತವೆ. ಆ ತುಣುಕಿನ ವಾಸನೆ, ನೆತ್ತರು, ಮಾಂಸಲ ಭಾಗಗಳನ್ನು ಈ ಕಥೆಗಳನ್ನು ಓದುತ್ತೋದುತ್ತ ನಾವು ಮುಟ್ಟುತ್ತೇವೆ, ಮೂಸುತ್ತೇವೆ. ನಮ್ಮ ರಕ್ತದೊಳಕ್ಕೆ ಸೇರಿಹೋಗುವ ಹಾಗೆ ಸೇವಿಸುತ್ತೇವೆ. ನಮ್ಮೊಳಗಿನ ನೆಮ್ಮದಿಯನ್ನು ಛಿದ್ರಗೊಳಿಸುವ ಶಕ್ತಿ ಆ ಆಸ್ಫೋಟಕ್ಕೆ ಇದೆ.

ಇಲ್ಲಿನ ಕಥೆಗಳ ಶಕ್ತಿ ಇರುವುದು ಕಥೆಯ 'ಒನ್‌ಲೈನ್'ಗಳಲ್ಲಲ್ಲ. ಬದಲಿಗೆ ಅದನ್ನು ಸಂಕೀರ್ಣವಾದ ಅಷ್ಟೇ ದಟ್ಟವಾದ ಅನುಭವವಾಗಿ ಕಟ್ಟಿದ ಕಥನಕ್ರಮದಲ್ಲಿ, ಭಾಷೆಯ ಬಳಕೆಯಲ್ಲಿ. ಅದರಲ್ಲಿಯೂ 'ಕತ್ತಲ ಬಂಧಿ' ಕಥೆಯಲ್ಲಿ ಬಳಕೆಯಾದ ಭಾಷೆಯಂತೂ ವಿಶೇಷವಾದದ್ದು. ಪುರುಷ ಸಮಾಜದೊಳಗಿನ ವಿಕೃತವಿಷವನ್ನು, ಅದು ಹೆಣ್ಣನ್ನು ನೋಡುವ ಕ್ರಮವನ್ನು ಈ ಕಥೆ ಹಲವು ಪದರಗಳಲ್ಲಿ ಹಸಿಹಸಿಯಾಗಿ ಬಿಚ್ಚಿಡುತ್ತ ಹೋಗುತ್ತದೆ. ವಿವರಗಳನ್ನು ಹೇಳುವ ಕ್ರಮದಲ್ಲಿಯೇ ವಾತಾವರಣವನ್ನೂ, ವ್ಯಕ್ತಿತ್ವಗಳನ್ನೂ ನಮ್ಮ ಮನಸಲ್ಲಿ ಕಡೆದಿಟ್ಟುಬಿಡುತ್ತಾರೆ ಬಾಬುರಾವ್. 'ವೈರಿಯನ್ನು ತಿವಿಯಲು ಎಮ್ಮೆ ತನ್ನ ಕೋಡನ್ನು ಬಗ್ಗಿಸುವಂತೆ, ಅವನು ತನ್ನ ತಲೆಯನ್ನು ಮುಂಚಾಚಿದ. ಕೊಲೆ ಮಾಡಬೇಕೆಂಬ ಇಚ್ಛೆ ಅವನ ಮೈಗೊಂದು ಹೊಸ ಆವೇಗವನ್ನು ನೀಡಿತು. ನರಗಳು ಅವನ ತೊಗಲಿನೊಳಗೆ ಸಿಲುಕಿಕೊಂಡ ಹಾವುಗಳಂತೆ ನುಲಿದವು'- ಇಂಥ ಮೈ ಜುಮ್ ಅನ್ನಿಸುವ ವಿವರಗಳು ಓದುಗನನ್ನು ಚಕಿತಗೊಳಿಸಬೇಕೆಂಬ ಆಮಿಷದಿಂದ ಹುಟ್ಟಿದ್ದಲ್ಲ, ಬದಲಿಗೆ ಕಥನಕ್ರಮದ ಅಂತರ್ಗತ ಅಗತ್ಯವಾಗಿ ಬೆಳೆದಿದ್ದು ಎನ್ನುವುದನ್ನು ಗಮನಿಸಬೇಕು.



ಪು: 133 ₹200

ಬೀದಿ ಹೆಣ್ಣು
ಮರಾಠಿ ಮೂಲ: ಬಾಬುರಾವ್ ಬಾಗುಲ್
ಕನ್ನಡಕ್ಕೆ: ದು. ಸರಸ್ವತಿ
ಪ್ರಕಾಶನ: ಬಹುವಚನ
ಸಂ: 6362588659

'ಹಿತವಾದ, ಸುಂದರ, ಎಳೆ ಹರೆಯದ ಬೆನ್ನಿಗೆ ಜಾಡಿಸಿ ಒದೆಯಬೇಕು; ಮೊಣಕಾಲುದ್ದದ, ರೇಷಿಮೆ ನುಣುಪಿನ ಕಪ್ಪು ಕೂದಲನ್ನು ಸುತ್ತಿಡಿದು ಪ್ರಜ್ಞೆ ತಪ್ಪುವಂತೆ ಎಳೆದಾಡಬೇಕೆಂಬ ಆಸೆಯಿಂದ ಅವನ ಕೈ ತುರಿಸತೊಡಗಿತು. ಅವಳ ಮೇಲೆ ಎಷ್ಟೊತ್ತಿಗೆ ಕೈ ಮಾಡುವೆನು ಎಂಬ ಧಾವಂತದಿಂದ ನಡೆಯುವುದೇ ಯಾತನೆ ಎನಿಸತೊಡಗಿತವನಿಗೆ.'- ಇವು ದೇವರಾಯನೊಳಗಿನ ಕ್ರೋಧವನ್ನಷ್ಟೇ ಹೇಳುತ್ತದೆಯೇ? ಖಂಡಿತ ಇಲ್ಲ; ಅವನೊಳಗಿನ ಕಾಮವನ್ನೂ ಕಾಣಿಸುತ್ತಿದೆ. ಇದೇ ದೇವರಾಯ ಮುಂದೆ ತನ್ನ ತಂದೆಯ ಜೊತೆಗಿದ್ದ ಬಾನುವಿನ ಮೇಲೆ ಸಾರ್ವಜನಿಕವಾಗಿ ಅತ್ಯಾಚಾರ ಮಾಡಲು ಮುಂದಾಗುತ್ತಾನೆ.

ನಿರ್ಣಯಗಳನ್ನು ಕೊಡುವುದರಲ್ಲಿ, ಹುಸಿ ಆಶಾವಾದದಲ್ಲಿ ಮೈಮರೆಯುವುದರಲ್ಲಿ ಬಾಬುರಾವ್ ಅವರಿಗೆ ಆಸಕ್ತಿಯಿಲ್ಲ. ವಾಸ್ತವವನ್ನು ದಟ್ಟವಾಗಿ ಕಟ್ಟಿಕೊಡುವುದರ ಮೂಲಕವೇ ನಮ್ಮನ್ನು ಈ ಕಥೆಗಳು ಕಂಗೆಡಿಸುತ್ತವೆ.

'ನಮ್ಗೆ ಹಾಡು, ಅದೂ ನರಸಿಮ್ಮನ್ ಹಾಡು ಕೊಡ್ಬೇಕು!' ಎಂದು ಶುರುವಾಗುವ 'ಬೋಹಡ' ಎಂಬ ಹೆಸರಿನ ಕಥೆ ಹೊಲೆಯ ಸಮುದಾಯದವರು ನರಸಿಮ್ಮನ ಹಾಡಿನ ರೂಪದಲ್ಲಿ ತಮ್ಮ ಅಸ್ಮಿತೆಯನ್ನು, ಆತ್ಮಗೌರವವನ್ನು ಹಕ್ಕಿನಿಂದ ಕೇಳಿ ಪಡೆದುಕೊಳ್ಳುವುದನ್ನು ಚಿತ್ರಿಸುತ್ತದೆ. ಆದರೆ, ಹಾಡು ಪಡೆದುಕೊಂಡಾಕ್ಷಣ ಎಲ್ಲ ಸರಿಹೋಗುವುದಿಲ್ಲ. ಅದರಿಂದ ಹೊಲೆಯರ ಮನಸ್ಸಿನಲ್ಲಿ ಬೆಳೆದ ಆತ್ಮವಿಶ್ವಾಸದ ಚಿಗುರೂ ಸಣ್ಣದಲ್ಲ.

'ದಸ್ರಾ ಬಲಿ'ಯಲ್ಲಿನ ಕೋಣಬಲಿಯ ಚಿತ್ರಣ ಬೆಚ್ಚಿ ಬೀಳಿಸುವಂಥದ್ದು. ಇದರಲ್ಲಿ ಕುದುರೆಯ ಮೇಲೆ ಕೂತು ಮೆರೆಯುವ ಪುಕ್ಕಲು ಪಾಟೀಲ ಇದ್ದಾನೆ. ಊರ ಮರ್ಯಾದೆಗಾಗಿ ಪ್ರಾಣವನ್ನೂ ಪಣಕ್ಕಿಡುವ ದೇವ, ಶಿವ, ಹರಿಯಂಥ ಹೊಲೆಯರಿದ್ದಾರೆ. ನಾಲ್ಕು ಜನ ಹೊಲೆಯರು ಕಟ್ಟಿ ಹಿಡಿದಾಗ ಕೋಣನ ಕಿವಿ, ಬಾಲಗಳನ್ನು ಕತ್ತರಿಸಿ ಪೌರುಷ ಮೆರೆಯುವ ಪಾಟೀಲ, ಆ ಕೋಣವನ್ನು ಹಿಡಿದು ನಿಲ್ಲಿಸಲು ಹೋಗಿ ಪ್ರಾಣಾಪಾಯಕ್ಕೊಳಗಾಗಿರುವ ಹೊಲೆಯ ಹರಿಯ ರಕ್ತಸಿಕ್ತ ದೇಹವನ್ನು ಅವನ ಎದುರಿಗೆ ತಂದಾಗ, 'ಅರೆ ಇಲ್ಲಲ್ಲ...' ಎಂದು ಹೇಳಿ ದೇವಸ್ಥಾನದೊಳಗೆ ಒಯ್ಯಲು ಬಿಡುವುದಿಲ್ಲ. ಕಥೆಯ ಕೊನೆಯಲ್ಲಿ ಪಾಟೀಲ, ಸಾವನ್ನು ಎದುರಿಸಿ, ಗೆದ್ದು ಬಂದೆನೆಂದು ಬೀಗುವ ಭಂಗಿಯಲ್ಲಿ ನಿಲ್ಲುತ್ತಾನೆ. ಮುಂಡೆಯಾಗುವ ಭೀತಿಯಲ್ಲಿದ್ದ ದೇವನ ಹೆಂಡತಿ, ಕೂದಲೆಳೆಯ ಅಂತರದಲ್ಲಿ ಸಾವಿನಿಂದ ತಪ್ಪಿಸಿಕೊಂಡು ಬಂದ ಗಂಡನನ್ನು ನೋಡಿ ಕಣ್ಣೀರು ಒರೆಸಿಕೊಳ್ಳುತ್ತಾಳೆ. ತಾರತಮ್ಯ-ಜಾತಿ ವ್ಯವಸ್ಥೆಯ ಕ್ರೌರ್ಯದ ಬಗೆಗೆ ಎಲ್ಲಿಯೂ ವಾಚ್ಯವಾಗಿ ಹೇಳದ ಕಥೆಗಾರರು, ಇಡೀ ಕಥೆಯ ಮೂಲಕ ಹೊಲೆಯರು ಪಾಟೀಲನ ಗೆಲುವಿಗಾಗಿ ಹೊಲೆಯರನ್ನು 'ಬಲಿ' ಹಾಕುವ ಸಮಾಜವ್ಯವಸ್ಥೆಯ ಕುರಿತು ವಿಷಾದವೂ ಅಸಹ್ಯವೂ ಹುಟ್ಟುವಂತೆ ಮಾಡುತ್ತಾರೆ.

'ದಂಗೆ' ಕಥೆಯ ನಾಯಕ ಜೈ ಮೆಟ್ರಿಕ್ಯುಲೇಷನ್ ಓದುತ್ತಿದ್ದಾನೆ. ಭಂಗಿಯಾಗಿ ಕೆಲಸ ಮಾಡಲಾರೆ ಎಂದು ನಿರ್ಧರಿಸಿದ್ದಾನೆ. ಆದರೆ ವಿದ್ಯೆಯಿಂದ ದೊರೆತ ಸ್ವಾಭಿಮಾನ, ಅರಿವನ್ನು ಪಕ್ಕಕ್ಕಿಟ್ಟು ಕೊನೆಗೂ ಜೈ ಭಂಗಿ ಕೆಲಸಕ್ಕೆ ಹೋಗಬೇಕಾಗುತ್ತದೆ. ಅಲ್ಲಿನ ಪರಿಸರದ ವಿವರಗಳು ಹೀಗಿವೆ: 'ಒಟ್ಟು ಅಲ್ಲಿ ಮೂವತ್ತೆರಡು ಪಾಯಖಾನೆಗಳಿದ್ದವು. ಒಂದೊಂದೂ ಹೇಲಿನಿಂದ ತುಂಬಿತ್ತು, ಕೆಲವದರಲ್ಲಿ ತುಂಬಿ ಸುರಿದು ಕೊಳೆತು ನಾರುತ್ತಿತ್ತು, ಅದರೊಳಗೆ ಹುಳಗಳು ಹರಿದಾಡುತ್ತಿದ್ದವು, ನೊಣ ಮುತ್ತುತ್ತಿದ್ದವು. ಒಂದೆರಡರೊಳಗೆ ರಕ್ತದ ಬಟ್ಟೆಗಳಿದ್ದವು, ಬಳಸಿದ ಹತ್ತಿ ಉಂಡೆಗಳು, ಬ್ಯಾಂಡೇಜು, ತಂತಿ ಜಾಲರಿ ತುಂಡುಗಳಿದ್ದವು. .... ಶಸ್ತ್ರಾಸ್ತ್ರಗಳನ್ನು ಹಿಡಿದ ಶತ್ರುಗಳಿಂದ ಸುತ್ತುವರೆದಿರುವ ಚಕ್ರವ್ಯೂಹದೊಳಗಿನ ಅಭಿಮನ್ಯುವಿನಂತೆ ಅವನಿದ್ದ.'- ಒಂದು ಸಾಲಿನಲ್ಲಿ ಬಂದುಹೋಗುವ ಮಹಾಭಾರತದ ಬಹು ಉಜ್ವಲ ಪಾತ್ರವಾದ ಅಭಿಮನ್ಯುವಿನ ಉಲ್ಲೇಖ ಉಂಟುಮಾಡುವ ಆಘಾತ ಇಡೀ ಕಥೆಯನ್ನೇ ಬೆಳಗಿಸುವಂಥದ್ದು. ಆ ಉಲ್ಲೇಖದ ಪೊಸಿಷನಿಂಗ್ ಅನ್ನುವುದೇ ಒಂದು ಸ್ಟೇಟ್‌ಮೆಂಟ್ ಕೂಡ ಆಗಿ ಕಾಡುತ್ತದೆ. ಈ ಕಥೆಯ ಅಂತ್ಯವೂ ಅಷ್ಟೇ ಧ್ವನಿಪೂರ್ಣವಾಗಿದೆ.

'ನನ್ನ ಜಾತಿಯನ್ನು ಮುಚ್ಚಿಟ್ಟಾಗ' ಮಾತ್ರ ತುಸು ವಾಚ್ಯವಾಗಿದೆ. ಆದರೆ ಈ ಶೀರ್ಷಿಕೆ ಆ ಕಥೆಗೆ ಹೊಂದಿಕೊಳ್ಳುವ ರೀತಿ ಕುತೂಹಲಕಾರಿಯಾದದ್ದು. ಮೇಲುವರ್ಗವು, ಜಾತಿಯಂಥ ವಿಷಯಗಳ ಬಗ್ಗೆ ಮಾತಾಡಲು ಬಳಸಿಕೊಳ್ಳುವ ಪರೋಕ್ಷ ಭಾಷೆಯನ್ನೇ, ತನ್ನ ಜಾತಿಯನ್ನು ಅಡಗಿಸಿಡಲು ಬಳಸಿಕೊಳ್ಳುವಂಥ ವಿಚಿತ್ರವಾದ ಸಂದರ್ಭ ಈ ಕಥೆಯಲ್ಲಿದೆ. ಅವನದೇ ಆಫೀಸಿನಲ್ಲಿ ಕೆಲಸ ಮಾಡುವ ಕಾಶಿನಾಥ ಈ ಜಾತಿ ತಾರತಮ್ಯವನ್ನು ನೇರವಾಗಿ ಎದುರುಗೊಳ್ಳುವವನು. ಜಾತಿಕ್ರೌರ್ಯವನ್ನು ಎದುರಿಸುವ ಎರಡು ಮನಸ್ಥಿತಿಗಳನ್ನು ಹೇಳುತ್ತಲೇ ಈ ಕಥೆ, ಶಿಕ್ಷಣದಿಂದ ಜಾತಿನಿರ್ಮೂಲನೆ ಸಾಧ್ಯ ಎಂಬ ವಾದದ ಪೊಳ್ಳುತನವನ್ನೂ ಬಿಚ್ಚಿಡುತ್ತದೆ. ಕತ್ತಲಬಂಧಿ, ಬೋಹಡ, ದಸ್ರಾ ಬಲಿ ಕಥೆಗಳಲ್ಲಿ ಸಿಗುವ ಗಾಢವಾದ ಅನುಭವ ಈ ಕಥೆಯಲ್ಲಿ ಕಾಣಿಸುವುದಿಲ್ಲ. ಅನುವಾದವೂ ಉಳಿದ ಕಥೆಗಳಿಗೆ ಹೋಲಿಸಿದರೆ ತುಸು ಪೇಲವವಾಗಿದೆ.

ಇವುಗಳನ್ನು ಅನುವಾದ ಎನ್ನುವುದಕ್ಕಿಂತ ಕನ್ನಡದಲ್ಲಿ ಮರುಹುಟ್ಟು ಪಡೆದ ಕಥೆಗಳು ಎಂದರೆ ಸರಿಯಾದೀತೇನೋ. ಅಷ್ಟು ಸಶಕ್ತವಾಗಿ ದು. ಸರಸ್ವತಿ ಕನ್ನಡಿಸಿದ್ದಾರೆ. ಈ ಕಥಾಜಗತ್ತಿನ ಅನುಭವವನ್ನು ಮುಖಪುಟ (ಬಿ. ದೇವರಾಜ) ಮತ್ತು ಒಳಪುಟಗಳಲ್ಲಿನ (ವಿ.ಎಂ. ಮಂಜುನಾಥ) ಚಿತ್ರಗಳು ಇನ್ನಷ್ಟು ಗಾಢಗೊಳಿಸುವಂತಿವೆ.

ಕಥನವಿನ್ಯಾಸ, ಭಾಷೆಯ ಬಳಕೆ, ಕಥನತಂತ್ರದ ಕಾರಣಕ್ಕೆ ಇಲ್ಲಿನ ಕಥೆಗಳು ತುಂಬ ಮುಖ್ಯವಾದವುಗಳಾಗಿವೆ. ಹಾಗಾಗಿ ಇವುಗಳ ಓದು ನೀಡುವ ಗಾಢ ಅನುಭವಕ್ಕಾಗಿ ಅಷ್ಟೇ ಅಲ್ಲದೆ, ಕಥನ ಕೌಶಲದ ಅಧ್ಯಯನಕ್ಕಾಗಿಯೂ ಈ ಕೃತಿಯನ್ನು ಓದಬೇಕು. ❖

ಕಥೆ

ಪ್ರಕಾಶ್ ಕುಗ್ವೆ
ಅವರ
ಆಲ್ ಎಡಿಷನ್ ಸುದ್ದಿ


ಮೊಬೈಲ್‌ನಲ್ಲಿ ಕಥೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

https://www.prajavani.net/short-story

ಕವನ

ವೈ.ಕೆ.ಸಂಧ್ಯಾ ಶರ್ಮ
ಅವರ
ಗಡಿಯಾರ ಕಳೆದುಹೋಗಿದೆ

ಮೊಬೈಲ್‌ನಲ್ಲಿ ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ



https://www.prajavani.net/poetry

ಸಾದರ ಸ್ವೀಕಾರ

ಮಾರುಕಟ್ಟೆಯಲ್ಲಿನ ಹೊಸ ಪುಸ್ತಕಗಳ ಮಾಹಿತಿಗೆ ಮೊಬೈಲ್‌ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಕಥೆ, ಕವಿತೆ, ಲೇಖನ, ಪ್ರತಿಕ್ರಿಯೆಗಳನ್ನು ಈ ಇ-ಮೇಲ್‌ಗೆ ಕಳುಹಿಸಿ
bhanuvara@prajavani.co.in

ಕುವೆಂಪು ಪದ ಸೃಷ್ಟಿ

ಜಿ.ಕೃಷ್ಣಪ್ಪ

ಮಧುನೃಪ

ಚೈತ್ರಮಾಸ, ವಸಂತ ಋತುವಿಗೆ 'ಮಧು' ಎಂಬ ಹೆಸರಿದೆ. ಅದು ಮಧುಮಾಸ. ಬಿ.ಎಂ.ಶ್ರೀ ಅವರು 'ವಸಂತ' ಕವನದಲ್ಲಿ ಋತುವನ್ನು 'ಋತುಗಳ ರಾಜ' ಎಂದು ಕರೆದಿರುವರು. ಕುವೆಂಪು ಅವರು ಚೈತ್ರ ಮಾಸವನ್ನು 'ಮಧುನೃಪ' ಎಂಬ ಪದದಿಂದ ವರ್ಣಿಸಿ, ಕೋಗಿಲೆಯನ್ನು ಹೀಗೆ ಪ್ರಶ್ನಿಸಿದ್ದಾರೆ:

'ಹೆಮ್ಮೆಯ ಮಧುನೃಪ ಬಂದಿಹನೆಂದು?
ಚೈತ್ರನು ಶಿಶಿರನ ಕೊಂದಿಹನೆಂದು?
ಸಂತಸವೇ ಸೆರೆ ತೊಲಗಿತು ಎಂದು?
ಸೊಕ್ಕೇ ಬಿಡುಗಡೆ ದೊರಕಿತು ಎಂದು?'
(ಕಾಜಾಣ - ನವಿಲು)

ಯಂತ್ರಪಕ್ಷಿ

ಯಂತ್ರ (ನಾ). 1. ಏನನ್ನಾದರೂ ಕಟ್ಟುವ, ಹಿಡಿಯುವ ಹಾಗೂ ನಿಯಂತ್ರಿಸುವ ಸಾಧನ,-ಉಪಕರಣ. 2. (ಗಾಲಿ ಕೀಲುಗಳ ಜೋಡಣೆಯಿಂದ) ಕೆಲಸ ಮಾಡಲು ಸಹಾಯಕವಾಗುವ ಉಪಕರಣ,-ಸಾಧನ; ಇಂಜಿನ್ನು.

ಈ ಯಾಂತ್ರಿಕ ಯುಗದ ಯಂತ್ರ ನಾಗರಿಕತೆಯಲ್ಲಿ 'ಯಂತ್ರಪಕ್ಷಿ'ಗಳು ಸೃಷ್ಟಿಯಾಗುತ್ತವೆ ಎನ್ನುವ ಸೂಚನೆಯನ್ನು ಕುವೆಂಪು 'ಕೋಗಿಲೆ ಮತ್ತು ಸೋವಿಯಟ್ ರಷ್ಯಾ' ಕವನದಲ್ಲಿ ನೀಡಿದ್ದಾರೆ. ವನವನವನ್ನು ಸಂಚರಿಸಿ ಹಾರಾಡಿ ನಲಿದು ಮನಸ್ಸಿಗೆ ತೃಪ್ತಿಯಾಗುವಂತೆ ಹಾರಾಡುವ ಕೋಗಿಲೆ ತನ್ನ ಇಂಚರವನ್ನು ತೊರೆದು ಕರ್ಕಶ ಧ್ವನಿ ಹೊತ್ತಿದೆ. ರಷ್ಯಾದ ಸಾಮ್ಯವಾದದ ನೀತಿಗೆ ಅನುಗುಣವಾಗಿ, ಮೊದಲಿನಂತೆ ಮೋಸದಿಂದ ಕಾಗೆಯ ಗೂಡಿನಲ್ಲಿ ಮೊಟ್ಟೆ ಇಡದೆ, ತಾನೇ ಮೊಟ್ಟೆಯ ಮೇಲೆ ಕೂತು ಮರಿ ಮಾಡುತ್ತಿದೆ!

ಕುವೆಂಪು ಕಲ್ಪನಾ ಸೃಷ್ಟಿಯ 'ಯಂತ್ರಪಕ್ಷಿ' ಯಂತಾದ ಕೋಗಿಲೆಯ ತೊಳಲಾಟವನ್ನು ಕವನ ಓದಿಯೇ ಸವಿಯಬೇಕು. ❖



ಜೋಡೆತ್ತುಗಳೊಂದಿಗೆ ಶಿವರುದ್ರೇಗೌಡ

ರಾಸು ಸೊಗಸು

12ನೇ ಪುಟದಿಂದ...

ರಾಸು ಸಾಕಾಣಿಕೆಯಲ್ಲಿ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪಡೆದಿರುವ ಕಲ್ಲಹಳ್ಳಿಯ ಪಟೇಲ್ ಶಿವರುದ್ರೇಗೌಡರು ವಿಶೇಷ ಕೊಟ್ಟಿಗೆ ರೂಪಿಸಿದ್ದಾರೆ. ಅಲ್ಲಿ ರಾಸುಗಳಿಗೆ ಫ್ಯಾನ್, ಸೊಳ್ಳೆ ಪರದೆ, ಹೊದಿಕೆ ವ್ಯವಸ್ಥೆ ಮಾಡಿದ್ದಾರೆ.

ಹಬ್ಬದ ದಿನ ಮಂಡ್ಯದ ಹೊಸಹಳ್ಳಿ ವೃತ್ತ, ಸರ್ ಎಂ.ವಿ. ಕ್ರೀಡಾಂಗಣದಲ್ಲಿ ಸಾವಿರಾರು ರಾಸುಗಳಿಂದ ಸಾಮೂಹಿಕವಾಗಿ ಕಿಚ್ಚು ಹಾಯಿಸುತ್ತಾರೆ. ಜೊತೆಗೆ ಮಂಡ್ಯ- ಮೈಸೂರು ಗಡಿಯಲ್ಲಿರುವ ಸಿದ್ದಲಿಂಗಪುರ ಕಿಚ್ಚು ಹಾಯಿಸುವುದಕ್ಕಾಗಿಯೇ ಪ್ರಸಿದ್ಧಿ ಪಡೆದಿದೆ.

ಹಳ್ಳಿಕಾರ್ ಆಂದೋಲನ: ಹಳ್ಳಿಕಾರ್ ತಳಿ ಉಳಿವಿಗಾಗಿ ರಾಜ್ಯದಾದ್ಯಂತ ನಡೆಯುತ್ತಿರುವ ಆಂದೋಲನಕ್ಕೆ ಮಂಡ್ಯ ಜಿಲ್ಲೆಯಲ್ಲಿ ದೊಡ್ಡ ಶಕ್ತಿ ಇದೆ. ಇಲ್ಲಿ ಹಳ್ಳಿಕಾರ್ ರಾಸು ಸಾಕುವ ರೈತರ ಸಂಖ್ಯೆ ಸಾಕಷ್ಟಿದೆ. ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಸಾಗಿಸುವ ಕೃಷಿ ಕಾರ್ಮಿಕರು, ರಾಸಾಯನಿಕ ಮುಕ್ತ ಎಣ್ಣೆ ತಯಾರಿಸುವ ಗಾಣಗಳ ಮಾಲೀಕರು ಹಳ್ಳಿಕಾರ್ ರಾಸುಗಳನ್ನೇ ಬಳಸುತ್ತಾರೆ.

